ಕನಗನಹಳ್ಳಿಯ ಸ್ತೂಪ ಶಿಲ್ಪಗಳು

ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಸಂಶೋಧನ ಪ್ರಬಂಧ



ಸಂಶೋಧಕರು
• ನಟರಾಜ.ಎಂ ಶಿಲ್ಪಿ

ಮಾರ್ಗದರ್ಶಕರು
• ಡಾ.ಲಕ್ಷ್ಮಣಸಿಂಗ್ ಆರ್.ರಾಥೋಡ್

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಕನಗನಹಳ್ಳಿಯ ಸ್ತೂಪ ಶಿಲ್ಪಗಳು

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಾದರಪಡಿಸಿದ ಸಂಶೋಧನಾ ಪ್ರಬಂಧ)

ಸಂಶೋಧಕ

ನಟರಾಜ ಎಂ. ಶಿಲ್ಪಿ

ಮಾರ್ಗದರ್ಶಕರು

ಡಾ. ಲಕ್ಷ್ಮಣಸಿಂಗ್ ಆರ್. ರಾಥೋಡ್

ಉಪನ್ಯಾಸಕರು

ಚಾಮರಾಜೇಂದ್ರ ಸರಕಾರಿ ದೃಶ್ಯಕಲಾ ಕಾಲೇಜು, ಮೈಸೂರು

ದೃಶ್ಯಕಲಾ ವಿಭಾಗ

ಲಲಿತಕಲಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೫

ಘೋಷಣಾ ಪತ್ರ

ಕನಗನಹಳ್ಳಿಯ ಸ್ತೂಪ ಶಿಲ್ಪಗಳು ಎಂಬ ಸಂಶೋಧನ ಪ್ರಬಂಧವನ್ನು **ಡಾ. ಲಕ್ಷ್ಮಣಸಿಂಗ್ ಆರ್. ರಾಥೋಡ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಾದರಪಡಿಸುತ್ತಿದ್ದೇನೆ.

ಈ ಪ್ರಬಂಧವನ್ನು ಈ ಮೊದಲು ಇಡೀಯಾಗಿ ಬೇರಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿ ಬಳಸಿಕೊಂಡಿರುವುದಿಲ್ಲ ಈ ಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ನಟರಾಜ ಎಂ. ಶಿಲ್ಪಿ
ಎಂ.ಫಿಲ್. ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :
ಸ್ಥಳ :

ಪ್ರಮಾಣ ಪತ್ರ

ನಟರಾಜ ಎಂ. ಶಿಲ್ಪಿ ಅವರು **ಕನಗನಹಳ್ಳಿ ಸ್ತೂಪ ಶಿಲ್ಪಗಳು** ಎಂಬ ಶೀರ್ಷಿಕೆಯ ಸಂಶೋಧನ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿರುತ್ತಾರೆ.

ಪ್ರಸ್ತುತ ಈ ಸಂಶೋಧನ ಪ್ರಬಂಧವು ಈ ಮೊದಲು ಇಡೀಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ಲಕ್ಷ್ಮಣಸಿಂಗ್ ಆರ್. ರಾಥೋಡ್

ಉಪನ್ಯಾಸಕರು

ಚಾಮರಾಜೇಂದ್ರ ಸರಕಾರಿ ದೃಶ್ಯಕಲಾ ಕಾಲೇಜು, ಮೈಸೂರು

ದಿನಾಂಕ :

ಸ್ಥಳ :

ದೃಢೀಕರಣ ಪತ್ರ

ನಟರಾಜ ಎಂ ಶಿಲ್ಪಿ ಇವರು **ಡಾ. ಲಕ್ಷ್ಮಣಸಿಂಗ್ ಆರ್. ರಾಥೋಡ್** ಅವರ ಮಾರ್ಗದರ್ಶನದಲ್ಲಿ **ಕನಗನಹಳ್ಳಿ ಸ್ತೂಪ ಶಿಲ್ಪಗಳು** ಎಂಬ ವಿಷಯ ಕುರಿತು ಸಂಶೋಧನ ಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಸಿದ್ಧಪಡಿಸಿದ್ದು, ಈ ಪ್ರಬಂಧವು ಎಲ್ಲಿಯೂ ಪ್ರಕಟವಾಗಿಲ್ಲವೆಂದು, ಪರೀಕ್ಷಾ ದೃಷ್ಟಿಯಿಂದ ಯೋಗ್ಯವಾಗಿದೆ ಎಂದು ದೃಢೀಕರಿಸಿದೆ.

ಡಾ. ಹೆಬ್ಬಾಲೆ ಕೆ. ನಾಗೇಶ್
ಪ್ರಾಧ್ಯಾಪಕರು/ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :
ಸ್ಥಳ :

ಪರಿವಿಡಿ

ಅಧ್ಯಾಯ ೧ : ೧-೧೦

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ

ಅಧ್ಯಾಯ ೨ : ೧೧-೨೬

ಕನಗನಹಳ್ಳಿಯ ಚಾರಿತ್ರಿಕ, ಸಾಂಸ್ಕೃತಿಕ ಮತ್ತು ಭೌಗೋಳಿಕ ಪರಿಸರ

ಅಧ್ಯಾಯ ೩ : ೨೭-೪೭

ಸ್ತೂಪ ಹಾಗೂ ಬುದ್ಧನ ದುಂಡು ಶಿಲ್ಪಗಳು

ಅಧ್ಯಾಯ ೪ : ೪೮-೬೬

ಜನನ ಹಾಗೂ ಜಾತಕ ಕಥೆ ಆಧಾರಿತ ಶಿಲ್ಪಗಳು

ಅಧ್ಯಾಯ ೫ : ೬೭-೭೯

ನಾಗಮುಚ್ಛಲಿಂದ, ಯಕ್ಷ ಮತ್ತು ಪಾದುಕೆ ಶಿಲ್ಪಗಳು

ಅಧ್ಯಾಯ ೬ : ೮೦-೯೨

ಸಾಮಾಜಿಕ ಜನಜೀವನ ಮತ್ತು ಪರಿಸರ ಸಂಬಂಧಿ ಉಬ್ಬುಶಿಲ್ಪಗಳು

ಅಧ್ಯಾಯ ೭ : ೯೩-೧೦೨

ಸಮಾರೋಪ

ಅನುಬಂಧಗಳು

೧. ಗ್ರಂಥಋಣ

೨. ವಕ್ತೃಗಳು

೩. ಛಾಯಾಚಿತ್ರ

೪. ನಕ್ಷೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ

ಏಶಿಯಾದ ಬೆಳಕು ಎಂದು ಇಡೀ ವಿಶ್ವದಲ್ಲಿಯೇ ಗುರುತಿಸಿಕೊಳ್ಳುವ ಬುದ್ಧ, ಭಾರತದಲ್ಲಿ ಅಂಕುರಿಸಿದ ಜ್ಞಾನವೃಕ್ಷ. ಸಾವಿರ ಮರಗಳ 'ದಟ್ಟ ಕಾನನದ ಹುಟ್ಟಿನ ಹಿಂದೆ ಒಂದು ಪುಟ್ಟ ಬೀಜವಿದೆ' ಎನ್ನುವ ಜ್ಞಾನೋಕ್ತಿಯಂತೆ ಗೌತಮನ ಮನದಲ್ಲಿ ಮೂಡಿದಂತಹ ಹುಟ್ಟು, ಜೀವನ, ಸಾವು, ಮೋಕ್ಷವೆಂಬ ಮೊಳಕೆಯೊಡೆದ ಬೀಜಗಳೇ ಕಾರಣ. ಭರತ ಭೂಮಿಯಲ್ಲಿ ಪ್ರಬಲವಾಗಿ ಬೇರೂರಿ, ವಿಶ್ವದೆಲ್ಲೆಡೆ ತನ್ನ ರೆಂಬೆ–ಕೊಂಬೆಗಳನ್ನು ಚಾಚಿ, ಜ್ಞಾನಾಮೃತದ ಫಲಗಳನ್ನು ನೀಡುತ್ತ ಹೆಮ್ಮರವಾಗಿ ಬೆಳೆದಿರುವ ಮಹಾವೃಕ್ಷ ಈ ಬುದ್ಧ.

ಒಂದು ಧರ್ಮವು ವಿಶ್ವವ್ಯಾಪಿಯಾಗಲು ಆ ಧರ್ಮದ ತತ್ವ, ನೀತಿ, ನಿಸ್ವಾರ್ಥತೆ ಮತ್ತು ಸಮಕಾಲೀನ ಅವಶ್ಯಕತೆಗಳೊಳಗೊಂಡು ರಾಜಕೀಯ ಹಿತಾಸಕ್ತಿಯೊಂದಿಗೆ ಆರ್ಥಿಕ ಸಬಲತೆಯನ್ನು ಹೊಂದಬೇಕಾದುದು ಅವಶ್ಯಕವೆನಿಸುತ್ತದೆ. ಈ ಎಲ್ಲಾ ಅವಶ್ಯಕತೆಗಳೊಂದಿಗೆ ರಾಜಕೀಯ ಮತ್ತು ಸಾಮಾಜಿಕ ಮಾರ್ಗದಿಂದ ಬೌದ್ಧಧರ್ಮವನ್ನು ಸ್ವೀಕರಿಸಿದ ಸಾಮ್ರಾಟ ಅಶೋಕನು ಪ್ರಮುಖ ಕಾರಣನಾಗುತ್ತಾನೆ. ಒಬ್ಬ ಸಾಮ್ರಾಟನ ನಿರ್ಣಯವನ್ನು ಪ್ರಜೆಗಳು ಸಿರಸಾವಹಿಸಬೇಕಾದ ಪರಿಸ್ಥಿತಿಯು ಇದ್ದರೂ, ಯಾವ ಪ್ರಜೆಯ ಮೇಲೂ ಒತ್ತಡ ತರದೆ ಧರ್ಮದ ವಿಚಾರದಲ್ಲಿ ಸ್ವತಂತ್ರವಾಗಿ ಬಿಟ್ಟು ಹಲವು ಧರ್ಮಗಳನ್ನು ಕೂಡಾ ಪೋಶಿಸುವ ಅಶೋಕನ ವಿಶಾಲ ದೃಷ್ಟಕೋನವು ಒಂದು ಕಾರಣವಾಗುತ್ತದೆ.

[illegible]

[illegible]

[illegible]

[illegible]

[illegible]

ಇಂತಹ ಹಿನ್ನೆಲೆಯುಳ್ಳ ಧರ್ಮ ಕ್ರಿಸ್ತಪೂರ್ವದಲ್ಲಿಯೇ ಉದಯಿಸಿ ಬದುಕಿಗಿಂತ ಬದುಕಿನ ಪ್ರಜ್ಞೆಯೇ ಶ್ರೇಷ್ಠವೆಂದು ಸಾರಿ ಅಜ್ಞಾನದಿಂದ ಜ್ಞಾನದ ಬೆಳಕಿನತ್ತ ನಡೆಸುತ್ತಿರುವ ಮಾರ್ಗದರ್ಶಿ. ಶಾಂತಿ, ಅಹಿಂಸೆಗಳಿಂದ ಕೂಡಿದ ಈ ಧರ್ಮವನ್ನು ತಮ್ಮದಾಗಿಸಿಕೊಂಡು ಬೆಳೆದ ಅಶೋಕ ಮತ್ತು ಅವನ ನಂತರದ ರಾಜ ಮನೆತನಗಳು ಭರತ ಭೂಮಿಯಲ್ಲಿ ಸಾಮ್ರಾಜ್ಯವನ್ನು ಕಟ್ಟಿ ವೈಭವೋಪೇತವಾಗಿ ಮೆರೆದಂತಹ ನಿದರ್ಶನಗಳೂ ಸಾಕಷ್ಟು. ಇಂತಹವುಗಳಲ್ಲಿ ಶಿಲಾಶಾಸನಗಳು, ಶಿಲಾಶಿಲ್ಪಗಳು, ಸ್ತೂಪಗಳು, ಚೈತ್ಯಾಲಯಗಳು, ವಿಹಾರಗಳು ಅತಿ ಪ್ರಮುಖ ಸ್ಥಾನವನ್ನು ವಹಿಸುತ್ತವೆ. 'ಜಗವೆಲ್ಲಾ ಮಲಗಿರಲು ಇವನೊಬ್ಬನೆದ್ದ' ಈ ಕಾವ್ಯಮಯ ಸಾಲಿನ ಕವಿಗೆ ಗೊತ್ತಿತ್ತು. ಇಡೀ ವಿಶ್ವ ಒಂದೇ ಸಮಯ ನಿದ್ರಿಸದು. ಅರ್ಧ ಭೂಮಿಯ ಮೇಲೆ ಹಗಲಿದ್ದಾಗ ಇನ್ನರ್ಧ ಕತ್ತಲು. ಆದರೆ ಹೊರ ಜಗತ್ತನ್ನು ಮೀರಿ ಒಳಜಗತ್ತಿನ ಬಗೆಗೆ ಕವಿಯ ಭಾವನಾಲಹರಿ ಇದು. ಮನಸ್ಸಿಗೆ ನಿದ್ರೆ, ಕತ್ತಲು ಜಡತನ ಇತ್ಯಾದಿಗಳನ್ನು ಮೀರುವ ಎಚ್ಚರವಾಗಿರುವ ಅಗತ್ಯದ ಆಶಯ ಇದು. ಹಾಗೆಯೇ ಬುದ್ಧನ ಜ್ಞಾನೋದಯ ಕುರಿತ ಕಾವ್ಯಮಯ ರೂಪಕ ಇದು.[೧]

ಹುಟ್ಟು, ಜೀವನ, ಸಾವು ಮತ್ತು ಮೋಕ್ಷ ಮೊದಲಾದ ವಿಷಯಗಳ ಕುರಿತು ಜಿಜ್ಞಾಸುವಾಗಿ ಅರಮನೆ ತೊರೆದು ಸತ್ಯಾನ್ವೇಷಣೆಯಲ್ಲಿ ತೊಡಗಿ, ಧ್ಯಾನದಲ್ಲಿ ಮುಳುಗಿ, ಸಾಕ್ಷಾತ್ಕಾರವನ್ನು ಪಡೆದು ಗೌತಮಬುದ್ಧನೆನಿಸಿಕೊಂಡು ಇಂಥದೇ ಸಂದೇಹಿಗಳಿಗೆ ಸಮಾಧಾನ ಹೇಳಿದ ಪ್ರಥಮ ತಾಣವೇ ಭಾರತ.[೨] ಪ್ರಥಮ ಗುರುವೇ ಬುದ್ಧ.

ಬುದ್ಧ ಎಂದರೆ ವಿಶ್ವದ ಸಕಲ ಜೀವರಾಶಿಗಳ ಬಗೆಗಿನ ಪ್ರಾಮಾಣಿಕ ಕಾಳಜಿಯ ಮೂರ್ತರೂಪ. ಸುಖಕ್ಕಾಗಲಿ, ದುಃಖಕ್ಕಾಗಲಿ ಅತಿಯಾಗಿ ಅಂಟಿಕೊಳ್ಳದಿರುವುದೇ ಶ್ರೇಯಸ್ಕರ ಎಂಬ "ಮಧ್ಯಮ ಮಾರ್ಗದ ಪ್ರತಿಪಾದಕ" ದುಃಖ ನಿವಾರಣೆಯೇ ಮೋಕ್ಷಮಾರ್ಗ ಎಂದು ಬೋಧಿಸಿದ ಮಹಾಗುರು. ಈ ಮಾರ್ಗದತ್ತ ಗಮನಿಸಲು ನೆರವಾಗುವ ಎಂಟು ಬಗೆಯ ಉಪಾಯಗಳನ್ನು ಹೇಳಿಕೊಟ್ಟ ಲೋಕೋಪಾಧ್ಯಾಯ. ಅವುಗಳ ಅನುಷ್ಠಾನಕ್ಕಾಗಿ ಪಂಚಶೀಲಗಳನ್ನು ವಿಧಿಸಿದ ಪರಮಾಚಾರ್ಯ. ಬದುಕಿಗಿಂತ ಬದುಕಿನ ಪ್ರಜ್ಞೆಯೇ ಶ್ರೇಷ್ಠವೆಂದು ಸಾರಿದ ಸಂತ. ಇಂಥ ಪ್ರಜ್ಞೆಯೇ ನಮ್ಮನ್ನು ಅಜ್ಞಾನದಿಂದ ಜ್ಞಾನದ ಬೆಳಕಿನತ್ತ ನಡೆಸುವ ಮಾರ್ಗದರ್ಶಿ ಎಂದು ಮನದಟ್ಟು ಮಾಡಿಕೊಟ್ಟ ಮಾಹಾಮುನಿ. ಇಂತಹ ಪ್ರಜ್ಞೆಯನ್ನು ಬೆಳೆಸಿಕೊಂಡಲ್ಲಿ ಪ್ರತಿಯೊಬ್ಬನೂ ಬುದ್ಧನಾಗಲು ಸಾಧ್ಯ ಎಂದು ತಿಳಿಹೇಳಿದ ಮಮತಾಮಯಿ. ದೇಶ, ಭಾಷೆ, ಜಾತಿ, ಧರ್ಮ,

---

೧. ಕೆ.ವಿ. ಸುಬ್ರಮಣ್ಯಂ (ಲೇ), ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ಅಭಿವ್ಯಕ್ತ, ಕಲಬುರ್ಗಿ–೨೦೧೧

೨. ವಿಜಯವಾಣಿ, ಕನ್ನಡ ದಿನಪತ್ರಿಕೆ, ಮಂಥನ, ಬೌದ್ಧರ ಪವಿತ್ರ ತಾಣ–೦೮.೦೭.೨೦೧೩

ಪಂಥ, ಪಂಗಡಗಳ ಹಂಗಿಲ್ಲದೇ ಬದುಕನ್ನು ಸಾಗಿಸಬೇಕೆಂಬ ತುಡಿತವುಳ್ಳ ಎಲ್ಲರಿಗೂ ಬುದ್ಧ ಒಂದು ದೊಡ್ಡ ಪ್ರೇರಣೆ.[೩]

ಬೌದ್ಧಧರ್ಮವು ಮೂರ್ತಿಪೂಜೆಯನ್ನು ಒಪ್ಪುವುದಿಲ್ಲವಾದರೂ ಬುದ್ಧನ ಪ್ರತಿಮೆಯನ್ನು ಸ್ಥಾಪಿಸಿ ಅದಕ್ಕೆ ಸುಗಂಧ ಕಡ್ಡಿ ಹಾಗೂ ಪುಷ್ಪವನ್ನು ಅರ್ಪಿಸುತ್ತ, ಬುದ್ಧನ ಮೌಲ್ಯಗಳನ್ನು ಗೌರವಿಸುವ ಪರಿಪಾಠವಿದೆ. ಈ ಮೂಲಕ ಬುದ್ಧನ ಗುಣಗಳನ್ನು ನಮ್ಮ ಮೇಲೆ ಆರೋಪಿಸಿಕೊಂಡು ಬುದ್ಧನೇ ಆಗಿಬಿಡುವ ಪ್ರಯತ್ನ ಮೂರ್ತಿಯ ಅವಶ್ಯಕತೆ ಇಲ್ಲವಾದರೂ ಅದರ ಸಾನಿಧ್ಯವು ಸಾಧನೆಗೆ ಸಹಕಾರಿ.[೪]

ಕರ್ನಾಟಕದಲ್ಲಿ ಅಶೋಕನ ಕಾಲದ ಅನೇಕ ಶಾಸನಗಳು ದೊರೆತಿದ್ದು, ಇದುವರೆಗೂ ಭಾರತದ ಯಾವ ರಾಜ್ಯದಲ್ಲೂ ಕರ್ನಾಟಕದಲ್ಲಿ ದೊರೆತಿರುವಷ್ಟು ಶಾಸನಗಳು ದೊರೆತಿಲ್ಲ. ಮಸ್ಕಿ, ಬ್ರಹ್ಮಗಿರಿ, ಸಿದ್ದಾಪುರ, ಜಟ್ಟಿಂಗರಾಮೇಶ್ವರ, ಕೊಪ್ಪಳ, ಸನ್ನತಿ ಮುಂತಾದ ಸ್ಥಳಗಳಲ್ಲಿ ದೊರಕಿದ್ದು ಕ್ರಿ.ಪೂ. ಇತಿಹಾಸವನ್ನು ಸಾರುವ ಉದಾಹರಣೆಗಳಾಗಿವೆ. ೧೯೯೪ರಿಂದ ಈಚೆಗೆ ಉತ್ಖನನಗೊಂಡಿರುವ ಸನ್ನತಿ ಪರಿಸರದ "ಕನಗನಹಳ್ಳಿ"ಯ ಮಹಾಸ್ತೂಪ ಹೊಸ ಇತಿಹಾಸವನ್ನೇ ಸೃಷ್ಟಿಮಾಡಿದೆ. "ದೇವನಾಂಪ್ರಿಯ ಪ್ರಿಯದರ್ಶಿ ಅಶೋಕ" ಎಂದು ಮಸ್ಕಿ ಶಾಸನದಿಂದ ಉಲ್ಲೇಖಗೊಂಡ ಅಶೋಕನ ಹೆಸರು ಬೇರೆ ಯಾವ ಶಾಸನಗಳಲ್ಲಿಯೂ ಕಾಣದ ಮಹತ್ವದ ಲಿಪಿಯಾಗಿದೆ. ಅಶೋಕನ ಏಕೈಕ ಭಾವಶಿಲ್ಪ ಮೊಟ್ಟ ಮೊದಲಬಾರಿಗೆ ದೊರೆತದ್ದು ಕನಗನಹಳ್ಳಿಯ ಸ್ತೂಪದ ಶಿಲ್ಪಗಳಲ್ಲಿಯೇ.

ಬುದ್ಧನ ನಿಂತ ಮತ್ತು ಕುಳಿತ ತ್ರಿ ಆಯಾಮದ ಮೂರ್ತಿಗಳು, ಜಾತಕ ಕಥೆಗಳು ಮತ್ತು ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಉಬ್ಬುಶಿಲ್ಪಗಳು, ನಾಗಮುಚ್ಚಲಿಂದ, ಯಕ್ಷ, ಪ್ರಾಣಿ–ಪಕ್ಷಿಗಳ ಉಬ್ಬುಶಿಲ್ಪಗಳು ಹೀಗೆ ಹಲವಾರು ಶಿಲಾಶಿಲ್ಪಗಳು ಭಗ್ನಗೊಂಡು ವೈಭವದ ಪೂರ್ವೇತಿಹಾಸವನ್ನು ಸಾರಿಸಾರಿ ಹೇಳಲು ಅಣಿಯಾಗಿರುವಂತೆ ಈ ಸ್ತೂಪದ ಪರಿಸರ ಗೋಚರವಾಗುತ್ತದೆ.

ಬುದ್ಧ ಎನ್ನುವ ಶಬ್ಧ ಕಿವಿಗೆ ಬಿದ್ದ ಕ್ಷಣಮಾತ್ರದಲ್ಲಿ ನಾವು ಎಂದೋ ನೋಡಿದ ಬುದ್ಧನ ಪ್ರತಿಮೆ ಅಥವಾ ಚಿತ್ರ ನಮ್ಮ ಸ್ಮೃತಿಯಲ್ಲಿ ಮೂಡುತ್ತದೆ. ಬುದ್ಧನ ಕುರಿತಾಗಿ ಬರೆದ ಅಕ್ಷರಗಳು ಆನಂತರ ನಮ್ಮ ನೆನಪಿನಾಳದಲ್ಲಿ ಗೋಚರಿಸುತ್ತವೆ. ಬಹುಶಃ ಈ ಸ್ಥಿತಿಯು ದೃಶ್ಯಲಾವಿದರ

---

೩. ಮನೋರಮಾ ಹೆಜಮಾಡಿ (ಲೇ), ಜಗದ ನೋವ ನೀಗಬಂದವ

೪. ಅದೇ ಪುಸ್ತಕ

ಮಾನಸಿಕ ಸ್ಥಿತಿ ಅಥವಾ ಪ್ರಜ್ಞೆ ಎನ್ನಬಹುದು. ಕವಿ, ಹಾಡುಗಾರ, ಲೇಖಕ ಹೀಗೆ ಹಲವರಿಗೆ ಅವರವರ ಭಾವನಾ ಲಹರಿಗೆ ತಕ್ಕಂತೆ ಬುದ್ಧನು ಸ್ಮೃತಿಪಟಲದಲ್ಲಿ ಮೂಡುತ್ತಿರಬಹುದು.

ಅಮೂರ್ತತೆಯಿಂದ ಬೆಳೆಯುತಿದ್ದ ಮೌಖಿಕ ಹಾಗೂ ಕಾಲ್ಪನಿಕ ರೂಪಗಳು ಮೌರ್ಯರ ಕಾಲದಲ್ಲಿ ದೃಶ್ಯರೂಪ ತಳೆದು ಧಾರ್ಮಿಕ ಹಿನ್ನೆಲೆಯುಳ್ಳ ಕಲಾ ಪ್ರಕಾರಗಳಾಗಿ ಬೆಳೆಯತೊಡಗಿದವೆಂದು ಹೇಳಬಹುದು. ಈ ಮನೆತನದ ಪ್ರಖ್ಯಾತ ಅರಸನೆನಿಸಿಕೊಂಡ ಅಶೋಕನ ಆಳ್ವಿಕೆಯ ಸಂದರ್ಭದಲ್ಲಿ ಶಿಲಾಶಾಸನಗಳ ಬಳಕೆ ಪ್ರಾರಂಭವಾಯಿತು. ಈತನನ್ನು ಶಾಸನಗಳ ಪಿತಾಮಹನೆಂದು ಇತಿಹಾಸದಲ್ಲಿ ವರ್ಣಿಸಲಾಗಿದೆ.

ಮೌರ್ಯರಿಂದ ಮೂರ್ತರೂಪ ಪಡೆದ ಬೌದ್ಧಧರ್ಮದ ಆಗಿನ ವೈಭವವನ್ನು ಕಲ್ಪಿಸಿಕೊಳ್ಳಲು ಇಂದು ನಮಗೆ ದೊರೆತಿರುವಂತಹ ಪ್ರಾಚೀನ ಶಿಲ್ಪಗಳು ಮತ್ತು ಶಾಸನಗಳು ಮೂಲ ಆಕರಗಳಾಗಿವೆ. ಈ ಪ್ರಕ್ರಿಯೆಯಲ್ಲಿ ಸೃಜಿಸಿರುವ ಅಂದಿನ ಶಿಲ್ಪಿಗಳ ಸೃಜನಶೀಲ ಪರಿಕಲ್ಪನೆಯ ಸೆಲೆಯು ನಮ್ಮ ಮುಂದಿದೆ. ಕ್ರಿ.ಪೂ. ಶತಮಾನಗಳ ಸೃಜನಾತ್ಮಕ ಶಿಲ್ಪಿಯ ಪೂರ್ಣ ಕಲ್ಪನೆಗಳು ಕನಗನಹಳ್ಳಿಯ ಮಹಾಸ್ತೂಪದಲ್ಲಿ ಮೂಡಿ ಬಂದಿವೆಯೆಂದು ಹೇಳಬಹುದು. ಅಂದಿನ ಶಿಲ್ಪಿಗಳ ಕೆತ್ತನೆಯ ತಾಂತ್ರಿಕ ಅಂಶಗಳು, ಶಿಲ್ಪಗಳ ಉದ್ದೇಶ, ಧಾರ್ಮಿಕ ಮತ್ತು ಲೌಕಿಕ ಹಿನ್ನೆಲೆಯಲ್ಲಿ ಕೆತ್ತನೆಯ ಚಾತುರ್ಯ, ಕುಶಲತೆ, ಶಿಲ್ಪಿಯ ಸ್ವಾತಂತ್ರ್ಯ ಮತ್ತು ಶಾಸ್ತ್ರದ ಬಗೆಗಿನ ಒಲವು ಹೀಗೆ ನಾನಾ ಮುಖಗಳಿಂದ ಶಿಲ್ಪ ಮತ್ತು ಶಿಲ್ಪಿಗಳ ಬಗೆಗಿನ ಅಭಿಪ್ರಾಯಗಳನ್ನು ಈ ಅಧ್ಯಯನದಲ್ಲಿ ವ್ಯಕ್ತಪಡಿಸಲಾಗಿದೆ.

ಬುದ್ಧನ ಹಲವಾರು ಸ್ತೂಪಗಳ ನಿರ್ದಿಷ್ಟವಾದ ಬಾಹ್ಯ ಮತ್ತು ಆಂತರಿಕ ಸೌಂದರ್ಯವು ಒಂದೇ ತೆರನಾಗಿ ಅಂಡ, ಮೇಧಿ, ಹರ್ಮಿಕ, ವೇದಿಕಾ, ಯಷ್ಟಿ, ಛತ್ರ, ಛತ್ರಾವಳಿ, ಥಾಬ, ಸೂಚಿ, ಉಷ್ಣೀಶ, ತೋರಣ ಹೀಗೆ ನಾನಾ ಭಾಗಗಳು ಎಲ್ಲಾ ಸ್ತೂಪಗಳಲ್ಲಿ ಕಂಡುಬರುವವು. ಇಂತಹ ಸೂಚಿತ ಸ್ಥಳಗಳು ಹಾಗೂ ಆ ಸ್ಥಳಗಳಲ್ಲಿರುವ ಶಿಲ್ಪಗಳ ಬಗ್ಗೆ ವಿವರಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ಸ್ತೂಪದ ಬಾಹ್ಯ ವಿನ್ಯಾಸ ಗಮನಿಸಿದಾಗ ವಿವಿಧತೆಯಿಂದ ಏಕತೆಯೆಡೆಗೆ ಸಾಗುವ ಸಾಂಕೇತಿಕ ರೂಪವೆನಿಸುತ್ತದೆ. ಅಂಡವೆಂದು ಕರೆಯಲ್ಪಡುವ ಅರ್ಧಗೋಳಾಕಾರದ ಗುಮ್ಮಟವು ಸ್ತೂಪದ ಬಹುಮುಖ್ಯ ಅಂಗ. ಇದು ಯಾವುದೇ ಕೋನಗಳನ್ನು ಹೊಂದದೆ ಅನಂತ ಹಾಗೂ ಪರಿಪೂರ್ಣತೆಯ ಕಲ್ಪನೆಯನ್ನು ಕೊಡುತ್ತದೆ. ನಾಲ್ಕು ದಿಕ್ಕಿನ ತೋರಣಗಳು ನಾಲ್ಕು ವರ್ಣದವರಿಗೂ ಇಲ್ಲಿ ಆತ್ಮೋನ್ನತಿಗೆ, ಜ್ಞಾನವೃದ್ಧಿಗೆ ಸಮಾನ ಅವಕಾಶವಿದೆ ಎನ್ನುವ ಸಂದೇಶವನ್ನು ಪ್ರಚುರಪಡಿಸುತ್ತವೆ.

ಶಿಲ್ಪಿಯಾದವನು ಶಿಲ್ಪಿಸಿದ ಶಿಲ್ಪಗಳಿಂದ ಇತಿಹಾಸದಲ್ಲಿ ಒಂದು ಸಂಚಲನವನ್ನೇ ಉಂಟುಮಾಡಬೇಕಾದರೆ ಶಿಲ್ಪಿಯು ಕಂಡರಿಸಿದ ಕಲೆಯು ಅತ್ಯಂತ ಉತ್ಕೃಷ್ಟ ವಿಚಾರಧಾರೆಯ ಪರಿಕಲ್ಪನೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಯಾವುದೆ ಪೌರಾಣಿಕ, ಐತಿಹಾಸಿಕ, ಜಾತಕ ಕಥೆ ಅಥವಾ ಒಂದು ಆದರ್ಶ ಪುರುಷ ಶಿಲ್ಪಗಳನ್ನು ರಚಿಸಬೇಕಾದರೆ ಶಿಲ್ಪಿಯಾದವನಿಗೆ ಆ ಸಂದರ್ಭದ ಪರಿಪೂರ್ಣ ಜ್ಞಾನ ಅವಶ್ಯಕ. ಮೊದಲು ಆ ಜ್ಞಾನದ ಪರಿಪೂರ್ಣತೆಯನ್ನು ತನ್ನಲ್ಲಿ ರೂಢಿಸಿಕೊಂಡ ಮೇಲೆಯೇ ಇಂತಹ ಕೃತಿ ರಚಿತವಾಗಲು ಸಾಧ್ಯವಾಗುತ್ತದೆ. ಅಂದರೆ ಬರೀ ಓದಿನಿಂದ ಜ್ಞಾನ ವೃದ್ಧಿಸಿಕೊಂಡರೆ ಸಾಲದು, ಶಿಲ್ಪಿಯಾದವನು ಆ ಜ್ಞಾನವನ್ನು ಕಂಡರಿಸಲು ಆಯ್ದುಕೊಂಡ ಮಾಧ್ಯಮದ ಗುಣಧರ್ಮವನ್ನು ಶ್ರಮದ ಬಲದಿಂದ ಅರಿತುಕೊಳ್ಳಬೇಕಾಗುತ್ತದೆ. ಶಿಲ್ಪಿಯಾದವನು ಕಲ್ಲು ಅಥವಾ ಕಟ್ಟಿಗೆ ಇನ್ನಾವುದೇ ಮಾಧ್ಯಮವನ್ನು ಸ್ವತಃ ಉಪಯೋಗಿಸದೆ ಲಿಖಿತರೂಪದಲ್ಲಿ ತಿಳಿಸಿದ ಗುಣಧರ್ಮಗಳನ್ನು ಓದಿ ತಿಳಿದುಕೊಳ್ಳಲಾರ. ಮಾಧ್ಯಮದ ಸಂಪೂರ್ಣ ಜ್ಞಾನವನ್ನು ತಿಳಿದುಕೊಳ್ಳಬೇಕಾದರೆ ಕೃತಿ ರಚಿಸಬೇಕೆಂದಿರುವ ಮಾಧ್ಯಮವನ್ನು (ಕಲ್ಲು ಅಥವಾ ಇನ್ನಾವುದೆ) ಕೊರೆದು ಕೆತ್ತಿ ಶ್ರಮವಹಿಸಿದಾಗ ಮಾತ್ರ ಸಾಧ್ಯವಾಗುತ್ತದೆ. ಓದಿ ಪಡೆದಿರುವಂತಹ ಪೌರಾಣಿಕ, ಐತಿಹಾಸಿಕ ಜ್ಞಾನವು ಶ್ರಮದ ಮೂಲಕ ಹೊರಹೊಮ್ಮಿದಾಗ ಮಾತ್ರ ಒಂದು ಮಾಧ್ಯಮದಲ್ಲಿ ಮೂಡಿಬರಲು ಸಾಧ್ಯವಾಗುತ್ತದೆ. ಪೌರಾಣಿಕ ಕಥೆಗಳನ್ನು ಕಂಠಸ್ತವಾಗಿ ಒಂದು ಬಂಡೆಯ ಎದುರಿಗೆ ಕುಳಿತು ವಾಚಿಸಿದರೆ ಅದರಲ್ಲಿ ಮೂರ್ತಿ ರಚನೆಯಾಗಲಾರದು. ಆ ಬಂಡೆಯಲ್ಲಿ ಶಿಲ್ಪಿಯ ಕಠಿಣ ಶ್ರಮವೂ ಅವಶ್ಯಕವಾಗುತ್ತದೆ. ಬರಿ ಓದಿನಿಂದಲೇ ಪಾಂಡಿತ್ಯ ಪ್ರದರ್ಶಿಸುತ್ತಿದ್ದ ಅಂದಿನ ಮೇಲ್ವರ್ಗದ ಕೆಲ ಜನ ಹಾಗೂ ಬರೀ ದುಡಿಮೆಯಿಂದಲೆ ಜೀವನ ಸಾಗಿಸುವ ಕೆಳವರ್ಗದ ಈ ಎರಡೂ ವರ್ಗಗಳ ಪಾಂಡಿತ್ಯವನ್ನು ಶಿಲ್ಪಿಯು ತನ್ನಲ್ಲಿ ಆರೂಢಿಸಿಕೊಂಡವನಾಗಿದ್ದ.

ಶಿಲ್ಪಿಯಾದವನ ಮನವೆಂಬ ಮಣ್ಣಿನಲ್ಲಿ ಜ್ಞಾನ, ಭಕ್ತಿ ಮತ್ತು ಕರ್ಮವೆಂಬ ಮೂರು ಅಂಶಗಳನ್ನೊಳಗೊಂಡ ಸಸಿಯು ಅಂಕುರಿಸಿದಾಗ ಮಾತ್ರ ಕಲೆಯು ಒಂದು ಮಾಧ್ಯಮದ ಮೂಲಕ ಮೂಡಿಬಂದು ಕಲಾಪರಂಪರೆಯ ಇತಿಹಾಸ ಸೇರಲು ಅರ್ಹವಾದದ್ದಾಗಿರುತ್ತದೆ.

ಆದಿಮಾನವನಿಂದೊಡಗೂಡಿ ಸೂಕ್ಷ್ಮಶಿಲಾಯುಗ, ಮಧ್ಯಶಿಲಾಯುಗ, ಬೃಹತ್ ಶಿಲಾಯುಗ, ತಾಮ್ರಯುಗ ಹೀಗೆ ಎಲ್ಲಾ ಕಾಲಕ್ಕೆ ಹೊಂದಬಹುದಾದಂತಹ ಪಳಿಯುಳಿಕೆಗಳು ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ದೊರೆತ ಉದಾಹರಣೆಗಳಿವೆ. ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಕೆಲವು ಭಾಗಗಳಲ್ಲಿ ಹಾಗೂ ಸನ್ನತಿಯಲ್ಲಿಯೂ ದೊರೆತಿರುವ ಸುಡಾವೆ ಮಣ್ಣಿನ

ಅನೇಕ ಗೊಂಬೆಗಳು, ಮೃತ್ ಪಾತ್ರೆಯ ಚೂರುಗಳು, ಬಳೆಯ ಚೂರುಗಳು, ಮನುಷ್ಯಾಕೃತಿ, ಪ್ರಾಣಿ–ಪಕ್ಷಿಗಳ ಆಕೃತಿಗಳು ಬೇರೆ ಬೇರೆ ವಿನ್ಯಾಸದ ಸಾಂಕೇತಿಕ ಚಿಹ್ನೆಗಳು ಇತಿಹಾಸಕಾರರಿಗೆ ವಿಫುಲವಾದ ಮಾಹಿತಿಯನ್ನೊದಗಿಸಿ ಕೊಟ್ಟಿವೆ. ಈ ಪ್ರದೇಶದಲ್ಲಿ ಸುಡಾವೆ ಮಣ್ಣಿನ ಗೊಂಬೆಗಳ ತಯಾರಿಕಾ ಕೇಂದ್ರವಿದ್ದಿರಬಹುದೆಂದು ಇತಿಹಾಸಕಾರರ ಅಭಿಪ್ರಾಯವಾಗಿದೆ. ದೊರೆತಿರುವಂತಹ ಗೊಂಬೆಗಳು ಅಚ್ಚಿನಿಂದ ರಚಿಸಿರಬಹುದಾದಂತಹ ಗುಣಲಕ್ಷಣಗಳು ಹೊಂದಿವೆ. ಇವುಗಳನ್ನು ಆಗಿನ ಜನರು ಏತಕ್ಕಾಗಿ ಬಳಸುತ್ತಿದ್ದರು ಎಂದು ವಿವೇಚಿಸಬೇಕಾದ ಅಂಶ.

ಬಹುಶಃ ಇವೇ ಮುಂದಿನ ದಿನಮಾನಗಳಲ್ಲಿ ಜನಪದರ ಆಚರಣೆಯ ಶಿಲ್ಪಗಳ ಪೂರ್ವ ಪೀಠಿಕೆಯಾದವೆಂದು ತೋರುತ್ತದೆ.

ಅಚ್ಚಿನಿಂದ ತಯಾರಿಸಿದ ಗುಣಲಕ್ಷಣಗಳು ಹೊಂದಿದ ಗೊಂಬೆಗಳು ಇಲ್ಲಿ ದೊರೆಯಬೇಕಾದರೆ ಅವುಗಳ ಬೇಡಿಕೆ ಅತಿಹೆಚ್ಚು ಇತ್ತೆಂದು ತೋರುತ್ತದೆ. ಇವುಗಳನ್ನು ಯಾವುದಕ್ಕೆ ಬಳಸುತ್ತಿದ್ದರು ಅಲಂಕಾರಕ್ಕಾಗಿಯೋ ಅಥವಾ ಮನರಂಜನೆಗಾಗಿಯೋ ಇಲ್ಲ ಕೆಲವೊಂದು ಧಾರ್ಮಿಕ ಆಚರಣೆಗಾಗಿ ಬಳಸುತ್ತಿದ್ದರೊ ಎಂದು ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ಇವುಗಳು ಅಂದಿನ ಕಲೆಯ ಮೂಲಭೂತ ಕಲಿಕೆಯ ಹಂತಗಳಾಗಿದ್ದವು. ಇವುಗಳಲ್ಲಿ ಅಂದಿನ ಜನಪ್ರಿಯ ಆಕೃತಿಗಳೇ ಮೂಡಿಬಂದಿವೆ. ಗೃಹಪತಿ, ನಾಗರಿಕ ಸ್ತ್ರೀ ಮುಖಗಳು, ಪ್ರಾಣಿಗಳು, ಪಕ್ಷಿಗಳು ಅಲ್ಲದೇ ಹಲವಾರು ವಿನ್ಯಾಸಗಳು ಕಂಡುಬರುತ್ತವೆ. ಇಂತಹ ಕಲಾಚಟುವಟಿಕೆಗಳೇ ಕನಗನಹಳ್ಳಿಯ ಸ್ತೂಪದ ಕಲಾಪ್ರೌಢಿಮೆಗೆ ಮುನ್ನುಡಿಯಾಯಿತೆಂದು ಹೇಳಬಹುದು.

ಅಧ್ಯಯನ ಉದ್ದೇಶ :

ಇಂತಹ ವಿಶ್ವಮುಖಿ ವಿಚಾರಧಾರೆಯ ಬುದ್ಧ ಹಾಗೂ ಸಾರ್ವತ್ರಿಕ ಉದ್ದೇಶಕ್ಕೆ ಗಟ್ಟಿಯಾದ ವಸ್ತುಗಳ ಮೇಲೆ ಲಿಪಿಗಳನ್ನು ಬರೆಸಿದ ಮೊದಲಿಗನೆನಿಸಿಕೊಂಡ ಸಾಮ್ರಾಟ ಅಶೋಕ ಚಕ್ರವರ್ತಿ. ಮತ್ತು ಇಡೀ ಭಾರತವೇ ಕರ್ನಾಟಕ ರಾಜ್ಯದ ಗುಲ್ಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಸನ್ನತಿಯ ಕನಗನಹಳ್ಳಿಯ ಕಡೆಗೆ ಬೆರಗುಗಣ್ಣಿನಿಂದ ನೋಡುವಂತೆ ಮಾಡಿದ ಕನಗನಹಳ್ಳಿಯ ಸ್ತೂಪಾವಶೇಷದ ಶಿಲ್ಪಗಳು. ಈ ಮೂರು ಮೂಲ ಉದ್ದೇಶಗಳು ಈ ಅಧ್ಯಯನದ ಕಡೆಗೆ ಆಸಕ್ತಿ ಹುಟ್ಟಲು ಕಾರಣಗಳಾಗಿವೆ. ಇಂತಹ ಅದ್ಭುತ ಪ್ರಾಚೀನ ಶಿಲ್ಪಕಲಾ ಸಂಪತ್ತು ನಾಡಿನ ಕಲಾಸಕ್ತರಿಗೆ ಗೊತ್ತಾಗಬೇಕು, ನಮ್ಮ ಹಿಂದಿನವರ ಕಲಾಪ್ರೌಢಿಮೆ, ಮಹತ್ವಾಕಾಂಕ್ಷೆ ಮುಂದಿನ ಪೀಳಿಗೆಗೆ ತಿಳಿಯಬೇಕೆಂಬ ಉದ್ದೇಶ ಈ ಅಧ್ಯಯನದ ಹಿಂದಿದೆ. ಕರ್ನಾಟಕ ಶಿಲ್ಪಕಲಾ ಬೆಳವಣಿಗೆಯ ಪೂರ್ವ ಪೀಠಿಕೆಯಾಗಿರುವಂತಹ ಕನಗನಹಳ್ಳಿಯ ಸ್ತೂಪದ ಶಿಲ್ಪಗಳು ಶಿಲ್ಪಕಲಾ

ವಿದ್ಯಾಭ್ಯಾಸಿಗರಿಗೂ ಉಪಯುಕ್ತವಾಗಲೆಂಬ ಉದ್ದೇಶದ ಹುಡುಕಾಟವೇ ಈ ಅಧ್ಯಯನದ ಉದ್ದೇಶಗಳಲ್ಲಿ ಇನ್ನೊಂದಾಗಿದೆ.

ಸನ್ನತಿ ಹಾಗೂ ಕನಗನಹಳ್ಳಿಯ ಬಗ್ಗೆ ಹಲವಾರು ಸಂಶೋಧಕರು, ಇತಿಹಾಸಕಾರರು, ಪುರಾತತ್ವವಿದರು ತಮ್ಮತಮ್ಮ ವಿಷಯಕ್ಕನುಸಾರವಾಗಿ ಅಧ್ಯಯನ ಕೈಗೊಂಡಿದ್ದಾರೆ. ಶಿಲ್ಪಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೂ ಯಾರೂ ಪ್ರಸ್ತುತ ವಿಷಯದ ಅಧ್ಯಯನ ಕೈಗೊಳ್ಳದೇ ಇರುವುದರ ಕಾರಣ ಈ ವಿಷಯವನ್ನು ಆಯ್ಕೆಮಾಡಿಕೊಳ್ಳಲು ಕಾರಣವಾದ ಮತ್ತೊಂದು ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ :

ಚಿತ್ತಾಪೂರ ತಾಲೂಕಿನ ಪ್ರತಿಯೊಂದು ಹಳ್ಳಿಯೂ ಸಾಂಸ್ಕೃತಿಕ, ಐತಿಹಾಸಿಕ, ಪೌರಾಣಿಕ ಮತ್ತು ಚಾರಿತ್ರಿಕವಾಗಿ ಒಂದಿಲ್ಲೊಂದು ವಿಷಯದಲ್ಲಿ ಪ್ರಾಮುಖ್ಯತೆಯನ್ನು ಪಡೆದವುಗಳಾಗಿವೆ. ಪ್ರಸ್ತುತ ಕನಗನಹಳ್ಳಿಯ ಸ್ತೂಪಾವಶೇಷಗಳಲ್ಲಿ ಹೆಚ್ಚು ಶಿಲ್ಪಗಳು ಮತ್ತು ಒಂದೇ ಧರ್ಮದ ಮೂಲದಲ್ಲಿ ವಿವಿಧೋದ್ದೇಶಗಳನ್ನು ಹೊಂದಿರುವ ಬೇರೆ ಬೇರೆ ಶಿಲ್ಪಗಳು ಇದ್ದುದರಿಂದ ಹಾಗೂ ಪ್ರಸ್ತುತ ಎಂ.ಫಿಲ್. ಅಧ್ಯಯನದ ಮಿತಿಗನುಸಾರವಾಗಿ ಕನಗನಹಳ್ಳಿಯ ಸ್ತೂಪದ ಶಿಲ್ಪಗಳು ಮಾತ್ರ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟವುಗಳಾಗಿವೆ.

ಅಧ್ಯಯನದ ವಿಧಾನ :

ಪ್ರಸ್ತುತ ಅಧ್ಯಯನಕ್ಕೆ ಪ್ರಮುಖವಾಗಿ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಅನುಷಂಗಿಕ ಆಕರ ಸಾಮಗ್ರಿ

ಈ ಎರಡೂ ಮೂಲಗಳಿಂದ ವಿಷಯಗಳನ್ನು ಸಂಗ್ರಹಿಸಲಾಗಿದ್ದು ಈ ಕೆಳಗಿನಂತೆ ವಿವರವಾಗಿ ನೋಡಬಹುದಾಗಿದೆ.

೧. ಮೂಲ ಆಕರ ಸಾಮಗ್ರಿ :

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದು ಕ್ಷೇತ್ರಕಾರ್ಯ. ಇದರಲ್ಲಿ ಛಾಯಾಚಿತ್ರ, ನೆರಳಚ್ಚು ಮತ್ತು ಸಂದರ್ಶನ ಮಾಡಿಕೊಂಡಿರುವುದು ಹೀಗೆ ನೇರವಾಗಿ ಅಧ್ಯಯನಕ್ಕೆ ಸಂಬಂಧಿಸಿದ ಆಕರಗಳನ್ನು ಸಂಗ್ರಹಿಸಲಾಗಿದೆ.

ಆನುಷಂಗಿಕ ಆಕರ ಸಾಮಗ್ರಿ :

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಕಟಿತ, ಅಪ್ರಕಟಿತ ಕೃತಿಗಳ ಮಹಾಪ್ರಬಂಧಗಳು ಗೆಜೆಟಿಯರ್‌ಗಳು, ಪೂರಕ ಸಾಹಿತ್ಯ ಕೃತಿಗಳು ಮತ್ತು ಗಣಕಯಂತ್ರದಲ್ಲಿ ಅಂತರ್ಜಾಲ ಉಪಯೋಗಿಸಿ, ದಿನಪತ್ರಿಕೆಗಳಲ್ಲಿ ಬಂದಂತಹ ಲೇಖನಗಳನ್ನು ಸಂಗ್ರಹಿಸಿಕೊಂಡು ಈ ಸಂಶೋಧನಾ ಅಧ್ಯಯನ ಕೈಗೊಳ್ಳಲಾಗಿದೆ.

ಛಾಯಾಚಿತ್ರ : ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕನಗನಹಳ್ಳಿಯ ಸ್ತೂಪಾವಶೇಷಗಳ ಕ್ಷೇತ್ರಕಾರ್ಯದ ಮೂಲಕ ಮೂಲ ಶಿಲ್ಪಗಳ ಛಾಯಾಚಿತ್ರಗಳನ್ನು ಚಿತ್ರಿಸಿಕೊಳ್ಳಲಾಗಿದೆ.

ಸಂದರ್ಶನ : ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ವಿದ್ವಾಂಸರನ್ನು ಭೇಟಿ ಮಾಡಲಾಯಿತು. ಅಧ್ಯಾಯಗಳಿಗೆ ಸಂಬಂಧಿಸಿದಂತೆ ಅವರೊಂದಿಗೆ ಚರ್ಚೆಯನ್ನು ನಡೆಸಿ ವಿಷಯ ಸಂಗ್ರಹಣೆಗೆ ಧ್ವನಿ ಮುದ್ರಿಸಿಕೊಂಡು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಗ್ರಂಥಾಲಯಗಳಿಗೆ ಭೇಟಿ ಕೊಟ್ಟಿರುವುದು; ವಿಶ್ವವಿದ್ಯಾಲಯ ಮತ್ತು ಶಾಲಾಕಾಲೇಜುಗಳಲ್ಲಿನ ಗ್ರಂಥಾಲಯಗಳಿಗೆ, ಅಕಾಡೆಮಿಗಳಿಗೆ ಭೇಟಿನೀಡಿ ಈ ವಿಷಯವಾಗಿ ಬರೆದ ಕೃತಿಗಳನ್ನು ಸಂಗ್ರಹಿಸಿ ಮತ್ತು ಪತ್ರಿಕೆಗಳಲ್ಲಿನ ಲೇಖನಗಳನ್ನು ಛಾಯಾಚಿತ್ರಣ ಮತ್ತು ನೆರಳಚ್ಚು ಮಾಡಿಕೊಂಡು ವಿಷಯ ಸಂಗ್ರಹಿಸಲಾಗಿದೆ.

ಅಧ್ಯಯನದ ಸ್ವರೂಪ :

ಪ್ರಸ್ತುತ ಪ್ರಬಂಧವನ್ನು ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಒಂದನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನಗಳನ್ನು ವಿವರಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಕನಗನಹಳ್ಳಿಯ ಚಾರಿತ್ರಿಕ, ಸಾಂಸ್ಕೃತಿಕ ಮತ್ತು ಭೌಗೋಳಿಕ ಪರಿಸರದ ಸ್ಥೂಲ ಪರಿಚಯ, ಚಿತ್ತಾಪುರ ತಾಲೂಕಿನ ಸನ್ನತಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಾದ ಕೊಲ್ಲೂರು, ನಾಲವಾರ, ರಾವೂರ, ಕುಂದನೂರು, ಹಲಕರ್ಟಿ, ಕೊಂಚೂರು, ದಿಗ್ಗಾವಿ, ಬೊಮ್ಮನಹಳ್ಳಿ, ನಾಗಾವಿ, ಹೀಗೆ ನಾನಾ ಗ್ರಾಮಗಳ ಇತಿಹಾಸ ಮತ್ತು ಪೌರಾಣಿಕ ಹಿನ್ನೆಲೆಯೊಂದಿಗೆ ಸಾಂಸ್ಕೃತಿಕ ಮತ್ತು ಭೌಗೋಳಿಕ ಸಂಪನ್ಮೂಲಗಳನ್ನು ಪರಿಚಯಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಸ್ತೂಪ ಬೆಳೆದುಬಂದ ಬಗೆ ಹಾಗೂ ಬುದ್ಧನ ದುಂಡುಶಿಲ್ಪಗಳ ರಚನಾ ವಿಧಾನ, ಲಕ್ಷಣ, ತಂತ್ರಗಾರಿಕೆಯ ಬಗ್ಗೆ ಮತ್ತು ಉಪಯೋಗಿಸಿರುವ ಸುಣ್ಣದ ಶಿಲೆಯ ಬಳಕೆ ಹಾಗೂ ಶಿಲೆಯ ಗುಣಧರ್ಮದ ಬಗ್ಗೆ ಸ್ಥೂಲವಾಗಿ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಬುದ್ಧನ ಜನನ ಮತ್ತು ಜಾತಕ ಕಥೆ ಆಧಾರಿತ ಉಬ್ಬುಶಿಲ್ಪಗಳನ್ನು ರಚನಾ ವಿಧಾನದೊಂದಿಗೆ ಶಿಲೆಯಲ್ಲಿ ಸಂಯೋಜನೆಗೊಂಡ ವಿವಿಧ ಆಕೃತಿಗಳನ್ನು ಕಥೆಗಳ ಆಧಾರದ ಮೇಲೆ ವಿವರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ನಾಗಮುಚ್ಛಲಿಂದ ಯಕ್ಷ ಮತ್ತು ಬುದ್ಧನ ಸಾಂಕೇತಿಕ ಶಿಲ್ಪಗಳಾದ ಪಾದುಕೆ, ಸಿಂಹಾಸನ, ವೃಕ್ಷ, ಚಕ್ರ ಶಿಲ್ಪಗಳನ್ನೊಳಗೊಂಡಂತೆ ನಾಗಮುಚ್ಛಲಿಂದ ಶಿಲ್ಪಗಳು ಸ್ತೂಪಗಳಲ್ಲಿ ಕಂಡುಬರಲು ಕಾರಣಗಳು ನಾಗ ಜನಗಳ ಹುಟ್ಟು-ಬೆಳವಣಿಗೆ ಬೌದ್ಧಧರ್ಮದ ಸೇರ್ಪಡೆಯನ್ನು ಸ್ಥೂಲವಾಗಿ ವಿವರಿಸಿ ಭಾರತೀಯ ಶಿಲ್ಪಕಲೆಯಲ್ಲಿ ಯಕ್ಷ ಕಲ್ಪನೆ ಹೇಗೆ ಹುಟ್ಟಿಕೊಂಡಿತು ಎನ್ನುವುದರ ಪರಿಚಯವನ್ನು ಕೊಡಲಾಗಿದೆ.

ಆರನೇ ಅಧ್ಯಾಯದಲ್ಲಿ ಸಾಮಾಜಿಕ ಜನಜೀವನ ಮತ್ತು ಪರಿಸರ ಸಂಬಂಧಿ ಉಬ್ಬುಶಿಲ್ಪಗಳನ್ನು ರಚನಾ ವಿಧಾನದೊಂದಿಗೆ ಅಂದಿನ ಸಾಮಾಜಿಕ ಜನಜೀವನದ ಆಗುಹೋಗುಗಳು, ಧಾರ್ಮಿಕ ಕಾರ್ಯಗಳಿಗೆ ಕೊಟ್ಟಿರುವ ದೇಣಿಗೆಗಳ ಚಿತ್ರ ನಿರೂಪಣೆಗಳು ಹಾಗೂ ಗ್ರಾಮೀಣ ಬದುಕಿಗೆ, ಪರಿಸರಕ್ಕೆ ಸಂಬಂಧಿಸಿದ ಚಿತ್ರಗಳ ವಿವರಣೆಗಳನ್ನು ಅವುಗಳ ಲೌಕಿಕ, ಪಾರಮಾರ್ಥಿಕ ಹಾಗೂ ಅಂದಿನ ಅವಶ್ಯಕತೆಗಳನ್ನು ಮನಗಂಡು ಶಿಲ್ಪಿಗಳು ಹೇಗೆ ರಚಿಸಿದ್ದಾರೆಂಬುದನ್ನು ಚರ್ಚಿಸಲಾಗಿದೆ.

ಅಧ್ಯಾಯ ಏಳು ಸಮಾರೋಪವಾಗಿದ್ದು, ಪ್ರಬಂಧದ ಎಲ್ಲ ಅಧ್ಯಾಯಗಳಲ್ಲಿ ಏನೇನನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ ಎಂಬುದರ ವಿವರ ನೀಡಿ ಪ್ರಸ್ತುತ ಅಧ್ಯಯನದಿಂದ ಸಾಧಿತವಾಗುವ ಫಲಿತಗಳನ್ನು ವಿವರಿಸಲಾಗಿದೆ.

ಅನುಬಂಧದಲ್ಲಿ ಗ್ರಂಥಋಣ, ವಕ್ತೃಗಳ ವಿವರವಿದೆ.

ಪೂರ್ವಾಧ್ಯಯನ ಸಮೀಕ್ಷೆ :

ಈ ಪ್ರದೇಶದಲ್ಲಿನ ಶಿಲ್ಪಾವಶೇಷಗಳನ್ನು ದಿ. ಕಪಟರಾಳ ಕೃಷ್ಣರಾವ್ ಅವರು ೧೯೫೪ರಲ್ಲಿ ಬೆಳಕಿಗೆ ತಂದರು. ಅನಂತರ ಡಾ. ಎಂ. ಶೇಷಾದ್ರಿ (೧೯೬೪-೬೫) ಡಾ. ಪಿ.ಬಿ. ದೇಸಾಯಿ, ಡಾ. ಎಂ. ನಾಗರಾಜರಾವ್, ಜೇಮ್ಸ್ ಹೊವೆಲ್, ಡಾ. ಅ. ಸುಂದರ, ಡಾ. ಐ.ಕೆ. ಶರ್ಮ, ಡಾ. ನಾಗರಾಜು, ಡಾ. ಪೂಣಚ್ಚ, ಶ್ರೀ ತಳವಾರ್ ಮುಂತಾದವರು ಈ ಸ್ಥಳದಲ್ಲಿ ಸಂಶೋಧನೆ ನಡೆಸಿ ಹೊಸ ಹೊಸ ಮಾಹಿತಿಗಳನ್ನು ಬೆಳಕಿಗೆ ತಂದಿದ್ದಾರೆ.

ಆದರೆ ಸನ್ನತಿಯ ಚಂದ್ರಲಾಂಬಾ ದೇವಾಲಯದ ಆವರಣದಲ್ಲಿ ಅಶೋಕನ ಶಾಸನವನ್ನು ಬೆಳಕಿಗೆ ತಂದವರು. (೧೯೮೯) ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಆರ್.ವಿ. ಶರ್ಮ ಮತ್ತು ಜೆ. ವರಪ್ರಸಾದರಾವ್ ಅವರು[೫] ನಂತರದ ದಿನಗಳಲ್ಲಿ ಕೆ.ವಿ. ರಮೇಶ, ಡಾ. ಎಂ.ಎಚ್. ಕೃಷ್ಣಮೂರ್ತಿ, ಪ್ರೊ. ಶೆಟ್ಟರ್, ಪ್ರೊ. ಲಕ್ಷ್ಮಣ ತೆಲಗಾವಿ, ಡಾ. ಕೆ.ಜಿ. ಭಟ್‌ಸೂರಿ, ಡಾ. ಸಿ.ಎಸ್. ವಾಸುದೇವನ್, ಡಾ. ಆರ್.ಎಚ್. ಕುಲಕರ್ಣಿ, ಜಯದೇವಿ ಎಂ. ಗಾಯಕ್ವಾಡ್ ಮುಂತಾದವರು ಅಧ್ಯಯನ ನಡೆಸಿದ್ದಾರೆ.

---

೫. ಡಾ. ಆರ್. ಗೋಪಾಲ್ (ಸಂ), ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಡಾ. ಎಂ.ಎಸ್. ಕೃಷ್ಣಮೂರ್ತಿ (ಲೇ), ಸನ್ನತಿ ಮತ್ತು ಬೌದ್ಧಧರ್ಮ : ಒಂದು ವಿವೇಚನೆ, ಪು-೧೪೪

ಅಧ್ಯಾಯ : ಎರಡು

ಕನಗನಹಳ್ಳಿಯ ಚಾರಿತ್ರಿಕ, ಸಾಂಸ್ಕೃತಿಕ ಮತ್ತು ಭೌಗೋಳಿಕ ಪರಿಸರ

ಅಧ್ಯಾಯ : ಎರಡು

ಕನಗನಹಳ್ಳಿಯ ಚಾರಿತ್ರಿಕ, ಸಾಂಸ್ಕೃತಿಕ ಮತ್ತು ಭೌಗೋಳಿಕ ಪರಿಸರ

ಭಾರತ ಜನನಿಯ ತನುಜಾತೆಯಾದ ಕರ್ನಾಟಕ ಒಂದು ಸುಂದರ ಸಿರಿನಾಡು. ಕರ್ನಾಟಕ ದಕ್ಷಿಣ ಭಾರತದ ಪ್ರಸ್ಥ ಭೂಮಿಯಲ್ಲಿ ನೆಲಸಿ ಪಶ್ಚಿಮದಲ್ಲಿ ಸಮುದ್ರಕ್ಕೆ ಅಪ್ಪಿಕೊಂಡಿರುವ ತಗ್ಗಾದ ಕರಾವಳಿ ಪ್ರದೇಶ, ಮುಗಿಲು ಚುಂಬಿಸುವ ಪಶ್ಚಿಮ ಘಟ್ಟ, ಸಮತಲವಾದ ಬಯಲುನಾಡು, ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿಯುತ್ತಿರುವ ಗೋದಾವರಿ, ಕೃಷ್ಣೆ, ಮತ್ತು ಕಾವೇರಿ ಕನ್ನಡನಾಡನ್ನು ಸದಾ ಸಮೃದ್ಧವಾಗಿ ಪೋಷಿಸುತ್ತಿರುವ ಜೀವನದಿಗಳು.

ಭಾರತದಲ್ಲಿ ಬಂಗಾರ ದೊರೆಯುವ ಏಕಮಾತ್ರ ರಾಜ್ಯ ಕರ್ನಾಟಕ, ಸುಗಂಧ ಬೀರುವ ಗಂಧದ ಮರ, ಪರಿಮಳಯುಕ್ತ ಕಾಫಿ ಮತ್ತು ಆಡಂಬರದ ಮೈಸೂರು ರೇಶ್ಮೆ ಏಶಿಯಾದಲ್ಲಿಯೇ ಮೊಟ್ಟಮೊದಲ ಜಲವಿದ್ಯುತ್ ಹಾಗೂ ಸಹಕಾರಿ (ಕೋ ಆಪರೇಟಿವ್) ಕ್ಷೇತ್ರವನ್ನು ಪ್ರಾರಂಭಿಸಿದ ಹೆಗ್ಗಳಿಕೆ ಕರ್ನಾಟಕಕ್ಕೆ ಸಲ್ಲುತ್ತದೆ.[೧]

ಇಂತಹ ಕರ್ನಾಟಕ ಮಾತೆಯ ಹೃನ್ಮಂದಿರವೆ ಕಲಬುರ್ಗಿ ಜಿಲ್ಲೆ. ನೃಪತುಂಗ ಅಥವಾ ಶ್ರೀವಿಜಯನಿಂದ ರಚಿತ ಕನ್ನಡದ ಮೊದಲ ಲಾಕ್ಷಣಿಕ ಗ್ರಂಥ 'ಕವಿರಾಜಮಾರ್ಗ' ರಚನೆಗೊಂಡಿದ್ದು ಕಲಬುರ್ಗಿ ಜಿಲ್ಲೆಯ ಮಳಖೇಡದಲ್ಲಿ (ರಾಷ್ಟ್ರಕೂಟರ ಅಂದಿನ ಮಾನ್ಯಖೇಟ) ಅತ್ಯಮೂಲ್ಯ ನ್ಯಾಯಶಾಸ್ತ್ರದ ರಚನೆಕಾರ ವಿಜ್ಞಾನೇಶ್ವರ ಬರೆದ 'ಮಿತಾಕ್ಷರ' ಗ್ರಂಥ ರಚಿತವಾದದ್ದು ಚಿತ್ತಾಪೂರ ತಾಲೂಕಿನ ಮರತೂರಿನಲ್ಲಿಯೇ. ನಾಗಾವಿ, ಬೊಮ್ಮನಹಳ್ಳಿ, ರಾವೂರು, ಕೊಂಚೂರು, ಬಳವಡಗಿ,

೧. ಬಿ.ಎಂ. ಚಂದ್ರಶೇಖರಯ್ಯ, ಕರ್ನಾಟಕ ಸಂಸ್ಕೃತಿ ಇತಿಹಾಸ ಪರಂಪರೆ ಪುಟ–೧

[illegible]

[illegible]

[illegible]

[illegible]

ಕುಂದನೂರು, ಹಲಕರ್ಟಿ, ಭಂಕೂರು, ತೆಂಗಳಿ, ಕಾಳಗಿ, ದಿಗ್ಗಾವಿಗಳಂತಹ ಐತಿಹಾಸಿಕ ಹಾಗೂ ಪುರಾಣ ಪ್ರಸಿದ್ಧವಾದ ಊರುಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ತಿಂಥಣಿಯ ಮೌನೇಶ್ವರ, ಕೊಡೇಕಲ್ ಬಸವಣ್ಣ, ಶರಣಬಸವೇಶ್ವರರು, ಹಜರತ ಖ್ವಾಜಾ ಬಂದೇನವಾಜರು, ಸೂಫಿ ಚಿತೇಷಾವಲಿ, ಅಳ್ಳೊಳ್ಳಿಯ ಅಯ್ಯಪ್ಪಯ್ಯರಂತಹ ಸರ್ವಧರ್ಮ ಸಮನ್ವಯ ಸಾರಿದ ಶರಣರು, ಸಂತರು ನೆಲೆಸಿದ ನಾಡು ಈ ಕಲಬುರ್ಗಿ ಜಿಲ್ಲೆ.

ಕಲಬುರ್ಗಿ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ನಾಲ್ಕು ತಾಲೂಕಿನ ಗಡಿರೇಖೆಗೆ ಅಂಟಿಕೊಂಡಿರುವ ಏಕೈಕ ತಾಲ್ಲೂಕು ಚಿತ್ತಾಪೂರ. ಕ್ರಿ. ಶ. ೧೭೫೦ ರ ಪೂರ್ವದಲ್ಲಿ "ಕಂಗಳಾಪುರ" ಎಂಬ ಹೆಸರು ಪ್ರಚಲಿತದಲ್ಲಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. "ಕಂಗಳೇಶ್ವರ" ದೇವಾಲಯವು ಇಂದಿಗೂ ಇದೆ. ಕ್ರಿ.ಶ. ೧೭೫೦ರ ನಂತರದ ದಿನಗಳಲ್ಲಿ ಸೂಫಿ ಸಂತ 'ಚಿತೇಷಾವಲಿ"ಬಂದು ನೆಲೆಸಿ ಇಲ್ಲಿಯೇ ಸಮಾಧಿ ಹೊಂದಿದ್ದರಿಂದ ನಗರದ ಪಶ್ಚಿಮ ಹೊರಭಾಗದಲ್ಲಿ (ಈಗಿನ ಬಾಹರ್ ಪೇಠ) ಇವರ ಸಮಾಧಿ ನಿರ್ಮಿಸಿ ಈ ಸೂಫಿ ಸಂತರು ನಡೆದಾಡಿದ ನೆಲ ಹಾಗೂ ಅನೇಕ ಪವಾಡಗಳ ಪರಿಣಾಮವಾಗಿ ಕಂಗಳಾಪುರದಿಂದ ಚಿತೇಷಾವಲಿಯ ಊರು ಚಿತ್ತಾಪೂರ ಎನ್ನುವ ಹೆಸರು ಪ್ರಚಲಿತದಲ್ಲಿದೆ.

ಸೂಫಿ ಸಂತ ಚಿತೇಷಾವಲಿ ಜಾತ್ರೆಗೆ ಹಿಂದೂ ಧರ್ಮದವರ ಮನೆಯಿಂದಲೇ ಮೆರವಣಿಗೆ ಹೊರಡುವುದು ಧರ್ಮಸಮನ್ವಯದ ಪ್ರತೀಕವಾಗಿದೆ. ಇಂತಹ ಸರ್ವಧರ್ಮ ಸಮನ್ವಯದ ಚಿತ್ತಾಪೂರ ತಾಲೂಕಿನಾದ್ಯಂತ ಪ್ರತಿಯೊಂದು ಹಳ್ಳಿಗಳಲ್ಲಿಯೂ ಪೌರಾಣಿಕ ಧಾರ್ಮಿಕ ಮತ್ತು ಐತಿಹಾಸಿಕ ಕುರುಹುಗಳು ಸಿಗುತ್ತವೆ. ಪ್ರಸ್ತುತ ಅಧ್ಯಯನದ ಪ್ರಮುಖ ನೆಲೆಯಾದ ಕನಗನಹಳ್ಳಿಯೂ ಕೂಡ ತಾಲ್ಲೂಕಿನ ಐತಿಹಾಸಿಕ ನೆಲೆಗಳಲ್ಲಿ ಪ್ರಮುಖವಾಗಿ ಕಂಡುಬರುತ್ತದೆ.

ಒಂದು ಪ್ರದೇಶದ ಕಲೆಯು ಉನ್ನತಮಟ್ಟದಿಂದ ಬೆಳೆದು ಇತಿಹಾಸದ ಪುಟಗಳನ್ನು ಸೇರುವ ಸಾಮರ್ಥ್ಯ ಹೊಂದಿರಬೇಕಾದರೆ, ಆ ಪ್ರದೇಶ ಸಕಲ ಸಮೃದ್ಧಿಯಿಂದ ಕೂಡಿದ ಪ್ರದೇಶವಾಗಿರಬೇಕಾಗುತ್ತದೆ. ಅನೇಕ ಪ್ರಾಚೀನ ನಾಗರೀಕತೆ ಐತಿಹಾಸಿಕ ಸ್ಮಾರಕ ಕಟ್ಟಡ ದೇವಾಲಯ ಸ್ತೂಪಗಳ ಅಧ್ಯಯನದಿಂದ ಈ ವಾಸ್ತವಿಕತೆಯನ್ನು ತಿಳಿದುಕೊಳ್ಳುತ್ತಾ ಬರಲಾಗಿದೆ.

ಆದಿಮಾನವರಿಂದ ಹಿಡಿದು ಇಂದಿನವರೆಗೂ ಭೌಗೋಳಿಕ ಸಮೃದ್ಧಿ ವಿಫುಲವಾಗಿರುವ ಪ್ರದೇಶವನ್ನೇ ಬಳಸಿಕೊಂಡಿರುವ ಉದಾಹರಣೆಗಳಿವೆ. ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖವಾಗಿರುವಂತೆ ಒಬ್ಬ ರಾಜ ಒಂದು ರಾಜ್ಯವನ್ನು ಕಟ್ಟಬೇಕಾದರೆ ಆ ಪ್ರದೇಶಕ್ಕೆ ಸಮುದ್ರವು ಸಮೀಪದಲ್ಲಿರಬೇಕು, ಗಿಡ, ಮರ, ಬಳ್ಳಿ ಕಾಡುಗಳಿಂದ ಕೂಡಿರಬೇಕು, ಗುಡ್ಡ ಬೆಟ್ಟಗಳಿಂದ ಸುತ್ತುವರೆದಿರಬೇಕು, ಹಾಗೂ

ಸಮತಟ್ಟಾದ ಭೂಭಾಗವಾಗಿರಬೇಕು. ಆಗ ಮಾತ್ರ ಆ ರಾಜ್ಯ ಸಕಲ ಸಮೃದ್ಧಿಯಿಂದ ವಿಜೃಂಭಿಸಲು ಅನುಕೂಲಕರವೆಂದು ಉಲ್ಲೇಖಿಸಿವೆ.

ಮೇಲೆ ಹೇಳಿದಂತಹ ಎಲ್ಲ ಭೌಗೋಳಿಕ ಲಕ್ಷಣಗಳಿಂದ ಕೂಡಿದ ಪ್ರದೇಶವಿರುವುದು ತುಂಬಾ ವಿರಳ, ಆದರೆ ಚಿತ್ತಾಪೂರ ತಾಲೂಕಿನ ಸನ್ನತಿಯು ಇವುಗಳಲ್ಲಿ ಕೆಲವೊಂದು ಭೌಗೋಳಿಕ ಲಕ್ಷಣಗಳನ್ನು ಹೊಂದಿದ್ದ ಪ್ರದೇಶವಾಗಿತ್ತೆಂದು ಹೇಳಬಹುದು.

ಹರಿಯುವ ನೀರಿನ ಎಡಬಲ ಪ್ರದೇಶಗಳಲ್ಲಿ ಸಣ್ಣ ಹುಲ್ಲು ಕಡ್ಡಿಯಿಂದ ಹಿಡಿದು ಹೆಮ್ಮರವೂ ಹಚ್ಚ ಹಸಿರಾಗಿ ಕಂಗೊಳಿಸುವಂತೆ, ಚಿಕ್ಕ ಸಸ್ತನಿ ಇಂದ ಹಿಡಿದು ಹಲವಾರು ಪ್ರಾಣಿ, ಪಕ್ಷಿಗಳು, ಮನುಷ್ಯರು ನೆಮ್ಮದಿಯಿಂದ ತಮ್ಮದೆ ಆದ ಜೀವನ ವಿಧಾನಗಳೊಂದಿಗೆ ಜೀವಿಸಲು ಪ್ರಕೃತಿಯ ಇಂತಹ ಸ್ಥಳ ಪ್ರಶಸ್ತ ಎಂದು ತಿಳಿದುಕೊಳ್ಳಬಹುದು.

ಇದೇ ರೀತಿಯ ಸಮೃದ್ಧತೆಯಿಂದ ಕೂಡಿದ ಭೀಮಾನದಿಯ ಎಡದಂಡೆಯ ಮೇಲಿನ ಪ್ರದೇಶ ಸನ್ನತಿ ಸುಮಾರು ಮೂರು ಚದರ ಕಿ.ಮೀ. ವಿಸ್ತೀರ್ಣವುಳ್ಳ ಪ್ರಾಚೀನ ಪ್ರದೇಶ. ಇಷ್ಟು ದೊಡ್ಡದಾದ ಸನ್ನತಿ ಪಟ್ಟಣ ಪ್ರಾಚೀನ ಕಾಲದಲ್ಲಿ ತುಂಬಾ ಜನನಿಬಿಡ ಪ್ರದೇಶವಾಗಿತ್ತೆಂದು ತಿಳಿದುಬರುತ್ತದೆ. ಇಂತಹ ಸಕಲ ಸಮೃದ್ಧತೆಯಿಂದ ಕೂಡಿದ ಪ್ರದೇಶಗಳು ಹೊಂದಿದ ಕರ್ನಾಟಕದಲ್ಲಿ ಬೌದ್ಧ ಧರ್ಮ ಪ್ರವೇಶಿಸಲು ಒಂದು ಮುನ್ನುಡಿಯಾಯಿತೆಂದರೆ ತಪ್ಪಾಗಲಾರದು. ಸನ್ನತಿ, ಚಿತ್ರದುರ್ಗ ಜಿಲ್ಲೆಯ ಬಹ್ಮಗಿರಿ ಮೊದಲುಗೊಂಡು ಉತ್ತರ ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ಅಶೋಕನ ಶಾಸನಗಳು ದೊರಕಿವೆ. ಹಿಂದೆ ಈ ಎಲ್ಲಾ ಪ್ರದೇಶಗಳು ಜನನಿಬಿಡವಾಗಿದ್ದವು. ಊರು ಪಟ್ಟಣಗಳಾಗಿದ್ದವು ಓದಲು ಬಲ್ಲ ಜನಸಂಖ್ಯೆ ಇತ್ತೆಂದು ತಿಳಿದುಬರುತ್ತದೆ.

"ಭಾರತದ ಯಾವುದೇ ರಾಜ್ಯದಲ್ಲಿ ಕರ್ನಾಟಕದಲ್ಲಿ ದೊರೆತಿರುವಷ್ಟು ಅಶೋಕನ ಶಾಸನಗಳು ದೊರೆತಿಲ್ಲ ಎಂಬುದು ಈ ರಾಜ್ಯದ ಹೆಮ್ಮೆಯ ವಿಷಯಗಳಲ್ಲೊಂದು"[೨]

ಈಗಿನ ಸನ್ನತಿ ಗ್ರಾಮ (ಅಕ್ಷಾಂಶ ೧೬° ೪೫° ಉತ್ತರ : ರೇಖಾಂಶ ೭೬° ೫೪° ಪೂರ್ವ) ಮತ್ತು ರಣಮಂಡಲ ನಿವೇಶನಗಳು ಅದರ ಪೂರ್ವಕ್ಕೆ ಸುಮಾರು ಒಂದು ಕಿ. ಮೀ. ದೂರದಲ್ಲಿರುವ ಚಂದ್ರಲಾಂಬಾ ದೇವಾಲಯ (ಶಾಸನ ದೊರೆತ ಸ್ಥಳ) ಮತ್ತು ದೇವಾಲಯಕ್ಕೆ ಒಂದು ಕಿ.ಮೀ. ಪೂರ್ವದಲ್ಲಿರುವ ಕನಗನಹಳ್ಳಿ. ಇವೆಲ್ಲವೂ ಒಂದು ಕಾಲಕ್ಕೆ ಒಂದಕ್ಕೊಂದು ಹೊಂದಿಕೊಂಡಂತಿದ್ದ ಪ್ರಾಚೀನ ನೆಲೆಗಳು. ಇವೆಲ್ಲ ಮೂರು ಚದರ ಕಿ. ಮೀ. ವಿಸ್ತೀರ್ಣವುಳ್ಳ

೨. ಡಾ. ಆರ್. ಗೋಪಾಲ್ (ಸಂ), ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಡಾ. ಎಂ. ಎಸ್. ಕೃಷ್ಣಮೂರ್ತಿ (ಲೇ), ಸನ್ನತಿ ಬೌದ್ಧಧರ್ಮ ಒಂದು ವಿವೇಚನೆ, ಪುಟ–೧೪೦,

ಪ್ರಾಚೀನ ನಿವೇಶನಗಳು. ಇಷ್ಟು ದೊಡ್ಡದಾದ ಸನ್ನತಿ ಪಟ್ಟಣ ಪ್ರಾಚೀನ ಕಾಲದಲ್ಲಿ ಸುವರ್ಣಗಿರಿಯೆಂಬ ಹೆಸರಿನಿಂದ ಪ್ರಸಿದ್ಧವಾಗಿದ್ದಂತೆ ತೋರುತ್ತದೆ. ಪ್ರಾಚೀನ ಸುವರ್ಣಗಿರಿಯೇ ಈಗಿನ ಕನಗನಹಳ್ಳಿಯಾಗಿರಬಹುದು ಎಂದು ಅನೇಕ ಸಂಶೋಧಕರ ಅಭಿಪ್ರಾಯವಾಗಿದೆ. ಸುವರ್ಣ, ಕನಕ ಇವೆರಡು ಸಮಾನಾರ್ಥದ ಪದಗಳು ಸುವರ್ಣ ಕನಕವಾಗಿ, ಕನಕ ಕನಗವಾಗಿದೆ. ಎಂಬುದು ಡಾ. ಎಂ. ಎಸ್. ಕೃಷ್ಣಮೂರ್ತಿ ಅವರ ಅಭಿಪ್ರಾಯ.

ಸನ್ನತಿ ಪ್ರಾಯಶಃ ಆ ಕಾಲದ ಅತ್ಯಂತ ಪ್ರವರ್ಧಮಾನವಾಗಿ ಬೆಳೆದಿದ್ದ ಪಟ್ಟಣವಾಗಿದ್ದಂತೆ ತೋರುತ್ತದೆ. ಸನ್ನತಿ ಪಟ್ಟಣದ ಪ್ರದೇಶ ಭೀಮಾನದಿ ದಂಡೆ, ಭೀಮಾ ಕೃಷ್ಣಾ ನದಿಯ ಉಪನದಿ ಕೃಷ್ಣಾನದಿಯ ದಂಡೆಯಲ್ಲಿಯೇ ಆಂದ್ರದ ಎಲ್ಲಾ ಪ್ರಮುಖ ಬೌದ್ಧ ನೆಲೆಗಳೂ ಇದ್ದು ಈ ಕಾರಣದಿಂದ ಆಂಧ್ರದ ಬೌದ್ಧ ನೆಲೆಗಳಿಗೂ ಸನ್ನತಿಗೂ ನಿರಂತರ ಸಂಪರ್ಕವಿತ್ತು. ಏಕೆಂದರೆ ಆ ಕಾಲದಲ್ಲಿ ಬಹಳಷ್ಟು ಮಟ್ಟಿನ ವ್ಯಾಪಾರ, ವ್ಯವಹಾರಗಳೂ ನದೀತೀರ ಮಾರ್ಗದಲ್ಲೇ ನಡೆಯುತ್ತಿದ್ದವು. ನದೀತೀರ ಯಾವಾಗಲೂ ಸಮೃದ್ಧ ಪ್ರದೇಶ[೩] ಸಮೃದ್ಧಿಯಿದ್ದ ಕಡೆಗಳಲ್ಲಿ ಮಾತ್ರ ನಾಗರಿಕತೆಗಳು ಬೆಳೆದು ಬಂದಿವೆಯಲ್ಲವೇ?[೪] ಅತಿ ಪ್ರಾಚೀನ ನಾಗರೀಕತೆಗಳೆನಿಸಿಕೊಂಡಿರುವ ಹರಪ್ಪ ಮತ್ತು ಮೊಹೆಂಜೋದಾರೋ ಬೆಳೆದು ಬಂದಿರುವುದು ಸಿಂಧೂ ನದಿಯ ಬಯಲಿನಲ್ಲಿಯೇ. ಹಾಗೆಯೇ ಸನ್ನತಿ ಕೂಡ ಭಿಮಾನದಿಯ ದಂಡೆಯ ಮೇಲೆ ಬೆಳೆದಿರುವಂತಹ ಪ್ರದೇಶ ಆಗಿನ ಜನರು ನದಿಗಳಿಂದಲೆ ತಮ್ಮ ಮಾರ್ಗಗಳನ್ನು ಗುರುತಿಸಿಕೊಳ್ಳುತ್ತಿದ್ದರೆಂದು ಇತಿಹಾಸದಿಂದ ತಿಳಿದುಬರುತ್ತದೆ.

ವ್ಯಾಪಾರಿಗಳಿಗೆ, ಯಾತ್ರಾರ್ಥಿಗಳಿಗೆ ನದಿಯ ಮಾರ್ಗಗಳು ಅನುಕೂಲಕರವಾದ ಮತ್ತು ದಾರಿತಪ್ಪದ ಮಾರ್ಗಗಳಾಗಿದ್ದವು. ಸನ್ನತಿಯ ಸುತ್ತಮುತ್ತಲಿನ ಪ್ರಾಚೀನ ನೆಲೆಗಳಾದ ಅಣಬಿ, ತರಕಸಪೇಟ್, ಬೆಳವಾಡಿ, ಹಸರಗುಂಡಗಿ ಪ್ರದೇಶಗಳು ಸನ್ನತಿಯ ಉಪನಗರಗಳಿದ್ದಂತೆ ತೋರುತ್ತವೆ.

ಚಿತ್ತಾಪೂರ ತಾಲೂಕಿನಲ್ಲಿ ಅರ್ಧಚಂದ್ರಾಕಾರವಾಗಿ ಹರಿಯುವ ಭೀಮಾನದಿಯ ದಡದಲ್ಲಿ ಇರುವ ಸನ್ನತಿ ಕೋಟೆ ಕರ್ನಾಟಕದ ನೆಲದಲ್ಲಿರುವ ಅತ್ಯಂತ ಪ್ರಾಚೀನ ಕೋಟೆ. ಕಾಲ ಕ್ರಿ.ಶ. ೨೦೦ ಶಾತವಾಹನರ ಆಳ್ವಿಕೆಯ ಸಮಯ,[೫] ಅತ್ಯಂತ ಪ್ರಾಚೀನ ಶಿಲಾಯುಗದ ಮಾನವನ ನೆಲೆಯೂ ಇದಾಗಿತ್ತೆಂದು ಇಲ್ಲಿ ದೊರೆತಿರುವ ಶಿಲಾಯುಗದ ಕಲ್ಲಿನ ಆಯುಧಗಳೇ ಸಾಕ್ಷಿ.

೩. ಡಾ. ಆರ್. ಗೋಪಾಲ್ (ಸಂ), ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಡಾ. ಎಂ. ಎಸ್. ಕೃಷ್ಣಮೂರ್ತಿ (ಲೇ), ಸನ್ನತಿ ಬೌದ್ಧಧರ್ಮ ಒಂದು ವಿವೇಚನೆ, ಪುಟ-೧೪೦,

೪. ಕೆ.ವಿ. ಸುಬ್ರಹ್ಮಣ್ಯಂ, ವೆಂಕಟಾಚಲಪತಿ, ಪುಟ-೩೦

೫. ಡಾ. ಆರ್. ಗೋಪಾಲ್ (ಸಂ), ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಡಾ. ಎಸ್.ಕೆ. ಜೋಶಿ (ಲೇ), ಗುಲ್ಬರ್ಗಾ ಜಿಲ್ಲೆಯ ಕೋಟೆ ಕೊತ್ತಲಗಳು, ಪುಟ-೪೯೪

ಸನ್ನತಿಗೆ ಸಂಬಂಧಿಸಿದಂತೆ ಒಂದು ಪೌರಾಣಿಕ ಹಿನ್ನೆಲೆಯ ಕಥೆ ಪ್ರಚಲಿತದಲ್ಲಿದೆ. ರಾಮ ಮತ್ತು ಸೀತೆ ಈ ಸ್ಥಳದಲ್ಲಿ ನಾರಾಯಣ ಮತ್ತು ಚಂದ್ರವದನಾ ಎಂಬ ಹೆಸರಿನಲ್ಲಿ ಜನ್ಮ ತಾಳಿದರು. ಆಗ ಸೇತು ಎಂಬ ಹೆಸರಿನ ರಾಜನು ಚಂದ್ರವದನೆಯ ಮಾನಭಂಗ ಮಾಡಲು ಪ್ರಯತ್ನಿಸಿ ಆಕೆಯ ಶಾಪದಿಂದ ನಾಶವಾದನು. ಈ ಹಿನ್ನೆಲೆಯ ಪ್ರತೀಕವಾಗಿ ಈಗಿನ ರಣಮಂಡಲ ಪ್ರದೇಶವೇ ಸೇತುರಾಜನ ಕಟ್ಟೆ. ಇದನ್ನೆ ಶಾತವಾಹನರ ಕೋಟೆ ಎಂದು ಕೆ. ವಿ. ರಮೇಶ ಅವರು ಪ್ರತಿಪಾದಿಸುತ್ತಾರೆ.[೬]

ಕ್ರಿ. ಪೂ. ೩ನೇ ಶತಮಾನದ ಅಶೋಕನ ಶಿಲಾಶಾಸನ (ಬ್ರಾಹ್ಮಿಲಿಪಿ ಪ್ರಾಕೃತ ಭಾಷೆ) ದೊರಕಿದೆ. ಇದೊಂದು ಪ್ರಾಚೀನ ಕರ್ನಾಟಕದ ಬೌದ್ಧ ಕೇಂದ್ರ. ಪುರಾತತ್ವ ಉತ್ಖನನದಲ್ಲಿ ಇಲ್ಲಿ ಎರಡು ಭವ್ಯ ಸ್ತೂಪಗಳನ್ನು ಶೋಧಿಸಲಾಗಿದೆ. ಬಾದಾಮಿ ಚಾಲುಕ್ಯರ ೭ನೆಯ ಶತಮಾನದ ಶಾಸನವೊಂದು ವಿನಯಾದಿತ್ಯನ ತಮ್ಮನಾದ ರಾಜಾದಿತ್ಯ ಬಲ್ಲಹ (ವಲ್ಲಭ) ಮತ್ತು ದುಗ್ಗರಸನ ನಡುವೆ ನಡೆದ ಯುದ್ಧದಲ್ಲಿ ಮಂಗಳವೆಂಬ ಆನೆಯನ್ನು ಹತೋಟಿಗೆ ತಂದ ವರ್ಣನೆಯನ್ನು ನೀಡುತ್ತದೆ ೮ನೆಯ ಶತಮಾನದ ರಾಷ್ಟ್ರಕೂಟರ ಕಾಲದ ಚಂದ್ರಲಾಂಬ ದೇವಸ್ಥಾನವೂ ಇದೇ ಭೀಮಾನದಿ ದಡದಲ್ಲಿದೆ.

ಸನ್ನತಿ ಕೋಟೆ ಎರಡು ಅರ್ಧಚಂದ್ರಾಕೃತಿಯ ವಿನ್ಯಾಸಗಳಲ್ಲಿ ಒಂದರೊಳಗೊಂದರಂತೆ, ನದಿಯ ದಡದ ಗುಂಟ ಇಬ್ಭಾಗಗಳ ಗೋಡೆಯ ಎರಡೂ ಬದಿಗೆ ಸೇರಿಸಿದ ಮಣ್ಣಿನ ದಿಬ್ಬಗಳಿಂದ ನಿರ್ಮಿಸಲಾಗಿದೆ. ಈ ಕೋಟೆ ಎರಡು ನೆಲಮಟ್ಟಗಳಲ್ಲಿ ಇದ್ದು ರಣಮಂಡಲ ಮೇಲ್‌ಕೋಟೆ ಹಾಗೂ ಕೆಳಕೋಟೆ ಹೀಗೆ ವಿಭಾಗಿಸಲ್ಪಟ್ಟು ಅರಸುಗಳಿಗೆ ಹಾಗೂ ಜನಸಾಮಾನ್ಯರಿಗೆ ಕ್ರಮವಾಗಿ ಸ್ಥಾನನೀಡಿ ವಾಸಿಸಲು ಪ್ರಭೇದ ಪಾತಳಿಗಳನ್ನು ನೀಡಿತ್ತು. ಹೊರಗಡೆಯ ಗೋಡೆಯು ಸುಮಾರು ೨ ಕಿ. ಮೀ. ಒಳಗೋಡೆಯು ಸುಮಾರು ೧ ಕಿ. ಮೀ. ಉದ್ದಳತೆಗಳಲ್ಲಿ ಹರಡಿವೆ. ಪೂರ್ವ ಬದಿಯಿಂದ ಒಂದರ ನೇರ ಮತ್ತೊಂದರಂತೆ ಪ್ರವೇಶದ್ವಾರಗಳು ಈ ಎರಡೂ ಕೋಟೆ ಗೋಡೆಗಳನ್ನು ಭೇದಿಸಿವೆ. ಇದೊಂದು ಸರಳವಾದ ಸಾದಾ ಗೋಡೆಗಳಿರುವ ಕೋಟೆ.[೭]

ದಿಗ್ಗಾಂವ

ಈ ಗ್ರಾಮವು ತಾಲೂಕು ಕೇಂದ್ರ ಚಿತ್ತಾಪೂರದಿಂದ ೮ ಕಿ. ಮಿ. ದೂರದಲ್ಲಿದೆ ಈ ಗ್ರಾಮದಲ್ಲಿ ೩೬೦ ಲಿಂಗಗಳು ೩೬೦ ಭಾವಿಗಳು ಇವೆ ಎಂದು ಪ್ರಾಚೀನ ಪ್ರತೀತಿ ಇದೆ. ಗ್ರಾಮದಲ್ಲೆಲ್ಲಾ

೬. ಡಾ. ಆರ್. ಗೋಪಾಲ್ (ಸಂ), ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಡಾ. ಎಂ. ಎಸ್. ಕೃಷ್ಣಮೂರ್ತಿ (ಲೇ), ಸನ್ನತಿ ಬೌದ್ಧಧರ್ಮ ಒಂದು ವಿವೇಚನೆ, ಪುಟ-೧೪೨

೭. ಅದೇ ಪುಸ್ತಕ, ಡಾ. ಎಸ್.ಕೆ. ಜೋಶಿ, ಗುಲ್ಬರ್ಗಾ ಜಿಲ್ಲೆಯ ಕೋಟೆ ಕೊತ್ತಲಗಳು ಪುಟ-೪೯೪, ೪೯೫

ದೇವಾಲಯಗಳು ಮತ್ತು ಶಾಸನಗಳು ತುಂಬಿಕೊಂಡು ದೇವಾಲಯಗಳ ಬೀಡಾಗಿದೆ. ಪ್ರಾಚೀನ ಶಾಸನಗಳಲ್ಲಿ 'ದೀರ್ಘ್ವಿಗೆ' ಅಗ್ರಹಾರ ಎಂದೆಲ್ಲಾ ಉಲ್ಲೇಖಿತಗೊಂಡಿರುವ ಈ ಗ್ರಾಮ ಹಿಂದೆ ಅಗ್ರಹಾರವಾಗಿತ್ತೆಂದು ಹೇಳಲಾಗಿದೆ.[೮] ಈ ಗ್ರಾಮದಲ್ಲಿ ಶಂಭುಲಿಂಗೇಶ್ವರ. ಸೋಮೇಶ್ವರ, ನಾರಾಯಣ, ರಾಮಲಿಂಗ, ಜನಾರ್ಧನ, ಕಾಳಿಕಾ, ಮಲ್ಲಿಕಾರ್ಜುನ ಅನಂತಶಯನ ಲಾಕಲಿಂಗ ಹೀಗೆ ಬಿಡಿಬಿಡಿ ದೇವಾಲಯಗಳು ಹಾಗೂ ಒಂದೇ ಪ್ರದೇಶದಲ್ಲಿ ದೇವಾಲಯಗಳ ಸಮೂಹ ಕೂಡ ಈ ಗ್ರಾಮದಲ್ಲಿವೆ. ಹೀಗೆ ಹಲವಾರು ದೇವಾಲಯಗಳಿದ್ದು, ಎಲ್ಲಾ ದೇವಾಲಯಗಳು ಏಕಕೂಟಗಳಾಗಿವೆ. ಕೆಲವೊಂದು ದೇವಾಲಯಗಳಂತೂ ಜನವಸತಿಯ ಮನೆಗಳಾಗಿವೆ ಮತ್ತು ದನದ ಕೊಟ್ಟಿಗೆಗಳಾಗಿವೆ. ಶಂಭುಲಿಂಗೇಶ್ವರ ದೇವಾಲಯದ ಬಳಿ ಒಂದು ದೊಡ್ಡ ಭಾವಿ ಇದೆ ಇದನ್ನು ಅರವತ್ತು ಲಿಂಗದ ಭಾವಿ ಎಂದು ಕರೆಯುತ್ತಾರೆ. ಹಿಂದೆ ಈ ಭಾವಿಯ ನೀರು ದೇವಾಲಯಗಳ ಪೂಜೆಗೋಸ್ಕರ ಬಳಸುತ್ತಿದ್ದರು. ಈಗ ಈ ಭಾವಿಯ ಸ್ಥಿತಿ ಪೂರ್ಣ ಜೀರ್ಣಾವಸ್ಥೆಗೆ ತಲುಪಿದೆ. ಭಾವಿಯ ಸುತ್ತಲೂ ಅರವತ್ತು ಲಿಂಗಗಳ ಚಿಕ್ಕ ಚಿಕ್ಕ ಅರವತ್ತು ದೇವಾಲಯಗಳಿದ್ದವು. ಇದರಿಂದಲೇ ಉಹಿಸಬಹುದು ಬಾವಿಯು ಎಷ್ಟು ದೊಡ್ಡದಿರಬಹುದೆಂದು. ಈಗ ಒಂದೂ ಲಿಂಗ ಇಲ್ಲ ಗುಡಿಯೂ ಇಲ್ಲ. ಎಲ್ಲವೂ ಭಾವಿಯಲ್ಲಿ ಬಿದ್ದು ನೀರಿಲ್ಲದ ಬರಡು ನೆಲದಂತಾಗಿ ಗಿಡಮರಗಳು ಬೆಳೆದಿವೆ. ಉತ್ಖನನ ಮಾಡಿ ಸಂರಕ್ಷಿಸಬೇಕಿದೆ.

ನಾಗಾವಿ

ಚಿತ್ತಾಪೂರ ತಾಲ್ಲೂಕು ಕೇಂದ್ರದಿಂದ ೩ ಕಿ. ಮೀ. ಅಂತರದ ಪೂರ್ವದಿಕ್ಕಿನಲ್ಲಿ ನೆಲೆಗೊಂಡಿರುವ ನಾಗಾವಿ ಪ್ರಾಚೀನ ಅಗ್ರಹಾರಗಳಲ್ಲೊಂದು. ಸಾಂಸ್ಕೃತಿಕ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ ಹೊಂದಿರುವ ನಾಗಾವಿ ಕರ್ನಾಟಕದ ಪ್ರಾಚೀನ ವಿದ್ಯಾಕೇಂದ್ರ ಪುಣ್ಯಕ್ಷೇತ್ರ ಹಾಗೂ ಅನೇಕ ಪ್ರಾಚೀನ ದೇವಾಲಯಗಳನ್ನೊಳಗೊಂಡ ಧಾರ್ಮಿಕ ಪರಂಪರೆಯ ತಾಣವೂ ಆಗಿದೆ.

ಹೈಹಯ ವಂಶದ ಲೋಕರಸನು, ಕಲ್ಯಾಣ ಚಾಲುಕ್ಯರ ಅರಸ ಆರನೇಯ ವಿಕ್ರಮಾದಿತ್ಯನ ಕಾಲದಲ್ಲಿ ಮಹಾಮಂಡಳೇಶ್ವರನಾಗಿ ಅರಲು ಮೂನ್ನೂರನ್ನು (ಚಿತ್ತಾಪೂರ ತಾಲೂಕಿನ ಅಲ್ಲೂರು ಗ್ರಾಮ) ಆಳುತ್ತಿದ್ದ. ಇದೇ ವ್ಯಾಪ್ತಿಯಲ್ಲಿ ಬರುವ ನಾಗಾವಿಯು ಚಾಲುಕ್ಯ ಅರಸ ಒಂದನೇ ಸೋಮೇಶ್ವರನ ದಂಡನಾಯಕ ಮದುವಪ್ಪರಸನು ಘಟಿಕಾಸ್ಥಾನವಾಗಿ ಪರಿವರ್ತಿಸುವ ಪೂರ್ವದಲ್ಲಿಯೇ ರಾಷ್ಟ್ರಕೂಟರ ಸುಪ್ರಸಿದ್ಧ ಅಗ್ರಹಾರವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ.

---

೮. ಡಾ. ಆರ್. ಗೋಪಾಲ್ (ಸಂ), ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಸುಭಾಶಚಂದ್ರ ಡಿ. ದೊಡ್ಡಮನಿ (ಲೇ), ಚಿತ್ತಾಪುರ ತಾಲೂಕಿನ ಐತಿಹಾಸಿಕ ದೇವಾಲಯಗಳ ಇಂದಿನ ಸ್ಥಿತಿಗತಿ, ಪುಟ-೧೩೪

ಪ್ರಾಚೀನ ಸಂಸ್ಕೃತಿಯ ಹಿನ್ನೆಲೆಯ ಪ್ರಸಿದ್ಧಿ ಪಡೆದಿರುವ ಈ ಪ್ರದೇಶವನ್ನು ಶಾತವಾಹನರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಳಚೂರ್ಯರು, ಬಹಮನಿಗಳು ಅಲ್ಲದೆ ಹೈದರಾಬಾದ್ ನಿಜಾಮರೂ ಆಡಳಿತ ನಡೆಸಿದ ಉದಾಹರಣೆಗಳು ದೊರೆಯುತ್ತವೆ.

ನಾಗಾವಿ ಶಾಸನವೊಂದರಲ್ಲಿ "ಚತುರ್ವೇದ ಪೌರಾವಾರ ಪಾರಗಪ್ಪ ನಾಲ್ಕನೂರು ವಿಪ್ರೋತ್ತಮರಿಂದ ಅಭಿನವ ಬ್ರಹ್ಮಲೋಕವೆಂಬಂತೆ, ವಸುಮತೀ ತಳಕ್ಕೆ ತಲೆಯಂಬಂತೆ, ಕುಂತಳ ಮಹಿತಳಕ್ಕೆ ತಿಳಕವೆಂಬಂತೆ ಮಹಾ ಅಗ್ರಹಾರ ನಾಗಾವಿ" ಎಂದು ವರ್ಣಿಸಲಾಗಿದೆ. ಇಲ್ಲಿ ಕುಂತಳವೆಂದರೆ ಕರ್ನಾಟಕವೆಂದರ್ಥ. ಕರ್ನಾಟಕ ಮಾತೆಯ ಹಣೆಯ ತಿಳಕವೆಂಬಂತೆ 'ನಾಗಾವಿ' ವಿರಾಜಮಾನವಾಗಿ ರಾರಾಜಿಸುತ್ತಿತ್ತೆಂದು ಶಾಸನಕವಿ ಬಹುಸೊಗಸಾಗಿ ವರ್ಣಿಸಿದ್ದಾನೆ.[೯]

ಬೊಮ್ಮನಹಳ್ಳಿ

ನಾಗಾವಿ ಪ್ರಾಂತ್ಯದ ಅರಣ್ಯ ಪ್ರದೇಶದಲ್ಲಿಯ ಗವಿಯಲ್ಲಿ ನೆಲೆಸಿದ್ದ, ಬ್ರಹ್ಮಲಿಂಗ (ಬೊಮ್ಮಲಿಂಗ) ಎಂಬ ಶರಣರು ೧೨ ನೇ ಶತಮಾನದ ನಂತರ ಕಲ್ಯಾಣ ಬಿಟ್ಟು ಬಂದವರಾಗಿದ್ದರು. ಈ ಶರಣರು ವಾಸವಾಗಿದ್ದ ಪ್ರದೇಶವೇ ಈಗಿನ ಬೊಮ್ಮನಹಳ್ಳಿಯಾಗಿದೆ. ೧೭ ನೇ ಶತಮಾನದಲ್ಲಿ ಬಳ್ಳಾರಿ ಜಿಲ್ಲೆಯ ಕೊಟ್ಟೂರಿನ ಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ ಜೀರ್ಣಾವಸ್ಥೆಯಲ್ಲಿದ್ದ ಈ ತಾಣವನ್ನು ಜೀರ್ಣೋದ್ಧಾರ ಮಾಡಿದರೆಂದು ತಿಳಿದುಬರುತ್ತದೆ.

ಕ್ರೂರ ಪ್ರಾಣಿಗಳೂ ಸಹ ತಮ್ಮ ಕ್ರೂರತನ ಬಿಟ್ಟು ಸ್ವಾಮೀಜಿಯವರ ಸೇವೆಗೈಯುವ ಸಾಧು ಪ್ರಾಣಿಗಳಾಗಿದ್ದ ಮಹಿಮೆ ತಿಳಿದು, ನೂರೊಂದಯ್ಯ ಎನ್ನುವ ಜಂಗಮ ಗುರುಗಳು ತುಂಬಿದ ನದಿಯಲ್ಲಿ ಕಂಬಳಿ ಹಾಸಿ ಬಸವೇಶ್ವರರನ್ನು ಸ್ಮರಿಸಿ ದಡಸೇರಿದ ಸನ್ನಿವೇಶ ಈ ಭಾಗದ ಪುರಾಣಗಳಲ್ಲಿ ಉಲ್ಲೇಖಗೊಂಡಿದೆ. ನಾಗಾವಿ ಎಲ್ಲಮ್ಮಳು ಈ ಸ್ಥಳದಲ್ಲಿ ವೇದಾಧ್ಯಯನ ಮಾಡಿದ್ದಳೆಂದು ಇಲ್ಲಿಯ ಜನರಲ್ಲಿ ಪ್ರತೀತಿ ಇದೆ.

ರಾವೂರು

ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯೆಂದು ಗುರುತಿಸಲಾದ ಈ ಗ್ರಾಮದಲ್ಲಿ ಗೋರಿ, ಕಲ್ಮನೆಗಳು ಕಂಡುಬಂದಿವೆ. ಪೂರ್ವದಿಕ್ಕಿಗೆ ೧೦ ಕಿ. ಮೀ. ಅಂತರದಲ್ಲಿ ತಾಲ್ಲೂಕು ಕೇಂದ್ರವನ್ನು ಹೊಂದಿರುವ ರಾವೂರು ಗ್ರಾಮ, ಕಲ್ಯಾಣ ಚಾಲುಕ್ಯರ ಕಾಲದ ಅನೇಕ ದೇವಾಲಯಗಳು ಹಾಗೂ ರಾಷ್ಟ್ರಕೂಟರ ದೇವಾಲಯಗಳು ಹೊಂದಿರುವ ಈ ಗ್ರಾಮದಲ್ಲಿ ಮೂರು ಶತಮಾನಗಳಿಗೂ ಅಧಿಕ ಪುರಾತನ ವಾದಂತಹ ಇತಿಹಾಸ ಹೊಂದಿದ ಸಿದ್ದಲಿಂಗೇಶ್ವರ ಮಠವು ವಿದ್ಯಾದಾನದ ಸೆಲೆ

೯ ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ (ಲೇ), ಲೇಖಾವರಣ, ಪುಟ-೩

ಹರಿಸುತ್ತ ಪೂರ್ವ ಅಸ್ಮಿತೆ ಉಳಿಸಿಕೊಂಡು ಬಂದಿದೆ. ಶಹಾಬಾದ ಕಲ್ಲು ಎಂದೆ ಪ್ರಸಿದ್ಧಿ ಪಡೆದಿರುವ ಕಲ್ಲಿನ ಗಣಿಗಳು ಈ ಊರಿನ ಸುತ್ತಲೂ ಇವೆ. ಇದೆ ಗುಣಧರ್ಮದ ಕಲ್ಲುಗಳಿಂದಲೇ ಕನಗನಹಳ್ಳಿಯ ಶಿಲ್ಪಗಳು ರಚನೆಯಾಗಿರುವುದು ಗಮನಾರ್ಹ.

ಮರತೂರು

ಚಿತ್ತಾಪುರ ತಾಲೂಕಿನಲ್ಲಿ ಬರುವ ಇನ್ನೊಂದು ಇತಿಹಾಸ ಪ್ರಸಿದ್ಧ ಗ್ರಾಮವೆಂದರೆ ಮರತೂರು. ಈ ಊರು ಐತಿಹಾಸಿಕವಾದ ಪ್ರಸಿದ್ಧಿ ಹೊಂದಿದ್ದರೂ ಕೂಡ ಕೆಲವು ಶತಮಾನಗಳ ಕಾಲ ಕನ್ನಡಿಗರಿಗೆ ತಿಳಿದಿರಲಿಲ್ಲ. ಭಾರತೀಯ ನ್ಯಾಯಪದ್ಧತಿ ಅದರಲ್ಲೂ ಮುಖ್ಯವಾಗಿ ಹಿಂದೂ ನ್ಯಾಯ ಸಂಹಿತೆಯ ಗ್ರಂಥ, ಭಾರತೀಯ ನ್ಯಾಯ ಶಾಸ್ತ್ರದ ಪಿತಾಮಹನೆನಿಸಿದ ವಿಜ್ಞಾನೇಶ್ವರ, ಯಾಜ್ಞವಲ್ಕ್ಯರ ಸ್ಮೃತಿಗೆ ಬರೆದ ವ್ಯಾಖ್ಯಾನ "ಮಿತಾಕ್ಷರ" ಕೃತಿ ರಚಿತವಾದದ್ದು ಈ ಮರತೂರಿನಲ್ಲಿಯೇ ಎನ್ನುವುದು ಕರ್ನಾಟಕಕ್ಕಷ್ಟೇ ಅಲ್ಲದೇ ಇಡೀ ಭಾರತಕ್ಕೆ ಹೆಮ್ಮೆ ತಂದು ಕೊಡಲು ಕಾರಣವಾಗಿದೆ.

ಇಡೀ ಜಗತ್ತಿನಲ್ಲಿಯೇ ನ್ಯಾಯಶಾಸ್ತ್ರದ ಮಹತ್ವದ ಗ್ರಂಥ ಎಂದು ಸರ್ವಸಮ್ಮತದಿಂದ ಸ್ವೀಕಾರಗೊಂಡಿರುವ ಮಿತಾಕ್ಷರ ಗ್ರಂಥ, ವಿಧವಾ ವಿವಾಹ, ಉತ್ತರಾಧಿಕಾರ, ಸ್ತ್ರೀಯರ ಆಸ್ತಿಹಕ್ಕು, ವಾರಸುದಾರಿಕೆ, ಮಕ್ಕಳಿಗಿರುವ ಹಕ್ಕು, ಸ್ತ್ರೀಧನ, ಕಾರ್ಮಿಕ ಸಮಸ್ಯೆ ಹೀಗೆ ಅನೇಕ ವಿಧವಾದ ಸಂಗತಿಗಳಿಗೆ ಸಂಬಂಧಿಸಿದ ಶಾಸ್ತ್ರಬದ್ಧ ನ್ಯಾಯ ಮೀಮಾಂಸೆಯನ್ನೊಳಗೊಂಡಿದೆ.[೧೦]

೧೨ ನೆಯ ಶತಮಾನದಲ್ಲಿಯೇ ಮಾನವ ಹಕ್ಕುಗಳ ಬಗ್ಗೆ ಸವಿಸ್ತಾರವಾಗಿ ವಿಚಾರ ಮಂಡಿಸಿದ ವಿಜ್ಞಾನೇಶ್ವರರು, ಕಲ್ಯಾಣ ಚಾಲುಕ್ಯರ ವೀರ ಸಾಮ್ರಾಟ ವಿಕ್ರಮಾದಿತ್ಯನ (೧೦೭೬–೧೧೨೬) ಆಸ್ಥಾನ ಪಂಡಿತರಾಗಿದ್ದರು.

ಮಳಖೇಡ

ಕನ್ನಡದ ಮೊದಲ ಉಪಲಬ್ದ ಲಾಕ್ಷಣಿಕ ಗ್ರಂಥ ಕವಿರಾಜ ಮಾರ್ಗವನ್ನು ಬರೆದವನೆಂದು ಹೇಳಲಾಗುವ ಶ್ರೀವಿಜಯನೆಂಬ ಸಭಾಸದ ರಾಷ್ಟ್ರಕೂಟರ ದೊರೆ ನೃಪತುಂಗನ ಆಸ್ಥಾನದ ಕವಿರತ್ನವಾಗಿದ್ದನು. ಚಿತ್ತಾಪೂರ ತಾಲ್ಲೂಕು ಕೇಂದ್ರದಿಂದ ಕೇವಲ ೮ ಕಿ. ಮೀ. ಅಂತರದಲ್ಲಿ ಬರುವ "ಮಾನ್ಯಖೇಟ" ರಾಷ್ಟ್ರಕೂಟ ಅರಸರ ರಾಜಧಾನಿಯಾಗಿದ್ದು ಇದು ಸೇಡಂ ತಾಲ್ಲೂಕಿಗೆ ಸೇರಿದ್ದಾಗಿರುತ್ತದೆ. ಅಗಸ್ತ್ಯ ಋಷಿಗಳ ಕಮಂಡಲಿನಿಂದ ಹುಟ್ಟಿ ಬಂದಿತೆಂಬ ಪ್ರತೀತಿ ಇರುವ ಕಾಗಿಣಾ ನದಿಯ ದಂಡೆಯ ಮೇಲೆ ಮಳಖೇಡ ನೆಲೆಗೊಂಡಿದೆ. ಐತಿಹಾಸಿಕ ಪ್ರಸಿದ್ಧವಾದ ಮಳಖೇಡ ನೃಪತುಂಗನ ಕಾಲದಿಂದಲೂ (ಕ್ರಿ. ಶ. ೮೧೪) ಘನತೆಯನ್ನು ಪಡೆದಿದೆ. ಕಾವೇರಿಯಿಂದ ಗೋದಾವರಿಯವರೆಗೆ (ನದಿಗಳು) ಕರ್ನಾಟಕ ಹಬ್ಬಿತ್ತೆಂದು ಒಂಬತ್ತನೆಯ ಶತಮಾನದ ಈ ಕೃತಿ ಕವಿರಾಜಮಾರ್ಗದಿಂದ ತಿಳಿದುಬರುತ್ತದೆ. ಮಹಾವೀರ ಆಚಾರ್ಯರ ಗಣಿತ ಸಾರಸಂಗ್ರಹ ಗ್ರಂಥ ರಚನೆಯಾಗಿದ್ದು ಇಲ್ಲಿಯೇ.[೧೧]

---

೧೦. ವಿಶ್ವೇಶ್ವರ ಭಟ್, ವಿಜಯ ಕರ್ನಾಟಕ ದಿನಪತ್ರಿಕೆ, ೧೨.೦೫.೨೦೧೩

೧೧. ವಾದಿರಾಜ ವ್ಯಾಸಮುದ್ರ, ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ, ೨೮.೦೫.೨೦೧೩

ಕೊಂಚೂರು

ಚಿತ್ತಾಪೂರ ತಾಲ್ಲೂಕಿನ ವಾಡಿಯಿಂದ ಕೇವಲ ೬ ಕಿ. ಮೀ. ಅಂತರದಲ್ಲಿ ಬರುವ ಕೊಂಚೂರು ಗ್ರಾಮಕ್ಕೆ ಐತಿಹಾಸಿಕ ಹಾಗೂ ಪೌರಾಣಿಕ ಹಿನ್ನೆಲೆ ಇದೆ. ಕಲಿಯುಗದಲ್ಲಿ ಪಾಪಕಾರ್ಯಗಳು ಹೆಚ್ಚಾಗಿ ಅಸೂಯೆ, ಮದ, ಮತ್ಸರ, ಅಧರ್ಮ ಕಾರ್ಯಗಳು ಅವ್ಯಾಹತವಾಗಿ ತಾಂಡವವಾಡುತ್ತಿದ್ದಾಗ ವೇದವ್ಯಾಸರ ಆಜ್ಞೆಯಂತೆ ಹನುಮಂತನು ಕೊಂಚುಕೇಶನೆಂಬ ಹೆಸರಿನಿಂದ ಕೊಂಚೂರಿನಲ್ಲಿ ನೆಲೆಸಿ ಭಕ್ತರನ್ನು ಕಾಪಾಡಿದ್ದಾನೆಂದು, ವೇದವ್ಯಾಸರ ಆಜ್ಞೆಯಂತೆ ಕೊಂಚುಕೇಶನು ಫಂಡರಪುರಕ್ಕೆ ಬಂದು ಚಂದ್ರಭಾಗಾದಲ್ಲಿ ಮಿಂದು ತನ್ನ ಪ್ರಯಾಣ ಮುಂದುವರಿಸುತ್ತಾ ಭಕ್ತಾದಿಗಳಿಗೆ ಉಪದೇಶ ಮಾಡುತ್ತಾ ಗುಲಬರ್ಗಾ ಜಿಲ್ಲೆಯ ನರಿಬೋಳ ಮತ್ತು ಚಾಮನೂರು ಮಧ್ಯದ ಭೀಮಾತೀರದ ಪರಿಸರಕ್ಕೆ ಪ್ರಸನ್ನನಾಗಿ ಅಲ್ಲಿಯೇ ತಟಸ್ಥ ಶಿಲಾರೂಪಿಯಾದನು. ಸುತ್ತಲಿನ ಗ್ರಾಮಗಳಲ್ಲೊಂದಾದ ಲಾಡ್ಲಾಪೂರದ ಭಕ್ತರ ಸ್ವಪ್ನದಲ್ಲಿ ಬಂದು ನನ್ನನ್ನು ಕರೆದುಕೊಂಡುಹೋಗಿ ಪ್ರತಿಷ್ಠಾಪಿಸಬೇಕೆಂಬ ಆಜ್ಞೆಯಂತೆ ಎತ್ತಿನ ಬಂಡಿಯಲ್ಲಿ ತೆಗೆದುಕೊಂಡು, ಚಾಮನೂರು, ಲಾಡಲಾಪೂರ ಮಧ್ಯದಲ್ಲಿ ಬರುವ ಈಗಿನ ಕೊಂಚೂರು ಗ್ರಾಮದಿಂದ ಹಾದು ಹೋಗುವಾಗ ಗಾಡಿಯ ಅಚ್ಚುಗಳು ಮುರಿದು ಎಷ್ಟೇ ಪ್ರಯತ್ನಿಸಿದರೂ ಶಿಲಾರೂಪಿ ಹನುಮಂತ ಮುಂದೆ ಸಾಗಲಿಲ್ಲ. ಈ ಪ್ರಯತ್ನದಲ್ಲಿ ಶಿಲೆಯ ಸ್ವಲ್ಪಭಾಗ ಮುರಿದುದರಿಂದ (ಕೊಂಚಿ ಎಂದರೆ ತುಸುಭಾಗ) ಈ ಒಂದು ಶಬ್ದದಿಂದಲೇ ಈ ಗ್ರಾಮಕ್ಕೆ ಕೊಂಚೂರು ಎಂಬ ಹೆಸರು ಬಂದಿದೆ ಎಂಬ ಹೇಳಿಕೆಯೂ ಇದೆ. ಭಗವಂತನ ಅಪ್ಪಣೆಯಂತೆಯೇ ಅದೇ ಸ್ಥಳದಲ್ಲಿ ಪ್ರತಿಷ್ಠಾಪಿಸಲಾಯಿತು. ಎಂದೂ ಕೂಡ ಹೇಳಲಾಗುತ್ತದೆ.

ಹನುಮಂತನು ಶಿವನನ್ನು ಕುರಿತು ದೀರ್ಘ ತಪಸ್ಸು ಆಚರಿಸಲು ಶಿವನ ಆಜ್ಞೆಯಂತೆ ಹಲಕರ್ಟಿ ವೀರಭದ್ರನು ಹನುಮಂತನಿಗೆ ಲಿಂಗ ನೀಡಿದ್ದೂ ಇದೇ ಸ್ಥಳವೆಂಬಂತೆ ಶಿವಪುರಾಣದ ಪೌರಾಣಿಕ ಹಿನ್ನೆಲೆಯೂ ಇದೆ.

ಈ ಭಾಗದಲ್ಲಿಯೇ ದೊರೆಯುವಂತಹ ಬಿಳಿಯ ಸುಣ್ಣದ ಕಲ್ಲನ್ನು ಉಪಯೋಗಿಸಿ ಕಟ್ಟಿದ (ಸನ್ನತಿ, ಕನಗನಹಳ್ಳಿಯ ಸ್ತೂಪದಲ್ಲಿ ಬಳಸಿರುವ ಕಲ್ಲೂ ಕೂಡ ಇದೇ ಆಗಿದೆ) ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿದ್ದ ಪುರಾತನ ಮಂದಿರವನ್ನು ನೆಲಸಮ ಮಾಡಿ ಅದೇ ಜಾಗದಲ್ಲಿ ಸಿಮೆಂಟಿನ ಪ್ರಾಧಾನ್ಯತೆಯಿಂದ ಕೂಡಿದ ದೇವಾಲಯ ತಲೆಯೆತ್ತಿರುವುದು ವಿಶಾದದ ಸಂಗತಿ, ಹಾಗೂ ಪ್ರಾಚೀನ ಕಲೆಯ ಬಗೆಗಿನ ತಿಳುವಳಿಕೆಯ ಕೊರತೆ ಇಂದಿನವರಲ್ಲಿ ಎದ್ದುಕಾಣುತ್ತದೆ.

ಬಳವಡಗಿ

ಗರ್ಭಗುಡಿಯ ಬಾಗಿಲು ಸದಾ ಮುಚ್ಚಿರುವ ವೈಶಿಷ್ಟ್ಯತೆ ಹೊಂದಿದ ೧೦೦೦ ವರ್ಷಕ್ಕಿಂತಲೂ ಪೂರ್ವೇತಿಹಾಸ ಹೊಂದಿದ ದೇವಾಲಯ ಬಳವಡಗಿಯ ಯಲ್ಲಮ್ಮ ದೇವಾಲಯ. ಮುಚ್ಚಿದ ಬಾಗಿಲ ಮುಂದೆ ೫೦೦ ವರ್ಷ ಪೂರ್ವದಲ್ಲಿಯೇ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಇದೇ ವಿಗ್ರಹಕ್ಕೆ ಇಂದಿಗೂ ಪೂಜೆ ಸಲ್ಲಿಸಲಾಗುತ್ತಿದೆ.

ಬಾಗಿಲು ಮುಚ್ಚಿರುವ ಬಗ್ಗೆಯಾಗಲಿ ಅಥವಾ ಮಂದಿರದ ಗರ್ಭಗುಡಿಯಲ್ಲಿ ಸ್ಥಾಪಿಸಿದ ಮೂಲಮೂರ್ತಿ ಇರುವ ಬಗ್ಗೆಯಾಗಲಿ ಖಚಿತ ಮಾಹಿತಿ ಇಲ್ಲ. ಮುಚ್ಚಿರುವ ಬಾಗಿಲು ತೆರೆಯುವ ಸಾಹಸಕ್ಕೆ ಯಾರೂ ಕೈ ಹಾಕಿಲ್ಲ.[೧೨] ದೇವಿಯು "ಬಲ್ಲವ" ಎಂಬ ಭಯಾನಕ ರಕ್ಕಸನನ್ನು ಕೊಂದು ಸಜ್ಜನರನ್ನು ರಕ್ಷಿಸಲು ಗ್ರಾಮದಲ್ಲಿ ನೆಲೆಸಿದ ಕಾರಣಕ್ಕಾಗಿಯೇ ಬಲ್ಲಟಗಿ ಎಂದು ಹೆಸರು ಬಂದಿರಬಹುದು. ಮುಂದೆ ಕಾಲಕ್ರಮೇಣ ಬಲ್ಲಟಗಿಯಿಂದ ಬಳವಡಗಿ ಎಂದು ಪರಿವರ್ತನೆಗೊಂಡ ಈ ಗ್ರಾಮ ಚಿತ್ತಾಪೂರ ತಾಲೂಕಿನ ಕೊಂಚೂರಿನಿಂದ ಕೇವಲ ಒಂದು ಕಿ. ಮೀ ಅಂತರದಲ್ಲಿದೆ. ಪ್ರಾಚೀನ ಶಿಲ್ಪಕಲೆಯ ತಾಣವಲ್ಲದೇ ಪೌರಾಣಿಕ ಹಿನ್ನೆಲೆಯುಳ್ಳ ಈ ಮಂದಿರ ಸಂಪೂರ್ಣ ಕಲ್ಲಿನಿಂದ ಶಿಲ್ಪಕಲೆಯ ವೈಶಿಷ್ಟ್ಯತೆಯಿಂದ ನಿರ್ಮಾಣಗೊಳ್ಳುತ್ತಿದೆ. ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಕೂಡ ಅರಿಯದಂತಹ ನಿಗೂಢತೆ ಹೊಂದಿರುವ ಹಲವಾರು ದೇವಾಲಯಗಳೂ ಭಾರತದಲ್ಲಿ ಇರುವುದನ್ನು ಇಂದಿಗೂ ನಾವು ಕಾಣಬಹುದೆಂದು ಬಳವಡಗಿಯ ದೇವಾಲಯ ನೋಡಿದಾಗ ಅನಿಸದೇ ಇರದು.

ಭಂಕೂರು

ರಾಷ್ಟ್ರಕೂಟರ ಆರಂಭಿಕ ಒಂಬತ್ತನೇ ಶತಮಾನಕ್ಕೆ ಸೇರಿದ ಜೈನಮಂದಿರವು ಚಿತ್ತಾಪೂರ ತಾಲ್ಲೂಕಿನ ಭಂಕೂರು ಗ್ರಾಮದಲ್ಲಿದೆ. ಕಪ್ಪುಶಿಲೆಯ ೬ ಅಡಿಯ ೧೬ನೇ ತೀರ್ಥಂಕರ ಶಾಂತಿನಾಥರ ಮೂರ್ತಿ, ಭಗವಾನ ಪಾರ್ಶ್ವನಾಥರ ಖಡ್ಗಾಸನದ ಶಿಲ್ಪ, ಬೆಣಚು ಕಲ್ಲಿನ ಕುಳಿತ ಮಹಾವೀರರ ಶಿಲ್ಪ, ದ್ವಾರಪಾಲಕರು, ಕೂಷ್ಮಾಂಡಿನಿ, ಯಕ್ಷ-ಯಕ್ಷಿಣಿಯರು ೧೧ ನೇ ಶತಮಾನದವುಗಳೆಂದು ಅಂದಾಜಿಸಲಾಗಿದೆ. ನಾಡಿನ ಹಿರಿಯ ಸಂಶೋಧಕ ಗೋಗಿಯ ಡಿ.ಎನ್. ಅಕ್ಕಿಯವರ ಪ್ರಯತ್ನದ ಫಲವಾಗಿ ಜೀರ್ಣೋದ್ಧಾರಗೊಂಡಿವೆ.

ಶಾಸನಗಳಲ್ಲಿ ಭೂಮಕೂರು ಎಂದು ಉಲ್ಲೇಖಗೊಂಡಿರುವ ಭಂಕೂರು ಗ್ರಾಮದೇವತೆ ಕರೆಮ್ಮಾ ದೇವಿಯ ಹೆಸರಿನಲ್ಲಿ ನಡೆಯುವ ಕರಿಹರಿಯುವ ಆಚರಣೆಯಿಂದ ಪ್ರಸಿದ್ಧಿ ಪಡೆದಿದೆ.[೧೩]

---

೧೨. ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ, ೨೫.೦೫.೨೦೧೩

೧೩. ಕೆ. ರಮೇಶ ಭಟ್, ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ, ೨೫.೦೫.೨೦೧೩

ಭಂಕೂರು ಗಣಪತಿ ಎಂದೇ ಸುತ್ತಮುತ್ತಲ ಊರುಗಳಿಗೆ ಪ್ರಸಿದ್ಧವಾಗಿರುವ ೧೨ ಅಡಿ ಗುಂಡುಕಲ್ಲಿನಲ್ಲಿ ಕೆತ್ತಲಾದ ಸ್ವಯಂಭೂ ಗಣಪತಿಯ ಉಬ್ಬುಶಿಲ್ಪವಿದೆ. ಈ ಶಿಲ್ಪದ ಹತ್ತಿರದಲ್ಲಿಯೇ ಶಹಾಬಾದ ಕಲ್ಲಿನಲ್ಲಿ ಕೆತ್ತಿರುವ ಒಂದು ಶಾಸನವಿದೆ. ಈ ಗ್ರಾಮದಲ್ಲಿ ಸಾಕಷ್ಟು ವೀರಗಲ್ಲುಗಳು ಕಾಣಸಿಗುತ್ತವೆ.

ತೆಂಗಳಿ

ಖಾಂಡವ ಮಂಡಲವೆಂದೇ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ತೆಂಗಳಿ ಗ್ರಾಮವು ಚಿತ್ತಾಪೂರ ತಾಲ್ಲೂಕಿನ ವ್ಯಾಪ್ತಿಗೆ ಬರುವ ಪ್ರಾಚೀನ ಅಗ್ರಹಾರಗಳಲ್ಲೊಂದು ತಂಗುಳಿ –೭೦ ಎಂದೂ ಕೂಡ ಗುರುತಿಸಿಕೊಳ್ಳುವ ಈ ಸ್ಥಳ ಎಪ್ಪತ್ತು ಗ್ರಾಮಗಳ ಆಡಳಿತ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಕಲ್ಯಾಣ ಚಾಲುಕ್ಯರ ಮತ್ತು ರಾಷ್ಟ್ರಕೂಟರ ಕಾಲದಲ್ಲಿ ಶಿಕ್ಷಣ ನೀಡುವ ಅಗ್ರಹಾರವಾಗಿದ್ದು ಶೈವ, ವೈಷ್ಣ, ಜೈನ, ಮುಂತಾದ ಧರ್ಮದ ಅನುಯಾಯಿಗಳು ನೆಲೆಸಿದ್ದರೆಂದು ತಿಳಿದುಬರುತ್ತದೆ. ಶಿಲಾಶಾಸನ ಸಂಶೋಧನೆಯಲ್ಲಿ ಮಹೋಪಾಧ್ಯಾಯ ಎಂದು ಬಿರುದು ಪಡೆದಿರುವ ಸಂಶೋಧಕ ಅರ್ಜುನಾಚಾರ್ಯ ತೆಂಗಳಿಕರ್ ಅವರು ಕೂಡ ಈ ತೆಂಗಳಿ ಗ್ರಾಮದವರು.[೧೪]

ಹಲಕರ್ಟಿ

ವೇದಗಳ ಕಾಲದಲ್ಲಿ ಮಂಡ್ರಾಸುರ ಎಂಬ ರಾಕ್ಷಸನ ಉಪಟಳ ತಾಳಲಾರದೆ ಋಷಿಮುನಿಗಳು ಶಿವನ ಕುರಿತು ತಪಸ್ಸು ಆಚರಿಸಲು, ಶಿವ ಪ್ರತ್ಯಕ್ಷನಾಗಿ ಕಷ್ಟವನ್ನು ಅರಿತು, ರಾಕ್ಷಸನ ಕಾಟದಿಂದ ಋಷಿಗಳನ್ನು ಮುಕ್ತಗೊಳಿಸಲು ವೀರಭದ್ರನಿಗೆ ಆಜ್ಞಾಪಿಸಿದ. ಶಿವನ ಆಜ್ಞೆಯಂತೆ ಪಲ್ಲಕರಂಟಿ ಕ್ಷೇತ್ರಕ್ಕೆ ಆಗಮಿಸಿದ ವೀರಭದ್ರನು ಮಂಡ್ರಾಸುರನೊಂದಿಗೆ ಘನಘೋರ ಯುದ್ಧಮಾಡಿ, ಅವನ ರಾಕ್ಷಸ ಸೈನ್ಯದ ಹಲ್ಲುಮುರಿದು ಕಟ್ಟೆ ಕಟ್ಟಿದ. ಆ ಸ್ಥಳಕ್ಕೆ ಪಲ್ಲಕಟ್ಟಿ, ಪಲ್ಲಕರಟಿ ಎಂದು ಹೆಸರು ಬಂದಿತು. ಮೈಲಾರಲಿಂಗನ ದೇವಸ್ಥಾನದ ಮುಂದೆ ಇರುವ ಕಟ್ಟೆಯೇ ಅಂದಿನ ಪಲ್ಲಕಟ್ಟೆ ಎಂದು ಹೇಳಲಾಗುತ್ತದೆ.[೧೫]

ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡ ಇಂತಹ ಪುರಾಣ ಪ್ರಸಿದ್ಧ ವೀರಭದ್ರೇಶ್ವರರ ಈ ಮಂದಿರ ಇರುವುದು ಚಿತ್ತಾಪೂರ ತಾಲ್ಲೂಕಿನ ಈಗಿನ ಹಲಕರ್ಟಿಯಲ್ಲಿ. ಶಿವಪುರಾಣದಲ್ಲಿ

---

೧೪. ಪಿ.ಕೆ. ಖಂಡೋಬಾ, ಡಾ. ಎಸ್.ಸಿ. ಪಾಟೀಲ (ಸಂ),ಹೈದ್ರಾಬಾದ–ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ, ಲಲಿತ ಕಲೆಗಳ ಸಂಪುಟ, ಮನ್ಮಥಪ್ಪ ಸ್ವಾಮಿ (ಲೇ), ಅರ್ಜುನಾಚಾರ್ಯ ತೆಂಗಳಿಕರ್, ಪುಟ–೬

೧೫. ಶಾಮಸುಂದರ ಕುಲಕರ್ಣಿ (ಲೇ), ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ, ೨೭.೧೧.೨೦೧೦

ಈ ಕ್ಷೇತ್ರದ ಬಗ್ಗೆ ಉಲ್ಲೇಖಿಸಲಾಗಿದೆ. ಈ ದೇವಸ್ಥಾನದಲ್ಲಿ ಮೂರು ಮಾನ ಕಂಬಗಳಿವೆ. ವೀರಭದ್ರ ದೇವರು ಮೂಲದೇವರಾದರೆ, ಬಲಭಾಗದಲ್ಲಿ ನಾಗಲಿಂಗ, ಕಾಳಿಕಾದೇವಿ. ಪಂಚಲಿಂಗೇಶ್ವರ ದೇವಸ್ಥಾನಗಳು ಕಾಣಸಿಗುತ್ತವೆ. ಈ ದೇವಾಲಯದ ಆವರಣದಲ್ಲಿ ಮಿಥುನ ಶಿಲ್ಪಗಳು ಕಣ್ಮನ ಸೆಳೆಯುತ್ತವೆ.

ಕಾಳಗಿ

ಆರನೇಯ ವಿಕ್ರಮಾದಿತ್ಯನ ಕಾಲದಲ್ಲಿ ನಿರ್ಮಿತವಾದಂತಹ ದೇವಾಲಯಗಳು ಹೊಂದಿದ ಕಾಳಗಿ ಚಿತ್ತಾಪೂರದಿಂದ ಸುಮಾರು ೩೫ ಕಿ.ಮೀ. ದೂರದಲ್ಲಿ ನೆಲೆಗೊಂಡಿದೆ. ಶಾಸನಗಳಲ್ಲಿ ಕಾಳಂಗೆ, ಕಾಲಿಗೆ, ಕಾಳ್ಗಿ, ಕಲ್ಲುಗೆ ಎಂದು ಉಲ್ಲೇಖಗೊಂಡು ಕ್ರಿ.ಶ. ೧೧೯೩ರ ಶಾಸನದ ಪ್ರಕಾರ ಚಾಲುಕ್ಯರ ಮೂರನೆಯ ತೈಲಪನ ಮಹಾಮಂಡಳೇಶ್ವರನಾದ ಬಾಣನಿಂದ ವೀರಗೊಂಕರಸನು ಕಾಳಗಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಇಲ್ಲಿ ದೊರೆತಿರುವ ಹನ್ನೊಂದು ಶಾಸನಗಳಲ್ಲಿ ಉಲ್ಲೇಖಿತವಾದಂತೆ, ಇಲ್ಲಿ ನೂರಾ ಒಂದು (೧೦೧) ದೇವಸ್ಥಾನಗಳು ಇದ್ದುದು ತಿಳಿದು ಬರುತ್ತದೆ. ದೊರೆತ ಶಾಸನಗಳಲ್ಲಿ ಬಹುತೇಕ ದಾನಪತ್ರ ಶಾಸನಗಳಾಗಿವೆ. ಕಾಳಗಿಯ ಸಮೀಪದಲ್ಲಿ ಬರುವ ಮಲ್ಲಗಾಣ (ಮಲಘಾಣ) ಗ್ರಾಮವನ್ನು ಉಂಬಳಿಯಾಗಿ ಕೊಟ್ಟ ಉಲ್ಲೇಖವಿದೆ. ಇಲ್ಲಿರುವ ೧೩ನೇ ಶತಮಾನದ ಸೂರ್ಯನಾರಾಯಣ ದೇವಾಲಯ ಮೂರು ಪ್ರತ್ಯೇಕ ಗರ್ಭಗೃಹದಿಂದ ಕೂಡಿ ತೆರೆದ ಅಂತರಾಳ, ನವರಂಗ, ಪೂರ್ವಕ್ಕೆ ಮುಖಮಂಟಪ ಇರುವ ಭವ್ಯ ತ್ರಿಕೂಟ ದೇವಾಲಯವಾಗಿದೆ. ಸಪ್ತಶಾಖಾ ಅಲಂಕೃತ ಕುಸುರಿ ಕೆಲಸದ ಬಾಗಿಲುವಾಡಗಳು, ಗರ್ಭಗುಡಿಯ ಅಕ್ಕಪಕ್ಕದಲ್ಲಿರುವ ಬಲಹರಿ ಮತ್ತು ಎಡಹರಿ ಲಿಂಗಗಳು ದೇವಾಲಯದ ಹೊರ ಆವರಣದಲ್ಲಿ ವಿಷ್ಣು, ಬ್ರಹ್ಮ, ಶಿವ, ಭೈರವ, ನಟರಾಜ, ಉಮಾಮಹೇಶ್ವರ, ಮಹಿಷಾಸುರಮರ್ಧಿನಿ, ಗಣಪತಿ ಹಾಗೂ ವಿವಿಧ ಭಂಗಿಯಲ್ಲಿ ನಿಂತ ಶಿಲಾಬಾಲಿಕೆಯರ ಸುಂದರ ಶಿಲ್ಪಗಳು ಅಲಂಕೃತಗೊಂಡಿವೆ.

ಕ್ರಿ.ಶ. ೧೧೦೩ರ ಶಾಸನದ ಉಲ್ಲೇಖದಂತೆ ಇದೊಂದು ದೇವಸ್ಥಾನ ಸಂಕೀರ್ಣ, ಪೂರ್ವಾಭಿಮುಖವಾಗಿ ಸ್ವಯಂಭೂ ಕಾಳೇಶ್ವರ ದೇವಸ್ಥಾನ, ರೇವಣಸಿದ್ಧೇಶ್ವರ ಹಾಗೂ ಈಶ್ವರನ ಗುಡಿ ಉತ್ತರಕ್ಕೆ ಸೋಮೇಶ್ವರ ಹಾಗೂ ವೀರಭದ್ರ ದೇವಸ್ಥಾನ. ತೆರೆದ ಮಂಟಪದ, ಪಕ್ಕದಲ್ಲಿಯೇ ಪುಷ್ಕರಣಿ, ಇದಕ್ಕೆ ಹೊಂದಿಕೊಂಡಂತೆ ನಕ್ಷತ್ರಾಕಾರದ ತಳವಿನ್ಯಾಸದ ಈಶ್ವರ – ನರಸಿಂಹ ದೇವಾಲಯ, ಸಹಸ್ರಲಿಂಗ, ನೇತ್ರೇಶ್ವರ ಗುಡಿ ಹೀಗೆ ಅನೇಕ ದೇವಾಲಯಗಳು ಕಾಳಗಿಯಲ್ಲಿ ಕಂಡುಬರುತ್ತವೆ.[೧೬]

---

೧೬. ಉದಯ ಶಂಕರ ಭಟ್, ಪ್ರಜಾವಾಣಿ ಕನ್ನಡ ದಿನಪತ್ರಿಕೆ, ಕರ್ನಾಟಕ ದರ್ಶನ, ೧೮.೧೧.೨೦೧೦

ತ್ರಿಕೂಟ ಪಾರ್ಶ್ವನಾಥ ಬಸದಿಯಲ್ಲಿ ಪಾರ್ಶ್ವನಾಥ ತೀರ್ಥಂಕರರ ಪದ್ಮಾಸೀನ ಶಿಲ್ಪವಿದೆ. ಈ ಗ್ರಾಮಕ್ಕೆ ರೋಮನ್ನರ ಸಂಪರ್ಕವಿತ್ತು ಎನ್ನಲಾಗಿದ್ದು ಅದನ್ನು ಬಿಂಬಿಸುವ ಅಪೂರ್ವ ಲೋಹದ ಫಲಕ ಗುಲ್ಬರ್ಗಾ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿದೆ. ಕಾಳಗಿಯ ಸುತ್ತಮುತ್ತಲ ಭರತನೂರು, ರಾಜಾಪೂರಗಳಲ್ಲಿಯೂ ಕೆಲವೊಂದು ದೇವಾಲಯಗಳು ಕಂಡುಬರುತ್ತವೆ.

ಭೌಗೋಳಿಕ ಪರಿಸರ

ಮನುಷ್ಯನು ಸೃಷ್ಟಿಯ ಅತ್ಯಂತ ಬುದ್ಧಿವಂತ ಪ್ರಾಣಿ ಅವನು ಪರಿಸರಕ್ಕೆ ಸಂಬಂಧಿಸಿದಂತೆ ಎಲ್ಲ ಸಂಗತಿಗಳ ಜ್ಞಾನ ಪಡೆಯಲು ಮತ್ತು ಅವುಗಳ ರಹಸ್ಯಗಳನ್ನು ತಿಳಿದುಕೊಳ್ಳಲು ಸದಾಕಾಲ ಪ್ರಯತ್ನಿಸುತ್ತಾನೆ. ಆದ್ದರಿಂದ ಪರಿಸರವು ಆತನ ಚಟುವಟಿಕೆಗಳನ್ನಷ್ಟೇ ಅಲ್ಲದೇ ಆತನ ಸ್ವಭಾವ ಮತ್ತು ರೂಢಿಗಳ ಮೇಲೆಯೂ ಪ್ರಭಾವ ಬೀರುತ್ತದೆ. ಒಂದೇ ಬಗೆಯ ಪರಿಸರವುಳ್ಳ ಎರಡು ಪ್ರದೇಶಗಳು ಜನರ ಸಂಸ್ಕೃತಿಗಳ ವ್ಯತ್ಯಾಸದಿಂದಾಗಿ ವಿಭಿನ್ನ ಅರ್ಥವ್ಯವಸ್ಥೆಗಳನ್ನು ಹೊಂದಿರುತ್ತವೆ. ಈ ರೀತಿಯಾಗಿ ಆಯಾ ಪ್ರದೇಶದ ಮೇಲೆ ಹರಡಿರುವ ವಸ್ತುಗಳ ಅಧ್ಯಯನ ಕೈಗೊಳ್ಳುವುದು ಭೌಗೋಳಿಕ ಅಧ್ಯಯನ.

ಕರ್ನಾಟಕದ ೩೦ ಜಿಲ್ಲೆಗಳಲ್ಲಿ ಒಂದಾದ ಕಲಬುರ್ಗಿ ರಾಜ್ಯದ ಉತ್ತರ ಭಾಗಕ್ಕೆ ನೆಲೆಗೊಂಡಿದೆ. ಈ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಚಿತ್ತಾಪೂರ ತಾಲ್ಲೂಕು ಕರ್ನಾಟಕ ರಾಜ್ಯದಲ್ಲಿಯೇ ಅತಿ ಹೆಚ್ಚು ಹಳ್ಳಿಗಳುಳ್ಳ ತಾಲೂಕು ಕೇಂದ್ರವಾಗಿದ್ದು ಪುರಾತನ ಇತಿಹಾಸವನ್ನೊಳಗೊಂಡಿದೆ.

ಚಿತ್ತಾಪೂರ ತಾಲ್ಲೂಕು ಕಲಬುರ್ಗಿ ಜಿಲ್ಲೆಯ ಪೂರ್ವಭಾಗಕ್ಕೆ ಇದ್ದರೂ ತಾಲ್ಲೂಕಿನ ಹೆಚ್ಚಿನ ಭಾಗ ಜಿಲ್ಲೆಯ ಅಗ್ನೇಯ ದಿಕ್ಕಿಗೆ ಚಾಚಿಕೊಂಡಿದೆ. ಈ ತಾಲ್ಲೂಕಿನ ಪೂರ್ವಕ್ಕೆ ಸೇಡಂ ತಾಲ್ಲೂಕು, ಪಶ್ಚಿಮಕ್ಕೆ ಜೇವರ್ಗಿ ತಾಲ್ಲೂಕು, ಉತ್ತರಕ್ಕೆ ಚಿಂಚೋಳಿ ತಾಲ್ಲೂಕಿನ ಸ್ವಲ್ಪಭಾಗ ಹಾಗೂ ಕಲಬುರ್ಗಿ ತಾಲೂಕಿನ ಸ್ವಲ್ಪಭಾಗ ಹೊಂದಿಕೊಂಡಿದೆ ಚಿಂಚೋಳಿ ತಾಲ್ಲೂಕಿನ ಹೆಚ್ಚಿನ ಭಾಗವು ಚಿತ್ತಾಪೂರ ತಾಲೂಕಿನ ಈಶಾನ್ಯ ಭಾಗಕ್ಕೆ ಬರುತ್ತದೆ. ದಕ್ಷಿಣಕ್ಕೆ ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕು ಮತ್ತು ಯಾದಗಿರಿ ತಾಲೂಕಿನ ಕೆಲವು ಭಾಗಗಳು ಇರುತ್ತವೆ.

ತಾಲೂಕು ಉತ್ತರ ಅಕ್ಷಾಂಶ ೧೭.೧೨° ಮತ್ತು ಪೂರ್ವ ರೇಖಾಂಶ ೭೭.೦೮° ನಡುವೆ ನೆಲೆಗೊಂಡಿದೆ ತಾಲ್ಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೬೫ ಚದರ ಕಿಲೋಮೀಟರಗಳ (೪೩೫೨೩೨ ಎಕರೆ ೩೪ ಗುಂಟೆ) ಪ್ರದೇಶವನ್ನು ಹೊಂದಿದೆ ಇದರಲ್ಲಿ ೩೬೩೩೨೫ ಎಕರೆ ೨೨ ಗುಂಟೆ ಪ್ರದೇಶದಲ್ಲಿ ಸಾಗುವಳಿ ಮಾಡಿದರೆ ೩೬೮೯ ಹೆಕ್ಟೇರ್ ಬರಡು ಭೂಮಿ ಇದೆ.

ಹಾಗೂ ತಾಲೂಕಿನಲ್ಲಿ ಒಟ್ಟಾರೆ ೧೩೨೮೬ ಎಕರೆ ೧೧ ಗುಂಟೆ (೬೧೫೦ ಹೆಕ್ಟೇರ್) ಅರಣ್ಯ ಪ್ರದೇಶವಿದ್ದು ೯೨೮೯ ಹೆಕ್ಟೇರ್ ಪ್ರದೇಶ ಕೃಷಿಯೇತರ ಪ್ರದೇಶವಿದೆ. ತಾಲೂಕಿನಲ್ಲಿರುವ ಒಟ್ಟು ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ೮೧೦ ಹೆಕ್ಟೇರ್ ಪ್ರದೇಶ ಹಾಗೂ ೮ ಕೆರೆಗಳನ್ನು ಹೊಂದಿದೆ ೧೮೧೫ ಎಕರೆ ಪ್ರದೇಶದಲ್ಲಿ ನೀರಾವರಿ ಮೂಲದಿಂದ ಬೆಳೆಗಳನ್ನು ಬೆಳೆಯಲಾಗುತ್ತದೆ.

೨೦೦೧ರ ಜನಗಣತಿಯ ಪ್ರಕಾರ ತಾಲ್ಲೂಕಿನ ಜನಸಂಖ್ಯೆ ೩,೬೬,೮೦೨ ಇದರಲ್ಲಿ ೧,೮೬,೩೯೦ ಪುರುಷರು ಹಾಗೂ ೧೮೦೪೧೨ ಮಹಿಳೆಯರು ಲಿಂಗಾನುಪಾತ ೯೬೮ ತಾಲ್ಲೂಕಿನ ವ್ಯಾಪ್ತಿಯಲ್ಲಿ ೧೩೧ ಹಳ್ಳಿಗಳು ೪೩ ಗ್ರಾಮ ಪಂಚಾಯತಿಗಳು ೩ ಪಟ್ಟಣ ಪಂಚಾಯತಿಗಳು ಬರುತ್ತವೆ. ಆಡಳಿತಾನುಕೂಲಕ್ಕಾಗಿ ಈ ತಾಲೂಕನ್ನು ೫ ಹೋಬಳಿಗಳನ್ನಾಗಿ ವಿಂಗಡಿಸಲಾಗಿದೆ. ೧. ಚಿತ್ತಾಪೂರ ೨. ಶಾಹಾಬಾದ ೩. ನಾಲವಾರ ೪. ಗುಂಡಗುರ್ತಿ ೫. ಕಾಳಗಿ.

ತಾಲ್ಲೂಕಿನ ಹವಾಗುಣವು ಆರೋಗ್ಯಕರವಾದ ಒಣ ಹವಾಗುಣ ಹೊಂದಿದೆ. ಬೇಸಗೆ ಋತು ಫೆಬ್ರುವರಿ ಮಧ್ಯದಿಂದ ಜೂನ್ ಕೊನೆಯವರೆಗೆ ಮುಂದುವರಿಯುತ್ತದೆ. ಹಾಗೆಯೇ ಮುಂಗಾರು ಮಳೆ ಪ್ರಾರಂಭವಾಗಿ ಸೆಪ್ಟೆಂಬರ್ ಕೊನೆಯವರೆಗೆ ಇರುತ್ತದೆ. ಡಿಸೆಂಬರ್‌ನಿಂದ ಫೆಬ್ರುವರಿವರೆಗೆ ಚಳಿಗಾಲವಿರುತ್ತದೆ. ಮಳೆ ಬೀಳುವಿಕೆ ಪ್ರಮಾಣ ೭೯೪ ಮಿ.ಮೀ. ೨೦೦೪ರಲ್ಲಿ ಮಳೆಯ ಪ್ರಮಾಣ ೬೬೨.೨ ಮಿ. ಮೀ ಮಳೆಗಾಲದ ದಿನಗಳು ಸುಮಾರು ೪೮ ದಿನಗಳವರೆಗೆ ಇರುವುದು ಡಿಸೆಂಬರ್‌ನಲ್ಲಿ ಕನಿಷ್ಠ ತಾಪಮಾನ ೧೪° ಸೆ ನಿಂದ ೧೫° ಸೆ. ಬೇಸಿಗೆಯಲ್ಲಿ ಗರಿಷ್ಠ ತಾಪಮಾನ ೪೨° ಸೆ ನಿಂದ ೪೫° ಸೆ ಇರುತ್ತದೆ. ಚಿತ್ತಾಪೂರ ತಾಲೂಕಿನಲ್ಲಿ ಬೆಣ್ಣೆತೊರಾ (ಬೆಣ್ಣೆತೊರೆ), ಕಾಗಿಣಾ, ಮತ್ತು ಭೀಮಾ ನದಿಗಳು ಹರಿಯುತ್ತವೆ.

೧. **ಬೆಣ್ಣೆತೊರಾ ನದಿ** : ಬೆಣ್ಣೆತೊರಾ ನದಿಯು ಗುಲ್ಬರ್ಗಾ ತಾಲೂಕಿನ ಹೇರೂರ ಆಣೆಕಟ್ಟಿನಿಂದ ಚಿತ್ತಾಪೂರ ತಾಲ್ಲೂಕಿನಲ್ಲಿ, ಸಾವತಖೇಡದಿಂದ ಪ್ರವೇಶವಾಗಿ ಕನ್ನಡಗಿ, ಮಾರಡಗಿ, ಜೀವನಮಾರಡಗಿ, ತೋಂಚಿ, ಕಮಕನೂರ, ಬೆಣ್ಣೂರ, ಮಲಘಾಣ, ಕಲಗುರ್ತಿ, ಅರಜಂಬಗಾ, ಟೆಂಗಳಿ, ತೊನಸನಹಳ್ಳಿ, ಮಲಕೂಡ ಮಾರ್ಗವಾಗಿ ಮುಂದೆ ಸೇಡಂ ತಾಲೂಕನ್ನು ಪ್ರವೇಶ ಮಾಡುತ್ತದೆ.

೨. **ಕಾಗೀಣಾ** : ಕಾಗೀಣಾ ನದಿಯು ಚಿತ್ತಾಪೂರ ಪಟ್ಟಣ ಕೇಂದ್ರದಿಂದ ೫ ಕಿ. ಮೀ. ದೂರದ ದಂಡೋತಿಯಿಂದ ತಾಲೂಕನ್ನು ಪ್ರವೇಶಮಾಡಿ ಮುಡಬೂಳ, ಕಾಟಮ್ಮದೇವರಹಳ್ಳಿ, ಕದ್ದರಗಿ, ಭಂಕೂರ, ಶಹಾಬಾದ, ಗೋಳಾ, ಇಂಗಳಗಿಯಿಂದ ಹೊನಗುಂಟಾದಲ್ಲಿ ಭೀಮಾನದಿಯನ್ನು ಸೇರುತ್ತದೆ. ಈ ನದಿಯು ತಾಲೂಕಿನಾದ್ಯಂತ ಪೂರ್ವಭಾಗದಿಂದ ಪ್ರವೇಶಮಾಡಿ ಪಶ್ಚಿಮಾಭಿಮುಖವಾಗಿ ಹರಿದು ಭೀಮಾ ನದಿಯನ್ನು ಸೇರುತ್ತದೆ. ಮಲ್ಲಾಮಾರಿ, ಬೆಣ್ಣೆತೊರೆ ಮತ್ತು ಕಮಲಾವತಿಗಳೆಂಬ ಹಳ್ಳಗಳು ಈ ಕಾಗಿಣಾ ನದಿಗೆ ಸೇರುತ್ತವೆ.

೩. **ಭೀಮಾನದಿ** : ಭೀಮಾನದಿಯು ಚಿತ್ತಾಪೂರ ತಾಲ್ಲೂಕಿನ ಪಶ್ಚಿಮ ದಿಕ್ಕಿನ ಕಡೆಹಳ್ಳಿಯಿಂದ ಪ್ರವೇಶವಾಗಿ ಮುಂದೆ ಹೊನಗುಂಟಾದಲ್ಲಿ ಕಾಗಿಣಾನದಿಯನ್ನು ಕೂಡಿಕೊಂಡು ತಾಲೂಕಿನ ಗಡಿ ಭಾಗದ ಹಳ್ಳಿಗಳಾದ ಕುಂದನೂರು, ಚಾಮನೂರು, ಕಡಬೂರು, ಕೋಲಕುಂದಾ, ಮಳಗಾ (ಎನ್), ತುರನೂರ, ಮಾರಡಗಿ, ಕೊಲ್ಲೂರ ಮಾರ್ಗವಾಗಿ ಸನ್ನತಿಯಿಂದ ಯಾದಗಿರಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಈ ನದಿಯು ಪಶ್ಚಿಮ ದಿಕ್ಕಿನಿಂದ ತಾಲ್ಲೂಕನ್ನು ಪ್ರವೇಶಮಾಡಿ ದಕ್ಷಿಣ ದಿಕ್ಕಿಗೆ ಹರಿದು ಯಾದಗಿರಿ ಜಿಲ್ಲೆಯ ವ್ಯಾಪ್ತಿಯ ಹಳ್ಳಿಗಳನ್ನು ಸೇರುತ್ತದೆ.

ತಾಲ್ಲೂಕಿನಲ್ಲಿ ಒಟ್ಟು ೧೩,೨೮೬ ಎಕರೆ (೬೧೫೦ ಹೆಕ್ಟೇರ್) ಅರಣ್ಯ ಪ್ರದೇಶವಿದೆ. ಇದರಲ್ಲಿ ಕಾಯ್ದಿರಿಸಿದ ಅರಣ್ಯ ಪ್ರದೇಶ ೧೨,೧೯೬ ಎಕರೆ ಈ ಅರಣ್ಯ ಪ್ರದೇಶದಲ್ಲಿ ಕಂಡುಬರುವ ಮುಖ್ಯ ಕಾಡುಪ್ರಾಣಿಗಳೆಂದರೆ, ಚಿರತೆ, ಜಿಂಕೆ, ಕಾಡುಹಂದಿ, ಮುಳ್ಳುಹಂದಿ, ತೋಳ, ನರಿ, ಕಾಡುಕುರಿ, ಕಾಡುಬೆಕ್ಕು, ಮೊಲ, ಇವುಗಳಲ್ಲಿ ಕಾಡುಹಂದಿ ಹೆಚ್ಚಾಗಿ ಕಂಡುಬರುತ್ತವೆ.

ಬಿಟ್ಟಲ, ತರಿ, ತುಗಲಿ, ಸೋಮಿ, ಇಣಜಿ, ಚೆನ್ನಂಗಿ, ಹಾಗೂ ಸೀತಾಫಲ ಮರಗಳು ಈ ಅರಣ್ಯ ಪ್ರದೇಶಗಳಲ್ಲಿ ಕಂಡುಬರುವ ಪ್ರಮುಖ ಮರಗಳಾದರೆ, ನವಿಲುಗಳು, ನೀಲಕಂಠ ಹಾಗೂ ರಣಹದ್ದುಗಳು ಹೆಚ್ಚಾಗಿ ಕಂಡುಬರುವ ಪಕ್ಷಿಗಳಾಗಿವೆ.

ಖನಿಜ ಸಂಪತ್ತು

ಸಿಮೆಂಟ್ ತಯಾರಿಕೆಗೆ ಅಗತ್ಯವಾದ ಮೂಲ ವಸ್ತುಗಳಾದ ಸುಣ್ಣಶಿಲೆ, ಮತ್ತು ಜೇಡು, ಸುಣ್ಣ, ಸಿಮೆಂಟ್, ಕ್ಯಾಲ್ಷಿಯಂ ಕಾರ್ಬೈಟ್‌ಗಳ ಉತ್ಪಾದನೆಯಲ್ಲಿ ಸುಣ್ಣದ ಕಲ್ಲನ್ನು ಪ್ರಮುಖವಾಗಿ ಉಪಯೋಗಿಸಲಾಗುತ್ತದೆ. ಕಬ್ಬಿಣ ಮತ್ತು ಉಕ್ಕು ಹಾಗೂ ರಾಸಾಯನಿಕ ಕೈಗಾರಿಕೆಗಳಲ್ಲಿ ಸುಣ್ಣದಕಲ್ಲನ್ನು ದ್ರವೀಕರಣ ವಸ್ತುವನ್ನಾಗಿ ಬಳಸಲಾಗುತ್ತದೆ. ಜೊತೆಗೆ ಅದನ್ನು ಕಟ್ಟಡ ಹಾಗೂ ನೆಲಗಟ್ಟು ಶಿಲೆಯಾಗಿ ಉಪಯೋಗಿಸಲಾಗುತ್ತದೆ. ಕಲಬುರ್ಗಿ ಜಿಲ್ಲೆಯಲ್ಲಿರುವ ಭೀಮಾ ಶಿಲಾಸರಣೆಯಲ್ಲಿ ಅಧಿಕ ಪ್ರಮಾಣದ ಸುಣ್ಣದ ಕಲ್ಲುಗಳು, ನಿಕ್ಷೇಪಗಳು ಪತ್ತೆಯಾಗಿವೆ. ಜಿಲ್ಲೆಯ ಜೇವರಗಿ, ಚಿತ್ತಾಪೂರ, ಚಿಂಚೋಳಿ, ಸೇಡಂ, ಕಲಬುರ್ಗಿ ಸುರಪುರ ಮತ್ತು ಶಹಾಪೂರ ತಾಲೂಕುಗಳಲ್ಲಿ ಸುಮಾರು ೧೫೦೦ ಚ. ಮೈಲಿ ಪ್ರದೇಶದಲ್ಲಿ ಸುಣ್ಣಶಿಲೆಗಳ ನಿಕ್ಷೇಪಗಳು ಹೇರಳವಾಗಿವೆ. ಇಲ್ಲಿರುವ ನಿಕ್ಷೇಪಗಳು ೧೫ ರಿಂದ ೬೦ ಸೆ.ಮೀ. ದಪ್ಪದ ನಿಕ್ಷೇಪಗಳಿದ್ದು, ಇವುಗಳಲ್ಲಿ ೧,೨೮,೭೦೦ ಮಿಲಿಯನ್ ಟನ್ನುಗಳ ಸುಣ್ಣದ ಕಲ್ಲಿನ ನಿಕ್ಷೇಪಗಳಿವೆಯೆಂದು ಅಂದಾಜಿಸಲಾಗಿದೆ.

ಈ ಕಲ್ಲಿನ ಭೌತಿಕ ಗುಣಮಟ್ಟ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾದರೂ ರಾಸಾಯನಿಕ ಗುಣಮಟ್ಟದಲ್ಲಿ ಅಷ್ಟೊಂದು ವ್ಯತ್ಯಾಸ ಕಂಡುಬರುವುದಿಲ್ಲ.[೧೭]

---

೧೭. ಗುಲ್ಬರ್ಗಾ ಜಿಲ್ಲೆಯ ಗೆಝೆಟಿಯರ್, ಪಾಟೀಲ ಎಂ.ಬಿ. (ಸಂ), ಕಲಬುರ್ಗಿ, ಪುಟ–೧೮

ಅಧ್ಯಾಯ – ಮೂರು

ಸ್ತೂಪ ಹಾಗೂ ಬುದ್ಧನ ದುಂಡುಶಿಲ್ಪಗಳು

ಅಧ್ಯಾಯ – ಮೂರು

ಸ್ತೂಪ ಹಾಗೂ ಬುದ್ಧನ ದುಂಡುಶಿಲ್ಪಗಳು

ಸ್ತೂಪ ಬೆಳೆದುಬಂದ ಬಗೆ

ಕಲ್ಲುಬಂಡೆಗಳ ನಡುವೆ, ಗುಹೆಗಳಲ್ಲಿ, ಕಲ್ಲಾಸರೆಗಳಲ್ಲಿ ಮನುಷ್ಯನು ವಾಸಿಸುತ್ತಿದ್ದ ಸಮಯದಲ್ಲಿ ತನ್ನ ಗುಂಪಿನಲ್ಲಿ ಯಾರಾದರೊಬ್ಬರು ಸತ್ತರೆ ಅವರ ಕಳೇಬರವನ್ನು ನೆಲದಲ್ಲಿ ಹೂತು ಅದರ ಮೇಲೆ ಒಂದು ದೊಡ್ಡ ಕಲ್ಲನ್ನು ಇಲ್ಲವೆ ಕಲ್ಲುಹರಳುಗಳ ರಾಶಿಯನ್ನು ಪೇರಿಸಿ ಸ್ವಲ್ಪ ದೂರದಲ್ಲಿ ಅದರ ಸುತ್ತ ವೃತ್ತಾಕಾರದಲ್ಲಿ ಕಲ್ಲುಗಳನ್ನು ಇರಿಸುತ್ತಿದ್ದರು. ಭಾರತದ ಕೆಲವೊಂದು ಜನಾಂಗಗಳಲ್ಲಿ ಈ ಪದ್ಧತಿ ಇಂದಿಗೂ ರೂಢಿಯಲ್ಲಿದೆ.

ಸಮಾಧಿಗಳ ಸುತ್ತಲೂ ಕಲ್ಲುಗಳ ವೃತ್ತವಿರುವುದರ ಉದ್ದೇಶವೇನೆಂದರೆ ಸತ್ತವನ ಚೇತನ ಈ ಮೇರೆಯನ್ನು ಮೀರಿ ಹೊರಗೆ ಹಾಯಬಾರದೆಂದು, ನಡುವಿನ ಕಲ್ಲೇ ಆ ಚೇತನವನ್ನು ಪ್ರತಿನಿಧಿಸಿದರೆ ಈ ವೃತ್ತ ಅದರ ಹರವನ್ನು ಮಿತಗೊಳಿಸುತ್ತದೆ. ಕಲ್ಲಿನ ಬದಲು ಮಣ್ಣುಕಲ್ಲಿನ ಗುಡ್ಡವನ್ನು ರಚಿಸಿದರೆ ಅದು ಈ ವೃತ್ತವನ್ನು ಒಳಗೊಂಡು ಸ್ತೂಪವಾಗುತ್ತದೆ. ಅಥವಾ ಈಗ ದೇವಾಲಯಗಳ ಮೇಲೆ ನಾವು ಕಾಣುವ ವಿಮಾನದ ಆಕಾರವನ್ನು ತಳೆಯುತ್ತದೆ. ಸ್ತೂಪಗಳು ಬೌದ್ಧ ಕಟ್ಟಡಗಳೆಂದು ಪ್ರಸಿದ್ಧವಾಗಿವೆ. ದೇವಾಲಯಗಳ ಹಿನ್ನೆಲೆಯನ್ನು ಸ್ತೂಪಗಳಲ್ಲೇ ಗುರುತಿಸಬೇಕೆಂದು ಹೇಳುತ್ತಾರೆ. ಆದರೆ ಸ್ತೂಪದ ಹಿನ್ನೆಲೆಯಲ್ಲಿ ವೈದಿಕಯುಗದ ಅಗ್ನಿದ್ರಿಯ ಎಂಬ ಸಮಾಧಿ ಮಂದಿರವಿರುವುದನ್ನು ಹಲವರು ಅರಿಯರು. ಇದು ಗುಂಭಾಕಾರವಾದ ರಚನೆಯಾಗಿದ್ದು, ಒಳಗೆ ಟೊಳ್ಳಾಗಿರುತ್ತಿತ್ತು. ಅದರ ನಟ್ಟನಡುವೆ ನಾಳವೊಂದನ್ನೊಳಗೊಂಡ ಕುಂಭ, ಅದರ ಎರಡೂ ಪಕ್ಕಗಳಲ್ಲಿ ಕಲ್ಲು ಕಟ್ಟೆಗಳಿರುತ್ತಿದ್ದವು. ಈ ಕಟ್ಟೆಗಳ ಮೇಲೆ ಅಗ್ನಿ ಮತ್ತು ಸೋಮ ಎನಿಸಿಕೊಳ್ಳುವ ಎರಡು ಹೋಮಗಳನ್ನು ನಡೆಸುತ್ತಿದ್ದರು. ಗುಂಭವನ್ನು ಮರದ ಹಲಗೆಗಳಿಂದ ಮಾಡಿ ಮೇಲ್ಭಾಗವನ್ನು

ಮಣ್ಣಿನಿಂದ ಮುಚ್ಚುತ್ತಿದ್ದರು. ಇಡೀ ಕಟ್ಟಡದ ರಚನೆ ಗುಡಿಸಲಿನ ರಚನೆ ನೆನಪಿಗೆ ತರುವಂತಿದ್ದಿತು. ನಡುವಣ ನಾಳದಿಂದ ಅಗ್ನಿಕಾರ್ಯದ ಹೊಗೆ ಹೊರಗೆ ಹೋಗುವ ವ್ಯವಸ್ಥೆಯಿದ್ದಿತು. ಇದು ವೈದಿಕಸ್ತೂಪ. ಸ್ತೂಪವೆಂಬ ಮಾತೂ ವೇದಕಾಲದಷ್ಟೇ ಪ್ರಾಚೀನವಾದುದು ಆದರೆ ಸ್ತೂಪದ ಪ್ರಖ್ಯಾತಿಗೆ ಬೌದ್ಧಯುಗ ನೆರವಾಯಿತು. ಬೌದ್ಧಯುಗದಲ್ಲಿ ಸ್ತೂಪ ಸಮಾಧಿ, ಸ್ಮಾರಕ, ಆರಾಧನೆ ಮೂರು ವಿವರಗಳನ್ನೊಳಗೊಂಡು ನಿಂತಿತು. ಅಶೋಕನು ೮೪,೦೦೦ ಸ್ತೂಪಗಳನ್ನು ನಿರ್ಮಿಸಿದನೆಂದು ತಿಳಿದುಬಂದಿದೆ. ಇವೆಲ್ಲವೂ ಸಮಾಧಿ ಮಂದಿರಗಳೇ ಎನ್ನಲಾಗದು.[೧]

ಅಶೋಕನು ಬುದ್ಧ ಜನ್ಮ ತಳೆದ ಸಂಬೋಧಿಯನ್ನು ಕಂಡ, ಮೊದಲ ಪ್ರವಚನ ಮಾಡಿದ, ಸಂದರ್ಶಿಸಿದ, ಕಳೆಬರವನ್ನಿಟ್ಟು ಪರಿನಿರ್ವಾಣ ಪಡೆದ ಸ್ಥಳಗಳನ್ನೆಲ್ಲ ನೋಡಿಕೊಂಡು ಬಂದು ಆಸ್ಥಳಗಳಲ್ಲೆಲ್ಲ ಸ್ತೂಪಗಳನ್ನು ರಚಿಸಿದನೆಂದು ಕಥೆಯಿದೆ. ಎಂದರೆ ಇವೆಲ್ಲ ಸ್ಮಾರಕ ಮಂದಿರಗಳು. ಆದರೆ ಒಂದೊಂದು ಸ್ತೂಪದೊಳಗೂ ಬುದ್ಧನ ಅಥವಾ ಅವನ ಶಿಷ್ಯರ ಕಳೆಬರದ ಅವಶೇಷಗಳಲ್ಲಿ ಒಂದು ಭಾಗವನ್ನು ಇರಿಸುವ ವ್ಯವಸ್ಥೆಯಿದ್ದಿತು. ನಿದರ್ಶನಕ್ಕೆ ಸಾಂಚಿಯ ಸ್ತೂಪದಲ್ಲಿ ಬುದ್ಧನ ಪ್ರಧಾನ ಶಿಷ್ಯರಾಗಿದ್ದ ಶಾರಿಪುತ್ರ ಮತ್ತು ಮಹಾಮೌದ್ಗಲ್ಯಾಯನ ಇವರ ಅವಶೇಷಗಳನ್ನೊಳಗೊಂಡ ಕರಂಡಗಳಿದ್ದವು. ಅವರಿಬ್ಬರು ತೀರಿಕೊಂಡಿದ್ದು ದೂರದ ನಾಲಂದದಲ್ಲಿ. ಅಲ್ಲಿಂದ ಅವರ ಅವಶೇಷಗಳಲ್ಲಿ ಸ್ವಲ್ಪ ಭಾಗವನ್ನು ತರಲಾಯಿತು. ಬುದ್ಧನು ತೀರಿಕೊಂಡ ಮೇಲೆ ಅವನ ಕಳೆಬರವನ್ನು ಸುಟ್ಟು ಬೂದಿಯನ್ನು ಹಲವು ಜನಾಂಗದವರು ಅದನ್ನು ಕೊಂಡೊಯ್ದು ತಮ್ಮತಮ್ಮ ನಾಡುಗಳಲ್ಲಿ ಸ್ತೂಪಗಳನ್ನು ಕಟ್ಟಿಸಿದರೆಂಬ ಉಲ್ಲೇಖವೂ ಇದೆ.

ಕಳಿಂಗ ದೇಶದ ರಾಜಕುಮಾರಿ ಮತ್ತು ಆಕೆಯ ಗಂಡ ಬುದ್ಧನ ದಂತಗಳಿದ್ದಂತಹ ಪೆಟ್ಟಿಗೆಯನ್ನು ತೆಗೆದುಕೊಂಡು ಸಿಂಹಳ ದೇಶಕ್ಕೆ ಹೊರಡುತ್ತಿದ್ದಾಗ ದಾರಿತಪ್ಪಿ ಸಮುದ್ರಮಾರ್ಗದಿಂದ ಮತ್ತೆ ಕೃಷ್ಣಾನದಿಯ ಮೇಲುಗಡೆಗೆ ತಲುಪುವರು. ಇವರ ಹಡಗು ವಜ್ರಗಳ ದಿಬ್ಬದ ಬಳಿ ದಡ ತಲುಪಿತು. ಅಲ್ಲಿ ನಾಗಾಶೋಕನೆಂಬ ನಾಗರಾಜ ಬೌದ್ಧ ಸ್ತೂಪವನ್ನು ನಿರ್ಮಿಸುತ್ತಿದ್ದನು. ಆ ವಜ್ರಗಳ ದಿಬ್ಬವೆ ಇಂದಿನ ಧಾನ್ಯಕಟಕ (ಧರಣೆ ಕೋಟೆ) ಆ ಅರಸ ನಿರ್ಮಿಸಿದ ಸ್ತೂಪ ಅಮರಾವತಿ ಸ್ತೂಪ.

ಅಮರಾವತಿ ಸ್ತೂಪವನ್ನು ನಿರ್ಮಿಸುತ್ತಿದ್ದ ನಾಗಾಶೋಕನ ಬಳಿಯಿದ್ದ ಬುದ್ಧನ ಅಸ್ತಿಗಳನ್ನು ಆತನ ಮಿತ್ರ ಸಿಂಹಳ ಅರಸನಾದ ಮೇಘವರ್ಣನು ತೆಗೆದುಕೊಂಡು ಹೋಗಿ ಸಿಂಹಳದಲ್ಲಿ ಮತ್ತೊಂದು ಸ್ತೂಪವನ್ನು ನಿರ್ಮಿಸಿದ ವಿಷಯವು ಮತ್ತೊಂದು ಬೌದ್ಧಗಾಥೆಯಿಂದ ತಿಳಿಯುತ್ತದೆ.[೨]

---

೧. ಪ್ರೊ ಸಾ.ಕೃ. ರಾಮಚಂದ್ರರಾವ್, ಭಾರತದ ದೇವಾಲಯಗಳ ನಿಲೆ ಹಿನ್ನೆಲೆ, ಪುಟ–೧೯,೨೦

೨. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ (ಸಂ), ದ್ರಾವಿಡ ಅಧ್ಯಯನ–೨೦೦೪, ಸಿ. ವೆಂಕಟೇಶ್, ಆಂಧ್ರರ ಪ್ರಾಚೀನತೆ, ಪು–೧೧೯

ಬೌದ್ಧರು ಅಳವಡಿಸಿಕೊಂಡ ಸ್ತೂಪದ ಕಲ್ಪನೆ ಹರವುಳ್ಳ ಅರ್ಧಗೋಳಾಕಾರದ ರಚನೆ, ಅದರ ಒಳಮೈ ಟೊಳ್ಳಾಗಿರದೆ ಕಲ್ಲು ಹರಳು ಮಣ್ಣುಗಳಿಂದ ತುಂಬಿದ್ದು ಮೇಲ್ಭಾಗದಲ್ಲಿ ಇಟ್ಟಿಗೆಗಳ ಹೊದಿಕೆಯಿರುತ್ತದೆ. ಈ ಹೊದಿಕೆಯ ಮೇಲೆ ನಯವಾದ ಕಲ್ಲುಚಪ್ಪಡಿಗಳನ್ನು ಜೋಡಿಸಿ ಕಟ್ಟಡವನ್ನು ಮುಗಿಸುತ್ತಾರೆ. ಅದನ್ನು ಮೇಧಿಯೆಂಬ ಹೆಸರಿನ ವೃತ್ತಾಕಾರದ ವೇದಿಕೆಯ ಮೇಲೆ ಕಲ್ಲುಗುಡ್ಡದಂತೆ ಕಾಣುವ ಈ ಸ್ತೂಪವನ್ನು ಕಟ್ಟುವರು. ಸುತ್ತಲೂ ಪ್ರದಕ್ಷಿಣೆ ಮಾಡಿಬರಲು ಅನುಕೂಲವಾಗುವಂತೆ ದಾರಿಯನ್ನೂ ಮೇಧಿಯು ಒಳಗೊಳ್ಳುತ್ತದೆ. ನಡೆಯುವವರ ನೆರವಿಗೆ ಮೇಧಿಯ ಸುತ್ತಲೂ ಬೇಲಿಯಂತಿರುವ ಕಲ್ಲಿನ ಸರಳುಗಳ ಸಾಲೂ ಇರುತ್ತದೆ. ಸ್ತೂಪದ ಸ್ವರೂಪ ಸರಳವಾಗಿರುತ್ತದೆ. ಅದರ ಮೇಲ್ಭಾಗದಲ್ಲಿ ಚಚ್ಚೌಕವಾದ ಮಾಡಿಯಿದ್ದು ಹರ್ಮಿಕೆಯೆನಿಸಿಕೊಳ್ಳುತ್ತದೆ. ಇದಕ್ಕೂ ಕಟಕಟೆಯ ರಚನೆಯನ್ನು ಅಳವಡಿಸುವರು ಅದರ ಮೇಲೆ ಛತ್ರಿಯಾಕಾರದ ಕಲ್ಲು ರಚನೆ ಸ್ತೂಪಕ್ಕೆ ವಿಶಿಷ್ಟವಾದ ಭಾಗ. ಸ್ತೂಪದ ಹಿರಿಮೆಯನ್ನು ಸೂಚಿಸುವ ಈ ಛತ್ರಿ ಸಾರ್ವಭೌಮತ್ವದ ಪ್ರತೀಕ.[೩]

ಬೌದ್ಧ ಸ್ತೂಪಗಳಲ್ಲಿ ಒಂದು ಕೇಂದ್ರದ ಸುತ್ತ ಚಕ್ರೀಯವಾಗಿ ಸುತ್ತುವ ಪ್ರತೀತಿಗಳಿದ್ದವು. ಸ್ತೂಪಗಳಲ್ಲಿ ಸ್ಥೂಲವಾಗಿ ಕಾಣುವ ಅರ್ಧ ಗೋಳವೂ ಮನುಷ್ಯನಿಗಾಚೆಗಿನ ಬೃಹತ್ತನ್ನೇ ಬಿಂಬಿಸುತ್ತಿತ್ತು. ಎತ್ತರದ ಜಗತಿಯ ಮೇಲೆ ನಡುವಿರುವ ಗೋಳವನ್ನು ಸುತ್ತು ಬರುವುದು ಬೌದ್ಧ ಆಚರಣೆಗಳಲ್ಲೊಂದು. ಈ ನೆಲದ ಮುಂದಿನ ನಾಗರಿಕತೆಗಳು ಸ್ತೂಪಗಳ ಸುತ್ತಲಿನ ನಂಬಿಕೆಯನ್ನು ಮುರಿದು ಮುಂದುವರೆದರೂ ಬಳಿಕ ಹುಟ್ಟಿಕೊಂಡ ಗುಡಿಗಾರಿಕೆಯೂ ಯಾಕೊ ಇಟ್ಟುಕೊಂಡ ಅವಶೇಷವೆ ಇವತ್ತಿಗೂ ನಾವು ನಡೆಸುತ್ತಿರುವ ಪ್ರದಕ್ಷಿಣೆ ಯಾನಿಕಾನಿಚ ಪಾಪಾನಿ ಅನ್ನುತ್ತ ನಮ್ಮನ್ನು ನಿಂತಲ್ಲೇ ಸುತ್ತಿಸುವ ಅದೇ ಯೂನಿನ್ಯೂಯಕ್ಲಿವಿಟ್ ಕಲ್ಪನೆ.[೪]

ಭಾರತದಲ್ಲಿ ಸಾವಿರಕ್ಕೂ ಮೇಲು ಗುಹಾಂತರ ದೇವಾಲಯಗಳಿವೆ ಎಂದೂ ಇವುಗಳಲ್ಲಿ ಮುಕ್ಕಾಲುಪಾಲು ಬೌದ್ಧ ಗುಹಾಂತರಗಳೆಂದೂ ವಿದ್ವಾಂಸರು ಗುರುತು ಮಾಡಿದ್ದಾರೆ. ಮಗಧ (ಬಿಹಾರ), ವೈಶಾಲಿ (ಉತ್ತರ ಪ್ರದೇಶ), ಕಾಶ್ಮೀರ, ಗುಜರಾತ, ಮಹಾರಾಷ್ಟ್ರ, ಆಂಧ್ರಗಳು ಈ ಗುಹೆಗಳನ್ನು ಹಂಚಿಕೊಳ್ಳುತ್ತವೆ. ಇವುಗಳಲ್ಲಿ ಸುಮಾರು ನಲವತ್ತು ಕೇಂದ್ರಗಳನ್ನು ಇಂದಿಗೂ ಬೌದ್ಧ ಯಾತ್ರಾರ್ಥಿಗಳಿಗೆ ಗಮನಾರ್ಹ ಕೇಂದ್ರಗಳೆಂದು ಪರಿಗಣಿಸಲಾಗಿದೆ. ಇಂತಹುಗಳಲ್ಲಿ ಹನ್ನೆರಡು ಕ್ಷೇತ್ರಗಳು ಮಹಾರಾಷ್ಟ್ರದಲ್ಲಿ ಪಶ್ಚಿಮ ಕರಾವಳಿಗೆ ಸೇರಿದಂತೆ ಇವೆ. ಆದುದರಿಂದ

---

೩. ಪ್ರೊ ಸಾ.ಕೃ. ರಾಮಚಂದ್ರರಾವ್, ಭಾರತದ ದೇವಾಲಯಗಳ ನೆಲೆ ಹಿನ್ನೆಲೆ, ಪುಟ–೨೪,೨೫

೪. ನಾಗರಾಜ ವಸ್ತಾರೆ, ಗುಡಿಯನೋಡಿರಣ್ಣ, ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ, ೨೮.೦೨.೨೦೧೦

ಇಂದಿನ ಮಹಾರಾಷ್ಟ್ರ. ಆದರೆ ಹಿಂದಿನ ಹತ್ತನೆಯ ಶತಮಾನದವರೆಗೂ ಕದಂಬ, ಚಾಲುಕ್ಯ ಮತ್ತು ರಾಷ್ಟ್ರಕೂಟರ ಆಡಳಿತಕ್ಕೆ ಸೇರಿದ್ದ ಭಾಗಗಳಲ್ಲಿಯೇ ಬಹುಶಃ ಈ ಬೌದ್ಧ ಕ್ಷೇತ್ರಗಳು ಜೀವಂತವಾಗಿದ್ದವೆಂಬುದಕ್ಕೆ ಇತಿಹಾಸ ಸಮ್ಮತಿ ದೊರಕುತ್ತದೆ.

ಈ ಬೌದ್ಧ ಗುಹೆಗಳಲ್ಲಿ ಅತ್ಯಂತ ಪ್ರಸಿದ್ಧವಾದ ಎಲ್ಲೋರ, ಅಜಂತಗಳಲ್ಲಿರುವಂತಹವು. ಚೀನಾ ದೇಶದ ಬೌದ್ಧ ಯಾತ್ರಿಕರನ್ನು ಆಕರ್ಷಿಸಿದುದಲ್ಲದೆ ಅವುಗಳ ಅನುಕರಣೆಯೂ ಚೀನಾ, ಜಪಾನ್ ದೇಶಗಳಿಗೆ ಸಾಗಿತೆಂಬುದನ್ನು ಮರೆಯುವಂತಿಲ್ಲ. ಬೌದ್ಧ ಗ್ರಂಥಗಳ ಜೊತೆಯಲ್ಲಿಯೇ ಬೌದ್ಧ ಕಲೆಗಳು ಹೊರದೇಶಗಳಿಗೆ ಪ್ರಯಾಣ ಮಾಡಿರುವುದು ಸಾಮಾನ್ಯವಾದ ವಿಷಯವೇನಲ್ಲ. ಆದುದರಿಂದಲೆ ಇಂದಿಗೂ ಭಾಜ ಕಾರ್ಲ ಕೊಂಡಾನೆ, ಪಿತಲಖೋರ, ಅಜಂತ, ಬೇಡಸ, ನಾಸಿಕ್, ಜನ್ನರ್, ಕನ್ಹೇರಿ, ಎಲ್ಲೋರ, ಗೋವ ಇತ್ಯಾದಿಗಳು ಮುಖ್ಯ ಬೌದ್ಧಕೇಂದ್ರಗಳಾಗಿ ಪರಿಣಮಿಸಲು ಐತಿಹಾಸಿಕ ಗುರುತುಗಳಾಗಿವೆ. ಕರ್ನಾಟಕದಲ್ಲಿಯೂ ಕೆಲವು ಬೌದ್ಧ ಕೇಂದ್ರಗಳಾದ ಇಸಿಲಾ, ಬ್ರಹ್ಮಗಿರಿ, ಸಿದ್ಧಾಪುರ, ಜಟ್ಟಿಂಗರಾಮೇಶ್ವರ, ಡಂಬಳ (ಗದಗ ಜಿಲ್ಲೆ), ಕದ್ರಿ, ಬನವಾಸಿ, ಸನ್ನತಿ.[೫]

ಮೌರ್ಯರ ಕಾಲದ ಕಟ್ಟಡಗಳಲ್ಲಿ ಮರದ ಕೆಲಸವೇ ಪ್ರಧಾನವಾಗಿತ್ತು ಎನ್ನಬಹುದು. ಆ ಕಾಲದ ಕೋಟೆ ಕೊತ್ತಲಗಳು ಮಾತ್ರವಲ್ಲದೆ ಕಟ್ಟಡದ ಸ್ವರೂಪವನ್ನು ಸೂಚಿಸುವ ಅರಮನೆಯ ಅವಶೇಷಗಳೂ ಉಳಿದು ಬಂದಿವೆ. ಮರದ ಕಟ್ಟಡ ಮತ್ತು ಕೆತ್ತನೆಯ ಕೆಲಸದ ಕುಶಲತೆಗೆ ಅವು ಸಾಕ್ಷಿಯಾಗಿವೆ. ಸಾಮಾನ್ಯವಾಗಿ ಆ ಕಟ್ಟಡಗಳಿಗೆ ಉಪಯೋಗಿಸುತ್ತಿದ್ದುದು ತೇಗದ ಮರ. ಅದನ್ನು ಬೇಕಾದ ಆಕಾರಕ್ಕೆ ಕತ್ತರಿಸಿ ಉಜ್ಜಿ ಹೊಳಪನ್ನು ಕೊಟ್ಟು ಕೆತ್ತನೆ ಕೆಲಸ ಮಾಡುತ್ತಿದ್ದುದರಲ್ಲಿ ನಿಪುಣರಾಗಿದ್ದರು. ಭಾಜಾ ಮತ್ತು ಕಾರ್ಲ ಕಲ್ಲಿನ ಗುಹಾಲಯಗಳಲ್ಲೂ ಅಲ್ಲಲ್ಲಿ ಕಟ್ಟಿಗೆಯನ್ನು ಬಳಸಿರುವುದೂ ಕೂಡ ನಾವು ಇಂದಿಗೂ ಕಾಣಬಹುದು.

ಆ ಕಾಲದಲ್ಲಿ ಮರದ ಮೇಲೆ ಮಾಡುತ್ತಿದ್ದ ಕುಶಲ ಕೆಲಸಗಳನ್ನೆಲ್ಲಾ ಮುಂದೆ ಬೌದ್ಧಯುಗದಲ್ಲಿ ಕಲ್ಲಿನ ಮೇಲೆ ಮೂಡಿಸುವ ಸಾಹಸ ನಡೆಯಿತೆಂದು ಹೇಳಬಹುದು. ಅಲ್ಲಿಯವರೆಗೆ ಅಂದರೆ ಕ್ರಿ.ಪೂ. ೩ನೇ ಶತಮಾನದವರೆಗೆ ಭರತಖಂಡದ ವಾಸ್ತುಶಿಲ್ಪದ ಚರಿತ್ರೆ ಅಸ್ಪಷ್ಟವೆಂದೇ ಹೇಳಬೇಕು. ಅಶೋಕನ ಕಾಲದಲ್ಲಿ ಬೌದ್ಧಧರ್ಮ, ರಾಜನಧರ್ಮವಾದುದಲ್ಲದೆ ರಾಜ್ಯಧರ್ಮವೂ ಆಯಿತು. ರಾಜಕೀಯ ಮತ್ತು ಧಾರ್ಮಿಕ ರಂಗದಲ್ಲಿ ಆದ ಈ ಬದಲಾವಣೆಯ ಪ್ರಭಾವ ಜನಜೀವನದ ಮೇಲೂ ಕಲೆಗಳ ಮೇಲೂ ಆಗದೇ ಹೋಗಲಿಲ್ಲ. ವಾಸ್ತುಶಿಲ್ಪದ ಮೇಲೆ ಬೌದ್ಧಧರ್ಮ ಬೀರಿದ ಪ್ರಭಾವವನ್ನು ಮುಖ್ಯವಾಗಿ ಹೀಗೆ ಹೇಳಬಹುದು.

---

೫. ಕ.ವೆಂ. ರಾಜಗೋಪಾಲ (ಲೇ), ಬೌದ್ಧ ಮತದಲ್ಲಿ ಯಕ್ಷಕಲೆ, ಪುಟ–೭

೧. ಕಲ್ಲುಗಳ ಮೇಲೆ ಕೊರೆಯಿಸಿದ ಶಾಸನಗಳು

೨. ಅನೇಕ ಸ್ತೂಪಗಳ ನಿರ್ಮಾಣ

೩. ಶಿಲಾಸ್ತಂಭಗಳು

೪. ಕಲ್ಲನ್ನು ಕೊರೆದು ಮಾಡಿದ ಗುಹೆಗಳು

ಇವು ವಾಸ್ತುಶಿಲ್ಪದ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದವು. ಅದರಲ್ಲಿಯೂ ಮುಖ್ಯವಾಗಿ ರಚನೆಯ ಮಹತ್ವದಿಂದ ಸ್ತೂಪಗಳು ಕಲ್ಲನ್ನು ಕೊರೆಯುವ ಹೊಸ ತಂತ್ರದ ದೃಷ್ಟಿಯಿಂದ ಗುಹೆಗಳು ಆ ಕಾಲದ ಕಟ್ಟಡ ನಿರ್ಮಾಣದ ಮೇಲೆ ಕ್ರಾಂತಿಕಾರಕ ಬದಲಾವಣೆಯನ್ನು ಉಂಟುಮಾಡಿದವು.

ಚೈತ್ಯಗಳು ಮತ್ತು ಸ್ತೂಪಗಳು ಬೆಳೆದುಬಂದ ಬಗೆಯನ್ನು ಸ್ಥೂಲವಾಗಿ ಕಂಡುಕೊಳ್ಳಬಹುದಾಗಿದೆ. ಬೌದ್ಧ ಸಂಘಗಳು ಹೆಚ್ಚಿದ ಹಾಗೆಲ್ಲ ಸಂಘಾರಾಮಗಳು ಉಂಟಾದವು. ಸಂಘಾರಾಮಗಳೆಂದರೆ ಸಂಘದವರು (ಬೌದ್ಧರು) ಉದ್ಯಾನಗಳಲ್ಲಿ ಇರುವುದು ಎಂದರ್ಥ. ಬೌದ್ಧ ಸನ್ಯಾಸಿಗಳ ವಾಸಕ್ಕಾಗಿ ಮೊದಮೊದಲು ಚಿಕ್ಕ ಗುಹೆಗಳನ್ನು ಕೊರೆಯುವ ಕ್ರಮ ಪ್ರಾರಂಭವಾಯಿತು. ಅನಂತರ ಸನ್ಯಾಸಿಗಳು ಹೆಚ್ಚಾದಂತೆ ಇತರ ಅಂಗಗಳೂ ಸೇರಿಸಲ್ಪಟ್ಟವು. ಮತ್ತು ಗುಹೆಗಳಲ್ಲಿಯೂ ಬದಲಾವಣೆಗಳು ತಲೆದೂರಿದವು. ಅತ್ಯಂತ ಪ್ರಾಚೀನ ಗುಹೆ, ಒಬ್ಬ ಸನ್ಯಾಸಿ ಮಾತ್ರ ಇರುವುದಕ್ಕೆ ಅನುಕೂಲವಾದ ರೀತಿಯಲ್ಲಿ ಕೊರೆದು ಮಾಡಿದುದಾಗಿದ್ದು, ಒಂದು ಕಲ್ಲು ಮಂಚವನ್ನು ಮಾತ್ರ ಒಳಗಡೆ ಪಡೆದಿರುತ್ತಿತ್ತು. ಬಿಹಾರದ ಬರಾಬರ ಗುಹಾ ಸಮೂಹಗಳಲ್ಲಿಯೂ ಇಂತಹ ಚಿಕ್ಕ ಗುಹೆಗಳನ್ನು ರಚಿಸಲಾಗಿದೆ.

ಅನಂತರ ಗುಹೆಗಳಲ್ಲಿ ಬುದ್ಧನ ವಿಗ್ರಹವನ್ನಿಡುವ ಧಾತುಗರ್ಭ ಸೇರಿತು. ಮತ್ತು ಎರಡು ಪಕ್ಕಗಳಲ್ಲಿಯೂ ಪ್ರವೇಶದ್ವಾರದಂತೆ ಕಂಬಗಳನ್ನು ಬಿಟ್ಟು ಕೊರೆಯುವ ಕ್ರಮ ರೂಢಿಗೆ ಬಂದಿತು. ಇದರ ಮುಂದಿನ ಬೆಳವಣಿಗೆಯೆಂದರೆ ಕಂಬಗಳನ್ನು ಸೇರಿದಂತೆ ಕಮಾನುಗಳನ್ನು ಕೆತ್ತಿ ಮೇಲ್ಛಾವಣಿಯನ್ನು ನಿರ್ಮಿಸುವ ಕ್ರಮ. ಇದು ಪ್ರಾಚೀನ ಬೌದ್ಧ ಗುಹೆಗಳ ಬೆಳವಣಿಗೆಯಲ್ಲಿ ಕಂಡುಬರುವ ಸ್ಥೂಲ ಚಿತ್ರ.

ಸನ್ಯಾಸಿಗಳ ಸಂಖ್ಯೆ ಹೆಚ್ಚುತ್ತಾ ಹೋದಂತೆ ಅವರ ವಾಸಕ್ಕಾಗಿ ಇಟ್ಟಿಗೆಗಳಿಂದ ಕಟ್ಟಡಗಳನ್ನು ಕಟ್ಟತೊಡಗಿದರು. ಇವುಗಳನ್ನೇ ಚೈತ್ಯಾಲಗಳೆಂದು ಕರೆಯಬಹುದು. ಚೈತ್ಯಾಲಯಗಳು ಸ್ತೂಪಗಳನ್ನು ಒಳಗೊಂಡಿರುವವು. ಸೂಪ್ತಗಳೆಂದರೆ ಬುದ್ಧನ ಪವಿತ್ರ ಅವಶೇಷಗಳನ್ನಿಟ್ಟು ಅವುಗಳ ರಕ್ಷಣೆಗಾಗಿ ಕಟ್ಟಿದ ಕಟ್ಟಡಗಳು, ಚೈತ್ಯಗಳೆಂದರೆ ಬೌದ್ಧ ದೇವಾಲಯಗಳು. ಇವು ವಾತಾವರಣಕ್ಕೆ ಸಿಕ್ಕು

ಹಾಳಾಗದಂತೆ ಬಹಳ ಕಾಲ ಉಳಿಯಬೇಕಾದುದರಿಂದ ಇಟ್ಟಿಗೆಗಳಿಗಿಂತ ಹೆಚ್ಚುಕಾಲ ನಿಲ್ಲಬಲ್ಲ ಹೊಸ ಮಾಧ್ಯಮವನ್ನು ಹುಡುಕತೊಡಗಿದರು. ಅದರ ಫಲವಾಗಿ ಕಲ್ಲು ಕಟ್ಟಡಗಳನ್ನು ಕಟ್ಟುವ ಸಾಧನವಾಗಿ ಪರಿಣಮಿಸಿತು.[೬]

ಸ್ಥೂಪಗಳ ಬಗೆ (ವರ್ಗೀಕರಣ) :

೧. ಶಾರೀರಿಕ ಸ್ತೂಪ

೨. ಪಾರಿಭೋಗಿಕ ಸ್ತೂಪ

೩. ಉದ್ದೇಶಿಕಾ ಸ್ತೂಪ

೪. ಓಟಿ ಸ್ತೂಪ (ಹರಕೆ ಸ್ತೂಪ)

೫. ಮಾದರಿ ಸ್ತೂಪ

ಶಾರೀರಿಕ ಸ್ತೂಪ : ಶಾರೀರಿಕ ಅಸ್ತಿ (ಚಿತಾಭಸ್ಮ) ಅಥವಾ ಶರೀರದ ಒಂದು ಅಂಗ, ಕೂದಲು, ಉಗುರು ಹೀಗೆ ಶರೀರಕ್ಕೆ ಸಂಬಂಧಪಟ್ಟ ಯಾವುದೆ ವಸ್ತುವನ್ನು ಅದು ಬುದ್ಧನದಾಗಿರಬಹುದು ಅಥವಾ ಅವನ ನಂತರದ ಉಪಾಧ್ಯಾಯ, ಭಿಕ್ಷು ಶಿಷ್ಯರದಾಗಿರಬಹುದು, ಇಂಥಹ ಶಾರೀರಿಕ ಅಂಶಗಳನ್ನೊಳಗೊಂಡಂಥ ವಸ್ತುಗಳನ್ನು ಲೋಹ ಇಲ್ಲವೆ ಕಲ್ಲಿನ ಪೆಟ್ಟಿಗೆ (ಕರಂಡ)ಯಲ್ಲಿ ಭದ್ರವಾಗಿಸಿ ಅದರ ಸುತ್ತಲೂ ನಿರ್ಮಿಸುವುದೇ ಶಾರೀರಿಕ ಸ್ತೂಪವೆನಿಸಿಕೊಳ್ಳುತ್ತದೆ.

ಪಾರಿಭೋಗಿಕ ಸ್ತೂಪ : ಬುದ್ಧ ಅಥವಾ ಅವನ ಶಿಷ್ಯರು, ಉಪಾಧ್ಯಾಯರು ಉಪಯೋಗಿಸುವಂತಹ, ಅವರ ಸ್ವಂತ ವಸ್ತುಗಳನ್ನು ಇರಿಸಿ ರಚಿಸಿರುವ ಸ್ತೂಪಗಳನ್ನು ಪಾರಿಭೋಗಿಕ ಸ್ತೂಪಗಳೆನ್ನುತ್ತಾರೆ. ಇಂಥಹ ವಸ್ತುಗಳನ್ನು ಕಲ್ಲಿನ ಪೆಟ್ಟಿಗೆ ಅಥವಾ ಚಿನ್ನ, ತಾಮ್ರ ಹೀಗೆ ಬೇರೆ ಬೇರೆ ಲೋಹದಲ್ಲಿ ಮಾಡಿದಂತಹ ಪೆಟ್ಟಿಗೆಯಲ್ಲಿ ಭದ್ರವಾಗಿರಿಸಿ ಅದರ ಸುತ್ತಲೂ ಸ್ತೂಪವನ್ನು ನಿರ್ಮಿಸಲಾಗುತ್ತಿತ್ತು. ಕೆಲವೊಂದು ಬಾರಿ ಇವನ್ನು ಒಂದು ಚಿಕ್ಕ ಕೋಣೆಯಲ್ಲಿ ಇರಿಸಿ ಅದರ ಸುತ್ತಲೂ ಸ್ತೂಪವನ್ನು ನಿರ್ಮಿಸಲಾಗುತ್ತಿತ್ತು. ಇದನ್ನೆ ಪಾರಿಭೋಗಿಕ ಸ್ತೂಪಗಳೆಂದು ಕರೆಯುತ್ತಾರೆ.

ಉದ್ದೇಶಿಕಾ ಸ್ತೂಪ : ಬೌದ್ಧರಿಗೆ ಪವಿತ್ರವಾದ ಸ್ಥಳ ಅಥವಾ ಮುಖ್ಯ ಘಟನೆಯ ಸ್ಥಳ, ಬುದ್ಧ ಅಥವಾ ಬೌದ್ಧಧರ್ಮದ ಭಿಕ್ಷುಗಳು ಬಂದುಹೋಗಿರುವ ನೆನಪಿಗಾಗಿ ಇಲ್ಲ ಒಂದು ಬೌದ್ಧ ಸಮೂಹದ ದಾನಿಗಳ ಇಚ್ಛೆಯಂತೆ ಹೀಗೆ ಹಲವು ಉದ್ದೇಶಗಳಿಂದ ಸ್ತೂಪಗಳನ್ನು ನಿರ್ಮಿಸುತ್ತಿದ್ದರು. ಇವನ್ನು ಉದ್ದೇಶಿಕಾ ಸ್ತೂಪಗಳೆಂದು ಕರೆಯುತ್ತಾರೆ.

---

೬. ಡಾ. ಎಚ್. ತಿಪ್ಪೇರುದ್ರಸ್ವಾಮಿ (ಲೇ), ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ–೫೨೮,೫೨೯

ಓಟಿ ಸ್ತೂಪ (ಹರಕೆ ಸ್ತೂಪ) : ಬುದ್ಧನ ಪರಿನಿರ್ವಾಣದ ಸ್ಮಾರಕವಾದ ಸ್ತೂಪದ ನಿರ್ಮಾಣವು ಪುಣ್ಯದ ಕೆಲಸವೆಂದು ಭಾವಿಸಿ ದೊಡ್ಡದೊಡ್ಡ ಸ್ತೂಪಗಳ ಸುತ್ತಲೂ ಸಣ್ಣ ಸ್ತೂಪಗಳು ನಿರ್ಮಾಣಗೊಂಡವು. ಸಂಘ ಪರಿವಾರದವರ ಅಸ್ತಿಗಳನ್ನು ಇರಿಸಿ ನಿರ್ಮಿಸುವ ಇಂಥವುಗಳನ್ನು ಓಟಿ ಸ್ತೂಪಗಳೆನ್ನುತ್ತಾರೆ. ಪ್ರಸ್ತುತ ಅಧ್ಯಯನದ ಭಾಗವಾಗಿರುವ ಕನಗನಹಳ್ಳಿಯ ಮಹಾಸ್ತೂಪದ ಸುತ್ತಲೂ ಈ ತರಹದ ಓಟಿ ಸ್ತೂಪಗಳ ಹಲವಾರು ಅವಶೇಷಗಳು ಕಂಡುಬರುತ್ತವೆ. ಇವು ಬರೀ ಇಟ್ಟಿಗೆಯಿಂದ ನಿರ್ಮಿಸಿದವುಗಳಂತೆ ಕಂಡುಬರುತ್ತವೆ.

ಮಾದರಿ ಸ್ತೂಪ : ಬಯಲುಗಳಲ್ಲಿ ಕಟ್ಟಿರುವ ಸ್ತೂಪಗಳಲ್ಲಿ ಬೌದ್ಧ ಭಿಕ್ಷುಗಳು ಧ್ಯಾನಾದಿಗಳನ್ನು ಮಾಡಬೇಕಾದರೆ ಬಿಸಿಲು, ಮಳೆ, ಗಾಳಿ ಇವುಗಳಿಂದ ಅವರು ಹೆಚ್ಚು ಸಮಯವನ್ನು ಅಲ್ಲಿ ಧ್ಯಾನಿಸಲು ಆಗುತ್ತಿರಲಿಲ್ಲ. ಹಾಗೂ ಜನಸಾಮಾನ್ಯರೂ ಕೂಡ ಅಲ್ಲಿಗೆ ಗೌರವಸಲ್ಲಿಸಲು ಬರುತ್ತಿರುವುದರಿಂದ ಧ್ಯಾನಕ್ಕೆ ಸೂಕ್ತ ವಾತಾವರಣ ದೊರಕುತ್ತಿರಲಿಲ್ಲ. ಹೀಗಾಗಿ ಚೈತ್ಯಗೃಹ ಅಥವಾ ಚೈತ್ಯಾಲಯಗಳ ಸಭಾಮಂಟಪಗಳಲ್ಲಿ ಸ್ತೂಪದ ಚಿಕ್ಕ ಮಾದರಿಯನ್ನಿಟ್ಟು ಧ್ಯಾನಿಸತೊಡಗಿದರು. ಚೈತ್ಯಗೃಹಗಳನ್ನು ಕಲ್ಲು-ಗುಡ್ಡ ಕೊರೆದು ಅದರಲ್ಲಿಯೆ ನಡುವಿನಲ್ಲಿ ಅಂದರೆ ಸಭಾಮಂಟಪದಲ್ಲಿ ಸ್ತೂಪವನ್ನು ರೂಪಿಸಲಾಗುತ್ತಿತ್ತು. ಹೀಗೆ ಕೊರೆದಿರುವ ಚೈತ್ಯಗೃಹಗಳು ಬರಾಬರ್, ನಾಗಾರ್ಜುನಿ ಬೆಟ್ಟ, ರಾಜಗಿರ್, ಬಾಜಾ ಕಾರ್ಲೆ ಮುಂತಾದ ಗುಹಾಲಯಗಳಲ್ಲಿ ಕಾಣಬಹುದು. ಇವುಗಳಲ್ಲಿ ಗೋಡೆಗೆ ಅಂಟಿಕೊಂಡಿರುವ (ನಿರಂಧರ) ಮಾದರಿ ಸ್ತೂಪ ಹಾಗೂ ಸುತ್ತಲೂ ಪ್ರದಕ್ಷಿಣೆ ಬರುವ (ಸಾಂಧರ) ರೀತಿಯ ಮಾದರಿ ಸ್ತೂಪಗಳು ಕಂಡುಬರುತ್ತವೆ.

ಸ್ತೂಪದ ಸುತ್ತಲೂ ನಿರ್ಮಿಸಿರುವ ಕಟಾಂಜನ (ಕಟಕಟೆ) "ಗುಸಿ" ತಂತ್ರಗಾರಿಕೆಯಲ್ಲಿ ನಿರ್ಮಿಸಲಾಗಿದೆ. ಈ ಗುಸಿ ತಂತ್ರಗಾರಿಕೆಯು ಕಟ್ಟಿಗೆಯ ಕೆಲಸದಲ್ಲಿ ಹೆಚ್ಚಾಗಿ ಬಳಸಬಹುದಾಗಿದ್ದರೂ ಕನಗನಹಳ್ಳಿ ಸ್ತೂಪ ಸಮುಚ್ಚಯದಲ್ಲಿ ಕಲ್ಲಿನಲ್ಲಿ ಬಳಸಿದ್ದಾರೆ. ಗುಸಿ ತಂತ್ರಗಾರಿಕೆ ಎಂದರೆ ಎರಡು ಕಲ್ಲುಗಳನ್ನು ಜೋಡಿಸುವಾಗ ಒಂದು ಕಲ್ಲಿಗೆ ಜೊಡಣೆಯಾಗುವ ಪಾರ್ಶ್ವದಲ್ಲಿ ಗುಳಿಯನ್ನು ತೆಗೆದು (ತಗ್ಗು ಹಾಕುವುದು) ಜೊಡಣೆಯಾಗುವ ಇನ್ನೊಂದು ಕಲ್ಲಿಗೆ ಆ ತಗ್ಗಿನ ಭಾಗದೊಳಗೆ ಸೇರುವಷ್ಟು ಉಬ್ಬು ರಚಿಸುವುದು ಈ ರೀತಿ ಕೆತ್ತನೆಯು ಬಾರಹುತ್ ಸ್ತೂಪದಲ್ಲಿಯೂ ಕಂಡುಬರುತ್ತದೆ.

ಈ ಕಾಲದ ಬೌದ್ಧ ಲೇಖಕ ಕಲಾವಿದರು ಕೊಟ್ಟ ಅಪರೂಪದ ಕಾಣಿಕೆ ಎಂದರೆ ವಾಸ್ತುಶಿಲ್ಪದ ಪ್ರಥಮ ಪದಕೋಶ. ಇದನ್ನು ಅವರು ಸ್ವತಃ ಸೃಷ್ಟಿಸಿದರೋ ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿಕೊಟ್ಟರೋ ಎಂಬುದು ಮುಖ್ಯವಲ್ಲ. ಸಾರ್ವಜನಿಕರಿಗೆ ಅವನ್ನು ತಲುಪಿಸಿದ್ದು ಮುಖ್ಯ.

ವಾಸ್ತು ಮತ್ತು ಶಿಲ್ಪ ಗ್ರಂಥಗಳು ರಚನೆಯಾಗುವುದಕ್ಕಿಂತ ಮುಂಚೆ ಬಳಕೆಗೆ ಬಂದ ಈ ಪದಕೋಶವು ಅನಂತರದ ಕಾಲದಲ್ಲಿ ರಚನೆಗೊಂಡ ವಾಸ್ತು ಗ್ರಂಥಗಳನ್ನು ಪ್ರಭಾವಿಸಿತೆನ್ನಬಹುದು. ಕ್ರಿಸ್ತಶಕದ ಹೊರಳಿನಲ್ಲಿ ಅಥವಾ ಆರಂಭದ ಒಂದೆರಡು ಶತಮಾನಗಳಲ್ಲಿ ಸನ್ನತಿ ಸಂಕೀರ್ಣವನ್ನು ಮೊದಲ್ಗೊಂಡು ಕೆಳದಖ್ಖಣದ ಶಾಸನಗಳಲ್ಲಿ ಬಳಕೆಯಾಗಿರುವ ಪದಗಳೆಂದರೆ ಚೇತೀಯ (ಚೈತ್ಯ), ಮಸೆತಿ (ಮಹಾಚೇತಿ>ಮಾಹಾಚೈತ್ಯ), ತೂಪ (ಸ್ತೂಪ), ವಿಹಾರ, ಕುಟಿ, ಮಟಪ (ಮಡವೆ>ಮಂಟಪ), ಚಾತುಸಲ (ಚತುಃಶಾಲೆ), ವೇತಿಕ (ವೇದಿ), ಖಬೋ ಅಥವಾ ಕಮ್ಮಃ (ಕುಂಭ), ಛ್ಛಟ (ಛತ್ರ), ಪುಪ್ಪಗಹನಿಕಾ, ಆಯ (ಆರ್ಯ), ಪಟ, ಪಾಟ, ಆಲಂಬನಮ್, ಉಷ್ಣೀಷ, ಪಾಯಕ, ಮೇಧಿ, ಪತಿಮಾ, ಪತಿಮಾಪತಿಕಾ ಅಥವಾ ಪತಿಮಾಪಟ (ಚಿತ್ರಪಟ್ಟಿಕಾ), ದಾಯಕಮ್ಮ (ಶಿಲ್ಪಪಲಕ), ಛಾಯಾತಬೋ (ಛಾಯಾಸ್ತಂಭ) ಮುಂತಾದವು.[೭]

ಧಾತುಪಾತ್ರೆ (ಕರಂಡ) : ಒಂದು ಸ್ತೂಪ ನಿರ್ಮಾಣ ಮಾಡಬೇಕಾದರೆ ಪ್ರಪ್ರಥಮವಾಗಿ ಧಾತುಪಾತ್ರೆ ನಿರ್ಮಿಸಬೇಕಾದುದು ಮುಖ್ಯವೆನಿಸುತ್ತದೆ. ಪವಿತ್ರ ವಸ್ತುಗಳಿಗೆ ಮೀಸಲಾದ ಈ ಧಾತುಪಾತ್ರೆಯಲ್ಲಿ ಶಾರೀರಿಕ ಅಥವಾ ಪಾರಿಭೋಗಿಕ ವಸ್ತುಗಳನ್ನಿಟ್ಟು ಅದರ ಸುತ್ತಲೂ ಸ್ತೂಪ ನಿರ್ಮಿಸಲು ಪ್ರಾರಂಭಿಸುತ್ತಿದ್ದರು. ಧಾತುಪಾತ್ರೆಯಲ್ಲಿ ಬುದ್ಧನ ಶಾರೀರಿಕ (ಚಿತಾಭಸ್ಮ) ಮತ್ತು ಪಾರಿಭೋಗಿಕ ಎಂದರೆ ಅಮೂಲ್ಯ ವಸ್ತುಗಳು ಇವು ಬುದ್ಧನದಾಗಿರಬಹುದು. ಅಥವಾ ಆತನ ನಂತರದ ಶಿಷ್ಯರ ಅಥವಾ ಪ್ರಬಲ ಅನುಯಾಯಿಗಳದ್ದಾಗಿರಬಹುದು. ಇಂಥಹ ವಸ್ತುಗಳನ್ನು ಇರಿಸಲು ಕಲ್ಲಿನಿಂದ ಇಲ್ಲವೆ ಯಾವುದೇ ಲೋಹದಿಂದ ನಿರ್ಮಿಸಿದ ಪಾತ್ರೆಯಲ್ಲಿ ಮುಚ್ಚಿಟ್ಟು ಈ ಪಾತ್ರೆಯ ಸುತ್ತಲೂ ಸ್ತೂಪವನ್ನು ನಿರ್ಮಿಸಲಾಗುತ್ತಿತ್ತು. ಇಂತಹ ಪಾತ್ರೆಯನ್ನೆ ಧಾತುಪಾತ್ರೆ ಅಥವಾ "ಕರಂಡ" ಎಂದು ಕರೆಯಲಾಗುತ್ತದೆ. ಕನಗನಹಳ್ಳಿಯ ಮಾಹಸ್ತೂಪಾವಶೇಷಗಳಲ್ಲಿ ಉತ್ಖನನಕಾರರಿಗೆ ದೊರೆತಿರುವ ಧಾತುಪಾತ್ರೆಯು ಭಾರತದ ಇತಿಹಾಸದಲ್ಲಿ ಒಂದು ಸಂಚಲನವನ್ನೆ ಮೂಡಿಸಿದೆ ಎಂದು ಹೇಳಬಹುದು. 'ಕಲ್ಲಿನ ದೊಡ್ಡದಾದ ಕರಂಡ ಮತ್ತು ಅದಕ್ಕೆ ಹೊಂದಿಕೊಳ್ಳುವ ಮುಚ್ಚಳ (ದೊರೆತಿಲ್ಲ) ಕರಂಡ ವೃತ್ತಾಕಾರವಾಗಿದ್ದು ೩೬ ಸೆಂ.ಮೀ. ಎತ್ತರ ಮತ್ತು ೬೬ ಸೆಂ.ಮೀ. ವ್ಯಾಸವನ್ನು ಹೊಂದಿದೆ'[೮] ಈ ಧಾತುಪಾತ್ರೆಯ ಹೊರಮೈಯಲ್ಲಿ ನಿಂತಿರುವ ಭಂಗಿಯ ಪುರುಷರ ನಾಲ್ಕು ಶಿಲ್ಪಗಳನ್ನು ಕೆತ್ತಲಾಗಿದ್ದು ಈಗ ಮೂರು ಮಾತ್ರ ಉಳಿದಿವೆ. ನಾಲ್ಕನೆಯದು ಕಾಣೆಯಾಗಿದೆ. ಈ ನಾಲ್ಕು ಶಿಲ್ಪಗಳಲ್ಲಿ ಎರಡು ಶಿಲ್ಪಗಳು ಅಂಜಲಿ ಮುದ್ರೆಯಲ್ಲಿದ್ದು ಮೂರನೆಯದು ಪುಷ್ಪಗುಚ್ಚವನ್ನು ಕೈಯಲ್ಲಿ ಹಿಡಿದಿರುವಂತೆ ಇನ್ನೊಂದರ ಕೆಳಭಾಗ ಮಾತ್ರ ಉಳಿದಿದೆ. ಆಕರ್ಷಕವಾದ ರುಮಾಲು, ಕರ್ಣಕುಂಡಲಗಳು, ಬಳೆಗಳು ಈ ನಾಲ್ಕು ಶಿಲ್ಪಗಳ ಆಭೂಷಣಗಳಾಗಿವೆ. ಕರಂಡದ ಒಳಭಾಗವನ್ನು

೭. ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ, ಷ. ಶೆಟ್ಟರ್-ಪುಟ-೧೦,೧೧)

೮. ಡಾ. ಆರ್. ಗೋಪಾಲ್ (ಸಂ), ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಡಾ. ಎಂ. ಎಸ್. ಕೃಷ್ಣಮೂರ್ತಿ (ಲೇ), ಸನ್ನತಿ ಬೌದ್ಧಧರ್ಮ ಒಂದು ವಿವೇಚನೆ, ಪುಟ-೧೪೭

೨೫ ಸೆಂ.ಮೀ.ನ ಆಳದದವರೆಗೆ ಕೊರೆಯಲಾಗಿದ್ದು, ಧಾತುವನ್ನಿಡಲು ಸಾಕಾಗುವಷ್ಟು ಮಾತ್ರ ಕೊರೆಯಲಾಗಿದೆ. ಧಾತುಪಾತ್ರೆಯ ಮುಚ್ಚಳ ಈಗ ಕಾಣೆಯಾಗಿದೆ.[೧೦] ಸ್ತೂಪದ ಅವಶೇಷಗಳ ಇನ್ನೂ ಮುಂದಿನ ಉತ್ಖನನದಲ್ಲಿ ಈ ಧಾತುಪಾತ್ರೆಯ ಮುಚ್ಚಳ ದೊರೆಯಬಹುದು.

ಇಂಥಹ ಆಕರ್ಷಕವಾದ ಧಾತುಪಾತ್ರೆಯು ಭಾರತದ ಇನ್ನಾವುದೇ ಸ್ತೂಪದಲ್ಲಿ ಕಂಡುಬಂದಿಲ್ಲ. ಬೇರೆ ಬೇರೆ ಕಡೆಗಳಲ್ಲಿ ಕಂಡುಬರುವ ಧಾತುಪಾತ್ರೆಗಳು ಒರಟಾದ ಕಲ್ಲಿನಿಂದ ಅಥವಾ ಮಣ್ಣಿನ ಲೋಹದ ಪಾತ್ರೆಯಾಗಿವೆ. ಅಮರಾವತಿ ಹಾಗೂ ನಾಗಾರ್ಜುನಕೊಂಡ ಸ್ತೂಪಗಳಲ್ಲಿಯೂ ಧಾತುಪಾತ್ರೆಗಳು ದೊರಕಿದ್ದು ಇವುಗಳನ್ನು ಹೋಲಿಸಿ ನೋಡಿದಾಗ ಕನಗನಹಳ್ಳಿಯ ಮಹಾಸ್ತೂಪದ ಧಾತುಪಾತ್ರೆ ಇವೆಲ್ಲಕ್ಕಿಂತಲೂ ವಿಶೇಷ ಮತ್ತು ವಿಶಿಷ್ಟ ಕಲಾತ್ಮಕತೆಯಿಂದ ಕೂಡಿದ ಪಾತ್ರೆಯಾಗಿದೆ. ಅಶೋಕ ಚಕ್ರವರ್ತಿಯು ಈ ಸನ್ನತಿ ಪ್ರದೇಶಕ್ಕೆ ಬಂದು ಕೆಲವು ದಿನ ಇಲ್ಲಿ ತಂಗಿದ್ದಾನೆಂದು ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಚಕ್ರವರ್ತಿಯ ಘನತೆ, ಗೌರವಗಳಿಗೆ ಅನುಗುಣವಾಗಿ ಒಪ್ಪುವಂತೆ ಬುದ್ಧನ ಪವಿತ್ರ ಶಾರೀರಿಕ ಧಾತುವೊಂದು ಬಂದಿರುವ ಸಾಧ್ಯತೆಯೇ ಹೆಚ್ಚು ಎಂದು ತಜ್ಞರ ಅಭಿಪ್ರಾಯವಾಗಿದೆ.

ಕರಂಡದ ಮೇಲಿನ ಶಿಲ್ಪಗಳ ಸೂಕ್ಷ್ಮ ಅಧ್ಯಯನ ಮಾಡಿದರೆ ಅವುಗಳ ಶಿಲ್ಪ ಲಕ್ಷಣಗಳು ಅತಿ ಪ್ರಾಚೀನ ಅಂದರೆ ಮೌರ್ಯರ ಕಾಲಕ್ಕೆ ಸೇರುವಂತಹದ್ದಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಶಿಲ್ಪದ ಲಕ್ಷಣಗಳು ದಖನಿನಲ್ಲಿ ಕ್ರಿ.ಶ. ೧ ಮತ್ತು ೨ನೇ ಶತಮಾನಗಳಲ್ಲಿ ಪಶ್ಚಿಮ ಘಟ್ಟಗಳ ಅಥವಾ ಅಮರಾವತಿ ಶಿಲ್ಪಗಳ ಶೈಲಿಗೆ ಸರಿಸಮವಾಗಬಲ್ಲದೆನಿಸುತ್ತದೆ. ಹೀಗಾಗಿ ಕರಂಡದ ಮೇಲಿನ ಶಿಲ್ಪಗಳ ಲಕ್ಷಣಗಳಿಂದಾಗಿ ಸ್ತೂಪ ನಿರ್ಮಾಣ ಕಾಲವನ್ನು ಕ್ರಿ.ಶ. ೧ ಅಥವಾ ೨ನೇ ಶತಮಾನಗಳಿಗೆ ನಿಗದಿಪಡಿಸಬಹುದು. ಮಹಾಸ್ತೂಪದ ಮೇಧಿಯ ಹಲಗೆಗಳ ಮೇಲಿನ ಶಾಸನ ಲಿಪಿ ಲಕ್ಷಣ ಹಾಗೂ ಅಲ್ಲಿಯ ಶಿಲ್ಪ ಲಕ್ಷಣಗಳೂ ಸಹ ಈ ಕಾಲಕ್ಕೆ ಸರಿಹೊಂದುತ್ತವೆ.[೧೧]

ಒಮ್ಮೆ ಕರಂಡವನ್ನು ರಚಿಸಿ ಸ್ತೂಪದ ಮಧ್ಯದಲ್ಲಿಟ್ಟು ಸ್ತೂಪ ರಚನೆಯಾದ ಮೇಲೆ ಅದು ಯಾರಿಗೂ ಕಾಣುವುದಿಲ್ಲ. ಸ್ತೂಪದ ಹೊರಭಾಗದಲ್ಲಿ ಬೇಕಾದಷ್ಟು ಶಿಲ್ಪಗಳನ್ನು ರಚಿಸಿ ಅಲಂಕರಿಸಿದರೆ ಸಾಕಷ್ಟು ಜನರು ಎಷ್ಟೋ ಶತಮಾನಗಳವರೆಗೆ ನೋಡಿ ಆನಂದಿಸಬಹುದು, ಪ್ರಶಂಸಿಸಬಹುದು, ಹೆಮ್ಮೆ ಪಡಬಹುದು. ರಚನೆ ಮಾಡಿಸಿದವರೊಡಗೂಡಿ ರಚನೆ ಮಾಡಿದವರೂ ಹೆಮ್ಮೆಪಟ್ಟುಕೊಳ್ಳಬಹುದು. ಆದರೂ ಕರಂಡವನ್ನು ಅಷ್ಟೊಂದು ಕಲಾತ್ಮಕವಾಗಿ ರಚಿಸುವ ಉದ್ದೇಶ

೯. ಡಾ. ಆರ್. ಗೋಪಾಲ್ (ಸಂ), ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಡಾ. ಎಂ. ಎಸ್. ಕೃಷ್ಣಮೂರ್ತಿ (ಲೇ), ಸನ್ನತಿ ಬೌದ್ಧಧರ್ಮ ಒಂದು ವಿವೇಚನೆ, ಪುಟ-೧೪೭

೧೦. ಅದೇ ಪುಸ್ತಕ ಪುಟ-೧೪೭

೧೧. ಅದೇ ಪುಸ್ತಕ ಪುಟ-೧೪೭

ಆ ಕಾಲದ ಪ್ರಸ್ತುತ ಧರ್ಮದ ಮೇಲಿನ ಆತ್ಮಾಭಿಮಾನದ ಆತ್ಮೋನ್ನತಿ ಹಾಗೂ ಪವಿತ್ರತೆಯ ಅಮೂಲ್ಯ ಶ್ರದ್ಧೆಯು ಪ್ರದರ್ಶಿಸುತ್ತದೆ. ಶಿಲ್ಪಿಯಾದವನೂ ಕೂಡ ಮಣ್ಣಿನಲ್ಲಿ ಯಾರಿಗೂ ಕಾಣಿಸದಂತೆ ಇಡುವ ಈ ಕರಂಡ ಶಿಲ್ಪವನ್ನು ರಚಿಸುವಲ್ಲಿ ಅಸಡ್ಡೆ ತೋರಬಹುದಾಗಿತ್ತು. ಆದರೂ ಕರಂಡದ ಶಿಲ್ಪ ವೈವಿಧ್ಯತೆಯು ನೋಡಿದರೆ ಡಾ. ಎಂ.ಎಸ್. ಕೃಷ್ಣಮೂರ್ತಿಯವರು ತಿಳಿಸುವಂತೆ ಇದರ ನಿರ್ಮಾಣ ನಿರೂಪಣೆಯಲ್ಲಿ ಕಲಾವಂತಿಕೆ ಇದೆ. ಕಲಾಕೌಶಲ್ಯವಿದೆ. ಇದರ ಮೇಲಿನ ಶಿಲ್ಪಗಳು ಕೇವಲ ಅವುಗಳ ಭಂಗಿ ಅಲಂಕರಣೆಗಳಿಗಷ್ಟೆ ಆಕರ್ಷಕವಾಗಿಲ್ಲ. ಇವುಗಳ ಪರಿಮಾಣ, ಅಂಗಸೌಷ್ಠವ, ಮಾರ್ದವತೆ, ನಿರೂಪಣೆ, ಭಾವ, ಭಂಗಿ ಇವೆಲ್ಲವೂ ಮನಸ್ಸನ್ನು ಸೆರೆಹಿಡಿಯುವಂತಹವು[೧೨] ಎಂದು ವಿವರಿಸುತ್ತಾರೆ.

ಮೇಲೆ ಹೇಳಿದಂತಹ ಲಕ್ಷಣಗಳನ್ನು ಹೊಂದಿದ ಕರಂಡ ಶಿಲ್ಪವು ರಚಿಸಿದ ಶಿಲ್ಪಿಯ ಆಂತರ್ಯದಲ್ಲಿ ಮೂಡಿರುವಂತಹ ಭಕ್ತಿಯ ಪರಾಕಾಷ್ಟೆಯನ್ನು ತೋರಿಸುವಂತಿದೆ.

ರಚಿಸುವ ಶಿಲ್ಪ ಶಿಲ್ಪಿಯೊಳಗೆ ಆಹ್ವಾನಗೊಂಡಾಗ ಮಾತ್ರ ಅದೊಂದು ಸಂಪೂರ್ಣ ಶಿಲ್ಪವಾಗಬಲ್ಲದು. ಏಕೆಂದರೆ ಶಿಲ್ಪಗಾರಿಕೆ ಎನ್ನುವುದು ಕೇವಲ ಕಸುಬಲ್ಲ ಅದೊಂದು ತಪಸ್ಸು. ಅರಿವು, ಜ್ಞಾನ ಹಾಗೂ ಕೌಶಲದ ಪರಿಪೂರ್ಣತ್ವ ಮಾತ್ರ ಮನಸೆಳೆಯುವ ಕಲೆಯ ಬಲೆಯನ್ನು ಹೆಣೆಯಬಲ್ಲವು. ಶಿಲ್ಪಗಾರಿಕೆ ಎಂಬುದು ಕಸುಬು ಅಥವಾ ಕೆಲಸವಾದಾಗ ಅದೊಂದು ಕಲ್ಲಿನ ಪ್ರತಿಮೆ ನಿರ್ಮಾಣ ಮಾತ್ರ ಆಗುತ್ತದೆ. ವಿನಾಃ ಜೀವಂತ ಶಿಲ್ಪವಾಗಲಾರದು.[೧೩]

ಲಿಪಿ :

ಉಚ್ಚ ವರ್ಗದವರಿಗೆ ಸೀಮಿತವಾಗಿದ್ದ ವಿದ್ಯೆಯನ್ನು ಕೆಳವರ್ಗದ ಹಾಗೂ ಎಲ್ಲಾ ಜನಸಮುದಾಯದವರಿಗೂ ತಲುಪಿಸುವಲ್ಲಿ ಬೌದ್ಧರ ಪಾತ್ರ ಬಹು ಮುಖ್ಯವಾಗಿದೆ. ಬರವಣಿಗೆಯನ್ನು ಮಾಡಿದರೆ ಅನರ್ಹರು ಓದಿ ತಿಳಿದುಕೊಳ್ಳುತ್ತಾರೆಂಬ ಆತಂಕದಲ್ಲಿದ್ದ ಅಂದಿನ ಉಚ್ಚವರ್ಗವು ಅರಿವಿನ ಕೀಲಿಯನ್ನು ಕಂಠ ಸರಳುಗಳ ಹಿಂದೆ ಅಡಗಿಸಿಟ್ಟಿತ್ತು. ಇದನ್ನು ಬಿಡುಗಡೆಮಾಡಿ, ಬರೆಯುತ್ತಾ ಬೆಳೆಯುವ ಮಾರ್ಗವನ್ನು ತಿಳಿಸಿಕೊಟ್ಟವರಲ್ಲಿ ಬೌದ್ಧರು ಮೊದಲಿಗರು.[೧೪] ಮೊದಲ ಪ್ರಶಸ್ತ್ಯ ಅಕ್ಷರಗಳಿಗೆ ಕೊಟ್ಟು ನಂತರ ಸ್ಮಾರಕಗಳಿಗೆ ಪ್ರಾಶಸ್ತ್ಯ ಕೊಟ್ಟ ಶಿಲ್ಪಿಗಳು ಅಶೋಕನ ನಂತರದ ಕಾಲದಲ್ಲಿ ಸ್ಮಾರಕಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಬರವಣಿಗೆಯನ್ನು ಸ್ವಲ್ಪ ಗೌಣವಾಗಿಸಿ ಶಿಲ್ಪ ನಿರೂಪಣಾ ಕೌಶಲ್ಯವನ್ನು ಅತ್ಯುನ್ನತ ಮಟ್ಟಕ್ಕೆ ತಲುಪಿಸುವಲ್ಲಿ ಯಶಸ್ವಿಯಾದರು.

೧೩. ಬಸವರಾಜ ಕರಿಬಸಪ್ಪನವರ (ಸಂ), ಸೃಜನಶಿಲ್ಪಿ ಷಣ್ಮುಖಪ್ಪ ಯರಕದ, ಡಾ. ವೀರೇಶ ಬಡಿಗೇರ (ಲೇ), ಕಲ್ಲಿನ ಎದೆಯೊಳಗೆ ಜೀವಜಲ ಚಿಮ್ಮಿಸುವ ಕಲೆಗಾರ, ಪುಟ-೫೩

೧೪. ಷ. ಶೆಟ್ಟರ್, ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ, ಪುಟ-೧,೧೧,೧೨

ಉಬ್ಬು ಶಿಲ್ಪಗಳ ಸಂವೇದನೆಗಳು ನೋಡುಗನು ತನ್ನಿಂತಾನೆ ಅರ್ಥಮಾಡಿಕೊಳ್ಳುವ ಶಕ್ತಿಯನ್ನು ಪಡೆದುಕೊಂಡಿರುವುದರಿಂದ ಕೂಡಲೆ ಜನಪ್ರಿಯವಾದವು. ಬಾರಾಹತ್, ಸಾಂಚೀ, ಅಮರಾವತಿ, ನಾಗಾರ್ಜುನಕೊಂಡ ಮುಂತಾದೆಡೆ ಇದನ್ನು ವ್ಯಾಪಕವಾಗಿ ಬಳಸಿದ್ದನ್ನು ಅಲ್ಲಿನ ಸ್ಮಾರಕಗಳು ಪ್ರದರ್ಶಿಸಿ ವಿಶ್ವವನ್ನೇ ಬೆರಗುಗೊಳಿಸಿವೆ. ಕರ್ನಾಟಕದ ಸನ್ನತಿ ಕನಗನಹಳ್ಳಿ ಸಂಕೀರ್ಣವು ಅಂತಹ ಒಂದು ಕೇಂದ್ರ.[೧೫]

ಕ್ರಿ.ಪೂ. ಮೂರನೇ ಶತಮಾನದಲ್ಲಿ ಪೂರ್ವ ಭಾರತದ ಪಾಟಲೀಪುತ್ರದಿಂದ ಆಳುತ್ತಿದ್ದ ಮೌರ್ಯ ಚಕ್ರವರ್ತಿ ಅಶೋಕನು ಲಿಪಿಕಾರನೊಬ್ಬನನ್ನು ರಾಜ್ಯದ ದಕ್ಷಿಣ ಗಡಿಗೆ ಕಳುಹಿಸಿ, ತನ್ನ ಸಾಮಾಜಿಕ ಸಂದೇಶವನ್ನು ಬಂಡೆಗಲ್ಲುಗಳ ಮೇಲೆ ಕೊರೆಸಿದನು. ಬ್ರಾಹ್ಮೀಲಿಪಿ, ಪ್ರಾಕೃತಭಾಷೆ ಮತ್ತು ಕಂಡರಣೆಯ ಕಲೆ ಒಗ್ಗೂಡಿಸಿಕೊಂಡು ಇಂದಿನ ಕರ್ನಾಟಕವನ್ನು ಪ್ರವೇಶಿಸಿದ್ದು. ಹೀಗೆ ನಾಡಿನ ಕಲಾ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ತೆರೆಯಲು ಲಿಪಿಕಾರರ ಬಗ್ಗೆ ಬರೆಯಲು ಇದು ಕಾರಣವಾಯಿತು.[೧೬]

ಅಶೋಕನು ಕಳಿಸಿದ ಲಿಪಿಕಾರನ ಹೆಸರು "ಚಪಡ" ಅವನು ಹುಟ್ಟಿ ಬೆಳೆದದ್ದು ಗಾಂಧಾರ (ಇಂದಿನ ಅಫಘಾನಿಸ್ತಾನ) ನಾಡಿನಲ್ಲಿ. ಖರೋಷ್ಠೀ ಅಕ್ಷರ ಸಂಸ್ಕೃತಿಗೆ ಸೇರಿದ ಆತನು ಇತ್ತೀಚೆಗಷ್ಟೆ ಬ್ರಾಹ್ಮೀಲಿಪಿಯನ್ನು, ಪ್ರಾಕೃತಭಾಷೆಯನ್ನು ರೂಢಿಸಿಕೊಂಡಿದ್ದನು. ಇಂದಿನ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟ್ಟಿಂಗರಾಮೇಶ್ವರದವರೆಗೂ ಹೆಜ್ಜೆ ಹಾಕುತ್ತಾ ಬಂದು, ಮೂರು ಬಂಡೆಗಳನ್ನು ಆಯ್ಕೆಮಾಡಿಕೊಂಡು ಅವುಗಳ ಮೇಲೆ ಅಶೋಕನ ಕಿರು ಸಂದೇಶವನ್ನು ಬ್ರಾಹ್ಮೀಲಿಪಿ, ಪ್ರಾಕೃತಭಾಷೆಯಲ್ಲಿ (ಎಡದಿಂದ ಬಲಕ್ಕೆ) ಕಂಡರಿಸಿ ಕೊನೆಯಲ್ಲಿ "ಲಿಪಿಕರೇಣ" ಎಂದು ಖರೋಷ್ಠೀ ಲಿಪಿಯಲ್ಲಿ (ಬಲದಿಂದ ಎಡಕ್ಕೆ) ಬರೆದನು.[೧೭]

ಒಂದು ಕಾಲದ ಸೃಜನಶೀಲ ಚಟುವಟಿಕೆ ಸಮಕಾಲೀನ ಹಾಗೂ ಮುಂದಿನ ಪೀಳಿಗೆಗೆ ಜ್ಞಾನ, ಅರಿವು, ತಿಳುವಳಿಕೆ, ಮಾಹಿತಿ ಮತ್ತು ಆ ಸಂದರ್ಭದ ಚಿತ್ರಣವನ್ನು ಕಟ್ಟಿಕೊಡಲು ಅಕ್ಷರ ಸಂಸ್ಕೃತಿಯು ಬಹುಮುಖ್ಯ ಪಾತ್ರವಹಿಸುತ್ತದೆ. ಇಂಥಹ ಅಕ್ಷರ ಸಂಸ್ಕೃತಿಯ ಮುನ್ನುಡಿಗೆ ಅಡಿಪಾಯವನ್ನು ಹಾಕಿದಂತಹ ಅಕ್ಷರ ಹಾಗೂ ಲಿಪಿಗಳ ಪಿತಾಮಹನೆನಿಸಿಕೊಂಡಿರುವ ಅಶೋಕನ ಅಕ್ಷರ ದೇಣಿಗೆ ಅನನ್ಯವಾದುದು. ಲಿಪಿಯ ಬಗ್ಗೆ ಲಿಪಿಕಾರರ ಬಗ್ಗೆ ಲಿಪಿ ಪ್ರಸಾರದ ವೈಜ್ಞಾನಿಕ ವಿಧಾನದ ಬಗ್ಗೆ ಇಷ್ಟೊಂದು ಆಳವಾಗಿ ತೊಡಗಿಸಿಕೊಂಡ ಮತ್ತೊಬ್ಬ ಅರಸ ಈ

೧೫. ಷ. ಶೆಟ್ಟರ್, ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ, ಪುಟ-೧,೧೧,೧೨

೧೬. ಅದೇ ಪುಸ್ತಕ ಪುಟ-೧,೧೧,೧೨

೧೭. ಅದೇ ಪುಸ್ತಕ ಪುಟ-೧,೧೧,೧೨

ದೇಶದ ಮುಂದಿನ ಇತಿಹಾಸದಲ್ಲಿ ಬರಲಿಲ್ಲ. ಅಂದರೆ ಬ್ರಾಹ್ಮೀಲಿಪಿಯನ್ನು ಜಾರಿಗೆ ತಂದು ಅದನ್ನು ದೇಶಾದ್ಯಂತ ಪರಿಚಯಿಸಿದ ಅಶೋಕನು ಭಾರತೀಯ ಲಿಪಿಯ ಪಿತನೆಂದಂತಾಯಿತು. ಇದಾದ ಆರೇಳು ಶತಕಗಳ ನಂತರ ಬ್ರಾಹ್ಮೀಯ ಹೊಕ್ಕಳ ಬಳ್ಳಿಯಿಂದ ಕಳಚಿಕೊಂಡು ಸ್ವತಂತ್ರ ರೂಪಡೆದು ಬೆಳೆಯತೊಡಗಿದ ಕನ್ನಡ ಲಿಪಿಯ ಪಿತಾಮಹನೂ ಈತನಲ್ಲದೆ ಮತ್ಯಾರಾಗಲು ಸಾಧ್ಯ.[೧೮]

ಶಿಲಾ ಶಾಸನಗಳು

ಕನಗನಹಳ್ಳಿಯ ಸ್ತೂಪವು ಬಹುಶಃ ಅಶೋಕನ ಕಾಲದಲ್ಲಿಯೇ ನಿರ್ಮಿಸಿ ಅಶೋಕನ ನಂತರದ ಶಾತವಾಹನರ ಕಾಲದಲ್ಲಿ ಅಭಿವೃದ್ಧಿ ಹೊಂದಿರಬಹುದೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಸನ್ನತಿ ಕನಗನಹಳ್ಳಿ ಪರಿಸರವು ಕ್ರಿ.ಪೂ. ಕಾಲದಲ್ಲಿ ಹೆಚ್ಚು ಜನರು ವಾಸಿಸುವ ಜನನಿಬಿಡ ಸ್ಥಳವಾದ್ದರಿಂದಲೇ ಅಶೋಕನು ಇಲ್ಲಿ ಧರ್ಮಶಾಸನಗಳನ್ನು ಹಾಕಿಸಲು ಆಯ್ದುಕೊಂಡ ಸ್ಥಳವಾಗಿರಬಹುದು. ಕರ್ನಾಟಕದಲ್ಲಿ ದೊರೆತಿರುವ ಎಲ್ಲಾ ಶಾಸನಗಳು ಬಂಡೆಗಲ್ಲು ಶಾಸನಗಳಾಗಿವೆ. ಆದರೆ ಸನ್ನತಿಯ ಶಾಸನ ಶಿಲಾಫಲಕದ ಎರಡೂ ಪಾರ್ಶ್ವಗಳಲ್ಲಿ ಬರವಣಿಗೆ ಹೊಂದಿದ ಏಕೈಕ ಶಾಸನವಾಗಿದೆ. ಕರ್ನಾಟಕದಲ್ಲಿ ದೊರೆತಿರುವ ಶಾಸನಗಳ ಹೆಚ್ಚಿನ ಸಂಖ್ಯೆಯನ್ನು ಗಮನಿಸಿದರೆ ಅಶೋಕನು ಕರ್ನಾಟಕದಲ್ಲಿ ಬೌದ್ಧಧರ್ಮ ಪ್ರಚಾರಕ್ಕೆ ಹೆಚ್ಚಿನ ಒಲವನ್ನು ತೋರಿದ್ದನೆಂದು ತಿಳಿದುಬರುತ್ತದೆ. ಕರ್ನಾಟಕದಲ್ಲಿ ದೊರೆತಿರುವಷ್ಟು ಸಂಖ್ಯೆಯ ಅಶೋಕನ ಶಾಸನಗಳು ಭಾರತದ ಬೇರೆ ಯಾವ ರಾಜ್ಯದಲ್ಲೂ ದೊರೆತಿಲ್ಲ.

ಸನ್ನತಿಯ ಶಾಸನ ಒಂದು ಬೃಹದಾಕಾರದ ಕಲ್ಲು ಚಪ್ಪಡಿಯ ಇಕ್ಕೆಲಗಳಲ್ಲಿ ಬರೆದಿರುವಂತಹ ಶಾಸನ. ಎರಡೂ ಕಡೆ ಬರವಣಿಗೆ ಇದೆ ಎಂದ ಮೇಲೆ ಇದು ಒಂದು ದೊಡ್ಡ ಸ್ಮಾರಕ ಫಲಕವಾಗಿ ನಿಲ್ಲಿಸಿದಂತಹ ಚಪ್ಪಡಿ. ಇದು ಕಂದು ಬಣ್ಣದ ಮರಳು ಮಿಶ್ರಿತ ಶಿಲೆಯಾಗಿದೆ. ಇದರ ಕೆಳಭಾಗದಲ್ಲಿ ಸ್ವಲ್ಪ ಎತ್ತರದವರೆಗೂ ಬರವಣಿಗೆ ಮಾಡಿಲ್ಲ ಇದರಿಂದ ತಿಳಿದುಬರುವುದೇನೆಂದರೆ ಇದನ್ನು ನೆಲದಲ್ಲಿ ಕಂಬದ ರೀತಿಯಲ್ಲಿ ಜನಿಬಿಡ ಪ್ರದೇಶವಾದ ಊರಿನ ಮಧ್ಯದಲ್ಲಿ ಇದನ್ನು ನೆಡಲಾಗಿತ್ತೆಂದು ಹೇಳಬಹುದು. ಈ ರೀತಿಯ ದೊಡ್ಡ ಅಳತೆಯ ಮತ್ತು ಎರಡೂ ಪಾರ್ಶ್ವಗಳಲ್ಲಿ ಬರೆದಿರುವ ಶಾಸನ ಭಾರತದ ಬೇರೆ ಯಾವುದೇ ಭಾಗದಲ್ಲಿ ಕಂಡುಬರುವುದಿಲ್ಲ.

ಭಾರತದಲ್ಲಿ ಅಶೋಕನಿಗಿಂತ ಹಿಂದೆ ಲಿಪಿಯ ಬಳಕೆ ಇತ್ತೇ ಇಲ್ಲವೆ ಎಂಬುದು ಚರ್ಚಾಸ್ಪದ ವಿಷಯವಾದರೂ, ಅಶೋಕನ ಕಾಲದಲ್ಲಿ ಬಳಕೆಯಿತ್ತೆಂಬ ಬಗ್ಗೆ ಯಾವುದೇ ಚರ್ಚೆಯಿಲ್ಲ.

---

೧೮. ಷ. ಶೆಟ್ಟರ್, ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ, ಪುಟ–೧,೧೧,೧೨

ಅಶೋಕನಿಗಿಂತ ಹಿಂದಿನ ಮತ್ತು ಇವನ ಕಾಲದ ಬ್ರಾಹ್ಮಿ ಶಾಸನಗಳನ್ನು ಎಡದಿಂದ ಬಲಕ್ಕೆ ಬರೆಯಲಾಗಿದೆ.

ಅಶೋಕನು ತಾನು ಪಟ್ಟಕ್ಕೆ ಬಂದ ಕೂಡಲೇ ಶಿಲಾ ಲೇಖನಗಳನ್ನು ಬರೆಸಲಿಲ್ಲ. ಅದನ್ನು ತನ್ನ ಶಾಸನಗಳಲ್ಲಿಯೇ ಹೇಳಿಕೊಂಡಿದ್ದಾನೆ. ಕಳಿಂಗದ ಮೇಲೆ ಯುದ್ಧಮಾಡಿ ತನಗೆ ಗೆಲುವಾದ ಮೇಲೆ ಆ ಗೆಲುವಿಗಾಗಿ ತಾನು ಮಾಡಿದ ಕೊಲೆ, ಯುದ್ಧಾನಂತರ ಕಳಿಂಗದ ಜನರ ನರಳಾಟ ಇದರ ಪರಿಣಾಮವಾಗಿ ಜೀವನದಲ್ಲಿ ಜಿಗುಪ್ಸೆ ಹೊಂದಿದ. ಮುಂದೆ ಆತನು ಅಹಿಂಸಾವಾದಿಯಾಗಲು ಬೌದ್ಧಧರ್ಮಕ್ಕೆ ಸೇರಿ ಆ ತತ್ವಗಳನ್ನು ಆಚರಿಸತೊಡಗಿದಾಗ ಅವನಿಗೆ ಬೌದ್ಧಧರ್ಮದ ತತ್ವಗಳನ್ನು ತನ್ನ ಆಳ್ವಿಕೆಯ ಪ್ರದೇಶದಲ್ಲೆಲ್ಲಾ ಹಾಕಿಸಬೇಕೆಂಬ ಮನಸ್ಸಾಗಿ ಶಾಸನಗಳನ್ನು ಬರೆಸಿದ. ಈ ಶಾಸನಗಳನ್ನು ಕೆತ್ತಲು ಆತ ತನ್ನ ದೇಶದಾದ್ಯಂತ ಧರ್ಮ ಮಹಾಮಾತ್ಸರ ಹಾಗೂ ಲಿಪಿಕಾರರ ನೆರವು ಪಡೆದ.

ಅಶೋಕನು ತಾನು ಅನುಸರಿಸುವ ಧರ್ಮದ ತತ್ವಗಳನ್ನು ಎಲ್ಲರೂ ತಿಳಿಯಬೇಕು ಹಾಗೂ ಪಾಲಿಸಬೇಕೆಂಬ ಆಕಾಂಕ್ಷೆಯಿಂದ ತನ್ನ ರಾಜ್ಯದಲ್ಲೆಲ್ಲಾ ಆಯಾ ಪ್ರಾಂತ್ಯಗಳಲ್ಲಿ ಬಳಕೆಯಲ್ಲಿದ್ದ ಲಿಪಿಗಳಲ್ಲಿ ಹಾಗೂ ಭಾಷೆಗಳಲ್ಲಿ ಹಾಕಿಸುತ್ತಾನೆ. ವಾಯವ್ಯ ಭಾರತ ಮತ್ತು ಕಾಂಧಹಾರಗಳಲ್ಲಿ ಖರೋಷ್ಠಿ, ಆರಾಮಿಯಾ, ಗ್ರೀಸ್ ಲಿಪಿಗಳನ್ನು ಉಳಿದ ಭಾರತದಲ್ಲಿ ಬ್ರಾಹ್ಮಿ ಲಿಪಿಯನ್ನು ಬಳಸಿದ್ದಾನೆ. ಖರೋಷ್ಠಿ ಮತ್ತು ಬ್ರಾಹ್ಮಿ ಲಿಪಿಗಳ ಶಾಸನಗಳಲ್ಲಿ ಪ್ರಾಕೃತ ಭಾಷೆಯನ್ನು ಉಳಿದವುಗಳಲ್ಲಿ ಆಯಾ ಭಾಷೆಯನ್ನೇ ಬಳಸಿದ್ದಾನೆ.[೧೯]

ಅಶೋಕನ ಶಾಸನಗಳನ್ನು ಗವಿಶಾಸನ, ಪ್ರತ್ಯೇಕ ಶಿಲಾಶಾಸನ, ಲಘು ಶಿಲಾಶಾಸನ, ಕಲ್ಲಿನ ಪಿಂಡಕಗಳ ಮೇಲಿನ ಶಾಸನ, ಸ್ತಂಭ ಶಾಸನ, ಲಘುಸ್ತಂಭ ಶಾಸನ ಎಂದು ಏಳು ವಿಭಾಗಗಳಾಗಿ ವಿಂಗಡಿಸುತ್ತಾರೆ. ಏಕಕಾಲಕ್ಕೆ ಅಶೋಕನು ಭಾರತದಲ್ಲಿ ಬರವಣಿಗೆಯನ್ನು ಸಾರ್ವತ್ರಿಕ ಉದ್ದೇಶಕ್ಕೆ ಗಟ್ಟಿಯಾದ ವಸ್ತುಗಳ ಮೇಲೆ ಬರೆಸಿದ ಮೊದಲಿಗ.[೨೦]

ಅಶೋಕನ ನಂತರದ ಬೇರೆ ಭೇರೆ ಧರ್ಮದ ರಾಜರುಗಳು ಶಿಲಾಶಾಸನಗಳನ್ನು ಅನೇಕ ರೀತಿಯಲ್ಲಿ ಮಾರ್ಪಾಡುಗಳನ್ನು ಮಾಡಿ ಬಳಸಿರುವುದು ನಮಗೆ ಕಂಡುಬರುತ್ತದೆ. ಕರ್ನಾಟಕದಲ್ಲಿ ಶಾತವಾಹನರ ಕಾಲದ ಸುಮಾರು ೧೦೫ ಶಾಸನಗಳು ಲಭ್ಯವಾಗಿವೆ.

---

೧೯. ಡಾ. ದೇವರಕೊಂಡಾರೆಡ್ಡಿ, ಲಿಪಿಯ ಹುಟ್ಟು ಮತ್ತು ಬೆಳವಣಿಗೆ, ಪು-೭೬-೭೮

೨೦. ಅದೇ ಪುಸ್ತಕ ಪುಟ-೮೨

ಕಲಬುರಗಿ ಜಿಲ್ಲೆಯಲ್ಲಿ ಒಟ್ಟು ಸುಮಾರು ೩೪೦ ಶಾಸನಗಳು ದೊರೆತಿವೆ. ಇವುಗಳಲ್ಲಿ ದೇವಾಲಯ ಶಾಸನಗಳು ಸುಮಾರು ೨೩೫ ಇದ್ದು, ಮೂರನೇ ಎರಡು ಭಾಗದಷ್ಟು ಶಾಸನಗಳು ದೇವಾಲಯ ಸಂಬಂಧಿ ಶಾಸನಗಳಾಗಿರುವುದು ಕಂಡುಬರುತ್ತದೆ. ದೇವಾಲಯ ನಿರ್ಮಾಣದ ಪ್ರಮುಖ ಪಾತ್ರಧಾರಿಗಳೆಂದರೆ ಶಿಲ್ಪಿಗಳು. ಶಾಸನವೊಂದರಲ್ಲಿ ಕಲ್ಕುಟಿಗ, ಬಡಗಿ, ಕಮ್ಮಾರ, ಅಕ್ಕಸಾಲೆಯರು ಇವರ ಉಲ್ಲೇಖವಿದ್ದರೆ ಇನ್ನೊಂದರಲ್ಲಿ ಬಡಗಿ, ಸಿಪ್ಪಿಗ, ಕಮ್ಮಾರ ಇವರುಗಳ ಉಲ್ಲೇಖವಿದೆ. ಇವು ಶಿಲ್ಪಿಯೊಂದಿಗೆ ವಿವಿಧ ಕುಶಲಕರ್ಮಿಗಳ ಬಗ್ಗೆಯೂ ಹೇಳುತ್ತಿವೆ. ಇಲ್ಲಿನ ಶಾಸನೋಕ್ತ ಶಿಲ್ಪಿಗಳೆಂದರೆ ಮಾಡಿಹಾಳ ಮಲ್ಲೋಜನ ಪುತ್ರ ರೂವಾರಿಜನ ಮಿತ್ರ ರಾಮೋಜ ಚಿನ್ನಾಣೆ, ಮಲ್ಲೋಜ, ಕಲುಬರಿಗೆಯ ಮಾಗುಡಿಯ ಮಲ್ಲೋಜನ ಪುತ್ರ ದೇವರ್ಸರು, ಸೇನಭೋಗ ನಾಗಿಯರು, ಕಾಳಗಿಯ ಶಾಸನದ ಮಲ್ಲೋಜ, ಹರಸೂರಿನ ಭೋಗೇಶ್ವರ ದೇವಾಲಯವನ್ನು ನಿರ್ಮಿಸಿದ ಗಂಗೋಜ, ಕಲ್ಕುಟಿಗ ಚೌಡೋಜ, ನಾಗೊಜ, ಬಮ್ಮೋಜ, ಕೊಪ್ಪದ ವಲ್ಲೋಜ, ವರೋಜ ರಾಮೋಜ, ಕಾಳೊಜ, ಕೆಂಬಾವಿಯ ಮೂಡನಣವೊಲದ ಅಜಮೋಜ ಮತ್ತು ಕಾಳೊಜ, ಕಾಸಿಗ ದುಗ್ಗೋಜಿನ ಮಗ ವೋಜ, ಹಳವಿಗ ಚಿಕ್ಕೋಜ ಹೀಗೆ ಮುಂತಾದವರನ್ನು ಹೇಳಬಹುದು.[೨೧]

ಬುದ್ಧನ ದುಂಡು ಶಿಲ್ಪಗಳು :

ಶಿಲ್ಪ ಎಂಬ ಪದವನ್ನು ಹಲವು ಬಗೆಯ ಕಸುಬುಗಾರಿಕೆಗಳಿಗೆ, ವಿದ್ಯೆಗಳಿಗೆ ಬಳಸುತ್ತ ಬಂದಿದ್ದಾರೆ. ಇಲ್ಲಿ ನಾವು ಅದನ್ನು ಒಂದು ನಿರ್ದಿಷ್ಟ ಅರ್ಥದಲ್ಲಿಯೇ ಬಳಸಬೇಕಾಗಿದೆ. ಯಾವುದೇ ಒಂದು ವಾಸ್ತವಿಕ ಇಲ್ಲವೆ ಕಾಲ್ಪನಿಕ ಆಕೃತಿಯನ್ನು ಒಂದು ಮಾಧ್ಯಮದ ಮೂಲಕ ರೂಪಿಸುವ ಕಲೆಗೆ ಶಿಲ್ಪ ಎಂಬ ಶಬ್ದವನ್ನು ಬಳಸಬಹುದು. ಈ ದೃಷ್ಟಿಯಿಂದ ಮೂರ್ತಿಶಿಲ್ಪ ಎಂಬ ಮಾತು ಅದೇ ಅರ್ಥವನ್ನು ಕೊಡುತ್ತದಾದರೂ, ಮೂರ್ತಿ ಎಂಬ ಪದವನ್ನು ನಾವು ದೇವತಾ ವಿಗ್ರಹಗಳಿಗೆ ಪರ್ಯಾಯವಾಗಿ ಬಳಸುತ್ತೇವೆ. ಆದರೆ ಶಿಲ್ಪ ದೇವತೆಗಳ ವಿಗ್ರಹವನ್ನು ರೂಪಿಸುವ ಒಂದು ಕಲೆಯೇ ಆಗಬೇಕಿಲ್ಲ ಅಥವಾ ಅದು ಪ್ರತಿಮೆ (ಪ್ರತಿರೂಪ) ಎಂಬ ಅರ್ಥದಲ್ಲಿಯೂ ಇರಬೇಕಾಗಿಲ್ಲ. ಅಸ್ತಿತ್ವದಲ್ಲಿರುವ ಅಥವಾ ಇಲ್ಲದ, ಜೀವಂತ ಇಲ್ಲವೆ ಜಡ ವಸ್ತುಗಳ ಬಾಹ್ಯ ಆಕೃತಿಯನ್ನು ಸೂಚಿಸುವುದು ಅದರ ಒಂದು ರೀತಿ ಆ ಕೆಲಸವನ್ನು ಅದು ಉದ್ದ, ಅಗಲ, ದಪ್ಪಗಳೆಂಬ ಮೂರು ಮಾನಗಳುಳ್ಳ ನಿರ್ಮಾಣದ ಮೂಲಕ ತೋರಿಸಬಲ್ಲದು. ಈ ದೃಷ್ಟಿಯಲ್ಲಿ ಅದು ಚಿತ್ರಕಲೆಗಿಂತಲು ಬೇರೆಯಾದದ್ದು. ಚಿತ್ರಕಲೆಗೆ ಉದ್ದ ಮತ್ತು ಅಗಲಗಳೆಂಬ ಎರಡೇ ಎರಡು ಮಾನಗಳಿದ್ದು, ಅದು ಒಂದೇ ತಳದ ಮೇಲೆ ಆಕೃತಿಯನ್ನು ಬರೆದು ತೋರಿಸುವ ಕಲೆಯಾದರೆ, ಶಿಲ್ಪಕ್ಕೆ 'ದಪ್ಪ' ಎಂಬ ಮೂರನೇ ಒಂದು ಮಾನವೂ ಸೇರುತ್ತದೆ.[೨೨]

---

೨೧. ಡಾ. ಕೂ.ಸ. ಅಪರ್ಣ, ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು-೩೨೨-೩೨೫

೨೨. ಶಿವರಾಮ ಕಾರಂತ ಭಾರತೇಯ ಶಿಲ್ಪ ಪುಟ-೧

ನೈಸರ್ಗಿಕ ಶಿಲೆಯ ಘನ ಆಕೃತಿಗೆ ಆರು ಸಮಪಾತಳಿಗಳ ಒಂದು ಪಾರ್ಶ್ವದಲ್ಲಿ ಕೆತ್ತನೆ ಮಾಡಿದರೂ ಅದನ್ನು ತ್ರಿ ಆಯಾಮದ ಶಿಲ್ಪವೆಂದು ಸೂಚಿಸಬೇಕಾಗುತ್ತದೆ. ಏಕೆಂದರೆ ಶಿಲೆಯ ಒಂದೇ ಭಾಗದಲ್ಲಿ ಅತಿ ಕಡಿಮೆ ಅಥವಾ ಹೆಚ್ಚು ಉಬ್ಬಿರುವ ರೀತಿಯಲ್ಲಿ ಕಲಾವಿದ ಕೆತ್ತನೆ ಮಾಡಿದರೂ ಕೂಡ ಅದರ ಅಳತೆ ನೋಡುವಾಗ ಉದ್ದ, ಅಗಲ ಹಾಗೂ ಕೆತ್ತನೆ ಮಾಡಿದ ಭಾಗದ ಕಲ್ಲು ಎಷ್ಟು ಆಳ ಕೆತ್ತನೆ ಹೊಂದಿದೆ ಎಂದು ಅಳತೆ ಮಾಡಬೇಕಾಗುತ್ತದೆ. ಇದನ್ನೆ ನಾವು ದಪ್ಪ ಎಂದು ಕರೆಯುವ ಮೂರನೇ ಆಯಾಮ. ಹೀಗಾಗಿ ಒಂದು ಶಿಲ್ಪ ದುಂಡುಗೆತ್ತನೆ ಆಗಿರಬಹುದು ಅಥವಾ ಉಬ್ಬುಗೆತ್ತನೆಯಾಗಿರಬಹುದು. ಅದನ್ನು ತ್ರಿ ಆಯಾಮದ ಶಿಲ್ಪವೆಂದು ಕರೆಯಲಾಗುತ್ತದೆ. ಹೀಗೆ ದುಂಡು ಹಾಗೂ ಉಬ್ಬು ಕೆತ್ತನೆ ಮತ್ತು ತೆಳು ಉಬ್ಬು ಕೆತ್ತನೆಯ ಶಿಲ್ಪಗಳ ಮೂರು ಪ್ರಕಾರಗಳು ಕನಗನಹಳ್ಳಿಯ ಸ್ತೂಪದ ಶಿಲ್ಪಗಳಲ್ಲಿ ಕಂಡುಬರುತ್ತವೆ.

ಸ್ತೂಪದ ಒಳ ಆವರಣದಲ್ಲಿ ಅನೇಕ ಬುದ್ಧನ ದುಂಡು ಶಿಲ್ಪಗಳು ಉತ್ಖನನದ ಮುಖಾಂತರ ಹೊರ ತೆಗೆಯಲಾಗಿದೆ. ಬುದ್ಧನ ಆಸೀನ (ಕುಳಿತ) ಮತ್ತು ಸ್ಥಾನಕ (ನಿಂತ) ಎರಡೂ ರೀತಿಯ ಶಿಲ್ಪಗಳು ಕಂಡುಬರುತ್ತವೆ.

ಬುದ್ಧನ (ಆಸೀನ) ಕುಳಿತಿರುವ ಶಿಲ್ಪಗಳು :

ಬುದ್ಧನ ಕುಳಿತಿರುವ ಶಿಲ್ಪಗಳು ಸ್ತೂಪದ ಮೇಧಿಯ ಕೆಳಭಾಗದ ಆವರಣದ ಸುತ್ತಲೂ ನಿರ್ದಿಷ್ಟವಾದ ಸ್ಥಳಗಳಲ್ಲಿ ಸ್ಥಾಪಿತವಾಗಿದ್ದವು ಎಂದು ತಜ್ಞರು ರಚಿಸಿರುವ ಸ್ತೂಪ ಇರಬಹುದಾದ ಮಾದರಿ ನಕ್ಷೆಯ ರೇಖಾಚಿತ್ರದಿಂದ ತಿಳಿದುಬರುತ್ತದೆ. ಈ ಶಿಲ್ಪಗಳು ಸುಮಾರು ಮೂರು ಅಡಿ ಎತ್ತರ, ಎರಡುವರೆ ಅಡಿ ಅಗಲ ಹಾಗೂ ಒಂದುವರೆ ಅಡಿಗಿಂತಲೂ ಹೆಚ್ಚು ದಪ್ಪಗಿರುವ ಕಲ್ಲಿನಲ್ಲಿ ರಚಿತವಾದವುಗಳಾಗಿವೆ. ಒಟ್ಟು ಹತ್ತು ಶಿಲ್ಪಗಳು ಅಲಂಕೃತಗೊಂಡಿರಬಹುದೆಂದು ತಜ್ಞರ ಅಭಿಪ್ರಾಯವಾಗಿದೆ. ಆದರೆ ಉತ್ಖನನದಲ್ಲಿ, ಕುಳಿತಿರುವ ಒಂಬತ್ತು ಶಿಲ್ಪಗಳು ಮಾತ್ರ ದೊರೆತಿವೆ. ಇನ್ನೊಂದು ಪೂರ್ಣ ರೀತಿಯಲ್ಲಿ ಭಗ್ನವಾಗಿರಬಹುದೆಂದು ಅಂದಾಜಿಸಲಾಗಿದೆ. ಸುಮಾರು ಒಂದು ಅಡಿ ಎತ್ತರ ಪೀಠದ ಮೇಲೆ ಕುಳಿತಿರುವ ಮೂರ್ತಿಗಳು ಎಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಭಗ್ನವಾಗಿವೆ. ಈ ಎಲ್ಲಾ ಶಿಲ್ಪಗಳು ಪದ್ಮಾಸನದಲ್ಲಿ ಕುಳಿತವುಗಳಾಗಿ ಪೀಠದಲ್ಲಿ ಆಕರ್ಷಕ ಯಕ್ಷ ನಾಗ, ಸಿಂಹ, ಹೂಬಳ್ಳಿ, ಚಕ್ರ ಹೀಗೆ ನಾನಾ ರೀತಿಯ ಕೆತ್ತನೆಗಳಿಂದ ಕೂಡಿವೆ. ಪೀಠದ ಮುಂದಿನ ಪಾರ್ಶ್ವದಲ್ಲಿ ಮೂರು ಭಾಗಗಳಾಗಿ ವಿಂಗಡಿಸಿ ಎಡ, ಬಲಗಳಲ್ಲಿ ನಿಂತಿರುವ ಯಕ್ಷರ ಕುಬ್ಜ ಆಕೃತಿಗಳು ತಮ್ಮ ಎರಡೂ ಕೈಗಳು ಮೇಲಕ್ಕೆತ್ತಿ ಪೀಠದ ಭಾರವನ್ನು ಹೊತ್ತಿರುವಂತೆ ಕೈಗಳಲ್ಲಿ ಬಳೆ, ಕೊರಳಲ್ಲಿ ಹಾರ, ಕಿವಿಗಳಿಗೆ ಕರ್ಣಕುಂಡಲು, ಕೆಳಉಡುಗೆಯ ಅಕ್ಕಪಕ್ಕಗಳಲ್ಲಿ

ಇಳಿಯಬಿದ್ದಿರುವ ಬಟ್ಟೆಯ ನೆರಿಗೆಯಿಂದ ಅಲಂಕೃತಗೊಂಡಿವೆ. ಭಾರ ಹೊತ್ತಿರುವ ಭಂಗಿಯ ಶಿಲ್ಪಗಳಾದರೂ ಕೂಡ ಮುಖದಲ್ಲಿ ನಗುವಿನ ಭಾವನೆಗಳು ಕಂಡುಬರುತ್ತವೆ. ಮಧ್ಯದ ಭಾಗದಲ್ಲಿ ಕೆತ್ತಿರುವ ನಾಗಶಿಲ್ಪ ಮನುಷ್ಯ ಆಕೃತಿಯ ಮುಖ ಹಾಗೂ ದೇಹವನ್ನು ಹೊಂದಿ ತಲೆಯ ಹಿಂಭಾಗದಲ್ಲಿ ಐದು ಹೆಡೆಯ ಹಾವನ್ನು ಸೊಂಟದಿಂದ ಕೆಳಗೆ "ಹ" ಆಕಾರದಲ್ಲಿ ಹಾವಿನ ಸುರುಳಿಯನ್ನು ಸುತ್ತಿ ಬಾಲ ಮುಂಚಾಚಿದಂತಿದೆ. ತಲೆಗೆ ಪೇಠ, ಕೊರಳಲ್ಲಿ ಹಾರ, ಕರ್ಣಕುಂಡಲ, ಕೈಬಳೆ ಹಾಗೂ ತೋಳಬಂಧಿಗಳಿಂದ ಅಲಂಕೃತಗೊಂಡಿದೆ. ಹ ಆಕಾರದಲ್ಲಿ ಬರುವ ಎರಡೂ ಸುರುಳಿಗಳ ಮೇಲೆ ಕೈಗಳನ್ನು ಇಟ್ಟು ನಗು ಮುಖದಿಂದ ಇರುವಂತೆ ಕೆತ್ತಿದ ಶಿಲ್ಪ ಇದಾಗಿದೆ. ಪೀಠದ ಮೇಲ್ಭಾಗ ಹಾಗೂ ಕೆಳಭಾಗಗಳಲ್ಲಿ ಸಣ್ಣ ಸಣ್ಣ ಸೂಚಿ ಶಾಸನಗಳು ಕೆತ್ತಲಾಗಿದೆ. ಪೀಠವು ಕೆಲವೊಂದು ಶಿಲ್ಪಗಳಿಗೆ ಹೊಂದಿಕೊಂಡಂತೆ ಒಂದೆ ಕಲ್ಲಿನಲ್ಲಿ ಕೆತ್ತಿದರೆ, ಇನ್ನೂ ಕೆಲವು ಬೇರೆ ಕಲ್ಲಿನಿಂದ ಪೀಠ ರಚಿಸಿ ಅದರ ಮೇಲೆ ಕುಳಿತಿರುವ ಬುದ್ಧನ ಶಿಲ್ಪಗಳು ಸ್ಥಾಪಿಸಿದವುಗಳಾಗಿವೆ. ಇಷ್ಟೊಂದು ಅಲಂಕೃತಗೊಂಡಿರುವ ಶಿಲ್ಪಗಳು ಕೆಳಭಾಗದ ಪೀಠದಲ್ಲಿ ಕೆತ್ತಿದ ಉಪಶಿಲ್ಪಗಳಾದರೆ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಬುದ್ಧ ನಿರಾಭರಣ ತ್ಯಾಗ ಮೂರ್ತಿಯಾಗಿ ಭಗ್ನಾವಸ್ಥೆಯಲ್ಲಿ ಕಂಡುಬರುತ್ತಾನೆ. ಒಂಬತ್ತು ಶಿಲ್ಪಗಳ ಪೀಠವು ಒಂದೊಂದು ರೀತಿಯಲ್ಲಿ ರಚಿಸಲಾಗಿದೆ.

ಇನ್ನೊಂದು ಪೀಠದಲ್ಲಿ ವಿಮುಖವಾಗಿ ಕುಳಿತಿರುವ ಸಿಂಹಗಳು ಕೆತ್ತಲಾಗಿ. ಎಡ, ಬಲ, ಪಾರ್ಶ್ವ ಬದಿಗಳಲ್ಲಿ ಕೆತ್ತಲಾದ ಇನ್ನು ಎರಡು ಸಿಂಹಗಳ ಮುಖಗಳು ಮುಂದಿನ ಸಿಂಹಗಳ ಎರಡೂ ಮುಖಗಳಿಗೆ ಹೊಂದಿಕೊಂಡಂತೆ ಕೆತ್ತಲಾಗಿದೆ. ಪಾರ್ಶ್ವ ಬದಿಯಿಂದ ನೋಡಿದರೆ ಎರಡು ದೇಹ ಒಂದೆ ಮುಖ ಹೊಂದಿರುವ ಶಾಂತ ಚಿತ್ತತೆಯಿಂದ ಕುಳಿತಿರುವ ಈ ಸಿಂಹಗಳು ಆ ಶತಮಾನದ ಶಿಲ್ಪಿಯ ಸೃಜನಶೀಲತೆಯು ತೋರಿಸುವಂತಿವೆ. ಇನ್ನೊಂದು ಪೀಠದಲ್ಲಿ ಸಿಂಹಗಳು ಎಲೆಗಳ ಮಧ್ಯದಲ್ಲಿ ವಿಮುಖವಾಗಿ (ಒಂದಕ್ಕೊಂದು ವಿರುದ್ಧ ಮುಖವಾಗಿ) ಕುಳಿತಿರುವಂತೆ ಕೆತ್ತಲಾಗಿದೆ. ಮತ್ತೊಂದು ಪೀಠದ ಮುಂಭಾಗದಲ್ಲಿ ವಿಭಾಗಿಸಲ್ಪಟ್ಟ ಮೂರು ಚೌಕಾಕೃತಿಯ ಸ್ಥಳದಲ್ಲಿ ಚಕ್ರದ ರಚನೆಗಳು ಕೆತ್ತಲಾಗಿದೆ. ಎಡ, ಬಲಗಳಲ್ಲಿರುವ ಚಕ್ರಗಳು ಒಂದೇರೀತಿಯವುಗಳಾಗಿದ್ದು ಮಧ್ಯದಲ್ಲಿರುವ ಚಕ್ರವು ವಿಶೇಷ ರೀತಿಯಿಂದ ಅಲಂಕೃತಗೊಂಡಿದೆ. ಈ ಮೂರು ಚಕ್ರಗಳ ಮಧ್ಯದಲ್ಲಿ ಬರುವ ಸ್ಥಳಾವಕಾಶ ಹಾಗೂ ಮೇಲ್ಭಾಗದಲ್ಲಿ ಅಕ್ಷರಗಳು ಬರೆಯಲಾಗಿದೆ. ಇನ್ನುಳಿದ ಬುದ್ಧನ ಕುಳಿತಿರುವ ಮೂರ್ತಿಯ ಪೀಠಗಳು ಹೂಬಳ್ಳಿಯ ತೋರಣಗಳು ಹಾಗೂ ಲಿಪಿಯ ಬರವಣಿಗೆಯಿಂದ ಅಲಂಕೃತಗೊಂಡಿವೆ. ಈ ಒಂಬತ್ತು ಶಿಲ್ಪಗಳ ಪೀಠಗಳಲ್ಲಿ ಸೂಚಿ ಶಾಸನ ಬರವಣಿಗೆಯು ವಿಶೇಷವಾಗಿ ಕಂಡುಬರುತ್ತವೆ.

ಬುದ್ಧನ ಸ್ಥಾನಕ ಮೂರ್ತಿಗಳು :

ಬುದ್ಧನ ಸ್ಥಾನಕ (ನಿಂತ) ಮೂರ್ತಿಗಳು ಸುಮಾರು ಏಳು ಅಡಿಗಿಂತಲೂ ಎತ್ತರವಿರುವ, ಮೂರು ಅಡಿಗಿಂತಲೂ ಅಗಲವುಳ್ಳ ಹಾಗೂ ಎರಡು ಅಡಿ ದಪ್ಪವುಳ್ಳ ಶಿಲೆಯಲ್ಲಿ ರಚಿತವಾದಂತಹ ತ್ರಿ ಆಯಾಮದ ಶಿಲ್ಪಗಳಿವೆ. ಸಾಮಾನ್ಯವಾಗಿ ಎಲ್ಲಾ ಬುದ್ಧನ ಮೂರ್ತಿಗಳು ಹೆಚ್ಚಾಗಿ ಹಸ್ತ, ಪಾದ, ಮುಖಗಳನ್ನು ಬರಿದಾಗಿಸಿ ದೇಹವನ್ನು ಪಂಚೆ ಮತ್ತು ಉತ್ತರೀಯಗಳಿಂದ ಸಂಪೂರ್ಣ ಹೊದಿಸಿದಂತಹವುಗಳಾಗಿರುತ್ತವೆ. ಕನಗನಹಳ್ಳಿಯ ಸ್ತೂಪದಲ್ಲಿಯೂ ಕೂಡ ಇದೇ ತರಹದ ಬುದ್ಧನ ಮನುಷ್ಯ ದೇಹಾಕೃತಿಯ ಶಿಲ್ಪಗಳು ಕಂಡುಬರುತ್ತವೆ. ಮಾನವಾಕೃತಿಗಿಂತ ದೊಡ್ಡ ಅಳತೆಯ ನಿಂತ ಎರಡು ಶಿಲ್ಪಗಳು ಅಜಾನುಬಾಹು ರೂಪದಲ್ಲಿದ್ದು ದೇಹಕ್ಕೆ ಅಂಟಿಕೊಂಡಂತೆ ಪಂಚೆ ಮತ್ತು ಉತ್ತರೀಯಗಳು ಬುದ್ಧನ ಅಂಗ ಸೌಷ್ಟವದ ಸುಂದರತೆಯನ್ನು ತೋರಿಸುವಂತಿವೆ.

ಬಟ್ಟೆ ದೇಹಕ್ಕೆ ಅಂಟಿಕೊಂಡಂತೆ ಶಿಲ್ಪಿಯು ರಚಿಸಿರುವುದರಿಂದ ದೇಹದ ಉಬ್ಬು-ತಗ್ಗಿನ ಭಾಗಗಳುಪಾರದರ್ಶಕತೆಯ ಕಲ್ಪನೆಯು ಮೂಡುತ್ತದೆ. ಹಸನ್ಮುಖಿಯಾದ ಮುಖಭಾವದಲ್ಲಿ ತಾವರೆಯ ದಳಗಳಂತಹ ಕಣ್ಣು, ಮೂಗು ಹಾಗೂ ತುಟಿಯ ಭಾಗಗಳು ಭಗ್ನಗೊಂಡಿವೆ. ತಲೆಯ ಮೇಲೆ ಸುರುಳಿ ಸುರುಳಿಯಾದ ಗುಂಗುರು ಕೂದಲು, ಮಧ್ಯದಲ್ಲಿ ಜುಟ್ಟು ಜೋಲು, ಕಿವಿಗಳು, ನಯನವಾದ ಕೆನ್ನೆಯ ಭಾಗಗಳು, ಛಿದ್ರಗೊಂಡ ಹಸ್ತ ಬಹುಶಃ ಅಭಯ ಮುದ್ರೆಯಾಗಿರಬಹುದೆಂದು ಅಂದಾಜಿಸಬಹುದು. ಮೂಗು ಮತ್ತು ತುಟಿಗಳು ಭಗ್ನಗೊಂಡರೂ ಚಿಂತನಶೀಲವಾದ ಸಾಂತಮೂರ್ತಿಯ ಮಂದಹಾಸ ಮನಸೆಳೆಯುವಂತಿದೆ. ಯಾವುದೇ ಕುಸುರಿ ಕೆತ್ತನೆಯಿಂದ ತಲೆಯ ಹಿಂದಿನ ಪ್ರಭಾಮಂಡಲ, ದುಂಡನೆಯ ಚಂದ್ರನನ್ನು ಹೋಲುವಂತೆ ಎರಡೂ ಶಿಲ್ಪಗಳಾಗಿದ್ದು ಈಗ ಭಗ್ನಗೊಂಡಿವೆ.

ಸುಣ್ಣ ಶಿಲೆಯ ಬಳಕೆ

ಸ್ಥಳಿಯವಾಗಿ ಈ ಕಲ್ಲು ಹೇರಳವಾಗಿ ದೊರೆಯುವುದರಿಂದ ಅಡುಗೆ ಮನೆಯಲ್ಲಿ ಉಪಯೋಗಿಸುವಂತಹ ಒರಳುಕಲ್ಲು, ರುಬ್ಬುವ ಗುಂಡು, ಜೋಳದ ರೊಟ್ಟಿ ಮಾಡುವ ಕಲ್ಲು, ಕಾಲುದಾರಿ ನಿರ್ಮಾಣಕ್ಕೆ, ನೀರಾವರಿ ಕಾಲುವೆಗಳ ನಿರ್ಮಾಣಕ್ಕೆ, ಎತ್ತುಗಳಿಗೆ ನೀರು ಕುಡಿಯುವುದಕ್ಕಾಗಿ (ಮಂತಣಿ) ಕೆಲವೊಂದು ಹಳೆಯ ಬಾವಿಯ ಬದಿಯಲ್ಲಿ ಇಂದಿಗೂ ಕಂಡುಬರುತ್ತವೆ. ಸಿಮೆಂಟಿನ ಪ್ರಭಾವ ಹೆಚ್ಚಾದಂತೆ ಪ್ರಸ್ತುತ ಇವುಗಳ ಬಳಕೆ ಕಡಿಮೆಯಾಗಿದೆ.

ಕನಗನಹಳ್ಳಿಯ ಸ್ತೂಪ ಶಿಲ್ಪಗಳು

ಚಿತ್ತಾಪುರ ತಾಲೂಕಿನಲ್ಲಿ ಕಂಡುಬರುವ ಪ್ರಾಚೀನ ಕಟ್ಟಡಗಳಿಗೆ ಸಂಪೂರ್ಣ ಇದೇ ಕಲ್ಲನ್ನು ಬಳಸಿದ್ದು ಕಂಡುಬರುತ್ತದೆ. ಹಳೆಯ ಕೋಟೆ ಬುರುಜುಗಳು (ಹುಡೆ), ದೇವಾಲಯಗಳು, ಮನೆಗಳು ಹಾಗೂ ಮನೆಗಳಿಗೆ ವಿಶೇಷ ರೀತಿಯ ಕಲಾತ್ಮಕತೆಯಿಂದ ಕೂಡಿದ ಜಾಲಂಧರಗಳು (ಕಿಟಕಿಗಳು) ಮೇಲ್ಛಾವಣಿಯಿಂದ (ಸೂರಿನಿಂದ) ಮುಂಚಾಚಿದಂತಹ ಗೂಟದ ಕಲ್ಲುಗಳು ವಿಶೇಷ ರೀತಿಯಲ್ಲಿ ಸುಳಿವಿನ ಆಕಾರದಲ್ಲಿ ಕತ್ತರಿಸಿ ಬಳಸಿದ್ದಾರೆ. ಇವುಗಳನ್ನು ನೋಡಿದರೆ ಈ ಗುಣಧರ್ಮದ ಕಲ್ಲನ್ನು ಇಷ್ಟು ನೈಜತೆಯಿಂದ ಬಳಸಿರುವುದು ಕಲಾವಿದ ಈ ಕಲ್ಲಿನ ಗುಣಧರ್ಮವನ್ನು ಚೆನ್ನಾಗಿ ಅರಿತಿದ್ದನೆಂಬದು ತಿಳಿದುಬರುತ್ತದೆ. ಈ ತರಹದ ಕಟ್ಟಡಗಳು ವಿಶೇಷವಾಗಿ ತನ್ನದೇಯಾದ ಒಂದು ಪರಂಪರೆಯ ವೈಶಿಷ್ಟ್ಯತೆಯಿಂದ (ಶೈಲಿಯಿಂದ) ಗುರುತಿಸಲ್ಪಡುತ್ತವೆ.

ಸೂರ್ಯನಗರಿ ಬಿಸಿಲಿನ ನಾಡು ಎಂದೇ ಹೆಸರುವಾಸಿಯಾಗಿರುವ ಈ ಭಾಗದ ಹಳೆಯ ಎಲ್ಲಾ ಮನೆಗಳ ಮೇಲ್ಛಾವಣಿ (ಸಿಮೆಂಟ್ ಈ ನೆಲದಲ್ಲಿ ಕಾಲಿಡುವ ಪೂರ್ವದಲ್ಲಿ)ಗಳಿಗೆ ಸಂಪೂರ್ಣ ಇದೆ ಕಲ್ಲನ್ನು ಬಳಸಿರುವುದು ಇಂದಿಗೂ ಅಲ್ಲಲ್ಲಿ ಕಾಣಬಹುದಾಗಿದೆ. ವಿಶೇಷವೆಂದರೆ ಗಾಳಿ ಮತ್ತು ಬೆಳಕು ಯಥೇಚ್ಛವಾಗಿ ಬಂದು ಮಳೆ ಬಂದರೆ ಒಂದು ತೊಟ್ಟು ನೀರು ಒಳ ಬರದ ಹಾಗೆ ಒಂದರ ಮೇಲೊಂದರಂತೆ ಕಲಾತ್ಮಕ ರೀತಿಯಿಂದ ಚಪ್ಪಡಿ ಕಲ್ಲುಗಳು ಜೊಡಿಸಿರುವುದು ಬೇರೆ ಪ್ರದೇಶದಿಂದ ಬಂದಂತಹ ಜನರಿಗೆ ಅಚ್ಚರಿಯನ್ನುಂಟು ಮಾಡುತ್ತದೆ. ಇದಕ್ಕೆ ಕೆಳಗಡೆ ಆಸರೆಯಾಗಿ ಕಟ್ಟಿಗೆಗಳನ್ನು ಬಳಸುವುದು ಕೂಡ ಒಂದು ಕಲೆಯೆ ಎಂದು ಹೇಳಬಹುದು. ಕೆಳಗಡೆ ಕಟ್ಟಿಗೆಗಳು ಸರಳ ರೀತಿಯಲ್ಲಿ ಕಂಡುಬರದೆ ಅಸ್ತವ್ಯಸ್ತವಾಗಿ ನೋಡುಗರಿಗೆ ಕಂಡುಬಂದರೂ ಮೇಲ್ಗಡೆ ಸಮಪಾತಳಿಯನ್ನು ಹೊಂದಿ ಮಳೆ ನೀರು ಸರಾಗವಾಗಿ ಮುಂದೆ ಸಾಗಿ ಹೋಗುವಂತೆ ಕಲ್ಲನ್ನು ಜೊಡಿಸಲಾಗುತ್ತದೆ. ಮನೆಯ ಒಳಗಡೆ ಬೆಳಕಿನ ವ್ಯವಸ್ಥೆಗಾಗಿ ಬೆಳಕಿಂಡಿಗಳೂ ಈ ಛಾವಣಿಯಲ್ಲಿ ಅಲ್ಲಲ್ಲಿ ಬಿಡಲಾಗುತ್ತದೆ. ಮಳೆ ಬಂದಾಗ ಛಾವಣಿಯ ಮೇಲೆ ಹೋಗಿ ಕಿಂಡಿಯ ಬದಿಯಲ್ಲಿರುವ ಒಂದು ಹೆಚ್ಚುವರಿ ಕಲ್ಲನ್ನು ಕಿಂಡಿಗೆ ಸರಿಸಿದರೆ ಮುಗಿಯಿತು. ಅದೆಂತಹ ಮಳೆ ಬಂದರೂ ಒಳಗಡೆ ನೀರು ಬರದಹಾಗೆ ಜೊಡಿಸಿರುತ್ತಾರೆ. ಇಂತಹ ವಿಶೇಷ ತೆರನಾದ ಅಂಶಗಳಿಂದ ಕಂಡುಬರುವ ಈ ಭಾಗದಲ್ಲಿ ಸುಣ್ಣದ ಶಿಲೆಯನ್ನು ವಿಫುಲವಾಗಿ ದುಡಿಸಿಕೊಂಡುದುದಲ್ಲದೆ, ದೇವಸ್ಥಾನಗಳಲ್ಲಿ ಮೇಲ್ಛಾವಣಿಯ ಮೇಲೆ ಬರುವಂತಹ ಕಟಾಂಜನದಲ್ಲಿ ಅನೇಕ ಪೌರಾಣಿಕ ಕಥೆಗಳ ಮತ್ತು ಮಿಥುನ ಶಿಲ್ಪಗಳ ಉಬ್ಬು ಕೆತ್ತನೆಗಳನ್ನು ರಚಿಸುವುದು ಅಂದಿನ ಜನರ ಬಹುಮುಖಿ ಸೃಜನಶೀಲ ಪ್ರಯತ್ನವನ್ನು ಗುರುತಿಸಬಹುದಾಗಿದೆ. ಮನೆಕಟ್ಟುವ

ಕೆಲಸಗಾರರಿಂದ ಹಿಡಿದು ಕಲಾತ್ಮಕ ಕೆತ್ತನೆಗಳನ್ನು ಮಾಡುವ ಶಿಲ್ಪಿಗಳವರೆಗೂ ಈ ಸುಣ್ಣ ಶಿಲೆಯ ಗುಣಧರ್ಮದೊಂದಿಗೆ ಉಪಯೋಗಿಸಿಕೊಳ್ಳುವ ಕಲೆ ಕರಗತವಾಗಿತ್ತೆಂದು ಊಹಿಸಬಹುದಾಗಿದೆ. ೧೯೯೭ರಲ್ಲಿ ಚಿತ್ತಾಪೂರ ತಾಲೂಕಿನಲ್ಲಿ ಸುಮಾರು (೧೫೦೦) ಗಣೆಗಳು ಕಾರ್ಯನಿರ್ವಹಿಸುತ್ತಿದ್ದವು ಎಂದು ತಿಳಿದುಬರುತ್ತದೆ.

ನಾಣ್ಯ :

ಸನ್ನತಿಯಲ್ಲಿ ದೊರಕಿರುವ ಸುಟ್ಟ ಜೇಡಿಮಣ್ಣಿನ ಒಂದು ಪದಕವನ್ನು ಗಮನಿಸಬೇಕು. ೨ ಅಂಗುಲ ವ್ಯಾಸವುಳ್ಳ ಈ ಪದಕವು ಸನ್ನತಿಯ ಉತ್ಖನನದಲ್ಲಿ ದೊರಕಿತು. ಇದರ ಮುಮ್ಮುಖದಲ್ಲಿ ಟೈಬಿರಿಯಸ್‌ನ ಚಿತ್ರವಿದೆ. ಹಿಮ್ಮುಖದಲ್ಲಿ ಆಸನದ ಮೇಲೆ ಕುಳಿತಿರುವ ವೆಸ್ಟ್ ಚಿತ್ರವಿದೆ. ಆಕೆಯ ಕೈಲಿ ರಾಜದಂಡ ಮತ್ತು ರೆಂಬೆಗಳಿವೆ. ಇದನ್ನು ನೋಡಿದ ಕೂಡಲೇ ಇದು ರೋಮನ್ ಚಕ್ರವರ್ತಿ ಟೈಬೀರಿಯಸ್‌ನ ನಾಣ್ಯದ ಮುಮ್ಮುಖ ಮತ್ತು ಹಿಮ್ಮುಖಗಳ ವಿನ್ಯಾಸದ ಪರಿಚಯ ಎಷ್ಟು ಗಾಢವಾಗಿ ಆಗಿದ್ದಿತೆಂದು ಇದರಿಂದ ಊಹಿಸಬಹುದು. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಈ ಮೂರು ಅವಶೇಷಗಳಲ್ಲಿ ಕಾಣಬಹುದು. ಒಂದೇ ತೆರನಾದ ವಿನ್ಯಾಸ ಆಸನದ ಮೇಲೆ ಕುಳಿತು ಒಂದು ಕೈಯಲ್ಲಿ ರಾಜದಂಡವನ್ನು ಹಿಡಿದು ಮತ್ತೊಂದು ಕೈಯಲ್ಲಿ ರೆಂಬೆಯನ್ನು ಹಿಡಿದಿರುವ ಈ ವಿನ್ಯಾಸ ಆಗಿನ ಜನಗಳಿಗೆ ಬಲು ಪ್ರಿಯವಾಗಿ ಕಂಡಿರಬೇಕು. ಈ ಎಲ್ಲ ಅಂಶಗಳನ್ನು ಗಮನಿಸಿದರೆ ರೋಮನ್ ನಾಣ್ಯಗಳು ಕರ್ನಾಟಕದಲ್ಲಿ ಯಾವ ರೀತಿ ಜನಪ್ರಿಯವಾಗಿದ್ದವು. ಎಂಬುದು ಅರ್ಥವಾಗುತ್ತದೆ. ಇತರ ಯಾವ ವಿದೇಶಿಯ ನಾಣ್ಯಗಳೂ ರೋಮಿನ ನಾಣ್ಯಗಳಷ್ಟು ಕರ್ನಾಟಕದ ಜನಗಳಿಗೆ ಪ್ರಿಯವಾಗಿರಲಿಲ್ಲವೆಂಬುದು ಖಚಿತವಾಗುತ್ತದೆ.[೨೩]

ಕರ್ನಾಟಕದಲ್ಲಿ ದೊರೆತಿರುವ ರೋಮನ್ ನಾಣ್ಯಗಳ ಆಧಾರದ ಮೇಲೆ ಇಲ್ಲಿಯ ವ್ಯಾಪಾರದ ಸಾಂದ್ರತೆಯನ್ನು ತಿಳಿಯಬಹುದಾಗಿದೆ. ಇಲ್ಲಿ ದೊರೆತಿರುವ ಅತಿ ಹೆಚ್ಚಿನ ಸಂಖ್ಯೆಯ ನಾಣ್ಯಗಳು ರೋಮನ್ ಚಕ್ರವರ್ತಿಗಳಾದ ಅಗಸ್ಟಸ್ (ಕ್ರಿ.ಪೂ. ೩೧ ಕ್ರಿ.ಶ.೧೪) ಮತ್ತು ಟೈಬೀರಿಯಸ್ (ಕ್ರಿ.ಶ. ೧೪-೩೭) ಅವರ ನಾಣ್ಯಗಳು. ಆದುದರಿಂದ ಈ ಸಮಯದಲ್ಲಿ ಅಂದರೆ ಕ್ರಿಸ್ತಶಕದ ಮೊದಲನೆಯ ಶತಮಾನದ ಪೂರ್ವಾರ್ಧದಲ್ಲಿ ರೋಮನ್ ವ್ಯಾಪಾರದ ಸಾಂದ್ರತೆ ಹೆಚ್ಚಾಗಿ ಇದ್ದಿತು. ಆನಂತರ ಕಡಿಮೆಯಾಗುತ್ತ ಹೋಗಿ ಬೈಜಾಂಟೈನ್ ಚಕ್ರವರ್ತಿಗಳ ಕಾಲದಲ್ಲಿ ಇಳಿಮುಖವಾಗುತ್ತದೆ.[೨೪]

ಹೈದ್ರಾಬಾದ್-ಕರ್ನಾಟಕ ಪ್ರದೇಶದ ಶಿಷ್ಟ ಪರಂಪರೆಯ ಚಿತ್ರಕಲಾ ಬೇರುಗಳು ಮೌರ್ಯರ

೨೩. ಡಾ. ಎ.ವಿ. ನರಸಿಂಹಮೂರ್ತಿ (ಲೇ), ಕರ್ನಾಟಕದಲ್ಲಿ ವಿದೇಶಿ ನಾಣ್ಯಗಳು, ಪುಟ-೧೫-೧೬

೨೪. ಅದೇ ಪುಸ್ತಕ, ಪುಟ-೭

ಕಾಲದಿಂದಲೇ ಸ್ಥೂಲವಾಗಿ ಕಂಡುಬರುತ್ತವೆ. ಮಸ್ಕಿ, ಕೊಪ್ಪಳ ಪ್ರದೇಶಗಳಲ್ಲಿ ಕಂಡುಬಂದಿರುವ ಅಶೋಕನ ಶಾಸನಗಳು ಚಿತ್ರ ಸಂಕೇತವನ್ನು ಒಳಗೊಂಡಿರುವುದು ಇಲ್ಲಿ ಗಮನಾರ್ಹವಾಗಿದೆ. ಕ್ರಿ.ಶ. ಆರಂಭದ ಹೊತ್ತಿಗೆ ಆಳ್ವಿಕೆಯನ್ನು ಪ್ರಾರಂಭಿಸಿದ ಶಾತವಾಹನರ ಕಾಲದ ಸುಂದರವಾದ ವರ್ಣಚಿತ್ರಗಳು ಅಜಂತಾ ಗುಹೆಗಳಲ್ಲಿ ಕಂಡುಬಂದಿವೆ. ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಸಹಿತ ಇವರ ಕಲಾಕೃತಿಗಳು ಲಭ್ಯವಾಗಿವೆ. ಸನ್ನತಿಯಲ್ಲಿ ಕ್ರಿ.ಶ. ೩ನೇ ಶತಮಾನಕ್ಕೆ ಸೇರಿದ ಚಿತ್ರಮಯ ಫಲಕವೊಂದು ಉತ್ಖನನದಲ್ಲಿ ಲಭ್ಯವಾಗಿದ್ದು ಇದು ಶಾತವಾಹನರ ಕಾಲದ್ದಾಗಿದೆ. ಸುಟ್ಟ ಮಣ್ಣಿನ ಈ ಫಲಕದ ಮೇಲೆ ಆಡು, ಆಕಳು, ಸ್ತ್ರೀ–ಪುರುಷ, ಹೂಬಳ್ಳಿಯ ನಕ್ಷೆಯ ಚಿತ್ರಗಳಿವೆ. ಇದರ ಜೊತೆಗೆ ಕೆಲವು ಮಡಿಕೆ ಚೂರುಗಳು ಲಭ್ಯವಾಗಿದ್ದು ಅವುಗಳಲ್ಲಿಯೂ ವರ್ಣಚಿತ್ರಗಳಿವೆ.[೨೫]

---


೨೫. ಡಾ. ಮಲ್ಲಿಕಾರ್ಜುನ ಬಾಗೋಡಿ (ಸಂ), ಹೈದ್ರಾಬಾದ–ಕರ್ನಾಟಕದ ದೃಶ್ಯಕಲಾ ಪರಂಪರೆ, ಡಾ. ಯಾದಪ್ಪ ಪರದೇಶಿ (ಲೇ), ಕ್ರಿ.ಶ. ಆರಂಭದಿಂದ ವಿಜಯನಗರ ಕಾಲದವರೆಗಿನ ಚಿತ್ರಕಲೆ, ಪು–೩೨

ಬುದ್ಧನ ದುಂಡು ಶಿಲ್ಪಗಳು









● ಬುದ್ಧನ ದುಂಡು ಶಿಲ್ಪದ ಮುಖಭಾಗ



● ಆನೆಯ ಮೆರವಣಿಗೆಯ ಉಬ್ಬುಶಿಲ್ಪ

ಅಧ್ಯಾಯ - ನಾಲ್ಕು

ಬುದ್ಧನ ಜನನ ಮತ್ತು ಜಾತಕ ಕಥೆ ಆಧಾರಿತ ಉಬ್ಬು ಶಿಲ್ಪಗಳು

ಅಧ್ಯಾಯ – ನಾಲ್ಕು

ಬುದ್ಧನ ಜನನ ಮತ್ತು ಜಾತಕ ಕಥೆ ಆಧಾರಿತ ಉಬ್ಬು ಶಿಲ್ಪಗಳು

ಮಾನವನ ಜನನ ಮರಣಗಳು ಜಗತ್ತಿನ ಎಲ್ಲಾ ಸಮಸ್ಯೆಗಳಿಗಿಂತಲು ಜಟಿಲವಾದ ನಿಗೂಢ ಸಮಸ್ಯೆಗಳಾಗಿವೆ. ಈ ಸಮಸ್ಯಾಪರಿಹಾರದ ಆದಿ ಅಂತ್ಯಗಳನ್ನು ಅರಿಯಲು ಅಸಮರ್ಥನಾದ ಮಾನವನು ಜೀವನವನ್ನೆ ಜಟಿಲ ಸಮಸ್ಯೆಯೆಂದು ತಿಳಿದು ಕಷ್ಟ–ಕಾರ್ಪಣ್ಯಗಳ ಚಕ್ರದಲ್ಲಿ ಸುತ್ತುತ್ತಿರುತ್ತಾನೆ. ಬಹುಶಃ ಇಂತಹ ವಿಚಾರಗಳಿಂದಲೇ ಬುದ್ಧನು ತನ್ನ ಸಾಂಕೇತಿಕ ರೂಪಗಳಲ್ಲೊಂದಾದ ಚಕ್ರವನ್ನು ಸ್ವೀಕರಿಸಿರಬಹುದು. ತೊಟ್ಟಿಲಿಗೆ ಸೇರಿದ ಮಗು ತಾನೆಲ್ಲಿಂದ ಬಂದೆ ಎಂಬ ಪ್ರಶ್ನೆಗೆ ಉತ್ತರ ಕಾಣದೆ ಬಡಬಡಿಸುವಂತೆ ಮೃತ್ಯುಪಂಜರವನ್ನು ಸೇರುತ್ತಿರುವ ಜೀವಿ. ತಾನೆಲ್ಲಿಗೆ ಹೋಗುತ್ತಿರುವೆನೆಂದು ತಿಳಿಯಲಾರದೆ ಪರಿತಪಿಸುತ್ತಾನೆ. ಈ ಸಮಸ್ಯೆಯನ್ನು ಪರಿಹರಿಸಿಕೊಂಡವರಿಗೆ ಜನನ–ಮರಣ ಜೀವನ ಎಲ್ಲವೂ ಸದ್ಭಾವದಿಂದಲೇ ವ್ಯಕ್ತವಾಗುತ್ತವೆ. ಈ ಸಮಸ್ಯೆಗಳು ಇರುವುದೂ ಮಾನವನಲ್ಲೇ ಮತ್ತು ಅವುಗಳ ಪರಿಹಾರ ದೊರೆಯುವುದೂ ಅವನಲ್ಲೇ. ಆದುದರಿಂದ ಮಾನವನಿಗೆ ಮಾನವತ್ವವೇ ಹೇಗೆ ಸಮಸ್ಯೆಯೋ ಹಾಗೆಯೇ ಮಾನವತೆಯಲ್ಲಿಯೇ ಅದರ ಪರಿಹಾರವಿದೆ. ಇದನ್ನು ಅರಿಯುವ ಮಹತ್ ಸಾಧನೆಯೇ ಜೀವನ. ಆದರೂ ಯುಗ ಯುಗಾಂತರಗಳಿಂದಲೂ ಸಮಸ್ಯೆ ವಿಕೃತರೂಪ ತಾಳುತ್ತಾ ವಿವಿಧ ಘಟನೆಗಳು ಜಗತ್ತಿನಲ್ಲಿ ಜರುಗುತ್ತವೆ. ಅರಿವಿನ ದಾರಿ ಕಾಣದೆ ಜನಸಮುದಾಯ ನರಳುವಾಗ ಅರಿತು ದಾರಿ ತೋರುವ ಮಹಾನುಭಾವರು ಅವತರಿಸುತ್ತಾ ಕೈ ಹಿಡಿದು ನಡೆಸುತ್ತಾರೆ. ನಡೆ ಎಂದು ದಾರಿತೋರಿ ಕಣ್ಮರೆಯಾಗುತ್ತಾರೆ. ಇಂತಹ ಘಟನೆಗಳೇ ಇತಿಹಾಸದ ಸ್ವರ್ಣ ಸಂಪುಟಗಳು.[೧]

೧. ಎಚ್. ಗಂಗಾಧರನ್ (ಲೇ) ಬುದ್ಧ ಭಗವಾನ, ಪುಟ–೧೨

ಜಗತ್ತಿನ ಇತಿಹಾಸದಲ್ಲಿ ಕ್ರಿ.ಪೂ. ಆರನೇ ಶತಮಾನ ಅದ್ವಿತೀಯ ಘಟನೆಗಳ ಸಂಪುಟವಾಗಿದೆ. ಲೋಕೋದ್ಧಾರಿಗಳಾದ ಮಹಾನುಭಾವರಲ್ಲಿ ಅನೇಕರು ಜನಿಸಿದ್ದು ಆ ಸಮಯದಲ್ಲೇ ಗ್ರೀಸಿನಲ್ಲಿ ಪರ್ಮನೈಡ್ಸ್, ಎಂಪಿಡೋಕ್ಲೆಸ್ ಮುಂತಾದ ಅನುಭಾವಿಗಳೂ, ಇರಾನಿನಲ್ಲಿ ಜರತ್ರುಷ್ಟ ಮಹಾಶಯನೂ, ಚೈನಾದಲ್ಲಿ ಲೌಟ್ಜು ಮತ್ತು ಕನ್‌ಫ್ಯೂಷಿಯಸ್ ಮಹಾನುಭಾವರೂ, ಭಾರತದಲ್ಲಿ ಮಹಾವೀರ, ಬುದ್ಧ ಭಗವಾನರೂ ಅವತರಿಸಿದ ಪರ್ವಕಾಲ ಅಂದಿನ ವಿಶ್ವ ಸಮಸ್ಯೆಗಳಿಗೆ ಜೀವಂತ ಸಂದೇಶವನ್ನು ಸಾರಿದ ಮಹಾನುಭಾವರು ಅವತರಿಸುವುದಕ್ಕೆ ಆಯಾ ರಾಷ್ಟ್ರಗಳ ಪ್ರಾಚೀನ ಹಿನ್ನೆಲೆಯೂ ಕಾರಣವಾಗುತ್ತಷ್ಟೆ. ಅಂತೆಯೇ ಭಾರತದಲ್ಲಿಯೂ ಸಹ ಚಾರಿತ್ರಿಕ ವಾತಾವರಣ ಬುದ್ಧ ಭಗವಾನರಂತಹ ಮಹಾನುಭಾವರ ಪಾದುರ್ಭಾವದ ನಿರೀಕ್ಷೆಯಲ್ಲಿತ್ತೆಂದು ಕಾಣುತ್ತದೆ.[೧]

ಇತಿಹಾಸದುದ್ದಕ್ಕೂ ಈ ನಮ್ಮ ಜಗತ್ತಿನ ಬೇರೆ ಬೇರೆ ಜನಾಂಗಗಳು ಪದಾರ್ಥ ಹಾಗೂ ಸ್ಫೂರ್ತಿಗಳನ್ನು ಮೇಳವಿಸಿ ನೃತ್ಯ, ಸಾಹಿತ್ಯ, ಸಂಗೀತ, ಶಿಲ್ಪಕಲೆ ಮುಂತಾದ ಅಮರ ಕೃತಿಗಳನ್ನು ರಚಿಸಿದ್ದಾಗಿದೆ. ಇವೇ ಮಾನವನ ಇತಿಹಾಸದಲ್ಲಿ ಪರಂಪರೆಯಾಗಿವೆ. ಅತ್ಯಂತ ಅಮೂಲ್ಯವಾಗಿದ್ದರೆ "ವಿಶ್ವ ಪರಂಪರೆ"ಯ ಕೊಡುಗೆಗಳು ಆಗಿವೆ.

ಮಾನವನು ಸುಸಂಸ್ಕೃತವಾದಂತೆ ಪ್ರಾಚೀನ ನದಿ–ಕೊಳ್ಳಗಳಾದ ಯುಫ್ರೆಟಿಸ್, ಟೈಗ್ರಿಸ್, ನೈಲ, ಇಂದಸ್ ಹಾಗೂ ಹೋಆಂಗ ಹೋ, ಹೊಳೆಗಳ ತಪ್ಪಲು ಪ್ರದೇಶಗಳು ಇಂಥ ಜಾಗತಿಕ ಪರಂಪರೆಯ ತಾಣಗಳನ್ನು ನೀಡಿವೆ. ಜೊತೆಗೆ ವಿಸ್ತಾರ ಸಾಮ್ರಾಜ್ಯಗಳಾದ ಗ್ರೀಸ್, ರೋಮ್, ಈಜಿಪ್ತ್ ಇರಾನ್, ಇರಾಕ್, ಆಫಘಾನಿಸ್ತಾನ, ಇಂಡಿಯಾ, ಇಂಡೋನೇಶಿಯಾ ಹಾಗೂ ಚೀನಾ ಮುಂತಾದ ದೇಶಗಳೂ ವಿಶ್ವ ಪರಂಪರೆಗೆ ಸಾಕಷ್ಟು ಕೊಡುಗೆ ನೀಡಿವೆ.[೨]

ಬುದ್ಧನ ಜನನ ಸಂಬಂಧಿ ಉಬ್ಬುಶಿಲ್ಪಗಳು :

ದೀರ್ಘ ಚತುಸ್ರಾಕಾರ (ತೊಲೆಯಾಕಾರ)ದ ಕಲ್ಲಿನಲ್ಲಿ ರಚಿಸಲಾದ ಬುದ್ಧನ ಜನನಕ್ಕೆ ಸಂಬಂಧಿಸಿದ ಈ ಉಬ್ಬುಶಿಲ್ಪಗಳು ಬೇರೆ ಶಿಲ್ಪಗಳಿಗಿಂತ ಭಿನ್ನವಾಗಿ ಕಾಣುತ್ತವೆ. ಈ ಶಿಲ್ಪಗಳಲ್ಲಿ ಕಾಣುವಂತಹ ಅಂಗಸೌಷ್ಠವ ಮತ್ತು ನಿರೂಪಣಾ ತಂತ್ರವು ಫಲಕ ಶಿಲ್ಪಗಳಿಗಿಂತ ಹೆಚ್ಚು ಪ್ರೌಢಿಮೆಯಿಂದ ಕೂಡಿದವುಗಳಾಗಿವೆ ಎಂದು ಹೇಳಬಹುದು. ಮಾನವಾಕೃತಿಗಳ ದೇಹರಚನೆಯ ನೈಜತೆಗೆ ಶಿಲ್ಪಿಯಾದವನು ವಿಶೇಷ ಗಮನಹರಿಸಿ ರಚಿಸಿದಂತಹ ಶಿಲ್ಪಿಗಳಲ್ಲಿಯೇ ಪ್ರೌಢ ಶಿಲ್ಪಿಯು ಈ ಜನನ ಸಂಬಂಧಿ ಶಿಲ್ಪಗಳು ರಚಿಸಿರಬಹುದು. ಹೆಚ್ಚು ಉಬ್ಬುಗೆತ್ತನೆಯಿಂದ ಕೂಡಿದ ಈ

೧. ಎಚ್. ಗಂಗಾಧರನ್ (ಲೇ) ಬುದ್ಧ ಭಗವಾನ, ಪುಟ–೧

೨. ಡಾ. ಎಸ್.ಕೆ. ಜೋಶಿ, ಸಾಪ್ತಾಹಿಕ ಸೌರಭ, ಸಂಯುಕ್ತ ಕರ್ನಾಟಕ–೨೦೦೬

ಶಿಲ್ಪಗಳಲ್ಲಿ ಪ್ರಾಣಿ ಆಕೃತಿಗಳ ನೈಜತೆಗೂ ಹೆಚ್ಚಿನ ಗಮನಹರಿಸಿದ್ದು ಕಥಾ ನಿರೂಪಣಾ ಭಾವನೆಗಳನ್ನು ಆಯಾ ಆಕೃತಿಗಳಲ್ಲಿ ತುಂಬಿದ್ದಾನೆ. ಫಲಕ ಶಿಲ್ಪಗಳಲ್ಲಿ ಮತ್ತು ಈ ಜನನ ಕಥಾನಕ ಶಿಲ್ಪಗಳಲ್ಲಿ ಈ ವ್ಯತ್ಯಾಸಗಳು ಕಂಡುಬರಲು ಸ್ತೂಪ ರಚನಾ ಶಿಲ್ಪಕಾರರ ಮುಖ್ಯ ಶಿಲ್ಪಿಯು ರಚಿಸಿರಬಹುದು. ಅಥವಾ ಫಲಕ ಶಿಲ್ಪಗಳ ನಂತರದ ದಿನಗಳಲ್ಲಿ ರಚನೆಯಾಗಿರಬಹುದೆಂಬ ಊಹೆ ಮೂಡುತ್ತದೆ. ಒಟ್ಟಾರೆ ಹೇಳಬೇಕೆಂದರೆ ಫಲಕ ಶಿಲ್ಪಗಳಲ್ಲಿ ಕಂಡುಬರುವ ನಾಗಮುಚ್ಛಂದ ಶಿಲ್ಪಗಳು ಮತ್ತು ಪ್ರಾಣಿಗಳ ಸಾಲು ಶಿಲ್ಪಗಳಲ್ಲಿ ಈ ಪ್ರೌಢಿಮಕೆ ಸ್ವಲ್ಪಮಟ್ಟದಲ್ಲಿ ಕಂಡುಬಂದರೂ ಫಲಕ ಶಿಲ್ಪಗಳಲ್ಲಿ ಕಂಡುಬರುವ ಮಾನವಾಕೃತಿಗಳಲ್ಲಿ ಈ ಪ್ರೌಢಿಮೆಯ ಕಂಡುಬರುವುದಿಲ್ಲ. ಬಹುಶಃ ಹಿರಿಯ ಶಿಲ್ಪಿಯ ನಿರ್ದೇಶನದಲ್ಲಿ ಕಿರಿಯ ಶಿಲ್ಪಿಗಳು ರಚಿಸಿರಬಹುದಾದಂತಹವುಗಳು ಫಲಕ ಶಿಲ್ಪಗಳಾಗಿದ್ದು ಹಿರಿಯ ಶಿಲ್ಪಿಯೇ ರಚಿಸಿದಂತಹ ಶಿಲ್ಪಗಳು ಈ ಬುದ್ಧನ ಜನನ ಸಂಬಂಧಿ ಶಿಲ್ಪಗಳಾಗಿವೆ ಎಂದೂಕೂಡ ಅಂದಾಜಿಸಬಹುದು.

ತೋಲೆಯಾಕಾರದ ದಪ್ಪಕಲ್ಲಿನ ಒಂದು ಪಾರ್ಶ್ವದಲ್ಲಿ ರಚಿಸಿದಂತಹ ಶಿಲ್ಪದಲ್ಲಿ ಮಾಯಾದೇವಿಯು ಕನಸು ಕಾಣುತ್ತಿರುವ ದೃಶ್ಯ, ಬುದ್ಧನ ತಾಯಿಯಾದ ಮಾಯಾದೇವಿಯು ಮಂಚದ ಮೇಲೆ ಮಲಗಿದ್ದಾಳೆ. ಕೆಳಗಡೆ ಪರಿಚಾರಿಕೆಯರು ಕುಳಿತಿದ್ದು ಮಂಚದ ಹಿಂದುಗಡೆ ನಿಂತಿರುವ ದೇವತೆಗಳು ಆಶೀರ್ವದಿಸುತ್ತಿದ್ದಾರೆ. ಅವರ ಪಕ್ಕದಲ್ಲಿಯೆ ಒಂದು ಕಿಂಡಿಯಿಂದ ಚಿಕ್ಕ ಆನೆಯೊಂದು ಬರುತ್ತಿರುವಂತೆ ಆನೆಯ ಮುಂಭಾಗವನ್ನು ಮಾತ್ರ ತೋರಿಸಿದ್ದಾರೆ. ಇನ್ನೊಂದು ದೃಶ್ಯದಲ್ಲಿ ಮಾಯಾದೇವಿಯು ಶಾಲಭಂಜಿಕೆಯ ತರಹ ನಿಂತಿದ್ದು, ಪರಿಚಾರಿಕೆಯರು ಬುದ್ಧನನ್ನು ಸ್ವಾಗತಿಸುತ್ತಿರುವಂತೆ ರಚಿಸಲಾಗಿದೆ. ಇದೇ ದೃಶ್ಯವು ಇನ್ನೊಂದು ಕಡೆ ಪುನರಾವರ್ತನೆಯಾಗಿದೆ. ಇನ್ನೊಂದು ದೃಶ್ಯದಲ್ಲಿ ಮಗುವನ್ನು ವೃಕ್ಷದೇವರ ಹತ್ತಿರ ತೆಗೆದುಕೊಂಡು ಹೋಗುತ್ತಿರುವ ದೃಶ್ಯ, ಕಟ್ಟೆಯ ಮೇಲೆ ಮರ (ವೃಕ್ಷ) ಮರದಡಿಯಲ್ಲಿ ವೃಕ್ಷದೇವತೆಯನ್ನು ತೋರಿಸಲಾಗಿದೆ. ಆ ದೇವತೆಯ ಎದುರು ಪರಿಚಾರಿಕೆಯೋರ್ವಳು ಮಗುವನ್ನು ಹಿಡಿದು ನಿಂತಿರುವಂತೆ ಅವಳ ಹಿಂದೆ ಇನ್ನೂ ಅನೇಕ ಆಕೃತಿಗಳು ವೃಕ್ಷದೇವರನ್ನು ನಮಿಸುತ್ತಿರುವಂತೆ ರಚಿಸಲಾಗಿದೆ. ಈ ದೃಶ್ಯವೂ ಕೂಡ ಇನ್ನೊಂದು ಶಿಲ್ಪದಲ್ಲಿ ಪುನರಾವರ್ತನೆಯಾಗಿದೆ.

ಮತ್ತೊಂದು ಶಿಲ್ಪ ನಿರೂಪಣೆಯಲ್ಲಿ ನಾಲ್ವರು ಕುದುರೆಯನ್ನು ಸ್ವರ್ಗದಿಂದ ಕರೆತರುತ್ತಿರುವ ದೃಶ್ಯ, ಅಲಂಕಾರಗೊಂಡಿರುವ ಕುದುರೆಯ ಕಾಲಡಿಯಲ್ಲಿ ನಾಲ್ಕು ಮನುಷ್ಯ ಆಕೃತಿಗಳು ಕುದುರೆಯನ್ನು ಹೊತ್ತುಕೊಂಡಿರುವಂತೆ ನಾಲ್ಕು ಜನರ ಅರ್ಧಭಾಗವನ್ನು ಮಾತ್ರ ತೋರಿಸಲಾಗಿದ್ದು, ಹಿಂದುಗಡೆ ನಾಲ್ಕು ಜನ ದೇವತೆಗಳನ್ನು ತೋರಿಸಲಾಗಿದೆ. ಈ ದೃಶ್ಯಶಿಲ್ಪವೂ ಕೂಡ ಮತ್ತೊಂದೆಡೆ ಪುನರಾವರ್ತನೆಗೊಂಡರೂ ಸಂಯೋಜನೆಯಲ್ಲಿ ಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತವೆ.

ಈ ವಿವರಗಳಲ್ಲದೇ ಮತ್ತೊಂದು ದೃಶ್ಯ ನಿರೂಪಣೆ ಗುಲ್ಬರ್ಗಾ ವಸ್ತುಸಂಗ್ರಹಾಲಯದಲ್ಲಿದೆ. ಈ ಶಿಲ್ಪದಲ್ಲಿ ಮಾಯಾದೇವಿ, ಶಾಲಭಂಜಿಕೆಯಂತೆ ನಿಂತಿಲ್ಲ. ಬದಲಾಗಿ ಕಲ್ಬಂಡೆಯ ಮೇಲೆ ಕುಳಿತಂತೆ ತೋರಿಸಲಾಗಿದ್ದು, ಬುದ್ಧನನ್ನು ಸಾಂಕೇತಿಕವಾಗಿ ತೋರಿಸಿಲ್ಲ. ಬದಲಾಗಿ ಮನುಷ್ಯ ಆಕಾರದಲ್ಲಿ ಚಿಕ್ಕ ಕೂಸಿನ ಹಾಗೆ ಇರುವ ಆಕೃತಿಯನ್ನು ಪರಿಚಾರಿಕೆಯೋರ್ವಳು ಹಿಡಿದು ನಿಂತಿದ್ದಾಳೆ. ಈ ರೀತಿಯ ರಚನೆ ಅತ್ಯಂತ ವಿಶಿಷ್ಟವಾದದ್ದು. ಸಾಮಾನ್ಯವಾಗಿ ನಿಂತ ಭಂಗಿಯ ಶಾಲಭಂಜಿಕೆಯೇ ಮಾಯಾದೇವಿ ಎಂದು ಬಿಂಬಿಸಲಾಗಿರುತ್ತದೆ. ಇಂತಹುದೇ ವಿಭಿನ್ನ ದೃಶ್ಯ ನಿರೂಪಣೆ ಅಜಂತಾದ ಎರಡನೇ ಲಯಣದ ಭಿತ್ತಿಚಿತ್ರದಲ್ಲಿ ಕಂಡುಬರುತ್ತದೆ. ಈ ಚಿತ್ರದಲ್ಲಿ ಮಾಯಾದೇವಿ ಅಂತಃಪುರದಲ್ಲಿ ಮಲಗಿರುವ ಹಾಗೆ ಮಗುವನ್ನು ತೆಗೆದುಕೊಂಡು ವೃಕ್ಷ ದೇವಾಲಯಕ್ಕೆ ಭೇಟಿ ನೀಡಲು ಹೋಗುವ ದೃಶ್ಯಗಳಿವೆ. ಸನ್ನತಿಯಲ್ಲಿ ಹೆಚ್ಚು ಕಡಿಮೆ ಒಂದೆರಡು ಶತಮಾನಗಳ ಮೊದಲೇ ಇಂತಹ ದೃಶ್ಯ ಪರಿಕಲ್ಪನೆಗಳು ಮೂಡಿಬಂದಿವೆ. ವಿಶೇಷವೆಂದರೆ ಸನ್ನತಿಯಲ್ಲಿ ಶಿಲ್ಪ ಕಲಾವಿದರು ಸಾಕಷ್ಟು ಪ್ರಯೋಗಶೀಲರಾಗಿದ್ದರು. ಅವರ ಪರಿಕಲ್ಪನೆಯಲ್ಲಿ ತಮ್ಮದೇ ಆದಂತಹ ಹೊಸ ಹೊಸ ದೃಶ್ಯ ನಿರೂಪಣೆಗಳ ಪರಿಕಲ್ಪನೆಗಳು ಸಂಯೋಜನೆಯಲ್ಲಿ ಮೂಡುತ್ತಿದ್ದವು.[೪]

ಜಾತಕ ಕಥೆ ಆಧಾರಿತ ಉಬ್ಬು ಶಿಲ್ಪಗಳು :

ತಿಪಿಟಕಗಳು ಬುದ್ಧ ಭಗವಾನರ ವಚನಗಳ ಸಂಗ್ರಹ. ಆದುದರಿಂದ ಜಾತಕವೂ ಬುದ್ಧ ಭಗವಾನರ ವಚನಗಳ ಸಂಗ್ರಹವೇ ಆಗಿವೆ. ಅವರು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಜನರಿಗೆ ಮಾಡಿದ ಬೋಧನೆಗಳು ಜಾತಕದಲ್ಲಿರುವ ಗಾಥೆಗಳು, ಭಗವಾನರು ತಮ್ಮ ಹಿಂದಿನ ಜನ್ಮಗಳಲ್ಲಿ ಮಾಡಿದ ಸಾಧನೆಗಳೇ ಜಾತಕದ ವಸ್ತುವಾಗಿದೆ.[೫]

ಜಾತಕವು ತಿಪಿಟಕದ ಒಂದು ಭಾಗವಾಗಿರುವುದರಿಂದ ತಿಪಿಟಕದ ಕಾಲಕ್ಕೆ ಸೇರಿದೆ. ಅಶೋಕ ಚಕ್ರವರ್ತಿಯ ಕಾಲಕ್ಕೆ ತಿಪಿಟಕಗಳು ಜಾತಕ ರೂಪವನ್ನು ಪಡೆದವು ಎಂದು ಹೇಳಬಹುದು. ಆತನ ಕಾಲದಲ್ಲಿ ಸಂಘವು ಅನೇಕ ಆಷಾಢಭೂತಿ ಬೀಕ್ಷುಗಳಿಂದ ತುಂಬಿ ಹೋಗಿತ್ತು. ಭಿಕ್ಷುಗಳಿಗೆ ರಾಜಾಶ್ರಯ ದೊರೆತಿದ್ದರಿಂದ ಕೆಲವರು ಹೊಟ್ಟೆಪಾಡಿಗೆ ಸಂಘವನ್ನು ಸೇರಿಕೊಂಡಿದ್ದರು. ಸಮಾಜದಲ್ಲಿ ಪ್ರತಿಷ್ಠೆಯನ್ನು ಪಡೆಯಲು ಕೆಲವರು ಸಂಘವನ್ನು ಸೇರಿಕೊಂಡಿದ್ದರು. ಇಂಥ ನೀಚ ಭಿಕ್ಷುಗಳು ವಿನಯದ ನಿಯಮಗಳನ್ನು ತಮಗೆ ತೋರಿದ ರೀತಿಯಲ್ಲಿ ಅರ್ಥಮಾಡಿಕೊಂಡು ಅನೇಕ

೪. ಡಾ. ಎಚ್.ಎಸ್. ಗೋಪಾಲರಾವ್ (ಸಂ), ಸುವರ್ಣ ಕರ್ನಾಟಕ ಶಿಲ್ಪಕಲಾ ಮಾಲೆ, ಡಾ. ಆರ್.ಎಚ್. ಕುಲಕರ್ಣಿ (ಲೇ), ಕರ್ನಾಟಕ ಆರಂಭಿಕ ಶಿಲ್ಪಕಲೆ, ಪುಟ-೨೨,೨೩

೫. ರುಕ್ಮೀಣಿ ಗಿರಿಮಾಜೆ, ಜಾತ ಮತ್ತು ಜಾತಕ ಕತೆಗಳು, ಪುಟ-XV

ನಿಯಮಗಳನ್ನು ಮುರಿದು ಜನರನ್ನು ಅಡ್ಡದಾರಿಗೆ ಎಳೆಯುತ್ತಿದ್ದರು. ಇಂಥ ಭಿಕ್ಷುಗಳನ್ನು ಹೊರಹಾಕಿ ಸಂಘವನ್ನು ಶುದ್ಧಿಗೊಳಿಸುವುದು ಅನಿವಾರ್ಯವಾಯಿತು. ಭಗವಾನರ ಬೋಧನೆಗಳಲ್ಲಿ ಈ ಜನರು ಸೇರಿಸಿಬಿಟ್ಟಿದ್ದ ಕಲ್ಮಶಗಳನ್ನು ತೆಗೆದು ಅವರ ಸ್ವಚ್ಛ ಬೋಧನೆಗಳನ್ನು ಸಂಗ್ರಹಿಸಿ ಅದಕ್ಕೆ ಅಧಿಕಾರ ಮುದ್ರೆಯನ್ನು ನೀಡುವುದು ಅವಶ್ಯವಾಯಿತು. ಈ ಕಾರಣದಿಂದ ಜಾತಕ ಕಥೆಗಳೆಲ್ಲಾ 'ಜಾತಕಟ್ಠ ಕಥಾವಣ್ಣನಾ' ಎಂಬ ಪಾಲಿ ಗ್ರಂಥದಲ್ಲಿವೆ. ಅಟ್ಠಕಥೆ ಎಂದರೆ ಅರ್ಥಕಥೆ "ಅರ್ಥಕಥಾ ವರ್ಣನೆಗಳು" ಜಾತಕ ಕಥೆಗಳಲ್ಲಿ ಭಗವಾನರು ತಮ್ಮ ಹಿಂದಿನ ಐನೂರು ನಲವತ್ತೇಳು ಜನ್ಮಗಳಲ್ಲಿ ಮಾಡಿದ ಸಾಧನೆಯನ್ನು ಹೇಳಿಕೊಂಡಿದ್ದಾರೆ. ತಾವು ಯಾವ ಗುಣಗಳನ್ನು ಬೆಳೆಸಿಕೊಂಡು ಸಮ್ಯಕ್ ಬೋಧಿಯನ್ನು ಪಡೆದರೋ ಆ ಗುಣಗಳಲ್ಲಿ ಪರಿಪೂರ್ಣತ್ವ ಪಡೆದವರು ದುಃಖದಿಂದ ಬಿಡುಗಡೆಯಾಗಬಲ್ಲರೆಂಬುದನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. ಈ ಗುಣಗಳನ್ನು ಬೆಳೆಸಿಕೊಳ್ಳುವವರು ಈ ಜೀವನದಲ್ಲಿಯೂ ಸುಖವನ್ನು, ಯಶಸ್ಸಿನ್ನೂ ಪಡೆಯಬಹುದೆಂದು ಆ ಕಥೆಗಳ ಮೂಲಕ ತೋರಿಸಿಕೊಟ್ಟಿದ್ದಾರೆ.[೬]

ಬೌದ್ಧ ಸಂಪ್ರದಾಯಕ್ಕೆ ಜಗತ್ತಿನ ಬಹುಜನರು ಮಣಿದಿದ್ದಾರೆ. ವರ್ಗರಹಿತ ಸಮಾಜ ರಚನೆಯನ್ನು ಸಂಕಲ್ಪಿಸಿದ ಬುದ್ಧ ಭಗವಾನರ ದೃಷ್ಟಿಕೋನ ಬುದ್ಧ ದೇವನ ನಂತರ ಅನೇಕ ಮಾರ್ಪಾಡುಗಳನ್ನು ಹೊಂದಿತು. ಬುದ್ಧನ ಲೋಕೋದ್ಧಾರಕ ಸಂದೇಶಗಳು ಶಾಸ್ತ್ರ ರೂಪವನ್ನು ತಾಳಿದವು. ಇತಿಹಾಸವನ್ನು ಮೀರಿಸಿ ಪೌರಾಣಿಕ ಪ್ರವೃತ್ತಿ ಬೆಳೆದು ಬುದ್ಧ ಅತಿಮಾನುಷ ವ್ಯಕ್ತಿಯೆಂಬ ಭಾವನೆ ಬೆಳೆಯಿತು. ಅದರ ಪರಿಣಾಮವು ಅಷ್ಟೇನೂ ಪ್ರಯೋಜನಕಾರಿಯಲ್ಲ. ಆದರೆ ಅದೊಂದು ಸಂಪ್ರದಾಯ ಬೆಳೆಯದಿದ್ದರೆ ಬುದ್ಧನವಾಣಿ ಚಿರಕಾಲ ಉಳಿಯುವುದು ಕಠಿಣವಾಗುತ್ತಿತ್ತು. ಅಲ್ಲದೆ ಅಂದಿನ ಜನರು ಅಂತಸ್ತನ್ನು ಗಮನಿಸಿದರೆ ಸಂಪ್ರದಾಯದ ಮುದ್ರೆ ಬೀಳದಿದ್ದರೆ ಅದು ಅಷ್ಟೊಂದು ಜನಪ್ರಿಯವಾಗುತ್ತಿರಲಿಲ್ಲ. ಆದುದರಿಂದ ಬುದ್ಧನ ಜೀವನ ತತ್ತ್ವಗಳನ್ನು ಆವರಿಸಿ ಭಾವನಾತ್ಮಕ ಸಾಹಿತ್ಯವೂ ವಿಪುಲವಾಗಿ ಬೆಳೆದು ಅಗಾಧವಾದ ಶಾಸ್ತ್ರರಾಶಿ ಬೆಳೆಯಿತು. ಅಂತೆಯೇ ಬುದ್ಧನ ಅವತಾರದ ವಿಷಯದಲ್ಲಿ ನೂರಾರು ದಂತಕಥೆಗಳು ಬೆಳೆದಿವೆ.

ಅವುಗಳನ್ನು ಸಂಗ್ರಹಿಸಿ ಕಾವ್ಯ ರೂಪವಿತ್ತು ಮಹಾಕವಿ ಆರ್ಯಸೂರಿ ಕ್ರಿ.ಶ. ೨ನೇ ಶತಮಾನದಲ್ಲಿ ಜಾತಕ ಕಥೆಗಳೆಂಬ ಕಾವ್ಯವನ್ನು ರಚಿಸಿದ್ದಾನೆ. ಅಲ್ಲಿ ಆಶ್ಚರ್ಯಕರ ಕಥೆಗಳು ಮನೋಜ್ಞವಾಗಿ ಹೆಣೆಯಲ್ಪಟ್ಟಿವೆ. ಈ ದೃಷ್ಟಿಯಿಂದ ಬೌದ್ಧ ಸಾಹಿತ್ಯವನ್ನು ಪರಿಶೀಲಿಸಿದಾಗ ಸಾವಿರಾರು ವರ್ಷಗಳಿಗೊಮ್ಮೆ ಒಬ್ಬೊಬ್ಬ ಬುದ್ಧರು ಅವತರಿಸುವರೆಂದು ನಮ್ಮ ಚಾರಿತ್ರಿಕ

೬. ಪೂಜ್ಯ ಶ್ರೀ ಆಚಾರ್ಯ ಬುದ್ಧರಕ್ಷಿತ (ಸಂ),ರುಕ್ಮಿಣಿ ಗಿರಿಮಾಜೆ, ಜಾತ ಮತ್ತು ಜಾತಕ ಕತೆಗಳು, ಪುಟ–xvi, xix

ಬುದ್ಧನೂ ಸಹ ಅಂತಹ ಹಲವಾರು ಮಂದಿ ಬುದ್ಧರಲ್ಲಿ ಒಬ್ಬನೆಂದೂ ಬೌದ್ಧರು ನಂಬಿದಂತೆ ಕಾಣುತ್ತದೆ. ಮಾನವನು ತನ್ನ ಸಾಧನೆಯಿಂದ ಸಿದ್ಧಿಪಡೆದ ವ್ಯಕ್ತಿಯೇ ಹೊರತು ಅದೊಂದು ಅವತಾರವಲ್ಲವೆಂದೂ ಬುದ್ಧತ್ವವು ಸಾಕ್ಷಾತ್ಕಾರದ ಸ್ಥಿತಿ. ಅದೊಂದು ಹೆಸರಲ್ಲವೆಂದೂ ಆ ಅಂತಸ್ತನ್ನು ಮುಟ್ಟಿ ಲೋಕೋದ್ಧಾರ ದೀಕ್ಷೆಯನ್ನು ಪಡೆದು ದುಡಿಯುವ ಮಹಾನುಭಾವನೆಂಬ ಹೆಸರೆಂದು ಬೌದ್ಧರ ಹೇಳಿಕೆಯಾಗಿದೆ. ಇಂತಹ ಹಲವಾರು ಬುದ್ಧರಲ್ಲಿ ದೀಪಕರನೆಂಬುವವನು ಪ್ರಸಿದ್ಧನಾದ ನಾಲ್ಕನೆಯ ಬುದ್ಧನೆಂದೂ ಕಲ್ಪಾಂತರಗಳಲ್ಲಿ ಕೌಂಡಿನ್ಯ, ಮಾಗಳ, ಸುಮನಸ್, ರೈವತ, ಶೋಭಿತ, ಅನವಮದರ್ಶಿ, ಪದ್ಮ, ನಾರದ, ಪದ್ಮೋತ್ತರ, ಸುಮೇಧ, ಸುಜಾತ, ಪ್ರಿಯದರ್ಶಿ, ಅರ್ಥದರ್ಶಿ, ಧರ್ಮದರ್ಶಿ, ಸಿದ್ಧಾರ್ಥ, ತಿಷ್ಯ, ಪುಷ್ಯ, ವಿಪಶ್ಯ, ಶಿಖಿ, ವಿಶ್ವಭೂ, ಕ್ರಕುಚಂದ, ಕನಕಮುನಿ, ಕಾಶ್ಯಪ ಮುಂತಾದ ಇಪ್ಪತ್ತಾರು ಮಂದಿ ಬುದ್ಧರಲ್ಲಿ ಇಪ್ಪತ್ನಾಲ್ಕನೆಯವನೇ ಬುದ್ಧನಾದ. ಸಿದ್ಧಾರ್ಥನೆಂದೂ ನಂತರ ಮೈತ್ರೇಯ ಮುಂತಾದವರೂ ಇದೇರೀತಿ ಬುದ್ಧರಾಗುವರೆಂದೂ ಬೌದ್ಧರ ಸಂಪ್ರದಾಯಿಕ ಕೃತಿಗಳಿಂದ ತಿಳಿದುಬರುತ್ತದೆ.[೭]

ಜಾತಕ ತಿಪಿಟಕಗಳಷ್ಟೇ ಹಳೆಯದಾದರೂ ಎಲ್ಲ ಜಾತಕ ಕಥೆಗಳೂ ಅದೇ ಕಾಲದವಲ್ಲ. ಆದರೆ ಕೆಲವಾದರೂ ತಿಪಿಟಕಗಳ ಕಾಲಕ್ಕೆ ಸೇರಿವೆ. ದೀರ್ಘ ನಿಕಾಯದ ಮಹಾವಗ್ಗದ "ಮಹಾ ಸುದಸ್ಸನ ಸುತ್ತ"ದಲ್ಲಿ ಮಹಾಸುದಸ್ಸನ ಜಾತ ಕಥೆಯ ವಸ್ತುವಿದೆ. ಅದೇ ನಿಕಾಯದ ಪಾಥಿಕ ವಗ್ಗದಲ್ಲಿ "ಅಪಣ್ಣಕ ಜಾತಕ ಕಥೆ"ಯು ಅಡಗಿದೆ. ಖುದ್ದಕ ನಿಕಾಯದ ಉದಾನದಲ್ಲಿನ ಸುಪ್ಪವಾಸ ಸುತ್ತದಲ್ಲಿ ಸುಪ್ಪವಾಸ ಜಾತಕದ ಕಥೆ ಇದೆ. ಇನ್ನೂ ಕೆಲವು ಜಾತಕ ಕಥೆಗಳನ್ನು ಸಾಂಚಿ, ಅಮರಾವತಿ ಬಬ್ರೂಸ್ತೂಪಗಳಲ್ಲಿ ಶಿಲೆಗಳ ಮೇಲೆ ಬಿಡಿಸಲಾಗಿದೆ. ಇವೆಲ್ಲಾ ಕ್ರಿ.ಪೂ. ಮೂರನೆಯ ಶತಮಾನಕ್ಕೆ ಸೇರಿದುವು. ಅಂದರೆ ಅಷ್ಟು ಹೊತ್ತಿಗೆ ಬಹು ಸಂಖ್ಯೆಯ ಜಾತಕ ಕಥೆಗಳು ಜನಪ್ರಿಯವಾಗಿ ಬಿಟ್ಟಿದ್ದವು. ಅಶೋಕ ಚಕ್ರವರ್ತಿಯು ಶ್ರೀಲಂಕೆಗೆ ಕಳುಹಿದ ಮಹಿಂದ್ರ ಮತ್ತು ಸಂಘಮಿತ್ರ ಮತ್ತು ಇತರರು ಪಾಲಿ ತಿಪಿಟಕಗಳ ಜೊತೆಗೆ ಜಾತಕ ಕಥೆಗಳನ್ನು ಪ್ರಸಾರ ಮಾಡಿದರು.[೮]

ಹಂಸ ಜಾತಕ :

ಹಿಂದೆ ಬ್ರಹ್ಮದತ್ತ ವಾರಣಾಸಿಯಲ್ಲಿ ಆಳುತ್ತಿದ್ದ. ಖೇಮ ಅವನ ಪಟ್ಟದ ರಾಣಿ. ಆಗ ಬೋಧಿಸತ್ವ ಹಂಸ ಯೋನಿಯಲ್ಲಿ ಹುಟ್ಟಿ ತೊಂಬತ್ತು ಸಾವಿರ ಹಂಸಗಳ ಒಡೆಯನಾಗಿ

---

೭. ಎಚ್. ಗಂಗಾಧರನ್, ಬುದ್ಧ ಭಗವಾನ, ಪುಟ–೭, ೮

೮. ಪೂಜ್ಯ ಶ್ರೀ ಆಚಾರ್ಯ ಬುದ್ಧಕ್ಖಿತ (ಸಂ), ರುಕ್ಮೀಣಿ ಗಿರಿಮಾಜೆ, ಜಾತ ಮತ್ತು ಜಾತಕ ಕತೆಗಳು, ಪುಟ–xvii

ಚಿತ್ರಕೂಟದಲ್ಲಿ ವಾಸವಾಗಿದ್ದ. ಆಗ ರಾಣಿ ಹೇಳಿರುವ ರೀತಿಯಲ್ಲಿಯೇ ಕನಸು ಕಂಡು, ರಾಜನೊಂದಿಗೆ ಸ್ವರ್ಣಹಂಸದಿಂದ ಧರ್ಮೋಪದೇಶ ಕೇಳಬೇಕೆಂಬ ಬಯಕೆಯನ್ನು ವ್ಯಕ್ತಪಡಿಸಿದಳು. ರಾಜ ಕೇಳಲು ಸ್ವರ್ಣಹಂಸ ಚಿತ್ರಕೂಟದಲ್ಲಿರುವುದಾಗಿ ತಿಳಿಯಿತು. ಆತ ಖೇಮ ಎಂಬ ಸರೋವರವನ್ನು ನಿರ್ಮಾಣ ಮಾಡಿಸಿ, ನಾನಾ ವಿಧವಾದ ತಿನ್ನುವ ಕಾಳುಗಳ ಬಿತ್ತನೆ ಮಾಡಿಸಿದ. ಪ್ರತಿದಿನ ಅದರ ಸುತ್ತಲೂ ಘೋಷಣೆ ಮಾಡಲಾಯಿತು. ಆಗ ಹಂಸಗಳನ್ನು ಹಿಡಿಯಲು ಒಬ್ಬ ಬೇಟೆಗಾರನಿಗೆ ಹೇಳಿದ ಆತನನ್ನು ಹೇಗೆ ನೇಮಿಸಲಾಯಿತು, ಆತ ಅಲ್ಲಿ ಹೇಗೆ ಪಕ್ಷಿಗಳನ್ನು ಹುಡುಕಾಡಿದ, ಸ್ವರ್ಣಹಂಸಗಳು ಬಂದಮೇಲೆ ರಾಜನಿಗೆ ಹೇಳಿ ಹೇಗೆ ಬಲೆ ಬೀಸಲಾಯಿತು, ಬೋಧಿಸತ್ವ ಬಲೆಯಲ್ಲಿ ಹೇಗೆ ಸಿಕ್ಕಕೊಂಡ ಹಾಗೂ ಸುಮುಖ ಹಂಸ ಸೇನಾಪತಿಯ ಮೂರು ಹಂಸ ಸಮೂಹಗಳಲ್ಲಿ ಬೋಧಿಸತ್ವನನ್ನು ಕಾಣದೆ ಹಿಂತಿರುಗುವುದು ಎಲ್ಲ ವಿಷಯಗಳು ಮಹಾಹಂಸ ಜಾತಕದಲ್ಲಿ ಬರುವುವು.[೯]

ಹಂಸ ಜಾತಕದ ಉಬ್ಬುಗೆತ್ತನೆಯ ಶಿಲಾಫಲಕ :

ಈ ಫಲಕ ಶಿಲ್ಪದಲ್ಲಿ ವಾರಣಾಸಿಯ ರಾಜ ಬ್ರಹ್ಮದತ್ತನು ಪಟ್ಟದ ರಾಣಿ ಖೇಮಳ ಸಮೇತ ಆಸನದಲ್ಲಿ ಕುಳಿತು ಬೇಟೆಗಾರನು ತಂದ ಸ್ವರ್ಣಹಂಸವನ್ನು ವೀಕ್ಷಿಸುತ್ತಿದ್ದಾನೆ. ರಾಜ-ರಾಣಿಯರ ಹಿಂದೆ ಪರಿಚಾರಿಕೆ ಚಾಮರದಿಂದ ಗಾಳಿ ಬೀಸುತ್ತ ಸ್ವರ್ಣ ಹಂಸವನ್ನು ವೀಕ್ಷಿಸುತ್ತಿರುವಂತೆ ಅವಳ ಹಿಂದೆ ಇನ್ನೊಂದು ಹಂಸ ಹಾರುತ್ತಿರುವಂತೆ ತೋರಿಸಲಾಗಿದೆ. ಬೇಟೆಗಾರನ ಪಕ್ಕ ಇನ್ನೊಂದು ಹಂಸವನ್ನು ಹಿಡಿದು ಮತ್ತೊಬ್ಬ ಬೇಟೆಗಾರ ನಿಂತಿದ್ದಾನೆ. ಬ್ರಹ್ಮದತ್ತ ರಾಜನ ಪಾದದ ಮುಂದೆ ಇನ್ನೊಂದು ಹಂಸವು ರಾಜನಿಗೆ ಏನೋ ಹೇಳುತ್ತಿರುವಂತೆ ತೋರಿಸಲಾಗಿದೆ. ಪಟ್ಟದ ರಾಣಿ ಖೇಮಳು ಕಾಲ್ಗಡಗ, ಸೊಂಟಪಟ್ಟಿ, ಕೈಬಳೆ, ಕೊರಳ ಮಣಿಹಾರ, ಕಿವಿಯೋಲೆ ಭೂಶಿತಳಾಗಿ ತನ್ನ ಎಡಗೈಯಿಂದ ಹಂಸದ ಕಡೆ ತೋರಿಸುತ್ತ ಬಲಗೈಯನ್ನು ತಾನು ಕುಳಿತಿರುವ ಪೀಠದ ಮೇಲೆ ಇಟ್ಟಿದ್ದಾಳೆ. ಬ್ರಹ್ಮದತ್ತ ರಾಜನು ಮಣೆಗಳಿಂದ ಸಿಂಗರಿಸಿದ ಪೇಠ ತಲೆಯ ಮೇಲೆ ಧರಿಸಿ ಕಿವಿಯೋಲೆ, ಕೈಗಡಗ, ಕೊರಳಹಾರ ಹಾಗೂ ಸೊಟಪಟ್ಟಿಯಿಂದ ಭೂಶಿತನಾಗಿದ್ದಾನೆ. ತನ್ನ ಒಂದು ಕೈಯನ್ನು ತೊಡೆಯಮೇಲಿಟ್ಟು, ಬಲಗೈಯಿಂದ ಬೇಟೆಗಾರನಿಗೆ ಸಂದೇಶವನ್ನು ನೀಡುತ್ತಿರುವಂತೆ ತೋರುತ್ತದೆ. ಕೆಳಗಡೆ ಹಂಸಪಕ್ಷಿಗಳ ಸಾಲು ಹೊಂದಿದ ಈ ಶಿಲ್ಪ ಹಂಸ ಜಾತಕ ಕಥಾ ನಿರೂಪಣೆಯು ನೋಡುಗನಿಗೆ ಕಥೆಯ ವಿವರಣೆ ತುಂಬಾ ಸರಳ ರೀತಿಯಲ್ಲಿ ಅರ್ಥೈಸುವಂತೆ ಸುಂದರವಾಗಿ ಉಬ್ಬುಗೆತ್ತನೆಯಿಂದ ಕಂಡರಿಸಿದ್ದಾನೆ.

---

೯. ಬಿ.ನಂ. ಚಂದ್ರಯ್ಯ (ಲೇ), ಬುದ್ಧನ ಜಾತಕ ಕಥೆಗಳು, ಸಂಪುಟ-೩, ಪುಟ-೨೦೭

ಛದ್ದಂತ ಜಾತಕ ಕಥೆ :

ಆನೆಯ ರೂಪದಲ್ಲಿರುವ ಬೋಧಿಸತ್ವ ಸಿಹಿ ಹಣ್ಣು ಹಾಗೂ ಕಮಲದ ದಂಟನ್ನು ಕಮಲದ ಎಲೆಗಳಲ್ಲಿಟ್ಟು ಐನೂರು ಮಂದಿ ಪ್ರತ್ಯೇಕ ಬುದ್ಧರಿಗೆ ಬಡಿಸುತ್ತಿರುವಾಗ ಚುಲ್ಲ-ಸುಭದ್ರೆ ತನಗೆ ದೊರೆತಿದ್ದ ಫಲಾಫಲಗಳನ್ನು ಪ್ರತ್ಯೇಕ ಬುದ್ಧರಿಗೆ ನೀಡಿ ಈಗ ನಾನು ಇಲ್ಲಿಂದ ಸತ್ತು ಮದ್ರರಾಜ ಕುಲದಲ್ಲಿ ಸುಭದ್ರೆ ಎಂಬ ರಾಜಕನ್ಯೆಯಾಗಿ ಹುಟ್ಟುವಂತಾಗಲಿ, ದೊಡ್ಡವಳಾದ ಮೇಲೆ ವಾರಣಾಸಿಯ ರಾಜನ ಪಟ್ಟ ಮಹಿಷಿಯಾಗಿ ಅವನಿಗೆ ಅತ್ಯಂತ ಪ್ರಿಯಳಾಗಿ ಅವನ ಮನಸ್ಸಿಗೆ ಹಿಡಿಸುವಂತವಳೂ ಆಗಿ ಆತ ನನ್ನಿಷ್ಟಾರ್ಥಗಳನ್ನು ಈಡೇರಿಸುವಂತಾದಾಗ ಒಬ್ಬ ಶಿಕಾರಿಯನ್ನು ಕಳುಹಿಸಿ ವಿಷಾಕ್ತ ಬಾಣದಿಂದ ಆನೆಯನ್ನು ಸೀಳಿಸಿ ಅದು ಸತ್ತ ಮೇಲೆ ಆರು ವರ್ಣಗಳ ರಶ್ಮಿಗಳನ್ನು ಸೂಸುತ್ತಿರುವ ಆನೆ ದಂತಗಳನ್ನು ತರಿಸಿಕೊಳ್ಳುವಂತಾಗಲಿ ಎಂದು ಪ್ರಾರ್ಥಿಸಿಕೊಂಡಳು.

ಅಂದಿನಿಂದ ಆನೆ ರೂಪಳಾದ ಆಕೆ ಮೇವು ತಿನ್ನುವುದನ್ನು ಬಿಟ್ಟು ಬಿಟ್ಟಳು. ಕೃಶಳಾಗಿ ಅಲ್ಪಾವಧಿಯಲ್ಲಿಯೇ ಸತ್ತು ಹೋದಳು. ಆಕೆ ಮದ್ರ ರಾಷ್ಟ್ರದ ಪಟ್ಟ ಮಹಿಷಿಯ ಗರ್ಭದಲ್ಲಿ ಜನಿಸಿದಳು. ಅವಳಿಗೆ ಸುಭದ್ರೆ ಎಂದು ಹೆಸರಿಸಲಾಯಿತು. ದೊಡ್ಡವಳಾದ ಮೇಲೆ ಅವಳನ್ನು ಬನಾರಸ್ಸಿನ ರಾಜನಿಗೆ ಕೊಟ್ಟು ಮದುವೆ ಮಾಡಲಾಯಿತು. ಆಕೆ ಅವನಿಗೆ ಅತ್ಯಂತ ಪ್ರಿಯಳಾಗಿ ಅವನ ಮನಸ್ಸಿಗೆ ಹಿತವಾಗಿ ಕಂಡಳು. ಹದಿನಾರು ಸಾವಿರ ಸ್ತ್ರೀಯರಲ್ಲಿ ಹಿರಿಯಳಾದಳು. ಅವಳಿಗೆ ಪೂರ್ವಜನ್ಮದ ಸ್ಮರಣೆ ಉಂಟಾಗಿ ನನ್ನ ಸಂಕಲ್ಪ ಪೂರೈಸಿಬಿಟ್ಟಿದೆ, ಈಗ ನಾನು ಆ ಆನೆಯ ದಂತ ಜೋಡಿಯನ್ನು ತರಿಸುತ್ತೇನೆ ಎಂದು ಯೋಚಿಸಿ ತನ್ನ ಮೈತುಂಬ ಎಣ್ಣೆ ಸವರಿಕೊಂಡು ಮಲಿನ ವಸ್ತ್ರಗಳನ್ನು ಧರಿಸಿ ರೋಗಿ ವೇಷಧರಿಸಿಕೊಂಡು ಮಂಚದ ಮೇಲೆ ಮಲಗಿಕೊಂಡಳು. ಆಗ ರಾಜನು ಪ್ರಿಯೆಲೋಕದಲ್ಲಿ ಬಯಸುವ (ಕಾಮನಾ) ವಸ್ತುಗಳೆಷ್ಟಿವೆಯೋ ಅವೆಲ್ಲವೂ ನನ್ನ ಹತ್ತಿರ ಸಾಕಷ್ಟು ಸಂಖ್ಯೆಯಲ್ಲಿವೆ. ನಾನು ನಿನ್ನ ಬಯಕೆಯನ್ನು ಈಡೇರಿಸುವೆನು ಎಂದು ಶಿಕಾರಿಗಳನ್ನು ಕರೆಸಿದನು. ಇಲ್ಲಿ ನೆರೆದಿರುವ ಶಿಕಾರಿಗಳೆಲ್ಲ ಗಮನವಿಟ್ಟು ಕೇಳಿ ಸುಭದ್ರೆ ಕನಸಿನಲ್ಲಿ ಆರು ಬಣ್ಣಗಳ ದಂತವುಳ್ಳ ಬಿಳಿಯಾನೆ ಹಲ್ಲುಗಳು ಬೇಕು. ಸಿಗದಿದ್ದರೆ ಸುಭದ್ರೆ ಜೀವಂತ ಉಳಿಯುವುದಿಲ್ಲ ಎಂದು ಆಜ್ಞಾಪಿಸುತ್ತಾನೆ. ಸೋಣುತ್ತರನೆಂಬ ಶಿಕಾರಿಯು ಆನೆಯನ್ನು ಕೊಂದು ಆರು ಬಣ್ಣಗಳುಳ್ಳ ದಂತವನ್ನು ತಂದುಕೊಡುವ ದೃಶ್ಯವನ್ನು ಕನಗನಹಳ್ಳಿ ಸ್ತೂಪದ ಫಲಕ ಶಿಲ್ಪದಲ್ಲಿ ಶಿಲ್ಪಿಸಲಾಗಿದೆ.[೧೦]

---

೧೦. ಬಿ.ನಂ. ಚಂದ್ರಯ್ಯ (ಲೇ). ಬುದ್ಧನ ಜಾತಕ ಕಥೆಗಳು, ಸಂಪುಟ-೩, ಪುಟ-೨೦೭

ಛದ್ದಂತ ಜಾತಕ ಕಥೆಯ ಸನ್ನಿವೇಶ ಶಿಲ್ಪ :

ಈ ಛದ್ದಂತ ಜಾತಕ ಸನ್ನಿವೇಶದ ಶಿಲಾಫಲಕದಲ್ಲಿ ಶಿಲ್ಪಿಯು ಉಬ್ಬುಗೆತ್ತನೆಯಲ್ಲಿ ರಚಿಸಿದ್ದಾನೆ. ಬನಾರಸ್ಸಿನ ರಾಜ ತನ್ನ ರಾಣಿಯಾದ ಸುಭದೆಯ ಜೊತೆಯಲ್ಲಿ ಆಸನದ ಮೇಲೆ ಕುಳಿತಿದ್ದು, ಸೋಣುತ್ತರನೆಂಬ ಶಿಕಾರಿ ತನ್ನ ಎರಡೂ ಕೈಯಲ್ಲಿ ಆನೆಯ ದಂತವನ್ನು ಹಿಡಿದು ನಿಂತಿದ್ದಾನೆ. ಸುಭದ್ರೆಯ ಪೂರ್ವಜನ್ಮದ ಬಯಕೆಯನ್ನು ಈಡೇರಿಸಲು ತಂದ ಆರು ಬಣ್ಣಗಳಿಂದ ಕೂಡಿದ ದಂತಗಳನ್ನುಳ್ಳ ಸರ್ವಶ್ವೇತ ಆನೆಯನ್ನು ಕೊಂದು ಸುಭದ್ರೆಯ ಆಜ್ಞೆಯಂತೆ ಆಕೆಯನ್ನು ಒಪ್ಪಿಸಲು ನಿಂತಿದ್ದಾನೆ. ಸ್ವಲ್ಪ ಹಿಂದೆ ಪರಿಚಾರಿಕೆಯೊರ್ವಳು ಒಂದು ಮಧ್ಯದ (ಸೋಮರಸದ ಪಾತ್ರೆ) ಹಿಡಿದು ನಿಂತಿರುವಂತೆ ಆಕೆಯ ಹಿಂದುಗಡೆ ಅರಮನೆಯ ಚಿತ್ರಣ ಚೈತ್ಯ ಕಿಟಕಿಗಳು ಹೀಗೆ ಬಹು ಸುಂದರವಾಗಿ ಶಿಲ್ಪಿಯು ಉಬ್ಬುಗೆತ್ತನೆಯಲ್ಲಿಯೇ ದೂರ ಸಮೀಪದ ದೃಶ್ಯವನ್ನು ರಚಿಸಿದ್ದಾನೆ. ಅವರವರ ವೇಷಭೂಷಣಗಳಲ್ಲಿಯೇ ರಾಜ, ಸುಭದ್ರೆ, ಶಿಕಾರಿ, ಪರಿಚಾರಿಕೆ ಎಂಬ ಭಿನ್ನತೆಯನ್ನು ತೋರಿಸಲಾಗಿದೆ. ರೋಗಿಯಂತೆ ನಟಿಸಿ ದುಃಖಿತಳಾಗಿರುವ ಸುಭದ್ರೆಯನ್ನು ಬನಾರಸದ ರಾಜನು ಎಡಗೈಯಿಂದ ಅವಳ ಒಂದು ಭುಜವನ್ನು ಹಿಡಿದು ಬಲಗೈಯನ್ನು ಅವಳ ಎದೆಯ ಮೇಲಿಟ್ಟು ಸಂತೈಸುತ್ತಿರುವಂತಹ ಭಾವನೆಗಳು ಆ ಶಿಲ್ಪದಲ್ಲಿ ಮೂಡಿಬದಿವೆ. ಎಲ್ಲಾ ಶಿಲ್ಪಗಳಲ್ಲೂ ಸಾಮಾನ್ಯವೆಂಬಂತೆ ಕೆಳಗಡೆಯ ಪಟ್ಟಿಕೆಯಲ್ಲಿ ಕಮಲದ ಹೂವನ್ನು ರಚಿಸಲಾಗಿದ್ದು ಈ ಶಿಲ್ಪ ಫಲಕದ ಒಂದು ಬದಿಯಲ್ಲಿರುವ ಕಂಭದ ಮೇಲೆ ರೆಕ್ಕೆ ಇರುವ ಎರಡು ಸಿಂಹಗಳು ವಿಮುಖವಾಗಿ ಕುಳಿತಿವೆ. ಕಂಭದ ಮಧ್ಯದಲ್ಲಿ ಪೂರ್ಣ ಕಮಲ, ಮೇಲು ಕೆಳಗಿನ ಬದಿಯಲ್ಲಿ ಅರ್ಧ ಕಮಲಗಳನ್ನು ತೋರಿಸಿ ಒಟ್ಟಾರೆ ಛದ್ದಂತ ಜಾತಕ ಕಥೆಯ ಒಂದು ಸನ್ನಿವೇಶವನ್ನು ಶಿಲ್ಪಿಯು ಅರ್ಥಪೂರ್ಣವಾಗಿ ರಚಿಸಿದ್ದಾನೆ.

ಕ್ರಿ.ಪೂ. ಮೂರನೇ ಶತಮಾನದಲ್ಲಿ ಬುದ್ಧ ಪರಿನಿರ್ವಾಣಗೊಂಡ ನಂತರ ನಡೆದ ಮೊದಲ ಧರ್ಮ ಕಾರ್ಯಕ್ರಮದಲ್ಲಿ ಐದುನೂರು ಬಿಕ್ಕಗಳು ಸೇರಿ ಬುದ್ಧನ ಸಿದ್ಧಾಂತ ಕುರಿತು ಚರ್ಚಿಸಿದರು. ನಂತರ ನಡೆದ ಎರಡನೇ ಧರ್ಮ ಕಾರ್ಯಕ್ರಮದಲ್ಲಿ ತ್ರಿಪಟಕಗಳನ್ನು ರಚಿಸಲಾಯಿತು. ನಂತರ ಸಾಮ್ರಾಟ ಅಶೋಕನ ಕಾಲದಲ್ಲಿ ಪಾಟಲಿಪುತ್ರದಲ್ಲಿ ನಡೆದ ನೂರನೇ ಕಾರ್ಯಕ್ರಮದಲ್ಲಿ ತ್ರಿಪಟಕಗಳ ಮೇಲೆ ವ್ಯಾಖ್ಯಾನ ನಡೆಯಿತು.

ಬುದ್ಧ ಹೇಳಿದ ಮಾತುಗಳೇ ಮೊದಲನೆಯ ಸೂಕ್ತ ಪಿಟಕದಲ್ಲಿ ಉಲ್ಲೇಖಿಸಲಾಗಿದೆ. ಪರಿಕಲ್ಪನೆ, ಆತ್ಮ, ಅನಾತ್ಮ ಕುರಿತು ವಿಶ್ಲೇಷಿಸಲಾಗಿದೆ. ಮೂರನೇ ಪಿಟಕದಲ್ಲಿ ಬಿಕ್ಕುಗಳು ಪಾಲಿಸಬೇಕಾದ ನಿಯಮಗಳ ಕುರಿತು ಪ್ರಸ್ತಾಪಿಸಲಾಗಿದೆ ಬೌದ್ಧಧರ್ಮವೂ ಪ್ರಾಚೀನ ಧರ್ಮವಾಗಿದ್ದು, ವೈಚಾರಿಕ

ಸತ್ಯದಿಂದ ಕೂಡಿದೆ. ಪಾಲಿಧರ್ಮ, ಸೂಕ್ತಧರ್ಮ, ದಾಕ್ಷಿಣಾತ್ಯಧರ್ಮ ಎಂತಲೂ ಇದಕ್ಕೆ ಕರೆಯುತ್ತಾರೆ.[೧೧]

ವೃಕ್ಷ ಆರಾಧನೆಯ ಹಿನ್ನೆಲೆ :

ಸಿಂಧೂ ಸರಸ್ವತಿ ನಾಗರಿಕತೆ (೨೬೦೦–೧೯೦೦) ಉದಯಿಸಿದ ಸ್ಥಳಗಳಲ್ಲಿ ದೊರೆತ ಮುದ್ರೆಗಳಲ್ಲಿ ಅಶ್ವತ್ಥ ಮತ್ತು ಬೇವಿನ ಮರದ ಚಿತ್ರವಿದೆ. ಆ ವೃಕ್ಷಗಳನ್ನು ಅವರು ಪೂಜಿಸುತ್ತಿದ್ದರೆಂಬ ಅಭಿಪ್ರಾಯವೂ ಇದೆ. ಒಂದು ಮುದ್ರೆಯು ಸ್ತ್ರೀ ದೇವತೆಯ ಗರ್ಭದಿಂದ ಗಿಡವೊಂದು ಬರುತ್ತಿರುವುದನ್ನು ತೋರಿಸುತ್ತದೆ. ವೃಕ್ಷಗಳಲ್ಲಿ ನೆಲೆಸಿರುವ ಶಕ್ತಿಗಳ (ಯಕ್ಷ, ದೈವ, ರಾಕ್ಷಸ, ಅಪ್ಸರ) ಆವಾಹನೆ ಮತ್ತು ಆರಾಧನೆಯನ್ನು ಅಲ್ಲಿ ಮಾಡುತಿದ್ದರೆಂದು ತಿಳಿದುಬರುತ್ತದೆ.[೧೨]

ನಂತರದ ಶತಮಾನಗಳಲ್ಲಿ ಬರುವ ದೇವಾಲಯಗಳ ವಿವಿಧ ಅಂಗಗಳನ್ನು ಸುಂದರಗೊಳಿಸಲೂ ಕೂಡಾ ಹಲವಾರು ವಿಧದ ಶಿಲ್ಪಗಳನ್ನು ರಚಿಸಿರುವುದು ನೋಡುತ್ತಾ ಬಂದಿದ್ದೇವೆ. ಇಂತಹ ಶಿಲ್ಪಗಳಲ್ಲಿ ಗಿಡ, ಮರ, ಬಳ್ಳಿಯ ಶಿಲ್ಪಗಳೂ ಕಂಡುಬರುತ್ತವೆ. ಶಮಿ, ಬಿಲ್ವ, ಅರಳೆ, ಎಕ್ಕ, ಬಿಳಿಎಕ್ಕ ಹೀಗೆ ಇನ್ನು ಹಲವಾರು ಮರಗಳು ಭಾರತೀಯರಿಗೆ ಪೂಜ್ಯನೀಯ ಮರಗಳಾಗಿವೆ. ಭಾರತದ ಪ್ರಾಚೀನ ಗ್ರಂಥಗಳಲ್ಲಿ ಸಾಹಿತ್ಯದಲ್ಲಿ ಶಿಲ್ಪಕಲಾಕೃತಿಯಲ್ಲಿ, ಇವುಗಳಿಗೆ ಮಹತ್ವದ ಸ್ಥಾನವಿದೆ. ಶಿಲ್ಪಗಳ ರಚನೆಯಲ್ಲಿ ವೃಕ್ಷಗಳನ್ನು ಬಳಸಿ ಸಂಯೋಜಿಸುವ ಪದ್ಧತಿಯು ಪ್ರಾಚೀನ ಕಾಲದಿಂದಲೂ ಪ್ರಚಲಿತದಲ್ಲಿದೆ. ಸಾಂಚಿ, ಬಾರ್ಹುತ್, ಅಮರಾವತಿ ಶಿಲ್ಪಗಳು ಈ ಮಾತಿಗೆ ಸಾಕ್ಷಿ.[೧೩] ಕೆಲವೊಂದು ಜಾತಿಯ ಗಿಡಗಳನ್ನು ಪೂಜಿಸುವುದರಿಂದ ಸ್ತ್ರೀಯರಿಗೆ ಸಂತಾನ ಭಾಗ್ಯ ಪ್ರಾಪ್ತವಾಗುತ್ತದೆ ಎಂಬುದು ಜನಪದರ ನಂಬಿಕೆಯಾಗಿದೆ. ಕೆಲವೊಂದು ಫಲಕೊಡದ ಬಳ್ಳಿಗಳಿದ್ದರೂ ಕೂಡ ಸ್ತ್ರೀಯರ ಸಾಮಿಪ್ಯದಿಂದ ಫಲವಂತಿಕೆಯನ್ನು ಹೆಚ್ಚಿಸಿಕೊಳ್ಳುತ್ತವೆ ಎಂದೂ ಕೂಡಾ ಒಂದು ನಂಬಿಕೆಯಾಗಿದೆ.

ಭಾರತೀಯರಿಗೆ ಅಶ್ವಥ ಮರವು ಬಲು ಪವಿತ್ರವಾದುದು. ದೇಗುಲದ ಆವರಣದಲ್ಲಿ ಪೂಜೆಗೆಂದು ಅಶ್ವಥ ಮರವನ್ನು ಬೆಳೆಸುತ್ತಾರೆ. ನಮ್ಮ ಪೂರ್ವಜರು ಅಶ್ವಥ ವೃಕ್ಷದಲ್ಲಿ ವಾಸವಾಗಿರುವರೆಂಬ ನಂಬುಗೆಯಿದೆ. ಅಶ್ವಥವು ಪೂಜಾವೃಕ್ಷ ಸಿದ್ಧಾರ್ಥ ಈ ಮರದ ಅಡಿಯಲ್ಲಿ ಧ್ಯಾನಮಾಡಿ ಬುದ್ಧನಾದನು. ಆದ್ದರಿಂದ ಇದು ಬೋಧಿ ವೃಕ್ಷವೆನಿಸಿದೆ. ಜ್ಞಾನ ನೀಡುವ ಗಿಡಗಳನ್ನು ಋಷಿಗಳು ಆಶ್ರಮಗಳಲ್ಲಿ ಬೆಳೆಸುತ್ತಿದ್ದರು. ಗುರುಕುಲ ಶಿಕ್ಷಣ ಪದ್ಧತಿಯಲ್ಲಿ ಈ ಗಿಡಗಳ ಕೆಳಗೆ ಗುರುಗಳು ವಿದ್ಯಾರ್ಥಿಗಳಿಗೆ ಜ್ಞಾನ ಬೋಧನೆ ಮಾಡುತ್ತಿದ್ದರು.[೧೪]

---

೧೧. ಮಲ್ಲೇಪುರಂ ಜಿ. ವೆಂಕಟೇಶ ಅವರ ಉಪನ್ಯಾಸ, ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ, ಕಲಬುರ್ಗಿ, ೨೦.೦೭.೨೦೧೨

೧೨. ಸಿ.ಎಸ್. ಶಾಸ್ತ್ರಿ, ವಿಕ್ರಮ ವಾರ ಪತ್ರಿಕೆ ಇತಿಹಾಸ ಪುರಾಣಗಳಲ್ಲಿ ವೃಕ್ಷೋಪಾಸನೆ, ೨೪.೦೫.೨೦೧೫

೧೩. ಡಾ. ಶೀಲಾಕಾಂತ ಪತ್ತಾರ, ಬಾದಾಮಿ ಚಲುಕ್ಯರ ದೇವಾಲಯಗಳ ಅಲಂಕಾರ ಶಿಲ್ಪಗಳು, ಪುಟ–೧೩೪

೧೪. ಅದೇ ಪುಸ್ತಕ, ಪುಟ–೧೩೪

ಮಹಾಭಾರತದಲ್ಲಿ ಪಾಂಡವರು ಅಜ್ಞಾತವಾಸಕ್ಕೆ ಹೋಗುವ ಮುಂಚೆ ತಮ್ಮ ಆಯುಧಗಳನ್ನೆಲ್ಲ ಶಮಿ (ಬನ್ನಿ) ವೃಕ್ಷದಲ್ಲಿ ಇಟ್ಟಿರುವುದು ಪುರಾಣಗಳಲ್ಲಿ ಉಲ್ಲೇಖವಾಗಿದೆ.

ಆದಿಮನು ಪ್ರಪ್ರಥಮವಾಗಿ ತನ್ನಿಂದ ಮಾಡಲಾಗದ ಹಾಗೂ ತನಗಿಂತ ವಿಭಿನ್ನವಾದ ತನ್ನ ವಿಚಾರ ಶಕ್ತಿಗೆ ನಿಲುಕದ ಪ್ರಾಕೃತೀಕ ಘಟನೆಗಳನ್ನು ನೋಡಿ ಬೆರಗಾಗಿ ಹಾಗೂ ಇನ್ನಾವುದೋ ತನಗಿಂತ ದೊಡ್ಡ ಶಕ್ತಿಇದೆ ಎನ್ನುವ ಹೆದರಿಕೆಯಿಂದ ಪ್ರಕೃತಿಯನ್ನು ಪೂಜಿಸತೊಡಗಿದ. ಗಾಳಿ, ಬಿಸಿಲು, ಮಳೆ, ಸಿಡಿಲು ಇವುಗಳನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಪಟ್ಟು ವಿಫಲನಾಗಿ ವಿಚಾರ ಮಾಡತೊಡಗಿದ. ಕಾಡು ಪ್ರಾಣಿಗಳು, ಪಕ್ಷಿಗಳು, ವಿಷಜಂತುಗಳು, ಕೀಟಗಳು ಎಲ್ಲವೂ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಬಹುದಾಗಿದ್ದರೂ ಈ ಪ್ರಾಕೃತೀಕ ವಿಸ್ಮಯಗಳೇಕೆ ನನ್ನ ಹಿಡಿತದಲ್ಲಿ ಸಿಗುತ್ತಿಲ್ಲ ಎನ್ನುವ ಆದಿಮಾನವನ ವಿಚಾರದ ಕೊನೆಯ ತಿರುಳೆ ಅವುಗಳಲ್ಲಿ ಮೂಡಿದಂತಹ ಭಯದೊಂದಿಗಿನ ಭಕ್ತಿ ಎಂದು ಹೇಳಬಹುದು. ಹೀಗೆ ಮೊದಲ್ಗೊಂಡ ಮಾನವ ಮತ್ತು ಪ್ರಕೃತಿಯ ನಡುವಿನ ಸಂಬಂಧವೇ ದೈವಾರಾಧನೆಗೆ ಮುನ್ನುಡಿಯಾಯಿತೆಂದು ಹೇಳಬಹುದು. ಮಳೆ, ಬಿಸಿಲು, ಬಿರುಗಾಳಿ, ಸಿಡಿಲುಗಳ ಜೊತೆಯಲ್ಲಿಯೆ ಗಿಡ, ಮರ, ಬಳ್ಳಿಗಳ ಪ್ರಾಕೃತೀಕ ಬೆಳವಣಿಗೆ ಫಲವಂತಿಕೆ ಹೂವು-ಹಣ್ಣು-ಕಾಯಿಗಳ ಬೆಳವಣಿಗೆ, ತಾನು ಬದುಕಲು ಅವುಗಳ ಅವಶ್ಯಕತೆಗಳನ್ನರಿತು ಇವು ಕೂಡಾ ಪ್ರಕೃತಿಯ ಒಂದು ಭಾಗವೇ ಎಂದು. ಮನಗಂಡು ಗಿಡ, ಮರಗಳನ್ನು ಪೂಜಿಸಲು ಪ್ರಾರಂಭಿಸಿದ.

ಮಾನವನ ಹುಟ್ಟು ಬೆಳವಣಿಗೆ ಎಲ್ಲಾ ವನಸಿರಿಯ ಮಡಿಲಲ್ಲೇ ಗಿಡಮರಗಳ ಹಣ್ಣು-ಕಾಯಿಗಳಿಂದಲೇ ತನ್ನ ಹಸಿವನ್ನು ನಿಗಿಸಿಕೊಂಡು ಮರಗಳ ಎಲೆ, ತೊಗಟೆಗಳ ಮೂಲಕ ದೇಹ ಮುಚ್ಚುತ್ತಾ ಮರಗಳ ನೆರಳನ್ನೆ ಆಸರೆಯಾಗಿಸಿ ಮುಂದೆ ಮುಂದೆ ಸಾಗಿ ಈ ಸ್ಥಿತಿಗೆ ಬಂದಿರುವುದು ಇತಿಹಾಸ ಗಿಡಮರಗಳಿಂದ ಕೂಡಿದ ಪ್ರಕೃತಿ ಮತ್ತು ಜೀವ ಸಂಕುಲ ತಮ್ಮ ಜೀವನಕ್ಕೆ ಹೇಗೆ ಆಧಾರವಾಗಿದೆಯೆಂದು ಅರಿತ ಜನಪದರು ಅದರ ಬೆಳವಣಿಗೆಯಲ್ಲೂ ತಮ್ಮ ಸೇವಾಪಾಲನ್ನು ಕಾಣಲು ಸಾಧ್ಯವಾಯಿತು. ತಮ್ಮಂತೆಯೇ ಗಿಡಮರಗಳಿಗೂ ಜೀವವಿದೆ, ಭಾವ ಸಂವೇದನೆಯಿದೆ ಎಂಬ ತಿಳುವಳಿಕೆಯನ್ನು ಹಿಂದಿನ ಕಾಲದ ಜನರು ಹೊಂದಿದ್ದರು. ಪ್ರಕೃತಿಯಲ್ಲಿಯೇ ದೇವರನ್ನು ಕಾಣುತ್ತಿದ್ದರು. ಪ್ರಕೃತಿಯನ್ನೇ ಪೂಜಿಸುತ್ತಿದ್ದರು. ಹೀಗಾಗಿ ಜನಪದರ ಮೊದಲ ಆರಾಧ್ಯದೈವಗಳೇ ಪ್ರಕೃತಿ, ನೀರು, ಬೆಂಕಿ ಆಶನ, ವಸನ ಮತ್ತು ವಸತಿಗಳನ್ನು ಒದಗಿಸುತ್ತಿರುವ ಪ್ರಕೃತಿಯ ಮೇಲೆ ಜನಪದರಿಗೆ ಎಲ್ಲಿಲ್ಲದ ಪೂಜ್ಯಭಾವ. ಪ್ರತಿದಿನ, ಪ್ರತಿ ಕ್ಷಣಗಳನ್ನು ಪ್ರಕೃತಿಯ ಮಡಿಲಲ್ಲೇ ಸವೆಯಿಸುವ ಜನಪದರು ಸಹಜವಾಗಿಯೇ ಗಿಡಮರಗಳನ್ನು ಪೂಜಿಸಲು, ಆರಾಧಿಸಲು ಆರಂಭಿಸಿದರು.[೧೫]

೧೫. ಡಾ. ಸ.ಚಿ. ರಮೇಶ (ಸಂ), ಜಾನಪದ ಕರ್ನಾಟಕ, ಮೋಹನ್ ಎಸ್. (ಲೇ), ಜನಪದರಲ್ಲಿ ವೃಕ್ಷಾರಾಧನೆ ಪುಟ-೧೫೪,೧೫೫

ಮದುವೆ ಸಮಾರಂಭ, ಹಬ್ಬ, ಕೆಲವೊಂದು ದೇವತಾರಾಧನೆಗಳಲ್ಲಿ ತಳಿರು ತೋರಣ, ಚಪ್ಪರಗಳಿಗಾಗಿ ಮಾವು, ಬೇವು, ತೆಂಗು, ಬಾಳೆ ಇತ್ಯಾದಿ ಅನೇಕ ಗಿಡಮರಗಳ ಬಳಕೆಯು ಪ್ರಾಚೀನ ಕಾಲದಿಂದ ಇಂದಿಗೂ ನಡೆದು ಬಂದಿದೆ. ಗ್ರಾಮದೇವತೆಯ ಆವಾಹನೆ ಹಾಗೂ ಆಚರಣೆಯಲ್ಲಿ ಬೇವಿನಮರದ ಎಲೆಯನ್ನು ಬಳಸುವುದು ಕಾಣುತ್ತೇವೆ. ಯುಗಾದಿಯ ಹಬ್ಬ ಸಂದರ್ಭದಲ್ಲಿ ನೀರಿಗೆ ಬೇವಿನ ಎಲೆಯನ್ನು ಹಾಕಿ ಸ್ನಾನ ಮಾಡುವುದು, ಬೇವು ಬೆಲ್ಲವನ್ನು ಸ್ವೀಕರಿಸುವುದು ಇಂದಿಗೂ ನಾವು ಆಚರಣೆ ಮಾಡುತ್ತಾ ಬಂದಿದ್ದೇವೆ. ಉತ್ತರ ಕರ್ನಾಟಕ ಭಾಗದಲ್ಲಿ ಎಳ್ಳು ಅಮವಾಸ್ಯೆಗೆ ಹೊಲಗಳಿಗೆ ಹೋಗಿ ಬನ್ನಿ ವೃಕ್ಷದ ಕೆಳಗೆ ಚಿಕ್ಕ ಚಿಕ್ಕ ಕಲ್ಲುಗಳನ್ನಿಟ್ಟು ಪೂಜಿಸಿ ನೈವೇದ್ಯವನ್ನು ತೆಗೆದುಕೊಂಡು ಹೊಲದ ತುಂಬೆಲ್ಲ "ಚರಗ" ಹೊಡೆದು ಹೊಲದಲ್ಲಿಯೇ ಕುಳಿತು ಊಟಮಾಡಿ ಬರುವುದರಿಂದ ಬೆಳೆಯು ಚೆನ್ನಾಗಿ ಫಲಕೊಡುತ್ತದೆ ಎಂಬ ಜನಪದರ ನಂಬಿಕೆ ಇನ್ನೂ ನಡೆದು ಬರುತ್ತಿರುವ ಒಂದು ಆಚರಣೆಯಾಗಿದೆ.

ಮಾನವ ಕುಲದ ಬೆಳವಣಿಗೆಯ ಹಂತಗಳಲ್ಲಿ ಅನೇಕ ಮತಗಳು, ಭಾಷೆಗಳು, ಸಂಸ್ಕೃತಿಗಳು ಹುಟ್ಟು ಪಡೆದವು. ಈ ಎಲ್ಲಾ ಮತಗಳು, ಧರ್ಮಗಳು ಪ್ರಕೃತಿಯನ್ನು ಪವಿತ್ರತೆಯಿಂದ ಕಾಣುತ್ತಾ ಒಂದೊಂದು ಮರವನ್ನು ತಮ್ಮ ತಮ್ಮ ಮತದ ಚಿಹ್ನೆಯಾಗಿಸಿ ಸಂಕೇತವಾಗಿಸಿದವು. ಹಿಂದೂ ಧರ್ಮವು ಅಶ್ವಥ ಮರವನ್ನು ಧಾರ್ಮಿಕ ಆಚರಣೆಗಳಲ್ಲಿ ಆದಿಯಲ್ಲಿ ನಿಲ್ಲಿಸಿದಿದರೆ ಕ್ರಿಸ್ತರು ಕ್ರಿಸ್‌ಮಸ್ ಮರ (ಫಿರ್ ಜಾತಿಯಮರ)ವನ್ನು ಪವಿತ್ರ ಮರವೆಂದು ನಂಬುತ್ತಾರೆ. ಪ್ರಾಚೀನ ಕಾಲದ ರೋಮನ್ನರು ಆಲಿವ್ ಮರವನ್ನು, ಬೌದ್ಧರು ಬೋಧಿ ಮರವನ್ನು, ಗ್ರೀಕರು ಸೀಡರ್ ಹೆಸರಿನ ದೇವದಾರು ವೃಕ್ಷವನ್ನು ಪೂಜಿಸುತ್ತಾರೆ. ಭಾರತದ ಬಹುತೇಕ ಬುಡಕಟ್ಟುಗಳಲ್ಲಿ ಶೂದ್ರ ಜನಾಂಗಗಳಲ್ಲಿ ನಿಸರ್ಗದ ಪ್ರಾಣಿ, ಸಸ್ಯಗಳೇ ಅವರ ಕುಲ ಚಿಹ್ನೆಗಳಾಗಿವೆ. ಇದರಿಂದ ಆ ಎಲ್ಲಾ ಪ್ರಾಣಿ ಮರಗಳು ಪೂಜ್ಯನೀಯವಾಗಿವೆ. ದೇವಾಲಯಗಳ ಕಲ್ಪನೆ ಮೂಡುವವರೆಗೆ ಮರಗಳೇ ದೇವಾಲಯಗಳಾದವು. ಆನಂತರ ಮರಗಳ ಕೆಳಗಿನ ಒಂದು ಮೊರಡುಗಲ್ಲೇ ದೇವರ ಸಂಕೇತವಾಯಿತು.[೧೬]

ಹುಲ್ಲು, ಗಿಡ, ಮರ, ಬಳ್ಳಿಗಳಿಗೆ ಮತ್ತು ಅವುಗಳ ಉತ್ಪನ್ನಗಳಿಗೆ ಪವಿತ್ರ ಸ್ಥಾನವಿದೆ. ವೈದಿಕ ಗ್ರಂಥಗಳಲ್ಲಿ ಕಥೆ, ಕಾವ್ಯ, ಪುರಾಣಗಳಲ್ಲಿ ಅವುಗಳಿಗೆ ವಿಶೇಷ ಮಹತ್ವ ನೀಡಲಾಗಿದೆ. ಇಂತಹ ಸಸ್ಯ–ವೃಕ್ಷ, ಸಂಪತ್ತು ಪೂಜ್ಯನೀಯ ಸ್ಥಾನಗಳಿಸಿರುವುದು ಅದರ ವ್ಯವಹಾರಿಕ ಮತ್ತು ಧಾರ್ಮಿಕ ಮಹತ್ವದಿಂದಾಗಿ ಗಿಡ, ಮರಗಳು, ಹೂ, ಕಾಯಿ, ಹಣ್ಣು, ಮರಮುಟ್ಟು, ಸೌದೆ, ಎಲೆ, ಬೇರು,

೧೬. ಡಾ. ಸ.ಚಿ. ರಮೇಶ (ಸಂ), ಜಾನಪದ ಕರ್ನಾಟಕ, ಮೋಹನ್ ಎಸ್. (ಲೇ), ಜನಪದರಲ್ಲಿ ವೃಕ್ಷಾರಾಧನೆ ಪುಟ– ೧೫೪,೧೫೫

ತೊಗಟೆ, ಕೋಡುಗಳನ್ನು ನಮ್ಮ ಅನುಕೂಲಕ್ಕಾಗಿ ನೀಡುವುದು ಪ್ರತ್ಯಕ್ಷ ಪ್ರಮಾಣ. ಮರಗಳು ಮಣ್ಣಿನ ಸವೆತ, ಗಾಳಿಯ ಹೊಡೆತ, ವಾಯು ಮಾಲಿನ್ಯಗಳನ್ನು ತಪ್ಪಿಸುವುದಲ್ಲದೆ ಜಲಶೇಖರಣೆ ಮತ್ತು ಮಳೆಯ ಆಕರ್ಷಣೆಗೆ ಸಹಕಾರಿ ಆಹಾರ ಹಾಗೂ ಔಷಧಿಗಾಗಿಯೂ ನಾವು ವೃಕ್ಷ ಸಂಕುಲವನ್ನು ಅವಲಂಬಿಸಬೇಕಾಗಿದೆ. ನರ, ವಾನರ, ಪಶು, ಪಕ್ಷಿಗಳಿಗೂ, ಕ್ರಿಮಿ–ಕೀಟಗಳಿಗೂ ಮರಗಳು ವರದಾನ. ಪಶು–ಪಕ್ಷಿಗಳು ಮರಗಳ ಆಶ್ರಯ ಪಡೆಯುವಂತೆಯೇ ಹಿಂದೆ ತಪಸ್ವಿಗಳೂ ಋಷಿಮುನಿಗಳೂ ಇತಿಹಾಸದಲ್ಲಿ ಗೌತಮಬುದ್ಧ, ಮಹಾವೀರ ಮೊದಲಾದವರೂ ಮರದ ಕೆಳಗೆ ಕುಳಿತು ಧ್ಯಾನಾಸಕ್ತರಾಗಿದ್ದರು.[೧೭]

ಕ್ರಿಪೂ. ೬ನೇ ಶತಮಾನದಲ್ಲಿ ಬೌದ್ಧ–ಜೈನ ಮತಗಳ ಉದಯವಾಗುವುದರೊಂದಿಗೆ ಬೋಧಿವೃಕ್ಷ ಮತ್ತು ಸಳವೃಕ್ಷ/ಸಾಲು ಮರಗಳು ಪೂಜ್ಯನೀಯವಾದವು. ಬುದ್ಧ, ಮಹಾವೀರರಿಗೆ ಆ ವೃಕ್ಷಗಳಡಿಯಲ್ಲಿ ಜ್ಞಾನೋದಯವಾದುದರಿಂದ ಅವುಗಳು ಅವರ ಅನುಯಾಯಿಗಳಿಗೆ ಪವಿತ್ರವೂ, ಪ್ರಿಯವೂ ಆದವು. ಮರಗಳ ಮಹತ್ವವನ್ನರಿತ ಚಕ್ರವರ್ತಿ ಅಶೋಕ ಮೌರ್ಯ ನೆರಳಿಗಾಗಿ ಹಣ್ಣು ನೀಡುವ ಸಾಲು ಮರಗಳನ್ನು ರಸ್ತೆಯುದ್ಧಕ್ಕೂ ನೆಟ್ಟು ಸಂರಕ್ಷಿಸಿದ್ದ ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಹಾಗೆಯೇ ಗಿಡಮೂಲಿಕೆಗಳನ್ನು, ಪವಿತ್ರ ವೃಕ್ಷಗಳನ್ನು ಹೇರಳವಾಗಿ ಬೆಳೆಸಿದ್ದ. ಭಾರತದಿಂದ ಶ್ರೀಲಂಕಾಕ್ಕೆ ಬೋಧಿವೃಕ್ಷದ ರೆಂಬೆ/ಸಸಿಯನ್ನು ಕಳುಹಿಸಿ ಅಲ್ಲಿ ನೆಟ್ಟುಬಿಡುವ ವ್ಯವಸ್ಥೆ ಮಾಡಿದ್ದ ಅವು ಇವತ್ತಿಗೂ ಇವೆ ಎಂಬ ನಂಬಿಕೆ ಇದೆ.[೧೮]

ವೈದಿಕ ಧರ್ಮದಿಂದ ಬೌದ್ಧರು ಸ್ವೀಕಾರ ಮಾಡಿರುವ ಅರಳೆ ಮರವು ದೀರ್ಘಾಯುಷ್ಯವನ್ನು ಹೊಂದಿದ ದಿವ್ಯ ಗುಣಗಳಿಂದ ಕೂಡಿದೆ. ಅರಳೆ ಗಿಡವು ಭಾರತದ ಎಲ್ಲ ಸ್ಥಳಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ವೃಕ್ಷವಾಗಿ ಭೂಮಿಯಲ್ಲಿ ಆಳವಾದ ಬೇರುಗಳೊಂದಿಗೆ ಭದ್ರ ಅಡಿಪಾಯವನ್ನು ಹೊಂದಿದ್ದು ಕೆಲವೊಂದು ಕಡೆಗಳಲ್ಲಿ ಮಣ್ಣಿನ ಫಲವತ್ತತೆಗೆ ಅನುಗುಣವಾಗಿ ವಿಶಾಲವಾದ ರೆಂಬೆಗಳೊಂದಿಗೆ ವಿಸ್ತಾರವಾಗಿ ಬೆಳೆಯುತ್ತದೆ. ಅತ್ಯುತ್ತಮ ಔಷಧಿ ಗುಣಧರ್ಮಗಳನ್ನು ಹೊಂದಿದೆ.

ಕಮಲ (ಪದ್ಮ) :

ಬೌದ್ಧ ಹಾಗೂ ಹಿಂದೂಧರ್ಮದ ಕಲೆ ಮತ್ತು ಸಾಹಿತ್ಯದಲ್ಲಿ ಕಮಲ ಪುಷ್ಪದ ಸ್ಥಾನ ಪವಿತ್ರ ಹಾಗೂ ಶ್ರೇಷ್ಠತೆಯ ಸ್ಥಾನವಾಗಿದೆ. ಪ್ರಸ್ತುತದಲ್ಲಿಯೂ ಕೂಡ ಭಾರತದ ರಾಷ್ಟ್ರೀಯ ಪುಷ್ಪವೆಂಬ ಮನ್ನಣೆಯಿದೆ. ಪ್ರಾಚೀನ ಕಲೆಯಲ್ಲಿ ಈ ಹೂವು ಸೌಂದರ್ಯ, ಪಾವಿತ್ರ್ಯ, ಚೈತನ್ಯ, ಕೋಮಲ ಹಾಗೂ ಶುಭ್ರತೆಯ ಸಂಕೇತವಾಗಿ ಮೂಡಿಬಂದಿದೆ. ಪುರಾಣ ಕಥೆಗಳಲ್ಲಿ ಪದ್ಮವು ವಿಷ್ಣುವಿನ

೧೭. ಸಿ.ಎಸ್. ಶಾಸ್ತ್ರಿ, ವಿಕ್ರಮ ವಾರ ಪತ್ರಿಕೆ ಇತಿಹಾಸ ಪುರಾಣಗಳಲ್ಲಿ ವೃಕ್ಷೋಪಾಸನೆ, ೨೪.೦೫.೨೦೧೫, ಪುಟ–೧೩

೧೮. ಅದೇ ಪತ್ರಿಕೆ, ಪುಟ–೧೩

ನಾಭಿಯಿಂದ ಉದಯಿಸಿ ಬ್ರಹ್ಮನಿಗೆ ಪೀಠವಾಗಿ, ಲಕ್ಷ್ಮಿಯ ಪೀಠ ಹಾಗೂ ಕರಭೂಷಣವಾಗಿ, ಬಿಳಿಯ ತಾವರೆ ಹೂವು ಸರಸ್ವತಿಯ ಆಸನವಾಗಿ ಅನೇಕ ಪೌರಾಣಿಕ ಸನ್ನಿವೇಶಗಳಲ್ಲಿ ಮೂಡಿಬಂದಿದೆ. ಯೋಗ ಸೂತ್ರಗಳಲ್ಲಿಯೂ ಕೂಡ ಯೋಗಾಸನದ ಒಂದು ಆಸನಕ್ಕೆ ಪದ್ಮಾಸನವೆಂಬ ಹೆಸರಿನ ಬಳಕೆಯು ಪ್ರಾಚೀನ ಕಾಲದಿಂದಲೂ ಮುಂದುವರಿದಿದೆ.

ಕಮಲ ಪತ್ರವು ವಿರಕ್ತಿಯನ್ನು ಸಂಕೇತಿಸುತ್ತದೆ. ಸಂಪತ್ತಿನ, ಸಮೃದ್ಧಿಯ ಸಂಕೇತವೂ ಹೌದು.[೧೯] ಹಾಗಾಗಿ ಹೂವಿನ ಕೆತ್ತನೆಯನ್ನು ಸ್ತೂಪ ಹಾಗೂ ದೇವಾಲಯಗಳಲ್ಲೂ ವಿಪುಲವಾಗಿ ಕಾಣಬಹುದು. ಈ ಪುಷ್ಪವು ವೃತ್ತಾಕಾರವಾಗಿದ್ದು ತಿಳಿಗೆಂಪು ಬಣ್ಣದಿಂದ ಮನೋಹರವಾಗಿ ನೋಡುಗನ ಮನಸ್ಸನ್ನು ಸೆಳೆಯುವಂತಿರುತ್ತದೆ. ಇದಕ್ಕೆ ಸಾವಿರ ದಳಗಳಿವೆ ಎಂಬ ಪೌರಾಣಿಕ ಪ್ರತೀತಿಯೂ ಕೂಡ ಇದೆ. ಫಲವಂತಿಕೆಯನ್ನು ಅನುಗ್ರಹಿಸುತ್ತದೆಂಬ ನಂಬಿಕೆ ಇದೆ.

ಅತಿ ಪ್ರಾಚೀನ ಕಮಲ ಪುಷ್ಪಗಳನ್ನು ಬೌದ್ಧಕಲೆಯಲ್ಲಿ ಕಾಣುತ್ತೇವೆ. ಇವು ಪೂರ್ಣಕುಂಭದ ಭಾಗವಾಗಿ ಶಿಲ್ಪಿತವಾಗಿವೆ. ಅಮರಾವತಿ ಶಿಲ್ಪಗಳಲ್ಲಿ ಕಮಲ ಪೂರ್ಣಘಟದ ಅಂಗವಾಗಿ ಪ್ರಕಟಗೊಂಡಿದೆ. ಗುಪ್ತರ ವಾಸ್ತು ನಿರ್ಮಾಣಗಳಲ್ಲಿ ಈ ಬಗೆಯ ಅಲಂಕರಣವನ್ನು ಕಾಣುತ್ತೇವೆ.[೨೦]

ಪಂಕಜಾಕ್ಷ ಎಂದರೆ ಕಮಲದಂಥಹ ಕಣ್ಣುಳ್ಳವನು ಎಂದಾಗಿ ವಿಷ್ಣುವಿನ ಹೆಸರುಗಳಲ್ಲೊಂದಾಗಿದೆ. ಇತ್ತೀಚಿನ ಸಂಶೋಧನೆಗಳ ಪ್ರಕಾರ ಪ್ರಪಂಚದಲ್ಲಿ ಸುಮಾರು ೨,೦೦,೦೦೦ ಜಾತಿಯ ಹೂಗಳಿವೆ ಎಂಬುದು ಸಂಶೋಧಕರ ಅಭಿಪ್ರಾಯವಾಗಿದೆ. ಕನಗನಹಳ್ಳಿ ಸ್ತೂಪಶಿಲ್ಪಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಕಂಡುಬರುವ ಕಮಲ ಪುಷ್ಪದ ಉಬ್ಬುಗೆತ್ತನೆಯು ನಂತರದ ಶತಮಾನಗಳಲ್ಲಿ ಬಂದಂತಹ ಚಾಲುಕ್ಯ ಶಿಲ್ಪಕಲೆಯಲ್ಲಿ ಇನ್ನೂ ವೈವಿಧ್ಯತೆಯಿಂದ ಕಂಡುಬರುತ್ತವೆ.

ಕನಗನಹಳ್ಳಿ ಸ್ತೂಪಶಿಲ್ಪಗಳಲ್ಲಿ ಕಂಡುಬರುವ ಪ್ರಾಣಿ ಶಿಲ್ಪಗಳು : ದೀರ್ಘ ಚತುರಸ್ರಾಕಾರದ ಮಲಗಿಸಿದ ಕಲ್ಲು ಚಪ್ಪಡಿಗಳ ಹೊರ ಮುಖದಲ್ಲಿ ಸಂಚಾರಿ ಪ್ರಾಣಿ ಶಿಲ್ಪಗಳು, ಕಾಲ್ಪನಿಕ ಮತ್ತು ನೈಜ ಎರಡೂ ರೀತಿಯ ಪ್ರಾಣಿ ಶಿಲ್ಪಗಳು ಉಬ್ಬುಗೆತ್ತನೆಯಲ್ಲಿವೆ. ಆನೆ, ಕುದುರೆ, ಜಿಂಕೆ, ಗೂಳಿ, ಸಿಂಹ ಮುನುಷ್ಯನ ಮುಖದ ಸಿಂಹ, ರೆಕ್ಕೆಗಳುಳ್ಳ ಸಿಂಹ, ಬಾಲದ ತುದಿ ಕತ್ತಿಯಂತಿರುವ ಸಿಂಹ ಇತ್ಯಾದಿ ಪ್ರಾಣಿಗಳು ನೈಜ ಶೀವಿಯಲ್ಲಿ ಕಂಡರಸಲ್ಪಟ್ಟಿವೆ. ಈ ರೀತಿಯ ಶಿಲ್ಪಗಳು ಗಾಂಧಾರದ ಗ್ರೀಕೋ-ರೋಮನ್ ಶೈಲಿಯ ಚಿತ್ರ ನಿರೂಪಣೆಯನ್ನು ನೆನಪಿಗೆ ತರುವುದಲ್ಲದೆ ಸನ್ನತಿಯ ಶಿಲ್ಪಕಲೆಯ ಮೇಲೆ ಗಾಂಧಾರ ಶಿಲ್ಪಕಲೆ ಪ್ರಭಾವವಿತ್ತೆಂಬ ಅಂಶವನ್ನು ನಿರೂಪಿಸುತ್ತವೆ.[೨೧]

---

೧೯. ಡಾ. ಶೀಲಾಕಾಂತ ಪತ್ತಾರ, ಬಾದಾಮಿ ಚಲುಕ್ಯರ ದೇವಾಲಯಗಳ ಅಲಂಕಾರ ಶಿಲ್ಪಗಳು, ಪುಟ-೧೩೬

೨೦ ಅದೇ ಪುಸ್ತಕ

೨೧. ಡಾ. ಆರ್. ಗೋಪಾಲ್ (ಸಂ), ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಡಾ. ಎಂ. ಎಸ್. ಕೃಷ್ಣಮೂರ್ತಿ (ಲೇ), ಸನ್ನತಿ ಬೌದ್ಧಧರ್ಮ ಒಂದು ವಿವೇಚನೆ, ಪುಟ-೧೪೫

ಕನಗನಹಳ್ಳಿಯ ಸ್ತೂಪ ಶಿಲ್ಪಗಳು

ಕನಗನಹಳ್ಳಿಯ ಮಹಾ ಸ್ತೂಪದಲ್ಲಿ ಮೇಲೆ ಹೇಳಿರುವಂತಹ ಪ್ರಾಣಿ ಆಕೃತಿಗಳನ್ನು ಶಿಲ್ಪಗಳಲ್ಲಿ ವಿಪುಲವಾಗಿ ಬಳಸಿಕೊಂಡಿದ್ದಾರೆ. ಮೇಲೆ ತಿಳಿಸಿರುವ ಪ್ರಾಣಿಗಳಲ್ಲದೆ ಒಂಟೆ ಮತ್ತು ಹಂದಿ (ವರಹ)ಯನ್ನು ಕೂಡ ಬಳಸಿದ್ದಾರೆ. ಜಾತಕ ಕಥೆ ಹಾಗೂ ದಾನ ಶಿಲ್ಪಗಳಲ್ಲಿ ಈ ಎಲ್ಲಾ ಪ್ರಾಣಿಗಳು ಪುನರಾವರ್ತನೆಗೊಂಡರೂ ವರಹ ಮಾತ್ರ ಎಲ್ಲೂ ಪುನರಾವರ್ತನೆಗೊಂಡಿಲ್ಲ. ಒಂದೇ ಸಾಲಿನಲ್ಲಿ ಎಲ್ಲಾ ಪ್ರಾಣಿಗಳು ಒಂದರಹಿಂದೆ ಒಂದು ಹೋಗುತ್ತಿರುವಂತೆ ರಚಿಸಿದ ಈ ಶಿಲ್ಪಗಳಲ್ಲಿ ರೆಕ್ಕೆಯುಳ್ಳ ಸಿಂಹದ ಹಿಂದೆ ಹಂದಿಯು ನೆಲವನ್ನು ನೋಡುತ್ತ ಹೊರಟಿದೆ. ಹಂದಿಯ ಹಿಂದುಗಡೆ ಒಂದು ಆನೆಯು ಬಾಲವನ್ನು ಮೇಲೆತ್ತಿ ಓರೆಗಣ್ಣಿನಿಂದ ಹಿಂದಿನ ಪ್ರಾಣಿಗಳನ್ನು ಗಮನಿಸುತ್ತಿರುವಂತೆ ಶಿಲ್ಪಿಯು ಕಂಡರಿಸಿದ್ದಾನೆ. ಇದರ ಹಿಂದುಗಡೆ ಒಂದು ಗೂಳಿ ಅದರ ಹಿಂದುಗಡೆ ಆನೆ ಹೀಗೆ ಒಂದರ ಹಿಂದೊಂದರಂತೆ ಶಿಲ್ಪಿಯು ಬಹು ನೈಜರೂಪ ಈ ಪ್ರಾಣಿ ಶಿಲ್ಪಗಳಿಗೆ ತಂದು ಕೊಡುವಲ್ಲಿ ಯಶಸ್ವಿಯಾಗಿದ್ದಾನೆ. ಫಲಕ ಶಿಲ್ಪಗಳಿಗಿಂತಲೂ ಈ ಪ್ರಾಣಿ ಶಿಲ್ಪಗಳು ಹೆಚ್ಚು ಪ್ರೌಢಿಮೆಯಿಂದ ಕೂಡಿವೆ ಎಂದು ಹೇಳಬಹುದು.

ಇನ್ನೊಂದು ಚತುರಸ್ರಾಕಾರದ (ತೊಲೆಯಾಕಾರದ) ಕಲ್ಲಿನ ಮೇಲೆ ಎರಡು ಒಂಟೆ ಶಿಲ್ಪಗಳಲ್ಲಿ ಮುಂದಿರುವ ಒಂಟೆಯು ಮುಂದೆ ಚಲಿಸುತ್ತ ತನ್ನ ಕತ್ತನ್ನು ಪೂರ್ಣ ಹಿಂದಕ್ಕೆ ತಿರುಗಿಸಿ ಹಿಂದಿನ ಒಂಟೆಯನ್ನು ನೋಡುತ್ತಿದೆ. ಹಿಂದಿರುವ ಒಂಟೆಯು ಮುಂದಿನದನ್ನು ನೋಡುತ್ತ ಚಲನೆಯಿಲ್ಲದೆ ನಿಂತಿದೆ. ಏಕೆ ನೀನು ನನ್ನ ಹಿಂದೆ ಬರುತ್ತಿಲ್ಲ ಎನ್ನುವಂತೆ ಪ್ರಾಣಿಗಳ ಭಾವನೆಯನ್ನು ಶಿಲ್ಪಿಯಾದವನು ಕಂಡರಿಸಿದ್ದಾನೆ. ಶಿಲ್ಪಿಯು ಪ್ರಾಣಿಗಳ ನೈಜ ಬಾಹ್ಯ ರೂಪವನ್ನಷ್ಟೆ ಅಲ್ಲದೆ ಪ್ರಾಣಿಗಳ ಆಂತರ್ಯದಲ್ಲಿ ವ್ಯಕ್ತವಾಗುವಂತಹ ಭಾವನೆಗಳು ಬಿಂಬಿತವಾಗುವಂತೆ ಶಿಲ್ಪ ರಚಿಸುವಲ್ಲಿ ಯಶಸ್ವಿಯಾಗಿದ್ದಾನೆ. ಈ ಪ್ರಾಣಿ ಶಿಲ್ಪಗಳಲ್ಲಿ ಕೆಲವೊಂದು ಪ್ರಾಣಿಗಳು ನಿಧಾನವಾಗಿ ಚಲಿಸುವಂತಿದ್ದರೆ ಇನ್ನೂ ಕೆಲವು ಪ್ರಾಣಿಗಳು ಓಡುತ್ತಿರುವಂತೆಯೂ ರಚಿಸಿದ್ದಾರೆ. ರೆಕ್ಕೆಯುಳ್ಳ ಜಿಂಕೆಯು ಮುಂದಿನ ಎರಡೂ ಕಾಲುಗಳನ್ನು ಮೇಲಕ್ಕೆತ್ತಿ ಹಿಂದಿನ ಕಾಲುಗಳನ್ನೂರಿ ಹಿಂದೆ ಇರುವ ರೆಕ್ಕೆಯುಳ್ಳ ಸಿಂಹವನ್ನು ನೋಡುತ್ತ ಮುಂದೆ ಜಿಗಿಯಲೆತ್ನಿಸುತ್ತಿದೆ.

ಆನೆಗಳು :

ಆನೆ ಭೂಮಿಯ ಮೇಲೆ ಮಾನವನು ಕಂಡ ಬಲು ದೊಡ್ಡ ಪ್ರಾಣಿ. ಅದು ಬಲಶಾಲಿ ಪ್ರಾಣಿ ಕೂಡ. ತನ್ನ ವಿಲಕ್ಷಣ ಮುಖ, ಗಂಭೀರ ನಡಿಗೆಯಿಂದಾಗಿ ಆನೆಯು ವ್ಯಾಪಕವಾಗಿ ಶಿಲ್ಪಗಳಲ್ಲಿ ಕಾಣಿಸಿಕೊಂಡಿದೆ. ಅದು ರಾಜಶಕ್ತಿ ಪ್ರತಿಷ್ಠೆ ಹಾಗೂ ಗೌರವಗಳ ಸಂಕೇತವಾಗಿ ಬಳಕೆಯಾಗಿದೆ. ಭಾರತೀಯ ಶಿಲ್ಪಕಲೆಯಲ್ಲಿ ಆನೆಗೆ ಮಹತ್ವದ ಹಾಗೂ ವಿಶಿಷ್ಟವಾದ ಸ್ಥಾನವಿದೆ.[೨೨]

---

೨೨. ಶೀಲಾಕಾಂತ ಪತ್ತಾರ, ಬಾದಾಮಿ ಚಲುಕ್ಯರ ದೇವಾಲಯಗಳ ಅಲಂಕಾರ ಶಿಲ್ಪಗಳು, ಪುಟ-೧೧೧

ಕನಗನಹಳ್ಳಿಯ ಸ್ತೂಪ ಶಿಲ್ಪಗಳು

ಕನಗನಹಳ್ಳಿ ಸ್ತೂಪದಲ್ಲಿ ಆನೆಯ ಶಿಲ್ಪಗಳನ್ನು ದೈವತ್ವದ ಕಲ್ಪನಾ ರೂಪವಾಗಿ, ಸಾಂಕೇತಿಕವಾಗಿ, ಜಾತಕ ಕಥೆಗಳಲ್ಲಿ, ಬುದ್ಧನ ಜನನಕ್ಕೆ ಸಂಬಂಧಿಸಿದ ಶಿಲ್ಪಗಳಲ್ಲಿ ಹಾಗೂ ಫಲಕ ಶಿಲ್ಪಗಳ ಅಲಂಕರಣೆಗಳಲ್ಲಿ ಹೀಗೆ ನಾನಾ ವಿಧವಾಗಿ ಶಿಲ್ಪಿಯು ಬಳಸಿಕೊಂಡಿದ್ದಾನೆ. ಜಾತಕ ಕಥೆಯ ಫಲಕದ ಬದಿಯ ಒಂದು ಕಂಬದಲ್ಲಿ ಕೆತ್ತಲಾದ ಆನೆಯ ಒಂದು ಶಿಲ್ಪವು ಮುಂದಿನ ಭಾಗ ಮಾತ್ರ ಆನೆಯದಾಗಿದ್ದು ಹಿಂದಿನ ಭಾಗ ಮೀನಿನ ಅರ್ಧದೇಹ ಕಂಡರಿಸಲಾಗಿದೆ. ಸ್ತೂಪ ಆವರಣದ ಶಿಲ್ಪಗಳಲ್ಲಿ ಅದರಲ್ಲೂ ಪ್ರಾಣಿ ಶಿಲ್ಪಗಳಲ್ಲಿ ಇದು ವಿಶೇಷ ಗಮನ ಸೆಳೆಯುತ್ತದೆ. ಉಬ್ಬುಗೆತ್ತನೆಯ ಶಿಲಾಫಲಕಗಳೆಲ್ಲದರಲ್ಲೂ ಕಂಡುಬರುವ ಒಂದು ಬದಿ ಕಂಬದ ಮೇಲೆ ಪ್ರಾಣಿಗಳ ಕೆತ್ತನೆ ಮಾಡಲಾಗಿದೆ. ಕೆಲವೊಂದು ಬಾರಿ ಎರಡು ಪ್ರಾಣಿಗಳು ವಿಮುಖವಾಗಿ ಕುಳಿತಿರುವಂತೆಯೂ, ಇನ್ನೂ ಕೆಲವು ಬಾರಿ ಒಂದೆ ಪ್ರಾಣಿ ಕುಳಿತಿರುವಂತೆಯೂ ರಚಿಸಲಾಗಿದ್ದು ಶಿಲ್ಪಿಯ ಸಂಯೋಜನಾ ಚಾತುರ್ಯವನ್ನು ನಾವು ಕಾಣಬಹುದು. ಉಬ್ಬುಗೆತ್ತನೆಯ ಎಲ್ಲಾ ಶಿಲಾಫಲಕಗಳು ಎಡಬದಿ ಅಥವಾ ಬಲಬದಿ ಹೀಗೆ ಯಾವುದಾದರೊಂದು ಬದಿಯಲ್ಲಿ ಮಾತ್ರ ಕಂಬವು ಕಂಡುಬರುತ್ತದೆ. ಕಾರಣವೇನೆಂದರೆ ಒಂದು ಶಿಲಾಫಲಕದ ಬಲಬದಿ ಕಂಬದ ಉಬ್ಬುಗೆತ್ತನೆಯನ್ನು ರಚಿಸಿದರೆ ಎಡಗಡೆಗೆ ಇನ್ನೊಂದು ಶಿಲಾ ಫಲಕದ ಕಂಬದ ಅರ್ಧಭಾಗವು ಅದಕ್ಕೆ ಜೊಡಣೆಯಾಗುತ್ತದೆ. ಮನೆಯ ಬಾಗಿಲಿನ ಎರಡೂ ಪಟ್ಟಿಕೆಗಳು ಮುಚ್ಚಿದಾಗ ಹೇಗೆ ಜೊಡಣೆಯಾಗುತ್ತವೋ ಹಾಗೇ ಸ್ತೂಪಕ್ಕೆ ಈ ಶಿಲಾಫಲಕಗಳು ಜೊಡಿಸುವಾಗ ಒಂದರ ಪಕ್ಕದಲ್ಲಿ ಒಂದು ಹೊಂದಿಕೊಂಡಂತೆ ಶಿಲ್ಪಿಯಾದವನು ಈ ಸ್ತೂಪದಲ್ಲಿ ಬಳಸಿರುವ ಸುಣ್ಣ ಶಿಲೆಯನ್ನು ಹೆಚ್ಚಾಗಿ ಕಟ್ಟಿಗೆಯ ಜೊಡ (ಗುಸಿ ಜೊಡಣೆ)ಣೆಯ ಮಾದರಿಯಲ್ಲಿ ಬಳಸಿದ್ದಾನೆ. ಈ ಮೊದಲೆ ಚರ್ಚಿಸಿರುವಂತೆ ಆನೆಯ ದೇಹ ಮೀನಿನ ಬಾಲದ ರೀತಿಯಲ್ಲಿ ಮುಂದಿನ ಭಾಗ ಸಿಂಹದ್ದು ಹಾಗೂ ಹಿಂದಿನ ಅರ್ಧದೇಹ ಮೀನಿನದಾಗಿರುವ ರೀತಿಯಲ್ಲಿ ಇನ್ನೊಂದು ಫಲಕ ಶಿಲ್ಪದ ಕಂಬದ ಮೇಲೆ ಕಂಡುಬರುತ್ತದೆ. ಈ ಫಲಕವು ತುಂಬಾ ಛಿದ್ರಗೊಂಡು ಅವಶೇಷಗಳು ಬೇರೆ ಬೇರೆಯಾಗಿವೆ. ಈ ರೀತಿಯಾಗಿ ಉಬ್ಬುಗೆತ್ತನೆಯ ಶಿಲಾಫಲಕದ ಬದಿಯ ಕಂಬದ ಮೇಲೆ ಇನ್ನೂ ಅನೇಕ ಪ್ರಾಣಿಗಳು ಕಂಡುಬರುತ್ತವೆ. ವಿಮುಖವಾಗಿ ಕುಳಿತಿರುವ ಸಿಂಹ, ಆನೆ, ಜಿಂಕೆ, ರೆಕ್ಕೆಯುಳ್ಳ ಸಿಂಹ ಹಾಗೂ ವಿಶೇಷವಾಗಿ ಒಂದು ಕಂಬದ ಮೇಲೆ ಒಬ್ಬನು ಕುಳಿತಿರುವ ಸಿಂಹದ ಹಿಂಬದಿಯಲ್ಲಿ ಅದರ ಕೊರಳಲ್ಲಿ ಕಟ್ಟಿರುವ ಹಗ್ಗದ ತುದಿಯನ್ನು ಹಿಡಿದುಕೊಂಡು ಮೊಳಕಾಲೂರಿ ಕುಳಿತಂತೆ, ಸಿಂಹವು ಕತ್ತನ್ನು ಪೂರ್ತಿ ಹಿಂದಕ್ಕೆ ತಿರುಗಿಸಿ ಹಗ್ಗದ ತುದಿ ಹಿಡಿದಿರುವ ಮನುಷ್ಯನನ್ನು ನೋಡಿ ಸಿಟ್ಟಿನಿಂದ ಹೊಂಕರಿಸುವಂತೆ ಉಬ್ಬುಗೆತ್ತನೆಯಲ್ಲಿ ಬಹು ಸುಂದರವಾಗಿ ತೋರಿಸಲಾಗಿದೆ.

ಒಟ್ಟಾರೆ ಈ ಸ್ತೂಪಶಿಲ್ಪಗಳಲ್ಲಿ ಆನೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ. ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಆನೆಯ ಉಬ್ಬುಶಿಲ್ಪಗಳು ಕಂಡುಬರುತ್ತವೆ ಮನುಷ್ಯನು ಸಂಘಜೀವಿ ಎನ್ನುತ್ತೇವೆ ತಮ್ಮ ಬಂಧುಮಿತ್ರರ ಜೊತೆ ಮನುಷ್ಯ ಸಂಭಾಷಣೆ ನಡೆಸಿ ಸಹಕಾರ ನಡೆಸುತ್ತಾನೆ. ಈ ವಿಚಾರದಲ್ಲಿ ಪ್ರಾಣಿಗಳೂ ಹೊರತಲ್ಲ. ಇತ್ತೀಚೆಗೆ ನಡೆದ ಸಂಶೋಧನೆಯೊಂದರ ಪ್ರಕಾರ ಆನೆಗಳೂ ತಮ್ಮಲ್ಲಿಯೇ ಸಂಭಾಷಣೆ ನಡೆಸುತ್ತವೆಯಂತೆ. ಅವುಗಳದೇ ಆದ ಕೂಗು, ಚಲನವಲನಗಳ ಮೂಲಕ ಮಾತನಾಡಿಕೊಳ್ಳುತ್ತವೆ. ಆನೆಗಳು ಸಾಧಾರಣವಾಗಿ ಗುಂಪುಗಳಲ್ಲಿಯೇ ಇರುತ್ತವೆ. ಈ ಸಂದರ್ಭದಲ್ಲಿ ಅವು ಪ್ರತಿಯೊಂದು ವಿಚಾರದ ಬಗ್ಗೆಯೂ ಪರಸ್ಪರ ಸಂಭಾಷಣೆ ನಡೆಸಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತವೆ. ತಮ್ಮದೇ ಸಮಾಜವನ್ನು ಮಾಡಿಕೊಂಡು ಅದರ ನಿಯಮಾವಳಿಗಳಂತೆ ನಡೆದುಕೊಳ್ಳುತ್ತವೆ. ನೀರಿರುವ ಪ್ರದೇಶಕ್ಕೆ ಆನೆಗಳು ಬಂದಾಗ ಎಲ್ಲಿ ಅಪಾಯ ಇದೆ ಎಂದು ಅವುಗಳಿಗೆ ಭೂಮಿಯಲ್ಲಾಗುವ ಕಂಪನಗಳಿಂದ ಗೊತ್ತಾಗುತ್ತದೆ. ತಕ್ಷಣವೇ ಉಳಿದ ಆನೆಗಳಿಗೆ ಅಪಾಯದ ಸೂಚನೆಗಳನ್ನು ನೀಡುತ್ತವೆ ಎಂದು ವಾಷಿಂಗ್ಟನ್ ಬರಹಗಾರ್ತಿ ಕ್ಯಾಥಲಿನ್ ಒಕೊನೆಲ್ ರೊಡ್ ವೆಲ್ ಪಿಎಚ್.ಡಿ. ಪ್ರಬಂಧ ಮಂಡಿಸಿದ್ದಾರೆ.

ಸಾಮಾನ್ಯವಾಗಿ ಹೆಣ್ಣಾನೆಗಳು ಮತ್ತು ಮರಿಗಳು ಒಟ್ಟಾಗಿಯೇ ಇರುತ್ತವೆ. ೧೨–೧೫ ವರ್ಷದ ಗಂಡಾನೆಗಳು ತಮ್ಮದೇ ಗುಂಪು ರಚಿಸಿಕೊಳ್ಳುತ್ತವೆ. ಆನೆಗಳು ಸಂವಹನ ನಡೆಸುವಾಗ ಸಾಮಾನ್ಯವಾಗಿ ಮೂರು ಆನೆಗಳಾದರೂ ಇರುತ್ತವೆ ಎಂದು ಅಧ್ಯಯನ ಹೇಳಿದೆ.[೨೩]

ಶಿಲ್ಪದಲ್ಲಿ ಪ್ರಾಣಿಗಳ ಚಿತ್ರಣವು ಹರಪ್ಪ ಸಂಸ್ಕೃತಿಯಷ್ಟು ಪ್ರಾಚೀನವಾದುದು. ಆ ಕಾಲದ ಟೆರಕೋಟಾ ಮೂರ್ತಿಗಳಲ್ಲಿ ಮುದ್ರಿಕೆಗಳಲ್ಲಿ ಪ್ರಾಣಿಗಳು ಮೂಡಿಬಂದಿವೆ. ಬುದ್ಧನನ್ನು ಆನೆಯ ರೂಪದಲ್ಲಿ ರಾಣಿ ಮಾಯಾದೇವಿಯ ಗರ್ಭ ಪ್ರವೇಶಿಸುವುದನ್ನು ತೋರಿಸಲಾಗಿದೆ. ಕ್ರಿ.ಪೂ. ೨ನೇ ಶತಮಾನದ ಈ ಚಿತ್ರಣವು ಭಾರ್ಹುತ್ ಸ್ತೂಪದಲ್ಲಿದೆ. ಅಜಂತಾ, ಎಲ್ಲೋರಾ, ಮಹಾಬಲಿಪುರಂ ಶಿಲ್ಪಗಳಲ್ಲಿ ಹಲವಾರು ಬಗೆಯ ಪ್ರಾಣಿಗಳು ಕಾಣಿಸಿಕೊಂಡಿವೆ. ಸಣ್ಣ ಮತ್ತು ದೊಡ್ಡ ಜೀವಿಗಳನ್ನು ಕಲ್ಲಿನಲ್ಲಿ ಕೊರೆಯುವುದರ ಮೂಲಕ ಶಿಲ್ಪಕ್ಕೆ ಚೆಲುವಿನ ಸಂಸ್ಕಾರ ನೀಡಿದ್ದಾರೆ. ಜೊತೆಗೆ ರೂವಾರಿಗಳು ಆ ಪ್ರಾಣಿ–ಪಕ್ಷಿಗಳ ಗುಣ ವಿಶೇಷವನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ.[೨೪]

ಕ್ರಿಸ್ತ ಶತಕಾರಂಭದಲ್ಲಿಯೇ ರಚನೆಗೊಂಡಂತಹ ಕನಗನಹಳ್ಳಿಯ ಸ್ತೂಪದ ಶಿಲ್ಪಗಳಲ್ಲಿ ಈ ತರಹದ ಎಲ್ಲಾ ಪ್ರಾಣಿಗಳನ್ನು ಪವಿತ್ರ ಸ್ತೂಪದ ಅಲಂಕಾರಕ್ಕಾಗಿ ಬಳಸಿರುವುದರ ಹಿಂದಿನ

೨೩. ವಿಜಯವಾಣಿ, ಕನ್ನಡ ದಿನಪತ್ರಿಕೆ, ಕಲಬುರ್ಗಿ ೪.೧೦.೨೦೧೨

೨೪. ಡಾ. ಶೀಲಾಕಾಂತ ಪತ್ತಾರ, ಬಾದಾಮಿ ಚಲುಕ್ಯರ ದೇವಾಲಯಗಳ ಅಲಂಕಾರ ಶಿಲ್ಪಗಳು, ಪುಟ–೧೧೦

ಉದ್ದೇಶವು ನಮಗೆ ಸಾಂಕೇತಿಕವಾಗಿ ಗೋಚರಿಸುವುದೇನೆಂದರೆ ಅತ್ಯಂತ ಕ್ರೂರ ಪ್ರಾಣಿಗಳಾದ ಸಿಂಹ, ಹುಲಿ ಹಾಗೂ ಅತ್ಯಂತ ಬಲಶಾಲಿ ಪ್ರಾಣಿಯಾದ ಆನೆ ಮತ್ತು ಮನುಷ್ಯನ ಸರ್ವತೋಮುಖ ಬೆಳವಣಿಗೆಗೆ ಉಪಯುಕ್ತವಾದಂತಹ ಗೂಳಿ, ಕುದುರೆ, ಕೋಮಲತೆಯ ಸಂಕೇತವಾಗಿ ಜಿಂಕೆ, ಪರೋಪಕಾರಿ ಮತ್ತು ಸಾಧು ಪ್ರಾಣಿಯಾದಂತ ಒಂಟೆ, ಸ್ವಚ್ಛತೆಯ ಸಂಕೇತವಾಗಿ ಹಂದಿ ಹೀಗೆ ಇವುಗಳನ್ನು ಕೆಲವೊಮ್ಮೆ ರೆಕ್ಕೆ ಜೋಡಿಸಿ ಕೆಲವೊಂದು ಪ್ರಾಣಿಗಳಿಗೆ ಮನುಷ್ಯನ ಮುಖದಿಂದ ಸಂಯೋಜಿಸಿ ತೋರಿಸಿರುವುದರ ಉದ್ದೇಶ ಎಲ್ಲ ಶಕ್ತಿಗಳು ಎಲ್ಲ ಆಕೃತಿಗಳು ಇಲ್ಲಿ ಸರಿಸಮಾನವಾಗಿ ಕಾಣುವ ಉದ್ದೇಶವಿತ್ತೆಂದು ತಿಳಿದುಬರುತ್ತದೆ.

ಈ ಭೂಮಿಯ ಮೇಲೆ ವಿವಿಧ ವರ್ಣದ ಜನರು ವಿವಿಧ, ಭಾಷೆ, ವಿವಿಧ ಕಾರ್ಯದಕ್ಷತೆಯನ್ನು ಹೊಂದಿದ್ದರು. ಎಲ್ಲರೂ ಮನುಷ್ಯರೆ, ಎಲ್ಲರೂ ಸಮಾನರು ಎಂದು ಸಾರಿಸಾರಿ ಹೇಳುವ ಪ್ರಯತ್ನದ ಪ್ರತಿರೂಪಗಳೇ ಈ ಶಿಲ್ಪಗಳೆಂದು ನಾವು ವಿವೇಚಿಸಬೇಕಾದ ಅಂಶಗಳಲ್ಲೊಂದಾಗಿರುತ್ತದೆ. ಅಂದಿನ ಶಿಲ್ಪಗಳು ಇಂದಿನ ಸಾಮಾಜಿಕ ಅಸಮತೋಲನ ಚಟುವಟಿಕೆಗಳಿಗೂ ಸಮತೋಲನದ ಪಾಠವೆನಿಸುತ್ತವೆ.

ಬುದ್ಧನ ಜನನಕಥಾನಕದ ಉಬ್ಬು ಶಿಲ್ಪಗಳು









ನಲಗಿರಿ ಆನೆಯ ದಮನ



● ಛದ್ದಂತ ಜಾತಕದ ಉಬ್ಬುಶಿಲ್ಪ



● ಹಂಸಜಾತಕದ ಉಬ್ಬುಶಿಲ್ಪ



● ಮಹಾಕಪಿ ಜಾತಕದ ಉಬ್ಬುಶಿಲ್ಪ

ಸೃಜನಾತ್ಮಕ ಸಂಯೋಜನೆಯ ಪ್ರಾಣಿ ಉಬ್ಬು ಶಿಲ್ಪಗಳು









• ಅಪರೂಪದ ಹಂದಿಯ ಉಬ್ಬುಶಿಲ್ಪ



ಹಂಸ ಪಕ್ಷಿಯ ಉಬುಶಿಲ್ಪ





ಸೃಜನಾತ್ಮಕ ಸಂಯೋಜನೆಯ ಪ್ರಾಣಿ ಶಿಲ್ಪಗಳು

ಸೃಜನಾತ್ಮಕ ಸಂಯೋಜನೆಯ ಪ್ರಾಣಿ ಶಿಲ್ಪಗಳು







ಅಧ್ಯಾಯ – ಐದು

ನಾಗಮುಚ್ಛಲಿಂದ ಪಾದುಕೆ ಮತ್ತು ಯಕ್ಷ ಶಿಲ್ಪಗಳು

ಅಧ್ಯಾಯ – ಐದು

ನಾಗಮುಚ್ಛಲಿಂದ ಪಾದುಕೆ ಮತ್ತು ಯಕ್ಷ ಶಿಲ್ಪಗಳು

ನಾಗಮುಚ್ಛಲಿಂದ ಶಿಲ್ಪಗಳು :

ಬುದ್ಧ ತಪಸ್ಸಿನಲ್ಲಿದ್ದಾಗ, ಮುಚ್ಛಲಿಂದನೆಂಬ ನಾಗಾ ಅರಸನು ಬುದ್ಧನಿಗೆ ಬಿಸಿಲು, ಮಳೆ ಬೀಳದ ಹಾಗೆ ರಕ್ಷಣೆ ಕಲ್ಪಿಸಿದನಂತೆ. ಈ ಭಾವವನ್ನು ಒಬ್ಬ ಶಿಲ್ಪಿ ಏಳು ಹೆಡೆಗಳ ನಾಗರಹಾವು ಬುದ್ಧನನ್ನು ಆವರಿಸಿಕೊಂಡು ತನ್ನ ಹೆಡೆಗಳನ್ನು ಬುದ್ಧನ ಸುತ್ತಲೂ ತಿರುಗಿಸುತ್ತಾ ಬಿಸಿಲು, ಮಳೆ ತಾಗದ ಹಾಗೆ ದ್ಯಾನಕ್ಕೆ ಭಂಗಬರದಂತೆ[೧] ಊಹಿಸಿಕೊಂಡು ಕೆತ್ತಿರುವ ಶಿಲ್ಪಗಳೆ ಈ ನಾಗಮುಚ್ಛಲಿಂದ ಶಿಲ್ಪಗಳೆಂದು ಕರೆಯಲ್ಪಡುತ್ತವೆ.

ಕೃಷ್ಣ, ಗೋದಾವರಿ ಪ್ರದೇಶಗಳಲ್ಲಿ ಅನಾದಿಯಿಂದಲೂ ನಾಗಗಳು ವಾಸವಾಗಿದ್ದ ವಿಷಯವು ಪ್ರಾಚೀನ ಇತಿಹಾಸದಿಂದ ತಿಳಿದುಕೊಳ್ಳಬಹುದಾದರೂ ಅದಕ್ಕೆ ಉದಾಹರಣೆ ಎಂಬಂತೆ ಈ ಕೃಷ್ಣ, ಗೋದಾವರಿ ಪ್ರದೇಶದ ಜನರು ನಾಗಗಳ ಶಿಲ್ಪಗಳನ್ನು ಪೂಜಿಸುವುದು, ನಾಗರ ಹುತ್ತಗಳಿಗೆ ನಾಗಪಂಚಮಿಯಂದು ವಿಶೇಷ ರೀತಿಯಿಂದ ಹಾಲೆರೆದು ಪೂಜಿಸುವುದು ಇಂದಿಗೂ ನಡೆದುಬಂದಿರುವ ಒಂದು ಅಪೂರ್ವ ಜಾನಪದೀಯ ಆಚರಣೆಯಾಗಿದೆ.

ಪ್ರಾಚೀನ ಕಾಲದಲ್ಲಿ ಆರ್ಯರ ವರ್ಣಬೇಧಗಳು ಇವರಲ್ಲಿರಲಿಲ್ಲ. ಆದ್ದರಿಂದ ಆದಿಯಲ್ಲಿಯೇ ಇವರು ಸಮಾನತೆಯನ್ನು ಬೋಧಿಸಿದ ಬೌದ್ಧಮತವನ್ನು ಸ್ವೀಕರಿಸಿದರು. ಹಾಗೂ ಮೌರ್ಯ

೧. ಮಲ್ಲೇಪುರಂ ಜಿ. ವೆಂಕಟೇಶ (ಸಂ), ದ್ರಾವಿಡ ಅಧ್ಯಯನ, ಸಿ. ವೆಂಕಟೇಶ (ಲೇ), ಆಂಧ್ರರ ಪ್ರಾಚೀನತೆ, ಪುಟ–೧೧೦

ಸಾಮ್ರಾಟ ಅಶೋಕನಿಗಿಂತಲೂ ಮೊದಲೇ ಆಂದ್ರದ ನಾಗಾ ಅರಸರು, ನಾಗಾ ಪ್ರಜೆಗಳು ಬೌದ್ಧ ಸ್ತೂಪಗಳನ್ನು ನಿರ್ಮಿಸಲಾರಂಭಿಸಿದರೆಂದು ಇತಿಹಾಸದಿಂದ ತಿಳಿದುಬರುತ್ತದೆ.. ಭಾರತ ದೇಶದ ಪ್ರಾಚೀನರು ಹಾಗೂ ಬೌದ್ಧ ಜಾತಕ ಕಥೆಗಳು ಕೃಷ್ಣ, ಗೋದಾವರಿ ಪ್ರದೇಶವನ್ನು ವಜ್ರ ಪ್ರದೇಶವೆಂದೂ, ನಾಗಭೂಮಿಯೆಂದೂ, ಮಂಜಿರ ದೇಶವೆಂದೂ ವರ್ಣಿಸಿವೆ. ಅಮರಾವತಿ ಸ್ತೂಪವನ್ನು ನಾಗಾಜನಾಂಗದ ನಾಗಾಶೋಕನು ನಿರ್ಮಿಸಿದನೆಂದು ಇತಿಹಾಸದಿಂದ ತಿಳಿದುಬರುತ್ತದೆ.[೨] ಭಾರತದ ಅನೇಕ ಪುರಾಣ ಮತ್ತು ಇತಿಹಾಸಗಳಲ್ಲಿ ನಾಗದೇವತೆಗೆ ವಿಶೇಷ ಸ್ಥಾನವಿದೆ. ಹಾಗೂ ಅನೇಕ ಗ್ರಂಥಗಳಲ್ಲಿ ಕೂಡ ಉಲ್ಲೇಸಿರುವ ನಿದರ್ಶನಗಳಿವೆ. ಮಹಾಭಾರತದ ಕೃಷ್ಣನ ಬಾಲಲೀಲೆಗಳಲ್ಲೊಂದಾದ ಕಳಿಂಗ ಮರ್ಧನ, ದುರ್ಯೋಧನನು ಭೀಮನಿಗೆ ವಿಷವನ್ನು ಕುಡಿಸಿ ಸಮುದ್ರಕ್ಕೆ ತಳ್ಳಿದಾಗ ಪಾತಾಳದ ನಾಗಲೋಕದಲ್ಲಿ ಭೀಮನು ಅಮೃತವನ್ನು ಕುಡಿದು ಮರಳಿ ಬರುವ ಸನ್ನಿವೇಶ ಮಹಾಭಾರತದ ಪರೀಕ್ಷಿತನ ಕಥೆ, ಜನಮೇಜಯನ ಸರ್ಪಯಾಗ, ಸಮುದ್ರ ಮಂಥನದಂತಹ ಸನ್ನಿವೇಶದಲ್ಲಿ ವಾಸುಕಿ ಎಂಬ ಹಾವಿನ ಪಾತ್ರವೇ ವಿಶೇಷವಾಗಿದೆ.

ಶಾಕ್ತ, ಶೈವ, ಬೌದ್ಧ, ಜೈನ ಇತ್ಯಾದಿ ಎಲ್ಲಾ ಧರ್ಮಗಳ ಸಂಪ್ರದಾಯಗಳಲ್ಲೂ ನಾಗದೇವತೆಗಳ ಮೂರ್ತಿಶಿಲ್ಪ ವಿವಿಧ ರೂಪಗಳಲ್ಲಿ ಕಂಡುಬರುತ್ತವೆ. ಗ್ರೀಸ್, ರೋಮ್ ಇತ್ಯಾದಿ ಪ್ರಾಚೀನ ನಾಗರೀಕತೆಯುಳ್ಳ ಸಂಪ್ರದಾಯಗಳಲ್ಲಿ ವಿವಿಧ ರೂಪಗಳಲ್ಲಿ ನಾಗದೇವತಗೆಳನ್ನು ಕಂಡರಿಸಿದ್ದಾರೆ. ನಾಗದೇವತೆಯ ಮೂರ್ತಿ ಲಕ್ಷಣಗಳು ಕಾಶ್ಯಪ ಸಂಹಿತೆ, ನಿಷ್ಕಳಾಂಶೇಷು, ಶಿಲ್ಪ ದರ್ಪಣ ಇತ್ಯಾದಿ ಗ್ರಂಥಗಳಲ್ಲೂ ಸಹ ವಿವರವಾಗಿ ಉಲ್ಲೇಖಿಸಲಾಗಿದೆ.

ಪುರಾತನರಿಗೆ ದೃಶ್ಯ ವಿಶ್ವವು ಆದಿಯಲ್ಲಿ ಸರ್ಪ ರೂಪದಲ್ಲಿ ಕಂಡಿತ್ತೆಂದು ಹೇಳಲಾಗುತ್ತದೆ. ಇಡೀ ಭೂಮಂಡಲವೆ ಆದಿಶೇಷನ (ನಾಗ) ತಲೆಯ ಮೇಲೆ ನಿಂತಿದೆ ಎಂದು ಪುರಾಣಗಳಿಂದ ತಿಳಿದುಬರುತ್ತದೆ. ಹರಪ್ಪ, ಮೊಹೆಂಜೋದಾರುಗಳಂತಹ ಪ್ರಾಚೀನ ಸಂಸ್ಕೃತಿಯಲ್ಲಿಯೂ ಪ್ರಕೃತಿಯ ಪೂಜೆಯ ಜೊತೆಗೆ ನಾಗಪೂಜೆಯೂ ಮಾಡುತಿದ್ದರು. ಅವರು ಬಳಸಿದಂತಹ ಅನೇಕ ಮಣ್ಣಿನ ಮಡಿಕೆ, ಕುಡಿಕೆಗಳ ಮೇಲೂ ಹಾವಿನ ಚಿತ್ರಗಳು ಕಂಡುಬಂದಿವೆ.

ಪ್ರಸ್ತುತ ಕನಗನಹಳ್ಳಿಯ ಸ್ತೂಪದಲ್ಲಿಯೂ ಕೂಡ ನಾಗಮುಚಲಿಂದ ಶಿಲ್ಪಗಳು ಬಹಳಷ್ಟು ಕಂಡುಬರುತ್ತವೆ.

"ಆಂಗೋರ್" ಅಂದರೆ ನಾಗ ಮತ್ತು ವಾಟ್ ಅಂದರೆ ದೇವಾಲಯ. ಹೀಗಾಗಿ ಇದು ನಾಗರ ದೇವಾಲಯ ಆಗಿರಬಹುದೇನೋ ಎಂದು ವಿದ್ವಾಂಸರ ಅಭಿಮತ. ಸುಮಾರು ೨೫

೨. ಮಲ್ಲೇಪುರಂ ಜಿ. ವೆಂಕಟೇಶ (ಸಂ), ದ್ರಾವಿಡ ಅಧ್ಯಯನ, ಸಿ. ವೆಂಕಟೇಶ (ಲೇ), ಆಂಧ್ರದ ಪ್ರಾಚೀನತೆ, ಪುಟ-೧೧೦

ಸಾವಿರ ಶಿಲ್ಪಿಗಳು ೩೭ ವರ್ಷಗಳ ಕೆಲಸಮಾಡಿ ನಿರ್ಮಿಸಿದ ಆಂಗೋರ್‌ವಾಟ್ ದೇವಾಲಯ ಪ್ರಾಚೀನ ಹಿಂದೂ ಮತ್ತು ದ್ರಾವಿಡ ಸಂಸ್ಕೃತಿಯ ಪ್ರತೀಕಗಳು. ಈಜಿಪ್ಟಿನ ಪಿರಮಿಡ್‌ನಷ್ಟೇ ಬೃಹತ್ತಾದದ್ದು ಇದನ್ನು ೧೨ನೇ ಶತಮಾನದಲ್ಲಿ ಎರಡನೇ ಸೂರ್ಯವರ್ಮನು ಕಟ್ಟಿಸಿದನು. ಕಾಂಬೋಡಿಯಾದ ಮೂಲ ನಿವಾಸಿಗಳು ನಾಗಾ ಜನರು ಇದನ್ನು ಮೊದಲು ಕಂಪೂಚಿಯಾ ಅನ್ನುತ್ತಿದ್ದರು.

ಭಾರತದಿಂದ ವಲಸೆ ಹೋದ ಶಿಲ್ಪಿಗಳು ತಮ್ಮ ಜತೆ ವೇದಗಳು, ಮಹಾಭಾರತ, ರಾಮಾಯಣ ಜೊತೆಯಲ್ಲೇ ನೃತ್ಯ, ಸಂಸ್ಕೃತಿಯನ್ನು ಒಯ್ದರಂತೆ. ಆದ್ದರಿಂದಲೆ ಇಲ್ಲಿಯ ಶಿಲ್ಪಗಳಲ್ಲಿ ಭಾರತದ ಪುರಾಣಗಳ ಸನ್ನಿವೇಶಗಳು ಕಂಡುಬರುವುದು ಪ್ರಸ್ತುತವಾಗಿದೆ. ಬಹುಶಃ ಕಲೆಗೆ ದೇಶ ಭಾಷೆಗಳ ಹಂಗಿಲ್ಲವೆಂದು ಇಂತಹ ಉದಾಹರಣೆಗಳಿಂದಲೇ ಹೇಳಬಹುದು. ಈ ರೀತಿಯ ಪುರಾಣೇತಿಹಾಸಗಳನ್ನು ಹೊಂದಿದ ನಾಗ ಶಿಲ್ಪಗಳು ಕನಗನಹಳ್ಳಿಯ ಸ್ತೂಪದಲ್ಲಿಯೂ ಕಂಡುಬರುತ್ತವೆ.[೩]

ನಾಗಮುಚ್ಚಲಿಂದವು ಬುದ್ಧನ ಸಾಂಕೇತಿಕ ರಚನೆಯ ಮುಖ್ಯ ವಸ್ತು. ಇದರಲ್ಲಿ ಐದು ಹೆಡೆಯ ಸರ್ಪವು ಹೆಡೆದೆರೆದು ಸಮಾನಾಂತರ ಸುರುಳಿಗಳಾಗಿ ಕುಳಿತಂತೆ ಬಿಂಬಿಸಲಾಗಿರುತ್ತದೆ. ನಾಮುಚ್ಚಲಿಂದ ಬುದ್ಧ ಕಥನಗಳಲ್ಲಿ ಬಿಂಬಿತವಾಗಿರುವಂತೆ, ಬುದ್ಧನ ತಪಸ್ಸಿನ ಕಾಲದಲ್ಲಿ ನಿರಂತರವಾಗಿ ಏಳುದಿನ ಗಾಳಿ, ಮಳೆ, ಬಿಸಿಲಿನಿಂದ ತನ್ನ ಹೆಡೆಗಳ ಬುಡದಲ್ಲಿ ಅವನನ್ನು ರಕ್ಷಿಸಿತ್ತು. ಅಲ್ಲದೆ ಬುದ್ಧನ ಹಿಂದಿನ ಜನ್ಮದಲ್ಲಿ ಅಂದರೆ ಅವನ ಬೋಧಿಸತ್ವ ಜೀವನದಲ್ಲಿ ಪಾತಾಳಲೋಕದ ರಾಮ ಗ್ರಾಮದ ಸರ್ಪಗಳೊಂದಿಗೆ ಅವಿನಾಭಾವ ಸಂಬಂಧವಿತ್ತು. ಹೀಗಾಗಿ ನಾಗಮುಚ್ಚಲಿಂದದ ಪರಿಕಲ್ಪನೆ ದೃಶ್ಯರೂಪದಲ್ಲಿ ಬಹುವಾಗಿ ಬಿಂಬಿತವಾಗಿದೆ. ಕೆತ್ತನೆಯೂ ಕೂಡಾ ಸಾಕಷ್ಟು ನೈಜತೆಯನ್ನು ನಾವು ಕಾಣಬಹುದು.[೪]

ನಾಗಮುಚ್ಚಲಿಂದನ ಬಹಳಷ್ಟು ಶಿಲ್ಪಗಳು ವೈವಿಧ್ಯಮಯವಾಗಿ ಕನಗನಹಳ್ಳಿ ಸ್ತೂಪದ ಶಿಲ್ಪಗಳು ಹಾಗೂ ಸ್ತೂಪದ ಮಾದರಿಗಳ ರಕ್ಷಣಾ ಶಿಲ್ಪಗಳಾಗಿ ರಚಿಸಿದಂತಹ ಶಿಲ್ಪಗಳು, ಎರಡೂ ರೀತಿಯಲ್ಲಿ ಕಂಡುಬರುತ್ತವೆ. ಕನಗನಹಳ್ಳಿ ಸ್ತೂಪಾವಶೇಷಗಳಲ್ಲಿ ಒಂಬತ್ತು ಹೆಡೆಯುಳ್ಳ (ಮುಖ) ನಾಗಶಿಲ್ಪ ಕಂಡುಬರುತ್ತದೆ. ಈ ಶಿಲ್ಪವು ಎಡ ಮತ್ತು ಬಲಗಳಲ್ಲಿ ಎರಡೆರಡು ಸುರುಳಿಗಳನ್ನು ಹೊಂದಿ ಮಧ್ಯದಲ್ಲಿ ಒಂದು ಸುರುಳಿಯಿಂದ ಹೆಡೆಎತ್ತಿ ತನ್ನ ಒಂಬತ್ತೂ ಮುಖಗಳನ್ನು

---

೩. ಕೆ. ತಾರಾಭಟ್, ಪ್ರಜಾವಾಣಿ ಕನ್ನಡ ದಿನಪತ್ರಿಕೆ, ಸಾಪ್ತಾಹಿಕ ಪುರಾವಣಿ, ಕಲೆ, ಕ್ರೌರ್ಯ ಮತ್ತು ಕಾಂಬೊಡಿಯಾ, ೨೯.೦೧.೨೦೧೨

೪. ಡಾ. ಎಚ್.ಎಸ್. ಗೋಪಾಲರಾವ್ (ಸಂ), ಸುವರ್ಣ ಕರ್ನಾಟಕ ಶಿಲ್ಪಕಲಾ ಮಾಲೆ, ಡಾ. ಆರ್.ಎಚ್. ಕುಲಕರ್ಣಿ (ಲೇ), ಕರ್ನಾಟಕ ಆರಂಭಿಕ ಶಿಲ್ಪಕಲೆ, ಪುಟ-೨೨,೨೩

ಪುಷ್ಪಾಕಾರದಲ್ಲಿ ಬಿಚ್ಚಿ ನಿಂತಿದೆ. ಎದೆಯ ಭಾಗಕ್ಕೆ ಮಣಿಗಳಿಂದ ಕೂಡಿದ ವಿಶೇಷಾಲಂಕೃತ ಆಭರಣವನ್ನು ಹೊಂದಿದೆ. ಶಿಲಾಫಲಕದ ಮೇಲೆ ಮೂಡಿಬಂದಿರುವ ಈ ಆಕೃತಿ ನೈಜತೆಯಿಂದ ಕೂಡಿದೆ ಎಂದು ಹೇಳಬಹುದು. ಹಾವಿನ ಚರ್ಮದ ಮೇಲೆ ಕೊರೆದಿರುವ ರೇಖೆಗಳನ್ನು ಗಮನಿಸಿದರೆ ಶಿಲ್ಪಿಯ ಕುಶಲತೆ ಮತ್ತು ತಾಳ್ಮೆಯ ಆಳವನ್ನು ತೋರಿಸುವಂತಿದೆ. ಸ್ತೂಪ ಆವರಣದಲ್ಲಿರುವ ಇನ್ನೊಂದು ನಾಗಶಿಲ್ಪ ತುಂಡು ತುಂಡಾಗಿದ್ದು ಮೊದಲಿನ ಶಿಲ್ಪಕ್ಕಿಂತಲೂ ಈ ಶಿಲ್ಪವು ಹೆಚ್ಚು ಉಬ್ಬುಗೆತ್ತನೆಯಿಂದ ಕೂಡಿ ಎಡ–ಬಲಗಳಲ್ಲಿ ಮೂರು ಮೂರು ಸುರುಳಿಯಾಗಿ, ಮಧ್ಯದ ಸುರುಳಿಯಿಂದ ಐದು ಹೆಡೆಯನ್ನು ಬಿಚ್ಚಿ ನಿಂತಿದೆ. ಈ ಹಾವಿನ ಚರ್ಮವೂ ಕೂಡಾ ಬಹು ನೈಜತೆಗೆ ಹತ್ತಿರವಾಗಿ ರಚಿಸಿದ್ದಾಗಿದ್ದು, ಬಲಕ್ಕೆ ರಚಿಸಲಾದ ಕಂಬದಲ್ಲಿ ಪರಿಚಾರಿಕೆಯೊಬ್ಬಳು ಬಲಗೈಯಲ್ಲಿ ಪುಷ್ಪವನ್ನು ಹಿಡಿದು ಎಡಗೈ ಸೊಂಟದ ಮೇಲಿರಿಸಿದ್ದಾಳೆ. ಈಕೆಯ ಕಾಲಬುಡದ ಪಟ್ಟಿಕೆಯಲ್ಲಿ ಆನೆಯೊಂದು ಮುಂದಿನ ಎರಡೂ ಕಾಲುಗಳನ್ನು ಬಾಗಿಸಿ ನಾಗನನ್ನು ವಂದಿಸುತ್ತಿರುವಂತೆ ಆನೆಯ ಹಿಂದಿನ ಭಾಗವು ಮೀನಿನ ಬಾಲದಂತೆ ಶಿಲ್ಪಿಯು ರಚಿಸಿದ್ದಾನೆ. ಇದು ಇಲ್ಲಿಯ ಶಿಲ್ಪಗಳಲ್ಲಿ ವಿಶೇಷವಾಗಿ ಕಂಡುಬರುವ ಆಕೃತಿಯಾಗಿದೆ. ಬಹುಶಃ ಆನೆಯು ಸರೋವರದಲ್ಲಿ ಮೈತೊಳೆದುಕೊಂಡು ಬಂದು ನಾಗದೇವನನ್ನು ವಂದಿಸುತ್ತಿರುವಂತೆ ಕಲಾವಿದನು ಸೃಜನಾತ್ಮಕ ಸಂಯೋಜನೆಯಲ್ಲಿ ತೋರಿಸಿರಬಹುದು. ಕಲಾವಿದನ ಯೋಚನಾ ವೈವಿಧ್ಯತೆ ಹಾಗೂ ಸೃಜನಶೀಲತೆಗಳನ್ನು ತೋರಿಸುವಂತಿದೆ.

ಇನ್ನೊಂದು ಫಲಕದಲ್ಲಿಯ ಎರಡು ನಾಗಗಳು ಸ್ತೂಪದ ಮಾದರಿಯನ್ನು ಸುತ್ತಿಕೊಂಡಂತೆ ಗಂಟುಗಂಟಾದ ಸುರುಳಿಯಿಂದ ಸ್ತೂಪ ಮಾದರಿಯ ಎಡ–ಬಲಗಳಲ್ಲಿ ಐದೈದು ಹೆಡೆಗಳನ್ನು ಬಿಚ್ಚಿ ನಿಂತಂತೆ ಶಿಲ್ಪಿಸಲಾಗಿದೆ. ಸ್ತೂಪದ ಹರ್ಮ್ಯಕ ಹಾಗೂ ಅಂಡಭಾಗಕ್ಕೆ ಸುತ್ತಿಕೊಂಡು ಎಡ–ಬಲಗಳಲ್ಲಿ ಬಾಲಗಳನ್ನು ಚಾಚಿದಂತಿವೆ. ಮೇಲೆ ಹೇಳಿದ ಹಾಗೆ ಇದೂ ಕೂಡ ತುಂಬಾ ಸೂಕ್ಷ್ಮ ಕೆತ್ತನೆಯಿಂದ ಕೂಡಿದಂತಹ ಶಿಲ್ಪವಾಗಿದೆ. ಎಡಗಡೆ ಒಬ್ಬ ನಾಗದೇವನು ಸ್ತೂಪಕ್ಕೆ ಎರಡೂ ಕೈಗಳನ್ನು ಜೊಡಿಸಿ ವಂದಿಸುತ್ತಿರುವಂತೆ ತಲೆಯ ಮೇಲೆ ವಿಶೇಷವಾದ ಅಲಂಕೃತ ಪೇಠ, ಅದರ ಮೇಲೆ ಒಂದುಹೆಡೆಯ ನಾಗ, ಕರ್ಣಾಭರಣ ಹಾಗೂ ಕೈಯಲ್ಲಿ ದಪ್ಪನೆಯ ಸುರುಳಿಯಾಕಾರದ ಕೈಗಡಗಗಳಿಂದ ಅಲಂಕೃತನಾಗಿದ್ದಾನೆ. ಹಾವುಗಳು ಸುತ್ತಿರುವ ಮಾದರಿ ಸ್ತೂಪವು ಬಹು ಅಲಂಕೃತಗೊಂಡಿದೆ.

ಇನ್ನೊಂದು ಮಾದರಿ ಸ್ತೂಪಕ್ಕೆ ಸುತ್ತಿಕೊಂಡಿರುವ ನಾಲ್ಕು ಹಾವುಗಳು ಗಂಟುಗಂಟಾಗಿ ಸುತ್ತಿಕೊಂಡಿರದೆ ಬೇರೆ ರೀತಿಯಲ್ಲಿ ಸುತ್ತಿಕೊಂಡಿರುವುದನ್ನು ಕಾಣಬಹುದು. ಇದೂ ಕೂಡ

ಅಲಂಕೃತಗೊಂಡಿರುವ ಮಾದರಿ ಸ್ತೂಪವಾಗಿದೆ. ಕಂಬದ ಮೇಲೆ ಸಿಂಹ ಸ್ತೂಪದ ಕಡೆ ಮುಖಮಾಡಿ ಕುಳಿತಿರುವ ಹಾಗೆ ತೋರಿಸಲಾಗಿದೆ. ಕಂಬದ ತಳಭಾಗ ಕಮಲ ಪೀಠದಿಂದ ಕೂಡಿ ಮಧ್ಯದಲ್ಲಿ ಕೆತ್ತಿರುವ ಹೂವು ಸೂರ್ಯಮುಖಿ ಆಚೆಚೆಗೆ ಅರ್ಧ ಕಮಲದ ಹೂವುಗಳನ್ನು ಕೆತ್ತಲಾಗಿದೆ. ಹೆಚ್ಚಾಗಿ ಕಮಲದ ಹೂವು ಕಂಡುಬರುವ ಸ್ತೂಪದ ಶಿಲ್ಪಗಳಲ್ಲಿ ಅಪರೂಪಕ್ಕೆಂಬಂತೆ ಈ ತರಹದ ಬೇರೆ ಬೇರೆ ಹೂವುಗಳು ಕಾಣಿಸಿಕೊಳ್ಳುತ್ತವೆ. ಕೆಳಗಡೆ ಸಾಲಿನಲ್ಲಿ ಹಂಸ ಪಕ್ಷಿಗಳು ಕೊಕ್ಕಿನಲ್ಲಿ ತಾವರೆಯ ಹೂವನ್ನು ಹಿಡಿದುಕೊಂಡು ಸಾಲುಸಾಲಾಗಿ ಹೋಗುತ್ತಿರುವಂತೆ ರಚಿಸಲಾಗಿದೆ. ಮೇಲೆ ಹೇಳಿದ ನಾಗಮುಚ್ಚಲಿಂದ ಶಿಲ್ಪಗಳಿಗೆ ಒಂಬತ್ತು ಹಾಗೂ ಐದು ಮುಖಗಳು ಹೊಂದಿದ್ದರೆ ಇವು ಮೂರು ಮುಖಗಳನ್ನು ಹೊಂದಿವೆ. ಮಾದರಿ ಸ್ತೂಪದ ಕೆಳಭಾಗ ಸಣ್ಣ ಕುಸುರಿ ಕೆತ್ತನೆಯಿಂದ ವಿಶೇಷವಾಗಿ ಅಲಂಕರಿಸಿದ್ದಾರೆ. ಈ ರೀತಿಯ ಇನ್ನೂ ಅನೇಕ ನಾಗಶಿಲ್ಪಗಳು ಕನಗನಹಳ್ಳಿಯ ಸ್ತೂಪಾವಶೇಶಗಳಲ್ಲಿ ಕಂಡುಬರುತ್ತವೆ.

ಬುದ್ಧನ ಪಾದದ ಸಾಂಕೇತಿಕ ಶಿಲ್ಪಗಳು :

ಕನಗನಹಳ್ಳಿ ಸ್ತೂಪದಲ್ಲಿ ಅನೇಕ ಪಾದುಕೆಯ ಶಿಲ್ಪಗಳು ಕಂಡುಬರುತ್ತವೆ. ಚೌಕಾಕಾರದ ತೆಳುವಾದ ಕಲ್ಲುಗಳ ಮೇಲೆ ಮೂಡಿಬಂದಿರುವ ಬುದ್ಧನ ಪಾದುಕೆಯ ಶಿಲ್ಪಗಳು ಅತ್ಯಂತ ಕುಸುರಿ ಕೆತ್ತನೆಯಿಂದ ಕೂಡಿ ಬಹು ಅಲಂಕೃತವಾಗಿ ಮೂಡಿಬಂದಿವೆ. ಚಚ್ಚೌಕಾಕಾರದ ಕಲ್ಲುಗಳ ಮೇಲೆ ವೃತ್ತಾಕಾರದ ಅಂಚನ್ನು ಉಳಿಸಿಕೊಂಡು ಮಧ್ಯದಲ್ಲಿ ಪಾದಗಳನ್ನು ಕೆತ್ತಲಾಗಿದೆ. ವೃತ್ತಾಕಾರದ ಅಂಚನ್ನು ಬಿಟ್ಟು ಪಾದದ ಸುತ್ತಲೂ ತಟ್ಟೆಯ ತಳಭಾಗದಂತೆ ಕಲ್ಲನ್ನು ಆಳಕ್ಕೆ ಕೊರೆದ ಭಾಗದಲ್ಲಿಯೂ ಕುಸುರಿ ಕೆತ್ತನೆ ಮಾಡಿ ಈ ಭಾಗದಲ್ಲಿ ತಾವರೆ ಹೂವುಗಳ ತೆಳು ಉಬ್ಬುಗೆತ್ತನೆ ಹಾಗೂ ಪಾದುಕೆಗಳ ಮೇಲೂ ತೆಳು ಉಬ್ಬುಗೆತ್ತನೆಯಲ್ಲಿ ಧರ್ಮಚಕ್ರ, ಸ್ವಸ್ತಿಕ, ತ್ರಿರತ್ನ, ತ್ರಿಪರ್ವತ, ಶಂಖ, ಚಕ್ರ, ವಜ್ರ ಚಿಹ್ನೆಗಳು ಕಂಡುಬರುತ್ತವೆ. ಈ ಪಾದುಕೆಗಳು ನೈಜತೆಯಿಂದ ಕೂಡಿರದೇ ಸಾಂಕೇತಿಕ ರೂಪಗಳಾಗಿ ಪಾದದ ಬೆರಳುಗಳೆಲ್ಲವೂ ಸಮಾನಾಂತರವಾಗಿ ತೋರಿಸಲಾಗಿದೆ. ಪಾದಗಳ ಮೇಲೆ ಧರ್ಮಚಕ್ರದ ಜೊತೆಗೆ ಇನ್ನೂ ಚಿಕ್ಕ ಚಿಕ್ಕ ಸುಳುವಿನ ಆಕಾರದಲ್ಲಿ ಕುಸುರಿ ಕೆತ್ತನೆ ಮಾಡಲಾಗಿದೆ. ಒಂದೇ ರೀತಿಯ ಕೆತ್ತನೆಯ ಬೇರೆ ಬೇರೆ ಅಳತೆಯವುಗಳಾಗಿ ಮೂಡಿಬಂದ ಇವು ಬುದ್ಧನ ಸಾಂಕೇತಿಕ ರೂಪವನ್ನು ಬಿಂಬಿಸುತ್ತವೆಂದು ಹೇಳಬಹುದು. ಕೆಲವೊಂದು ಪಾದುಕೆಯ ಶಿಲ್ಪಗಳಲ್ಲಿ ತಟ್ಟೆಯಾಕಾರದ ಆವರಣ ಇಲ್ಲದೆಯೂ ರಚಿಸಿ ಸುತ್ತಲೂ ತಾವರೆ ಹೂವು, ಎಲೆ, ಮೊಗ್ಗುಗಳ ಸುಳುವಿನ ತೆಳು ಉಬ್ಬು ರಚನೆಯಲ್ಲಿ ಮೂಡಿಬಂದಿವೆ. ಹಾಗೂ ಮೀನಿನ ಆಕಾರದ ಹಿಂಭಾಗವುಳ್ಳ ಮೊಸಳೆಯ ಬಾಯಿಯಿಂದ ಈ ಹೂಬಳ್ಳಿಗಳು ಹೊರಬರುತ್ತಿರುವಂತೆ

ತೋರಿಸಲಾಗಿದೆ. ಈ ಮೊಸಳೆಯ ಆಕೃತಿಯನ್ನು ನಂತರದಲ್ಲಿ ಬರುವ ಅನೇಕ ಶಿಲ್ಪ ಶೈಲಿಗಳಾದ ಚಾಲುಕ್ಯ, ಹೊಯ್ಸಳ, ವಿಜಯನಗರ, ಚೋಳ ಹೀಗೆ ಎಲ್ಲಾ ಶೈಲಿಗಳಲ್ಲಿ ಮಕರ, ವ್ಯಾಳ, ಅಲಂಕಾರಗಳೆಂದು ಇನ್ನೂ ವೈವಿಧ್ಯಮಯವಾಗಿ ದೇವಾಲಯಗಳಲ್ಲಿ ಹಾಗೂ ಮೂರ್ತಿಶಿಲ್ಪದ ಹಿಂದಿನ ಪ್ರಭಾವಳಿಗಳಲ್ಲಿ ಬಳಸಲಾಗಿದೆ. ಕೆಲವೊಂದು ದೇವಾಲಯಗಳಲ್ಲಿ ಮಕರ ತೋರಣವೆಂದೇ ವಿಶೇಷವಾಗಿ ಕೆತ್ತಿರುವುದು ಕಂಡುಬರುತ್ತದೆ. ಮೊಸಳೆ (ಮಕರ)ಯು ಜಲಚರ ಪ್ರಾಣಿಗಳ ರಾಜ. ಜೀವವನ್ನು, ಜೀವಶಕ್ತಿಯನ್ನು ನೀಡುವಂತಹದು. ಆದ್ದರಿಂದ ನೀರು ಜೀವನದ ಮೊದಲ ಆಧಾರ ತತ್ವವಾಗಿದೆ. ಈ ನೀರನ್ನು ಶುದ್ಧೀಕರಣಗೊಳಿಸುವುದರ ಮೂಲಕ ಜೀವ ಜಗತ್ತನ್ನು ಕಾಪಾಡುವ ಪ್ರಾಣಿ ಮಕರ. ಅಂತೆಯೇ ಗೀತಾಚಾರ್ಯನು ಭಗವದ್ಗೀತೆಯಲ್ಲಿ ಜಲಚರ ಪ್ರಾಣಿಗಳಲ್ಲಿ ತಾನು ಮಕರನೆಂದು ಸಾರಿದ್ದಾನೆ. ಮೊಸಳೆಯ ಶ್ರೇಷ್ಠತೆ ಮತ್ತು ಪಾವಿತ್ರ್ಯ ಇದರಿಂದ ವ್ಯಕ್ತವಾಗುತ್ತದೆ.[೫]

ಜಲ ಮತ್ತು ನೆಲ ಎರಡೂ ಕಡೆಯಲ್ಲೂ ವಾಸಿಸುವ ಉಭಯವಾಸಿ ಪ್ರಾಣಿಯಾದ ಮೊಸಳೆ ಶಿಲ್ಪವು ನಮಗೆ ಮೊದಲ ಬಾರಿ ಗೋಚರಿಸುವುದು ಬುದ್ಧಗಯಾದಲ್ಲಿ. ಅಶೋಕನು ಕ್ರಿ.ಪೂ. ೨೫೦ರಲ್ಲಿ ನಿರ್ಮಿಸಿದ ಮಹಾಬೋಧಿಯ ಕಟಕಟೆಯಲ್ಲಿ, ಬಾರಹುತ್ ಸ್ತೂಪದಲ್ಲಿ (ಕ್ರಿ.ಪೂ. ೧ನೇ ಶತಮಾನ) ಇದು ಯಕ್ಷಿಯೊಂದರ ವಾಹನವಾಗಿ ಗುಪ್ತರ ಕಾಲದಲ್ಲಿ ಗಂಗೆಯ ವಾಹನವಾಗಿ ಒಂಬತ್ತನೆಯ ತೀರ್ಥಂಕರನಾದ ಪುಷ್ಪದಂತನ ಲಾಂಛನವಾಗಿ ಜೈನಶಿಲ್ಪಕಲೆಯಲ್ಲಿಯೂ ಶಿಲ್ಪಿತವಾಗಿದೆ.[೬]

ಚಾಲುಕ್ಯರ ಅನೇಕ ದೇವಾಲಯಗಳ ಬೇರೆ ಬೇರೆ ಅಲಂಕಾರಿಕ ಶಿಲ್ಪಗಳಲ್ಲಿ ಮೊಸಳೆಯನ್ನು ಬಳಸಿದ್ದಾರೆ. ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಕಂಬದಲ್ಲಿ. ಮಕರಾರೂಢ ವರುಣನನ್ನು ಮಹಾವಿಷ್ಣು ಗ್ರಹದ ಕಂಬದ ಒಂದು ಪಾರ್ಶ್ವದಲ್ಲಿ ಮಾಲಗತ್ತಿ ಶಿವಾಲಯ ಭಿತ್ತಿಯ ಜಾಲಂದ್ರಗಳ ವಾತಾಯನದ ಮೇಲೆ ಮತ್ತು ದೇವಕೋಷ್ಠಗಳ ಮೇಲೆ ಮಕರ ತೋರಣಗಳಿವೆ. ಈ ರೀತಿ ವೈವಿಧ್ಯಮಯದಿಂದ ಮೂಡಿಬರಲು ಕರ್ನಾಟಕ ಶಿಲ್ಪಕಲೆಯ ಆರಂಭ ಕಾಲದ ಕನಗನಹಳ್ಳಿ ಸ್ತೂಪ ಶಿಲ್ಪಗಳ ಅನೇಕ ಆಕೃತಿಗಳು ಪ್ರಾಥಮಿಕ ಮತ್ತು ಮೂಲ ಪ್ರೇರಣೆಗಳಾಗಿವೆ.

ಮೂರ್ತಿ ಶಿಲ್ಪಗಳ ಆಭರಣಾಲಂಕರಣಗಳಾಗಿ ಮಕರ ಕುಂಡಲಗಳು ಮೊಸಳೆ ಆಕೃತಿಯನ್ನು ಹೊಂದಿದ ಕಿವಿಯೋಲೆ ಗಂಗರ ಶಿಲ್ಪಕಲೆಯಲ್ಲಿ ಕೂಡ ಬಳಸಿಕೊಂಡಿದ್ದಾರೆ.

---

೫. ಡಾ. ಶೀಲಾಕಾಂತ ಪತ್ತಾರ (ಲೇ), ಬಾದಾಮಿ ಚಲುಕ್ಯರ ದೇವಾಲಯಗಳ ಅಲಂಕಾರ ಶಿಲ್ಪಗಳು, ಪುಟ-೧೯೯

೬. ಅದೇ ಪುಸ್ತಕ, ಪುಟ-೧೯೯

ಯಕ್ಷ :

ಯಕ್ಷ ಕಲ್ಪನೆ ಮೂಲತಃ ಬೌದ್ಧ ಪೂರ್ವ ಯುಗಕ್ಕೆ ಸೇರುತ್ತದೆ. ರಾಮಾಯಣ, ಮಹಾಭಾರತಗಳಲ್ಲಿ ಇವರ ಪ್ರಸ್ತಾಪವಿದೆ. ದಿ. ಆನಂದಕುಮಾರ ಸ್ವಾಮಿಯವರು ಇದರ ಮೂಲವನ್ನು ಪರೀಕ್ಷಿಸಿ ಇದನ್ನು ಜಲಸೃಷ್ಟಿ ಪ್ರಪಂಚಕ್ಕೆ ಸೇರಿಸುತ್ತಾರೆ. ಅಂದರೆ ಯಕ್ಷರು ಮೂಲದಲ್ಲಿ ಜಲ ದೇವತೆಗಳು ಮತ್ತು ಇವುಗಳಿಗೆ ಯಾವ ರೂಪವು ಇದ್ದಂತೆ ಕಂಡುಬರುವುದಿಲ್ಲ. ಮುಂದೆ ಅಂದರೆ ಬೌದ್ಧಧರ್ಮದ ವಿಕಾಸದಲ್ಲಿ ಇವರು ವೃಕ್ಷದೇವತೆಗಳಾಗಿ ಕಂಡುಬರುತ್ತಾರೆ. ಆಗಲೂ ಇವರುಗಳು ಅಶ್ವಥ, ಆಮ್ರ, ಕದಂಬ ಮುಂತಾದ ವೃಕ್ಷಗಳನ್ನು ಆಶ್ರಯಿಸಿರುವಂತೆ ಪ್ರತಿಮೆಗಳು ಕಂಡುಬರುತ್ತವೆ. ಬುದ್ಧನ ಜನನದಿಂದ ಹಿಡಿದು ಅಂತ್ಯದವರೆಗೂ ಕಡೆಗೆ ಮರಣದ ನಂತರ ಆತನಿಗೆ ಸಂಬಂಧಿಸಿದ ಅಮೂಲ್ಯ ವಸ್ತುಗಳ ರಕ್ಷಣೆಗೆ ಅವರನ್ನು ಪ್ರೇರಿಸಿ ರೂಪಿಸಿದ ರೂವಾರಿಗಳು ಹೆಣ್ಣು–ಗಂಡಿನ ಸ್ವರೂಪ ಕೊಟ್ಟಿರುವುದನ್ನು ಕಾಣಬಹುದಾಗಿದೆ.

ಇಂತಹ ಮಾರ್ಪಾಟಿಗೆ ಬೌದ್ಧಧರ್ಮದಲ್ಲಿ ಉಂಟಾದ ಕ್ರಾಂತಿಕಾರಕವಾದ ಬದಲಾವಣೆಗಳೆ ಕಾನಿಷ್ಕನಿಂದ ನಿರ್ಧಾರವಾಗಿ ಅದರಿಂದ ಎಲ್ಲ ಕಲೆಗಳಿಗೂ ಆಶ್ರಯ ದೊರಕಿತು. ಇದರಿಂದ ಗಾಂಧರ ಕಲ್ಪನೆಯ ಬೌದ್ಧಶಿಲ್ಪಗಳು ವಿಕಾಸವಾಗಿ ಭಾರತೀಯ ರೂಪಗಳು ಬಂದವು. ಆಗಲೆ ಯಕ್ಷಕಲ್ಪನೆಗೆ ಒಂದು ರೂಪ ಕಂಡುಬಂದಿದೆ ಇವುಗಳ ಉಡುಗೆ–ತೊಡುಗೆಗಳನ್ನು ಗುರುತಿಸಲು ಸಾಂಚಿ, ಅಮರಾವತಿ ಮುಂತಾದ ಬೌದ್ಧಕೇಂದ್ರಗಳ ಪ್ರತಿಮೆಗಳನ್ನು ಆಧರಿಸಿ ಅವುಗಳ ಸಮರ್ಥನೆಯನ್ನು ಭಾಸ ಮತ್ತು ಕಾಳಿದಾಸರ ಕೃತಿಗಳ ಆಧಾರದಿಂದಲೂ ಪ್ರಯತ್ನಿಸಿದವರು ಪ್ರೊ. ಗುಹ್ಯೆಯವರು.

ಯಕ್ಷರನ್ನು ಕುರಿತು 'ಮಹಾಮಯೂರಿ' ಎಂಬ ಗ್ರಂಥವನ್ನು ವಿದ್ವಾಂಸರು ಗುರುತಿಸಿದ್ದಾರೆ. ಇದರ ಕಾಲವನ್ನು ಕ್ರಿ.ಶ. ಮೂರನೆಯ ಶತಮಾನಕ್ಕೆ ಸೇರಿಸಿದ್ದಾರೆ. ಇದೇ ಮಹಾಯಾನವು ಪ್ರಭಾವಿಯಾಗಿದ್ದ ಕಾಲ, ಫಾಹಿಯಾನ್ ಮತ್ತು ಹ್ಯೂಯ್ಯೆತ್ಸಾಂಗ್ ಎಂಬ ಚೀನಾದೇಶದ ಬೌದ್ಧ ಯಾತ್ರಿಕರು ರಕ್ಷಕವಾಗಿ ಪ್ರಮಾಣಿಕರಿಸಿರುವುದಲ್ಲದೆ ಶಿಲ್ಪ ಮತ್ತು ಚಿತ್ರರೂಪಗಳನ್ನು ತಾಳಿದೆ. ಆದುದರಿಂದ ಭಾರತೀಯುವಾದ ಮಹಾಯಾನ ಬೌದ್ಧ ಪಂಥದ ಪ್ರಭಾವವು ಅಸಾಧಾರಣವಾದುದೆಂದೂ ಗಾಂಧಾರ ರೂಪದ ಭಾರತೀಯ ಕಲೆಗೆ ಈ ಪಂಥವು ದೃಡವಾದ ಸ್ವರೂಪವನ್ನು ಒದಗಿಸಿತೆಂದು ಧಾರಾಳವಾಗಿ ಹೇಳಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಯಕ್ಷರು ರಾಮಾಯಣ, ಮಹಾಭಾರತಗಳಲ್ಲಿ ಕೂಡ ಕಂಡುಬರುತ್ತಾರೆ. ಆದರೆ ಬೌದ್ಧಧರ್ಮವು ಇವರನ್ನು ತನ್ನದೇ ಆದ ವಿಶೇಷ ರೀತಿಯಲ್ಲಿ ಬಳಸಿಕೊಂಡಂತೆ ಕಂಡುಬರುತ್ತದೆ. ಹ್ಯೂಯೆನ್ಸಾಂಗನು

ಕೂಡ ಯಕ್ಷರನ್ನು (ನಾಗರಂತೆ) ಸೃಷ್ಟ್ಯಾತ್ಮಕ ಅಥವಾ ಕಲಾಸಹಾಯಕ ದೇವತೆಗಳೆಂದು ಪರಿಗಣಿಸುತ್ತಾನೆ.[೭]

ಯಕ್ಷರೊಂದಿಗೆ ನಾಗಾ ಜನಾಂಗಗಳೂ ಕೂಡ ಈ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಗುಂಟೂರು ಜಿಲ್ಲೆಯ ಭಟ್ಟಿಪ್ರೋಲು ಶಾಸನದ ಪ್ರಕಾರ ಕ್ರಿಪೂ. ೪೦೦ರಲ್ಲಿ ಕುಬ್ಬೀರಕನೆಂಬ ಅರಸ ಆ ಪ್ರದೇಶವನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ. ಕುಬ್ಬೀರ ಎಂಬ ಹೆಸರಿನಿಂದಲೇ ಕುಬೇರ ಪದ ಬಂದಿದೆ. ಕುಬೇರನು ಯಕ್ಷ ಸಮೂಹಕ್ಕೆ ಅಧಿಪತಿ. ಯಕ್ಷರು ಅನಾರ್ಯ ಜನಾಂಗಗಳಲ್ಲೊಬ್ಬರು. ಕುಬೇರಕನು ಸಿಂಹಗೋಷ್ಠಿಗೆ ಅಧಿಪತಿ. ನಾಗಾಗಳು ಹಾವಿನ ಆರಾಧಕರಾದರೆ, ಯಕ್ಷರು ಸಿಂಹದ ಆರಾಧಕರು. ನಾಗಾಗಳ ಹಾಗೆಯೇ ಯಕ್ಷರು ಕೂಡಾ ಆದಿಯಲ್ಲಿಯೇ ಬೌದ್ಧಮತವನ್ನು ಸ್ವೀಕರಿಸಿದವರು. ಯಕ್ಷನೆಂದರೆ ಕುಬೇರನ ಸೇವಕ. ಅವನ ತೋಟ ಮತ್ತು ಸಂಪತ್ತಿನ ರಕ್ಷಕನೆಂದು ಇಂತಹವರ ಸಮೂಹವನ್ನು ಯಕ್ಷಗಣವೆನ್ನುತ್ತಾರೆ. "ಯಕ್ಷೋತ್ತಮಾ ಯಕ್ಷಪತಿಂ ಧನೇಶಂ ರಕ್ಷಂತಿ ವೈ ಪ್ರಾಸಗದಾದಿಹಸ್ತಾಃ"[೮]

ಯಕ್ಷ ವರ್ಗಕ್ಕೆ ಗಣೇಶನನ್ನು ಸೇರಿಸಬಹುದು. ಐಹೊಳೆಯ ದುರ್ಗ ಗುಡಿಯಲ್ಲಿರುವ ಗಣಪತಿಯ ವಿಗ್ರಹದಲ್ಲಿ ಬಲಗೈಯಲ್ಲಿ ಹಣದ ಚೀಲ (ಥೈಲಿ)ಯನ್ನು ಹಿಡಿದ ವಿಗ್ರವಿದೆ. ಇದು ಸುಮಾರು ಕ್ರಿ.ಶ. ೫ನೇ ಶತಮಾನಕ್ಕೆ ಸೇರಿದ ವಿಗ್ರಹ. ಅಲ್ಲದೆ ಗಣಪತಿಯ 'ಕುಬ್ಜ' ರೂಪವನ್ನು ಎಲ್ಲಿಯೂ ಕಾಣಬಹುದು. ಈ ಕುಬ್ಜತನವನ್ನು ಕುಬೇರನಲ್ಲೂ ಕಾಣುತ್ತೇವೆ. ಯಕ್ಷರನ್ನು ಶಾಸನ ದೇವತೆಗಳಾಗಿ ತೀರ್ಥಂಕರರ ಸೇವಕ ರಕ್ಷಕನನ್ನಾಗಿ ಹೆಸರಿಸುವ ಜೈನಧರ್ಮದಲ್ಲಿಯೂ ಈ ಕುಬ್ಜ ಮತ್ತು ದಪ್ಪ ಆಕಾರವನ್ನು ಕಾಣಬಹುದಾಗಿದೆ. ಮಾರನೂ ಯಕ್ಷನೆಂದು ಪಂಡಿತರು ಗುರುತಿಸುತ್ತಾರೆ. ಈತನ ಪುಷ್ಪಬಾಣಗಳ ಕಲ್ಪನೆಯೂ ಇದಕ್ಕೆ ಆಧಾರವಾಗಿರುತ್ತದೆ. ಹೀಗೆಯೇ ಹಲವು ದೇವತೆಗಳನ್ನು ಯಕ್ಷರೆಂದು ಕರೆಯಲು ಆಧಾರಗಳಿವೆ. ಒಟ್ಟಿನಲ್ಲಿ ಯಕ್ಷವರ್ಗವು ವೈದಿಕ-ಜೈನ-ಬೌದ್ಧಧರ್ಮಗಳಲ್ಲಿ ಸಾಮಾನ್ಯವಾಗಿ ಕಾಣುತ್ತದೆಯಾದರೂ ಪಂಡಿತರು ಇವರನ್ನು ಅನಾರ್ಯರು ಎಂದೇ ಪರಿಗಣಿಸುತ್ತಾರೆ. ಮೂಲತಹ ಯಕ್ಷಕಲ್ಪನೆಯು ಭಾರತೀಯವೋ ಅಲ್ಲವೋ ಆದರೆ ಬೌದ್ಧಧರ್ಮದ ದೆಸೆಯಿಂದಾಗಿ ಒಂದು ಪ್ರಮುಖವಾದ ಭಾರತೀಯ ಸಾಂಸ್ಕೃತಿಕ ಅಂಶವಾಗಿ ಪ್ರಭಾವಶಾಲಿಯಾಗಿರುವುದನ್ನು ಜೈನಧರ್ಮದಲ್ಲಿ ಅದರ ಸ್ಥಾನವನ್ನು ಹಾಗೆಯೇ ವೈದಿಕಧರ್ಮದಲ್ಲಿನ ವಿಕಾಸದಲ್ಲಿ ಇದು ಬೆರೆತು ಹೋಗುವುದನ್ನು ಗುರುತಿಸಬಹುದಾಗಿದೆ. ಭಾರತೀಯ ಸಾಹಿತ್ಯದಲ್ಲಿ ಕೂಡ ಯಕ್ಷಕಲ್ಪನೆಯು

---

೭. ಕ.ವೆಂ. ರಾಜಗೋಪಾಲ (ಲೇ), ಬೌದ್ಧಮತದಲ್ಲಿ ಯಕ್ಷಕಲೆ, ಪುಟ-೨,೩,೫

೮. ಮಲ್ಲೇಪುರಂ ಜಿ. ವೆಂಕಟೇಶ (ಸಂ), ದ್ರಾವಿಡ ಅಧ್ಯಯನ, ಸಿ. ವೆಂಕಟೇಶ (ಲೇ), ಆಂಧ್ರರ ಪ್ರಾಚೀನತೆ, ಪುಟ-೧೧೦, ೧೧೧

ಒಂದು ಸ್ಥಾನವನ್ನು ಪಡೆದುಕೊಂಡಿದೆ.

ಯಕ್ಷಪದ್ಧತಿಯ ಲಕ್ಷಣಗಳು ಕ್ರಮೇಣ ನಮ್ಮ ಸಂಸ್ಕೃತಿಯಲ್ಲಿ ಸಂಸ್ಕಾರಗೊಂಡಂತೆ ವೀರವ್ರತದ ಗುರುತುಗಳಾಗಿ ಉಳಿದಿರುವಂತಿದೆ. ಅಲ್ಲದೆ ಅದರ ಹೆಗ್ಗುರುತಾಗಿ ಯಕ್ಷಗಾನವಿದೆ. ಅದಕ್ಕೂ ಮೂಲಾಧಾರವಾಗಿ ಬುದ್ಧನ ಪ್ರತ್ಯಕ್ಷವೋ ಅಪ್ರತ್ಯಕ್ಷವೋ ಆದ ವ್ಯಕ್ತಿತ್ವದ ಹೊಣೆಗಾರಿಕೆಯಿಂದ ಉಳಿದಿದೆ. ಕಾಲವು ನಿರ್ದಾಕ್ಷಣ್ಯವಾಗಿ, ಅವ್ಯಾಹತವಾಗಿ ಅವುಗಳನ್ನು ಕಡೆಗಣಿಸಿದರೂ ಅವು ಉಳಿದಿರುವಷ್ಟೇ ನಮ್ಮ ಅದೃಷ್ಟವೆನ್ನಬೇಕಾಗಿದೆ.

ವಿವಿಧ ಧರ್ಮಗಳಲ್ಲಿ ಯಕ್ಷಪರಿಕಲ್ಪನೆ

೧. ಬೌದ್ಧ, ಜೈನಧರ್ಮಗಳಿಗೆ ಪೂರ್ವಯುಗ

ಯಕ್ಷರು ಭಯಂಕರ "ಶಕ್ತಿ"ಗಳು ಮಾರಿನ್‌ಹಾಲಿಗಳು ಮಾನವರನ್ನು ಕಾಡುತಿದ್ದವು. ಇವುಗಳ ಹುಟ್ಟನ್ನು ಜಲಸೃಷ್ಟಿಗೆ ಸೇರಿಸಬೇಕಾಗುತ್ತದೆ.

೨. ಬೌದ್ಧಧರ್ಮದಲ್ಲಿ ಅಥವಾ ಕದಂಬ ವಾಸಿಗಳಾದ ದುಷ್ಟಶಕ್ತಿಗಳು ಜೈನಧರ್ಮವು ಈ ಶಕ್ತಿಗಳಿಗೆ ಕುಬ್ಜ ಮಾನವ ರೂಪದಲ್ಲಿ ಹೊಂದಿಕೊಂಡಿತು. ಆದರೆ ಬೌದ್ಧಧರ್ಮವು ಬೋಧಿಸತ್ವನನ್ನು ಪ್ರಾಣಿಗಳ ವೃಕ್ಷದೇವತೆಗಳು ಮತ್ತು ಮಾನವ ರೂಪದಲ್ಲಿ ವಿಕಾಸಗೊಳಿಸಿದಾಗ ವಿವೇಕಶಾಲಿಯನ್ನಾಗಿ, ಮಾರ್ಗದರ್ಶಕನನ್ನಾಗಿ ನಿರೂಪಿಸಿದಾಗ ಯಕ್ಷಕಲ್ಪನೆಗೂ ಈ ಅಂಶಗಳು ಕೊಡುಗೆಯಾದಂತೆ ರೂಪ ಮತ್ತು ಗುಣಗಳ ವಿಕಾಸವಾಯಿತು. ಇದರಿಂದ ಬೌದ್ಧಧರ್ಮದ ದೆಸೆಯಿಂದಲೇ ಯಕ್ಷರಲ್ಲಿ ಕೀಳು ಮೇಲೆಂಬ ವರ್ಗಗಳು ಮೂಡಿ ಕ್ರಮೇಣ ಎರಡೂ ವರ್ಗಗಳೂ ಬೌದ್ಧಧರ್ಮಕ್ಕೆ ಸೋತ ಹಾಗೆ ಸೇರಿಹೋಗಬೇಕಾಯಿತು.

ಬೌದ್ಧಧರ್ಮದ ಯಕ್ಷರು :

ಇವರು ಈ ಹಂತದಲ್ಲಿ ಬೌದ್ಧಧರ್ಮದ ರಕ್ಷಕರಾಗಿ ನಿಲ್ಲುತ್ತಾರೆ. ಮಾನವ ರೂಪವನ್ನು ತಳೆದವರೆಂದು ಊಹೆಗೆ ಎಟಕುತ್ತಾರೆ. ಸ್ತೂಪಗಳ ರಕ್ಷಕರಾಗುತ್ತಾರೆ. ಭಕ್ತರಾಗುತ್ತಾರೆ. ಯಕ್ಷಪದ್ಧತಿಯೂ ಪಂಗಡಗಳೆನ್ನುವಂತೆ ವಿಚಾರವೂ ಸರಳ ಸುಂದರವಾಗುತ್ತದೆ. ಈ ಸಮಯದಲ್ಲಿಯೇ ಯವನ ಪ್ರಭಾವವು ಕೆಲಸ ಮಾಡಿರಬಹುದು. ಗುಹಾಂತರ ದೇವಾಲಯಗಳ ಹುಟ್ಟಿನಲ್ಲಿಯೇ ಇಂತಹ ಮನೋಧರ್ಮವನ್ನು ಕಾಣುತ್ತೇವೆ. ಹೀನಯಾನ ಮತ್ತು ಮಹಾಯಾನಗಳೆಂಬ ಪಂಥಗಳು ಸ್ಪಷ್ಟವಾದಾಗ ಮೊದಲಾಗಿ ಮಹಾಯಾನದ ಪ್ರವೃತ್ತಿಗಳು ಬೆಳೆದಂತೆಲ್ಲಾ ಯಕ್ಷಕಲ್ಪನೆಯು ಸ್ಥಿರವಾಗಿ ಒಂದು ಪಂಥವಾಗಿ ಉಳಿದುಬಂದಿದೆ.

ಕನಗನಹಳ್ಳಿಯ ಸ್ತೂಪ ಶಿಲ್ಪಗಳು

ಯಕ್ಷ–ರಾಕ್ಷಸ ಕಲ್ಪನೆಗಳ ಸಂಧಿಕಾಲದಲ್ಲಿ ಜೈನ–ಬೌದ್ಧಧರ್ಮಗಳು ಹುಟ್ಟಿ ಬೆಳೆದಿರಬಹುದಾಗಿದೆ. ಆದುದರಿಂದಲೇ ಇವೆರಡೂ ಮತಗಳು ಯಕ್ಷರನ್ನು, ರಾಕ್ಷಸರನ್ನು ತಾತ್ವಿಕವಾಗಿ ಮತ್ತು ಶುದ್ಧವಾಗಿ ಬೇರ್ಪಡಿಸಿ ನೋಡುವುದಿಲ್ಲ. ಬದಲು ಇವುಗಳ ಸಂದಿಗ್ಧತೆಯನ್ನು ಒಪ್ಪಿಕೊಂಡಂತೆ ಜೈನ ಪುರಾಣಗಳಲ್ಲಿ ಬೌದ್ಧರ ಜಾತಕ ಕಥೆಗಳಲ್ಲಿ ಕಂಡುಬರುತ್ತವೆ.[೯]

ಗಾಂಧಾರ ಕಲೆಯು ಬುದ್ಧನ ಪ್ರತಿಮೆಗಳನ್ನು ಸೃಷ್ಟಿಸಲು ಅನುಕೂಲವಾದಂತೆ ಬೋಧಿಸತ್ವನ ಪ್ರತಿಮೆಗಳ ವಿಕಾಸಕ್ಕೆ ಮೊದಲಾಯಿತು. ಅಂದರೆ ಯಕ್ಷಕಲ್ಪನೆಗೆ ಮಾನವ ರೂಪವು ದೊರಕುವಂತೆ ಬೆಂಬಲ ನೀಡಿತು. ಇವುಗಳನ್ನೇ ನಾವು ಕಾರ್ಲ, ಸಾಂಚಿ, ಮಥುರ, ಅಮರಾವತಿ, ಸನ್ನತಿ, ಬನವಾಸಿ, ಬ್ರಹ್ಮಗಿರಿ, ಜಟ್ಟಿಂಗರಾಮೇಶ್ವರ ಮುಂತಾದ ಗುಹಾಂತರ ದೇವಾಲಯ ಹಾಗೂ ಸ್ತೂಪಗಳಲ್ಲಿ ಕಾಣಬಹುದು.

ಯಕ್ಷಶಿಲ್ಪಗಳಿಂದ ಹುಟ್ಟಿಕೊಂಡ ಇನ್ನೊಂದು ಶಿಲ್ಪ ಪ್ರಕಾರ ಗಣಶಿಲ್ಪಗಳು, ಅರೆದೈವಶಿಲ್ಪ, ಕುಬ್ಜಗಣ ಹೀಗೆ ನಾನಾ ರೀತಿಯ ಹೆಸರುಗಳಿಂದ ಬೌದ್ಧ, ಜೈನ ನಂತರದ ಮುಂಬರುವ ಗುಹಾಲಯಗಳು ಮತ್ತು ದೇವಾಲಯಗಳಲ್ಲಿ ಕಂಡುಬರುತ್ತವೆ. ಗಣಶಿಲ್ಪಗಳು ಯಕ್ಷಶಿಲ್ಪಗಳಿಂದ ಹುಟ್ಟಿಕೊಂಡ ಇನ್ನೊಂದು ಪ್ರಕಾರ. ಭಾರ್ಹುತ್ ಮತ್ತು ಬೋಧಗಯಾಗಳಲ್ಲಿ ಕಟ್ಟಡದ ಛತ್ತನ್ನು ಎತ್ತಿಹಿಡಿದಿರುವಂತೆ ಯಕ್ಷರನ್ನು ಚಿತ್ರಿಸಲಾಗಿದೆ. ಹೀಗೆ ತೊಲೆಗಳನ್ನು ಎತ್ತಿಹಿಡಿದಿರುವ ಶಿಲ್ಪಗಣಗಳನ್ನು ಬಾದಾಮಿಯ ಜಂಬುಲಿಂಗ, ಐಹೊಳೆಯ ದುರ್ಗಾ, ಹುಚ್ಚಿಮಲ್ಲಿ ಮೊದಲಾದ ದೇವಾಲಯಗಳಲ್ಲಿ ಕಾಣಬಹುದು. ಇವರು ಭಾರವಾಹಕ ಗಣರು, ಕುಬ್ಜ ಗಣಶಿಲ್ಪಗಳ ಉತ್ತಮ ಉದಾಹರಣೆಗಳು ಬಾದಾಮಿಯ ಗುಹಾಲಯಗಳ ಅಧಿಷ್ಠಾನಗಳಲ್ಲಿವೆ.

ಕುಬ್ಜಗೊಂಡ ದೇಹ, ಮೊಟಕೆನಿಸುವ ಕೈ–ಕಾಲುಗಳು, ಭಾರವಾಗಿರುವ ಹೊಟ್ಟೆ, ದೊಡ್ಡದಾದ ಮುಖ, ವಿಭಿನ್ನವಾದ ಅಪರೂಪದ ಕೇಶವಿನ್ಯಾಸ ಈ ಲಕ್ಷಣಗಳಿಂದಾಗಿ ಕುಬ್ಜಗಣರ ಶಿಲ್ಪಗಳು ಮನೋರಂಜಕವಾಗಿವೆ. ಈ ಗಣರ ಮುಗ್ಧ ಮುಖಗಳಲ್ಲಿ ಬಗೆ ಬಗೆಯ ಭಾವಗಳಲ್ಲಿ, ಅಂಗಾಗಳಲ್ಲಿ ವಿವಿಧ ಮಣೆತಗಳನ್ನು ರೂಪಿಸುವಲ್ಲಿ ರೂವಾರಿಯ ಕಲಾಕೌಶಲ ಎದ್ದು ಕಾಣುತ್ತದೆ.

ಇಂತಹ ಪೂರ್ವ ಹಿನ್ನೆಲೆಯುಳ್ಳ ಯಕ್ಷ ಶಿಲ್ಪಗಳು ಕನಗನಹಳ್ಳಿ ಸ್ತೂಪಾವಶೇಷಗಳಲ್ಲಿ ಮತ್ತು ಹಸರಗುಂಡಿ ಪ್ರದೇಶಗಳಲ್ಲಿಯೂ ಕೂಡಾ ದೊರಕಿವೆ.

---


೯. ಕ.ವೆಂ. ರಾಜಗೋಪಾಲ (ಲೇ), ಬೌದ್ಧಮತದಲ್ಲಿ ಯಕ್ಷಕಲೆ, ಪುಟ–೧೨

ಯಕ್ಷಶಿಲ್ಪಗಳು :

ದುಂಡು ಶಿಲ್ಪಗಳ ಗುಂಪಿಗೆ ಸೇರಿಸಬಹುದಾದ ಯಕ್ಷಶಿಲ್ಪಗಳು ಸನ್ನತಿಯ ಪರಿಸರದ ಹಸರಗುಂಡಿಗಿ ಹಾಗೂ ಕನಗನಹಳ್ಳಿ ಸ್ತೂಪಾವಶೇಷಗಳಲ್ಲಿಯೂ ದೊರಕಿವೆ. ಸ್ತೂಪಾವಶೇಷಗಳಲ್ಲಿ ದೊರೆತ ಯಕ್ಷ ಪೂರ್ಣ ರೂಪದಲ್ಲಿ ಭಗ್ನಗೊಂಡಿದ್ದು, ಹಸರಗುಂಡಿಗಿಯ ಯಕ್ಷಶಿಲ್ಪ ಭಗ್ನಗೊಂಡುದಾದರೂ ಅದರಷ್ಟಿಲ್ಲ. ಮುಖ, ಒಂದು ಕೈ, ಎರಡು ಕಾಲುಗಳಿಲ್ಲದ ಬರಿ ಮುಂಡದ ಭಾಗ ಮಾತ್ರ ಉಳಿದುಕೊಂಡಿದೆ. ಮನುಷ್ಯಾಕೃತಿಯ ದೇಹವುಳ್ಳ ಈ ಕೆತ್ತನೆಯು ನೈಜತೆಯಿಂದ ಕೂಡಿ ನಸುಗೆಂಪು ಬಣ್ಣದ ಕಲ್ಲಿನಿಂದ ರಚಿತವಾದುದಾಗಿದೆ. ದೇಹದ ಭಾಗವು ಸೊಗಸಾಗಿ ಕೆತ್ತಲಾಗಿದೆ. ಕೊರಳಲ್ಲಿ ಮಣಿಗಳಿಂದ ಕೂಡಿದ ಮಾಲೆಯು ವಿಶೇಷ ಗಮನ ಸೆಳೆಯುತ್ತದೆ. ಕೊರಳ ಮಾಲೆಯ ಪದಕದಲ್ಲಿ ಗಜಲಕ್ಷ್ಮಿಯ ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಶಿಲ್ಪಿಯು ತನ್ನ ಕಲಾನೈಪುಣ್ಯತೆಯನ್ನು ಕಂಡರಿಸಿದ್ದಾನೆ. ಈ ಕೆತ್ತನೆಯಿಂದ ಇದು ಕುಬೇರ ಯಕ್ಷನ ಶಿಲ್ಪವೆಂದು ಗುರುತಿಸಬಹುದಾಗಿದೆ. ಯಕ್ಷನ ಮೇಲಕ್ಕೆತ್ತಿರುವಂತಿರುವ ಕೈ ಸಂಪೂರ್ಣ ಭಗ್ನಗೊಂಡು ಇನ್ನೊಂದು ಕೈ ಸೊಂಟದ ಮೇಲಿರಿಸಿದ್ದಾನೆ. ಯಕ್ಷನ ಕಟಿ (ಸೊಂಟ)ಯು ವಸ್ತ್ರದಿಂದ ಅಲಂಕೃತವಾಗಿ ಬಲಗಡೆ ಕಟಿವಸ್ತ್ರ ತೂಗು ಬಿಡಲಾಗಿದೆ. ಭುಜಬಂಧ ಹಾಗೂ ಕೈಬಳೆಗಳಿಂದ ಅಲಂಕೃತಗೊಂಡು ಉಬ್ಬಿದ ಹೊಟ್ಟೆಯ ಹಾಗೂ ಎದೆಯ ಮಾಂಸಖಂಡದ ಭಾಗಗಳು ಅತ್ಯಂತ ನೈಜತೆಯಿಂದ ರಚಿಸಿದ ಶಿಲ್ಪಿಯು ದೇಹದ ಅಂಗಾಗಳನ್ನು ಶಿಲ್ಪಿಸುವಲ್ಲಿ ಆ ಆರಂಭದ ಕಾಲದಲ್ಲಿಯೇ ಇಷ್ಟೊಂದು ಪ್ರೌಢಯುತವಾದ ಜಾಣ್ಮೆ ಹೊಂದಿದ್ದನೆಂದು ಹೇಳಬಹುದು.

ನಾಗಮುಚ್ಛಲಿಂದ ಶಿಲ್ಪಗಳು







ಬುದ್ಧನ ಸಾಂಕೇತಿಕ ಪಾದ ಶಿಲ್ಪಗಳು











● ಯಕ್ಷಶಿಲ್ಪ ಪಾರ್ಶ್ವನೋಟ ಹಸರಗುಂಡಗಿ



● ಯಕ್ಷಶಿಲ್ಪ ಹಸರುಗುಂಡಗಿ



● ಮೃಗಸ್ಥಳಿಯ ಪ್ರಥಮ ಉಪನ್ಯಾಸದ ಸಾಂಕೇತಿಕ ಶಿಲ್ಪ



● ಯಕ್ಷಶಿಲ್ಪ ಕನಗನಹಳ್ಳಿ ಸ್ತೂಪ

ಅಧ್ಯಾಯ – ಆರು

ಸಾಮಾಜಿಕ ಜನಜೀವನ ಮತ್ತು ಪರಿಸರ ಸಂಬಂಧಿ ಉಬ್ಬುಶಿಲ್ಪಗಳು

ಅಧ್ಯಾಯ – ಆರು

ಸಾಮಾಜಿಕ ಜನಜೀವನ ಮತ್ತು ಪರಿಸರ ಸಂಬಂಧಿ ಉಬ್ಬುಶಿಲ್ಪಗಳು

ಕಲೆಯ ರೂಪವು ಒಂದು ಮಾನಸಿಕ ಚಟುವಟಿಕೆಯನ್ನೇ ಸೂಚಿಸುತ್ತದೆ. ಅಂದರೆ, ನೋಡುವ ಕ್ರಿಯೆಗೆ ಸಂಬಂಧಿಸಿದ ಅತ್ಯಂತ ವಿಶಿಷ್ಟವಾದ ತಂತ್ರವೊಂದನ್ನು ಭಾರತವು ರೂಢಿಸಿಕೊಂಡಿತ್ತೆಂಬುದು ಈ ಮೂಲಕ ಸಹಜವಾಗಿಯೇ ಗೊತ್ತಾಗುತ್ತದೆ. ವಿಗ್ರಹವೊಂದರ ಕರ್ತೃವು ತನ್ನ ಏಕಾಗ್ರತೆಗೆ ಅಡ್ಡಿಯಾಗುವ ಚಂಚಲ ಭಾವನೆಗಳನ್ನು ಸಜೀವ ರೂಪಗಳನ್ನು ಮೊದಲು ದೂರಮಾಡಿಕೊಳ್ಳುತ್ತಾನೆ. ಇಲ್ಲಿ ಯೋಗಾಭ್ಯಾಸದಿಂದ ಈಗಾಗಲೇ ತನಗೆ ಪರಿಚಯವಿರುವ ಮಾರ್ಗಗಳನ್ನೇ ಅವನು ಅನುಸರಿಸುವುದು. ಆತ್ಮಸಂಕಲ್ಪ ಮತ್ತು ಆತ್ಮಶೋಧಗಳ ಮೂಲಕ. ದೇವತೆಯ, ದಿವ್ಯಪುರುಷರ ಅಥವಾ ದೈವಿಕ ಆಯಾಮವೊಂದರ ರೂಪವನ್ನು ಕಲ್ಪಿಸಿಕೊಳ್ಳಲು ಹೊರಡುತ್ತಾನೆ. ಈ ರೂಪವನ್ನು ಅವನ ಮನಸ್ಸು ತನ್ನೆಡೆಗೆ ಸೆಳೆದುಕೊಳ್ಳುತ್ತದೆ.. ಕಲಾರೂಪದ ಅಸ್ತಿತ್ವವು ಗೋಚರಿಸುವುದೇ ಸ್ವರ್ಗಲೋಕದಲ್ಲಿ. ಹೀಗಾಗಿ ಅಲ್ಲಿಂದಲೇ ಅವನು ಈ ರೂಪವನ್ನು ಕಟ್ಟಕಡೆಯಲ್ಲಿ ತನ್ನೆಡೆಗೆ ಸೆಳೆದುಕೊಳ್ಳುವುದು. ಹೀಗೆಯೇ ಅವನ ಮೊಟ್ಟಮೊದಲ ಆಕಾರವೆಂದರೆ "ಅಂತರ್ ಹೃದಯ ಆಕಾಶ" ಅಂದರೆ ಈ ನೋಡುಗ ಮತ್ತು ಅವನ ಮುಂದಿನ ನೋಟಗಳೆರಡಕ್ಕೂ ಸಮಾನವಾದ ಒಂದು ಕೇಂದ್ರ ಸತ್ಯದ ಅನುಭವಕ್ಕೂ ಇದೊಂದೆ ದಾರಿ.[೧]

ಕನಗನಹಳ್ಳಿಯ ಸ್ತೂಪದಲ್ಲಿ ಕಂಡುಬರುವ ಲೌಕಿಕ ಶಿಲ್ಪಗಳು ಅಂದಿನ ಸಾಮಾಜಿಕ ಜೀವನಕ್ಕೆ ಹಿಡಿದ ಕನ್ನಡಿಯಾಗಿವೆ. ಮಾನವನ ಐಹಿಕ ಜೀವನದ ಹಲವಾರು ರೂಪಗಳು ಲೌಕಿಕ ಶಿಲ್ಪಗಳ

---

೧. ಎಸ್.ಶ್ರೀನಿವಾಸ ಮೂರ್ತಿ (ಲೇ), ಆನಂದಕುಮಾರಸ್ವಾಮಿ ಪುಟ–೩೮–೩೯

ಕಲಾ ವಸ್ತುಗಳಾಗಿವೆ. ಲೌಕಿಕ ಶಿಲ್ಪಗಳಲ್ಲಿ ಅರಸ-ಅರಸಿಯರು, ಸೇವಕ-ಸೇವಕಿಯರು, ಗುರುಶಿಷ್ಯರು, ಸಂಗೀತಗಾರರು ಗಣಿಕಾಸ್ತ್ರೀಯರು, ದಾನನೀಡಿದವರಲ್ಲಿ ಶ್ರೀಮಂತರು, ವ್ಯಾಪಾರಸ್ತರು, ಗೃಹಪತಿಗಳು, ಮಹಾತಲವಾರ, ಯುವನಸ್ತ್ರೀಯರೂ ಮುಂತಾದವರು ಈ ಶಿಲ್ಪಗಳ ಕಥಾವಸ್ತುವಾಗಿದ್ದಾರೆ.

ಅಶೋಕನ ಶಿಲ್ಪ

ಅಶೋಕನ ಏಕೈಕ ಭಾವಶಿಲ್ಪ ಮೊಟ್ಟಮೊದಲಬಾರಿಗೆ ಕಂಡುಬಂದಿರುವುದು ಕನಗನಹಳ್ಳಿಯ ಸ್ತೂಪಾವಶೇಷಗಳಲ್ಲಿಯೇ. ಉಬ್ಬು ಗೆತ್ತನೆಯ ಫಲಕಶಿಲ್ಪಗಳಲ್ಲೊಂದಾದ ಈ ಶಿಲ್ಪವು ಭಾರತದ ಇತಿಹಾಸದಲ್ಲಿಯೆ ಒಂದು ಸಂಚಲನವನ್ನುಂಟುಮಾಡಿದೆ. ಸುಣ್ಣದ ಶಿಲಾಫಲಕದ ಮೇಲೆ ಮೂಡಿಬಂದಿರುವ ಈ ಉಬ್ಬುಗೆತ್ತನೆಯು ಅಂದಿನ ಸಾಮ್ರಾಟನ ವೈಭವವನ್ನು ಅತ್ಯಂತ ನಿಪುಣತೆಯಿಂದ ಶಿಲ್ಪಿಯು ತನ್ನ ಮನದೊಳಗಣ ಭಾವನೆಗೆ ಅಷ್ಟೆಅಲ್ಲದೆ ಸಾಮ್ರಾಟ ಅಶೋಕನ ಭಾವನೆಗಳಿಗೂ ದೃಶ್ಯರೂಪದ ಕಲ್ಪನೆ ಕೊಟ್ಟಿದ್ದಾನೆ.

ದೃಶ್ಯಕಲೆಯೆಂಬುದು ಮೂಲತಃ ಸೃಜನಶೀಲ ಸೃಷ್ಟಿಕ್ರಿಯೆ. ಈ ಕ್ರಿಯೆ, ದೃಶ್ಯಕಲಾವಿದನೋರ್ವನ ಸೃಜನಶೀಲ ದೃಷ್ಟಿಯಿಂದ ಆಗುವಂಥದು. ಈ ಕ್ರಿಯೆಯ ಹರವು ಮತ್ತು ಹರಿವು ಒಂದೊಂದು ಮಾಧ್ಯಮದಲ್ಲಿ ಒಂದೊಂದು ಬಗೆಯದ್ದಾಗಿರುತ್ತದೆ. ಅರ್ಥಾತ್ ಕಲಾವಿದನ ಸೃಜನಶೀಲ ಅನುಭವದ ದೃಷ್ಟಿ ಕಲ್ಲು ಕೊರಡು, ಮಣ್ಣಿನಂತಹ ವಸ್ತುಗಳ ಮೂಲಕ ಅಭಿವ್ಯಕ್ತಿಯಾಗಿ (ತ್ರಿಮಾನ ಅಥವಾ ದ್ವಿಮಾನ) ರೂಪತಳೆದಾಗ ಶಿಲ್ಪ ಎನಿಸುತ್ತವೆ. ಹೀಗೆ ಕಲಾವಿದನ ಭಾವನೆ ಅನುಭವಗಳ ಸಂವಹನೆಗೆ ಇಂತಹ ಮಾಧ್ಯಮಗಳು ವಾಹಕಗಳಾಗಿವೆ. ಮಾಧ್ಯಮ ಯಾವುದೇ ಆಗಿರಲಿ ಅದಕ್ಕೆ ತನ್ನದೇ ಆದ ಸಾಧ್ಯತೆಗಳಿರುವಂತೆ ಮಿತಿಗಳೂ ಇರುತ್ತವೆ. ಕಲಾವಿದನು ತನ್ನ ಮೂಲದ್ರವ್ಯಕ್ಕೆ ಜೀವನದ ಅನುಭವಗಳನ್ನು, ಕಲ್ಪನೆಗಳನ್ನು ಸಮಕಾಲೀನ ಆಗು ಹೋಗುಗಳನ್ನು ಮತ್ತು ಪರಂಪರೆಯ ಅಧ್ಯಯನದ ಪ್ರಭಾವಗಳನ್ನು ಬೆರೆಸಿ ಒಂದು ರಸಪಾಕವಾಗಿ ದೃಶ್ಯಕಲಾಕೃತಿಯೊಂದನ್ನು ನಿರ್ಮಾಣ ಮಾಡುತ್ತಾನೆ. ಅನುಭವ, ಕಲ್ಪನೆಗಳಿದ್ದು ಅದು ದೃಶ್ಯಕಲೆಯ ಮಟ್ಟಕ್ಕೆ ಏರಬೇಕಾದರೆ ಅಭಿವ್ಯಕ್ತಿಯಲ್ಲಿ ಸಾಮಾನ್ಯ ವಿವರಣೆಗೆ ಮೀರಿದ ಒಂದು ರೂಪ, ಸ್ವರೂಪ, ಲಯ, ಬಂಧ, ನಾಜೂಕು ಮುಂತಾದವುಗಳಿಂದ ಕೂಡಿದ ಮಾನಸಿಕ ದೂರವೇರ್ಪಟ್ಟಿರಬೇಕಾಗುತ್ತದೆ.[೧]

ಇಂಥಹ ಸ್ಥಿತಪ್ರಜ್ಞತೆಯಿಂದ ರಚಿಸಿರಬಹುದಾದಂತಹ ಶಿಲ್ಪ ಈ ಅಶೋಕನ ಭಾವಶಿಲ್ಪವೆಂದು ಹೇಳಬಹುದು. ನಿಂತಿರುವ ಪೂರ್ಣ ಆಕೃತಿಯ ಈ ಶಿಲ್ಪದಲ್ಲಿ ಅಶೋಕನು ತನ್ನ ಬಲಗೈಯನ್ನು ಸೊಂಟದ ಮೇಲಿರಿಸಿ ಎಡಗಾಲನ್ನು ಭದ್ರವಾಗಿ ನೆಲಮೇಲೂರಿ ಬಲಗಾಲಿಗೆ ಭಾರವನ್ನು ಕಡಿಮೆ

೧. ಡಾ. ಶಿವಾನಂದ ಎಚ್. ಬಂಟನೂರು (ಲೇ), ದೃಶ್ಯಪದದೃಶ್ಯ., ಪುಟ-೭೧-೭೨.

ಮಾಡಿದಂತೆ ನಿಂತಿರುವಂತೆ ಅಶೋಕನ ಎಡಭಾಗದಲ್ಲಿ ಆತನ ರಾಣಿಯೂ ನಿಂತಿದ್ದಾಳೆ. ಅಶೋಕನ ಬಲಭಾಗದಲ್ಲಿಯ ಪರಿಚಾರಿಕೆಯೋರ್ವಳು ಛತ್ರವನ್ನು ಸಾಮ್ರಾಟನ ತಲೆಯಮೇಲೆಂಬಂತೆ ಹಿಡಿದು ನಿಂತಿದ್ದಾಳೆ. ತೆಳುವಾದ ಅಂತರೀಯವನ್ನುಟ್ಟ ಅಶೋಕ (ಕೆಳಭಾಗದ ಉಡುಪು) ಇನ್ನೊಂದು ವಸ್ತ್ರದಿಂದ ಸೊಂಟಕ್ಕೆ ಕಟ್ಟಿರುವ ರೀತಿಯಲ್ಲಿ ಅದರ ಗಂಟು ಎಡಪಾರ್ಶ್ವದಲ್ಲಿ ಇಳಿಯಬಿಟ್ಟಿದೆ. ಮೇಲುಡುಗೆ ಇಲ್ಲ. ಮಣಿಗಳಿಂದ ರಚಿಸಿರುವಂತಹ ದಪ್ಪನೆಯ ಕೊರಳಹಾರ ಹಾಗೂ ಯಜ್ಞೋಪವೀತ (ಜನಿವಾರ) ಕೈಕಡಗ ಆಕರ್ಶಕ ರಚನೆಯಿಂದ ಕೂಡಿದ ತಲೆಯ ಮೇಲಿನ ಪೇಠ ಕಿವಿಯಲ್ಲಿ ಎರಡು ಸುರುಳಿಯ ಕುಂಡಲ (ಮುರುವು) ಹಾಗೂ ತೋಳಬಂಧಿ ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ಪಕ್ಕದಲ್ಲಿರುವ ರಾಣಿಯು ತೆಳುವಾದ ಕೆಳ ಉಡುಗೆಯುಟ್ಟರೂ ಯೋನಿಯ ಭಾಗವು ಸ್ಪಷ್ಟವಾಗಿ ಕಾಣುವಂತೆ, ಸೊಂಟಕ್ಕೆ ಮಣಿಗಳಿಂದ ಅಲಂಕೃತಗೊಂಡ ಡಾಬನ್ನು (ಸೊಂಟಪಟ್ಟಿ) ಧರಿಸಿದ್ದಾಳೆ, ಎರಡೂ ಕಾಲುಗಳಲ್ಲಿ ಐದಾರು ಸುರುಳಿಯ ಕಾಲ್ಗಡಗ ಕೈಯಲ್ಲಿ ವಿಶೇಷ ರೀತಿಯಿಂದ ಅಲಂಕೃತಗೊಂಡ ಬಳೆ, ಭುಜಬಂಧ, ಮಣಿಗಳಿಂದ ರಚಿಸಿದಂತಹ ಕೊರಳಹಾರ, ವಿಶೇಷವಾದ ಆಕೃತಿಯ ಭಾರವುಳ್ಳ ಕಿವಿಯೋಲೆ ಹಾಗೂ ಕೇಶಾಲಂಕಾರದಿಂದ ಅಲಂಕೃತಗೊಂಡಿದ್ದಾಳೆ. ಮೇಲುಡುಗೆ ಇಲ್ಲದ ರಾಣಿಯು ಬಲಮುಂಗೈಯನ್ನು ಭುಜಕ್ಕೆ ತಾಗುವಂತೆ ಮಡಚಿ ಎಡಗೈ ಸಾಮಾನ್ಯ ರೀತಿಯಲ್ಲಿರುವಂತೆ ನಿಂತಿದ್ದಾಳೆ.

ಇದೆ ಶಿಲ್ಪದಲ್ಲಿ ಬರುವ ಮೂವರು ಪರಿಚಾರಿಕೆಯರಲ್ಲಿ ಒಬ್ಬಳು ಛತ್ರವನ್ನು ಹಿಡಿದು (ಕೊಡೆ) ಇನ್ನಿಬ್ಬರು ಚೌರಿಯನ್ನು ಬೀಸುವ ರೀತಿಯಲ್ಲಿ ನಿಂತಿದ್ದು ಮೇಲುಡುಗೆ ಇಲ್ಲದೆ ಕೆಳ ಉಡುಗೆಯನ್ನು ಮಾತ್ರ ಧರಿಸಿದ್ದಾರೆ. ಸ್ವಲ್ಪ ಪ್ರಮಾಣದಲ್ಲಿ ಸಿಂಗರಿಸಿಕೊಂಡಿದ್ದಾರೆ. ಕೊರಳಲ್ಲಿ ಹಾರವಿಲ್ಲ ಕಾಲ್ಗಡಗ ಕೈಬಳೆ ಕೇಶಾಲಂಕಾರದಿಂದ ಕೂಡಿದ ಈ ಸ್ತ್ರೀ ಆಕೃತಿಗಳಿಗೆ ಯೋನಿಭಾಗವು ಸ್ಪಷ್ಟ ಕಾಣುವಂತೆ ಶಿಲ್ಪವು ರಚಿಸಲಾಗಿದೆ. ಸ್ತೂಪದಲ್ಲಿ ಕಂಡುಬರುವ ಲೌಕಿಕ ಶಿಲ್ಪಗಳಲ್ಲಿ ಸ್ತ್ರೀ ಶಿಲ್ಪಗಳಿಗೆ ವಿಶೇಷವಾಗಿ ಯೋನಿಭಾಗವನ್ನು ಕಾಣುವಂತೆ ಶಿಲ್ಪರಚಿಸಲಾಗಿದೆ. ಅಂದಿನ ದಿನಮಾನಗಳ ಉಡುಗೆಯ ವೈವಿಧ್ಯತೆ ಹೀಗೆ ಇತ್ತೆಂದು ಅರ್ಥೈಸಿಕೊಳ್ಳಬೇಕಾಗುತ್ತದೆ. ಅಥವಾ ಬಟ್ಟೆಯ ಪ್ರಾಮುಖ್ಯತೆ ಬಹುಶಃ ಆ ಕಾಲದಲ್ಲಿ ಸ್ವಲ್ಪ ಪ್ರಮಾಣದಲ್ಲಿತ್ತೆಂದು ತಿಳಿದುಬರುತ್ತದೆ. ಡಾ. ಸೂರ್ಯನಾಥ ಕಾಮತ್ ರವರು ವಿವರಿಸುವಂತೆ ಶಾತವಾಹನರ ಕಾಲದ ಶಾಸನಗಳಲ್ಲಿ "ಕೋಲಿಕ ನಿಕಾಯ" ಎಂಬ ನೇಕಾರರ ಶ್ರೇಣಿ (ಗಿಲ್ಡ್)ಗಳ ಬಗ್ಗೆ ಸೂಚಿಸಲಾಗಿದೆ ಎಂದು ತಿಳಿದುಬರುತ್ತದೆ.[೩]

---

೩. ಡಾ. ಸೂರ್ಯನಾಥ ಕಾಮತ್. (ಲೇ), ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ ಗುಲ್ಬರ್ಗಾ ಗತಕಾಲದಿಂದ ಅಂಕಣ ೨೭.೧೨.೨೦೧೧

ಈ ರೀತಿ ಮೇಲುಡುಗೆ ಇಲ್ಲದೆ ಹಾಗೂ ಕೆಳಗಿನ ಉಡುಗೆ ತೆಳುವಾಗಿದ್ದು ಯೋನಿ ಭಾಗವನ್ನು ಕಾಣುವಂತೆ ಆಗಿನ ಆಭೂಷಣಗಳು ಶಿಲ್ಪಿಸಿರುವ ಶಿಲ್ಪಿಯ ಭಾವನೆ ಆ ಸ್ತ್ರೀಯೊಳಗಿರುವಂತಹ ತಾಯ್ತನ, ಸಮೃದ್ಧಿ ಅಥವಾ ಶೃಂಗಾರರೂಪವಾಗಿ ತೋರಿಸಿದ್ದಾನೆಂದು ತಿಳಿದುಬರುತ್ತದೆ. ಈ ಶಿಲ್ಪದ ಕೆಳಗಿನ ಪಟ್ಟಿಯಲ್ಲಿ ಎಲ್ಲಾ ಶಿಲ್ಪಗಳಲ್ಲೂ ಬರುವಂತೆ ಕೊಕ್ಕಿನಲ್ಲಿ ಕಮಲದ ಹೂವನ್ನು ಹಿಡಿದುಕೊಂಡು ಸಾಲುಸಾಲಾಗಿ ಹಾರುತ್ತಿರುವ ಹಂಸಗಳು ಮೇಲ್ಭಾಗದ ಪಟ್ಟಿಯಲ್ಲಿ ರಾಜಾ ಅಶೋಕ ಎಂಬ ಸೂಚಿ ಶಾಸನವನ್ನು ಬರೆಯಲಾಗಿದೆ. ಇದರಿಂದ ಲಿಪಿಯ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳಬಹುದು. ಈ ಮೇಲಿನ ಸೂಚಿಶಾಸನ ವಿಲ್ಲದಿದ್ದರೆ ಈ ಶಿಲ್ಪದಲ್ಲಿ ಬರುವ ಆಕೃತಿಗಳು ಯಾರದೆಂದು ತಿಳಿಯದೇ ಹೋಗಬಹುದಾಗಿತ್ತು. ಸಾಮಾನ್ಯವೆಂಬಂತೆ ಫಲಕ ಶಿಲ್ಪದ ಒಂದು ಬದಿಗೆ ಕಂಬವನ್ನು ಮಧ್ಯದಲ್ಲಿ ಕಮಲದ ಹೂವಿಗಿಂತ ಭಿನ್ನವಾದ ಒಂದು ಹೂವು ಮೇಲೆ ಕೆಳಗೆ ಅರ್ಧ ಕಮಲದ ಹೂಗಳು ಕಂಬದ ಮೇಲೆ ವಿಮುಖವಾಗಿ ಕುಳಿತಿರುವ ಎರಡು ಸಿಂಹಗಳನ್ನು ಕೆತ್ತಲಾಗಿದೆ. ಸ್ತೂಪದ ಅವಶೇಷಗಳಲ್ಲಿ ಕಂಡುಬರುವ ಎಲ್ಲಾ ಸ್ತ್ರೀ ಆಕೃತಿಗಳ ಕಾಲ್ಗಡಗಗಳು ದಪ್ಪನಾದ ಸುರುಳಿಯಾಕಾರದಲ್ಲಿ ಸುತ್ತಿರುವಂತೆ ತೋರಿಸಲಾಗಿದೆ.

ಇನ್ನೊಂದು ಫಲಕ ಶಿಲ್ಪದಲ್ಲಿ ಆರು ಜನ ಹೆಂಗಸರು ಹಣದ ಗಂಟನ್ನು ಭುಜದ ಮೇಲಿರಿಸಿಕೊಂಡು ವಿವಿಧ ಭಂಗಿಯಲ್ಲಿ ಹೊರಟಿರುವಂತೆ ಮೇಲೆ ತಿಳಿಸಿದ ರಾಣಿಯ ಆಭರಣಕ್ಕಿಂತ ಸ್ವಲ ಸಾಮಾನ್ಯ ರೀತಿಯ ಆಭರಣಗಳು, ಕೊರಳಲ್ಲಿ ಸಣ್ಣದಾದ ಮಣಿಯಹಾರ ಕೈಬಳೆ ಬುಜಬಂಧ ತೆಳುವಾದ ಕೆಳಉಡುಗೆ ಸೊಂಟಪಟ್ಟಿ ಕಾಲ್ಗಡಗ ಕಿವಿಯೋಲೆಗಳಿಂದ ಸಿಂಗರಿಸಿಕೊಂಡು ಕೇಶಾಲಂಕೃತರಾಗಿ ಸೊಂಟದಲ್ಲಿ ಕಟ್ಟಿರುವ ಬಟ್ಟೆ ಇಬ್ಬರು ಸ್ತ್ರೀಯರ ಮಧ್ಯೆ ಹಾರಾಡುತ್ತಿರುವಂತೆ ತೆಳು ಉಬ್ಬು ಗೆತ್ತನೆಯಲ್ಲಿ ತೋರಿಸಲಾಗಿದೆ. ಈ ಸ್ತ್ರೀ ಶಿಲ್ಪಗಳ ಅಂಗಭಾಗವೂ ಸ್ಪಷ್ಟಕಾಣುವಂತೆ ತೋರಿಸಲಾಗಿದೆ. ಬಹಳಷ್ಟು ಛಿದ್ರಗೊಂಡ ಶಿಲ್ಪ ಇದಾಗಿದ್ದು ಒಂದು ಬದಿಯಲ್ಲಿರುವ ಕಂಬದ ತಳಭಾಗ ಮಾತ್ರ ಉಳಿದಿದ್ದು ಸೂರ್ಯಮುಖಿ ಹೂವಿನ ಅರ್ಧಭಾಗ ತೆಳು ಉಬ್ಬಯುಗೆತ್ತನೆಯಲ್ಲಿ ರಚಿಸಲಾಗಿದೆ.

ಶಾತವಾಹನ ರಾಜ ಶಾತಕರ್ಣಿಯ ಉಬ್ಬುಶಿಲ್ಪ

ಈ ಶಿಲ್ಪವೂ ಕೂಡ ಬಹಳ ಛಿದ್ರಗೊಂಡಿದ್ದು ಗೌತಮಿಪುತ್ರ ಶಾತಕರಣಿಯು ಬೌದ್ಧ ಭಿಕ್ಷುಗಳಿಗೆ ದಾನಮಾಡುತ್ತಿರುವ ಸನ್ನಿವೇಶದ ಉಬ್ಬುಶಿಲ್ಪ ಇದಾಗಿದೆ. ಗೌತಮಿ ಪುತ್ರ ಶಾತಕರಣೆ, ಶಾತವಾಹನರ ಇತಿಹಾಸದಲ್ಲಿ ತನ್ನದೆ ಆದ ವೈಶಿಷ್ಟ್ಯದಿಂದ ಗುರುತಿಸಿಕೊಂಡಿದ್ದಾನೆ. ಹಿಂದೂ ಧರ್ಮದ ಪಕ್ಷಪಾತಿ ಆಗಿದ್ದರೂ ಬ್ರಾಹ್ಮಣ ಮತ್ತು ಬೌದ್ಧರಿಗೆ ಸಮನಾಗಿ ಮತ್ತು ಧಾರಾಳವಾಗಿ ದಾನ

ಕೊಡುತ್ತಿದ್ದ. ಪ್ರಜೆಗಳಿಗಾಗಿ, ತನ್ನ ಕರ್ತವ್ಯ ನಿರ್ವಹಣೆಗಾಗಿ ಅವನು ಎಲ್ಲಾ ವಿದ್ಯೆಗಳ ಪರಿಣಿತಿ ಪಡೆದುಕೊಂಡಿದ್ದ. ಒಂದು ಸಾರಿಯೂ ಸೋಲದ ದೊಡ್ಡ 'ರಣವೀರ' ಮತ್ತು 'ಶತ್ರುಭಯಂಕರ' ಆಗಿದ್ದ. ಒಟ್ಟಾರೆ ಹೇಳುವುದಾದರೆ ಒಳ್ಳೆಯ ಆಡಳಿತಗಾರ, ರಾಜನೀತಿ ನಿಪುಣ, ಪರಿಣತ, ಧನುರ್ವಿದ್ಯಾ ಧರೀಣ ಮತ್ತು ಭಕ್ತಿಯುತ ಮಗನಾಗಿ ಗೌತಮಿಪುತ್ರ ಮಹಾನ್ ವ್ಯಕ್ತಿ ಎನಿಸಿದ್ದಾನೆ.[೪]

ಇಂತಹ ವಿಶೇಷತೆಗಳುಳ್ಳ ಅಪ್ರತಿಮ ಆಡಳಿತಗಾರನಾಗಿದ್ದ ಗೌತಮಿಪುತ್ರ ಶಾತಕರ್ಣಿಯು ದಾನನೀಡುತ್ತಿರುವ ಸನ್ನಿವೇಶದ ಶಿಲ್ಪದಲ್ಲಿ ಶಾತಕರ್ಣಿಯು ದಾನನೀಡುತ್ತಿರುವಂತೆ ಆತನ ಎದುರಿಗೆ ನಿಂತಿರುವ ಇಬ್ಬರು ಬೌದ್ಧಭಿಕ್ಕುಗಳು ದಾನವನ್ನು ಸ್ವೀಕರಿಸುತ್ತಿರುವಂತೆ ರಚಿಸಿರುವ ಉಬ್ಬುಗೆತ್ತನೆಯ ಶಿಲಾಫಲಕ ಇದಾಗಿದೆ. ಶಾತಕರ್ಣಿಯು ವಿಶೇಷ ರೀತಿಯಿಂದ ಅಲಂಕರಿಸಿದ ಪೇಠ ತಲೆಯ ಮೇಲೆ ಧರಿಸಿದ್ದು, ಮಣೆಗಳಿಂದ ರಚಿಸಿದಂತಹ ಕೊರಳಹಾರ, ಕೈಬಳೆ, ಭುಜಬಂಧ ದೊಡ್ಡ ಅಳತೆಯ ಕಿವಿಯೋಲೆ ಕೆಳ ಉಡುಗೆಯನ್ನುಟ್ಟು ಬಲಗೈಯಿಂದ ಕಮಂಡಲವನ್ನೆತ್ತಿ ಎಡಗೈಯಿಂದ ತರ್ಪಣಬಿಡುವಂತೆ ಮುಂಚಾಚಿದ್ದಾನೆ. ಈತನ ಎದುರಿಗೆ ಇಬ್ಬರು ಬೌದ್ಧಭಿಕ್ಕುಗಳು ದಾನವನ್ನು ಸ್ವೀಕರಿಸುತ್ತಿರುವವರಂತೆ ಕೈಗಳನ್ನು ಮುಂದೆ ಚಾಚಿ ನಿಂತಿದ್ದಾರೆ. ಇವರಿಗೆ ಯಾವುದೇ ಆಭರಣದ ಅಲಂಕಾರವಿಲ್ಲ ಮತ್ತು ಇವರ ಉಡುಗೆಯಿಂದ ಬೌದ್ಧಭಿಕ್ಕುಗಳೆಂದು ಗುರುತಿಸಲು ಸಹಾಯವಾಗುತ್ತದೆ. ಈ ಮೂರು ಜನರ ಮಧ್ಯದಲ್ಲಿ ಕುಬ್ಜ ಸ್ತ್ರೀಯೊಬ್ಬಳು ಪದಾರ್ಥ ಒಂದು ಅಗಲವಾದ ಪಾತ್ರೆಯಲ್ಲಿ ಹಿಡಿದುಕೊಂಡು ಎರಡೂ ಕೈಗಳಿಂದ ಮೇಲಕ್ಕೆತ್ತಿ ಹಿಡಿದಿದ್ದಾಳೆ. ಗೌತಮಿಪುತ್ರ ಶಾತಕರ್ಣಿಯ ಹಿಂದೆ ಪರಿಚಾರಕನೊಬ್ಬ ಛತ್ರವನ್ನು ಹಿಡಿದು ನಿಂತಿದ್ದಾನೆ. ಈತನ ದೇಹದ ಸ್ವಲ್ಪಭಾಗ ಮತ್ತು ಮುಖ ಮಾತ್ರ ನಮಗೆ ಕಾಣುತ್ತದೆ. ಬೇರೆ ಫಲಕ ಶಿಲ್ಪಗಳಲ್ಲಿ ರಚಿಸಿದಂತೆ ಈ ಶಿಲ್ಪದಲ್ಲಿ ಹಿಂದುಗಡೆ ಯಾವುದೇ ಚೈತ್ಯಾಲಯವಾಗಲಿ ಯಾವುದೇ ಗ್ರಾಮೀಣ ಪರಿಸರದ ಸನ್ನಿವೇಶವಾಗಲಿ ರಚಿಸಿರದೆ ಖಾಲಿ ಜಾಗವನ್ನು ಬಿಡಲಾಗಿದೆ. ಫಲಕ ಶಿಲ್ಪಗಳೆಲ್ಲವುಗಳ ಒಂದು ಬದಿಗೆ ಬರುವ ಕಂಭ ಈ ಶಿಲ್ಪದಲ್ಲಿಯೂ ರಚಿಸಲಾಗಿದೆ. ಅದು ಬಹಳಷ್ಟು ಛಿದ್ರಗೊಂಡಿದೆ.

ಶಾತವಾಹನರು

ಶಾತವಾಹನರಲ್ಲಿ ಹಾಲ, ಶಾಲಿವಾಹನ, ಗೌತಮಿಪುತ್ರ, ಕುಂತಳ ಮತ್ತು ಯಜ್ಞಶ್ರೀ ಇವರುಗಳು ಅತ್ಯಂತ ಪ್ರಸಿದ್ಧರು. ಅವರನ್ನು ಶಾತರಕರ್ಣಿಗಳೆಂದು ಕರೆಯುತ್ತಿದ್ದರು. ಅವರಲ್ಲಿ ಶಾಲಿವಾನನು ಶಕ ಪುರುಷನಾಗಿದ್ದು ಕ್ರಿ.ಶ. ೭೮ರಲ್ಲಿ ತನ್ನ ಹೆಸರಿನಿಂದಲೆ ಕಾಲಗಣನೆಗೆ ಚಾಲನೆ ನೀಡಿದನು. ಶಾತವಾಹನರ ರಾಜ್ಯವು ಬಹಳ ವಿಶಾಲವಾಗಿದ್ದರೂ, ಬಳ್ಳಾರಿ ಧಾರವಾಡ ಜಿಲ್ಲೆಗಳನ್ನು

೪. ಹೆಚ್.ವಿ. ಶ್ರೀನಿವಾಸಮೂರ್ತಿ, ಆರ್. ರಾಮಕೃಷ್ಣನ್ (ಲೇ), ಸಮಗ್ರ ಕರ್ನಾಟಕ ಚರಿತ್ರೆ ಪುಟ ೩೪.

ಶಾತವಾಹನೀಹಾರ ಎಂದು ಕರೆಯಲಾಗುತ್ತಿತ್ತು. ಬಳ್ಳಾರಿ ಜಿಲ್ಲೆಯ ಹಡಗಲಿಯಲ್ಲಿ ದೊರೆತಿರುವ ಅವರ ಶಾಸನಗಳಲ್ಲಿ ಶಾತವಾಹನರನ್ನು ಕುಂತಳ ಸ್ವಾಮಿ ಗಳೆಂದು ಕರೆಯಲಾಗಿದೆ. ಅವರು ರೋಮ್ ಸಾಮ್ರಾಜ್ಯದೊಡನೆ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದ್ದರು. ಅವರ ಕಾಲದಲ್ಲಿ ಪ್ರಾಕೃತವು ರಾಜಭಾಷೆಯಾಗಿದ್ದು, ಪ್ರಾಕೃತ ಸಾಹಿತ್ಯದ ಬೆಳವಣಿಗೆಗೆ ಅಪಾರ ಪ್ರೋತ್ಸಾಹ ದೊರಕಿತು. ಅಜಂತಾ ಚಿತ್ರಕಲೆಯನ್ನು ಪ್ರಾರಂಭಿಸಿದವರು ಇವರೇ ಎಂದು ನಂಬಲಾಗಿದೆ.[೫]

ಶಾತವಾಹನರ ಕಾಲದಲ್ಲಿ ಸಾಮಾಜಿಕ ಸ್ಥಿತಿ

ಶಾತವಾಹನರ ಕಾಲದ ಹಿಂದೂ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಗಗಳ ಸಂಪ್ರದಾಯವೇ ಮುಂದುವರಿದು ಜನರು ತಮ್ಮ ತಮ್ಮ ರೂಢಿಯ ವೃತ್ತಿಗಳಲ್ಲಿ, ತೊಡಗಿ ಆಯಾ ವರ್ಗದ ಸೌಲಭ್ಯಗಳನ್ನು ಹೊಂದಿದ್ದರು. ಹೆಚ್ಚಿನ ಜನರು ವ್ಯಾಪಾರ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಹಲವು ಉದ್ಯೋಗಗಳಲ್ಲಿ ತೊಡಗುತ್ತಿದ್ದರು. ಇವರ ಕಾಲದ ಶಾಸನಗಳಲ್ಲಿ ಅನೇಕ ಉದ್ಯೋಗಿಗಳ ಹೆಸರು ಕಂಡುಬರುತ್ತವೆ. ದನ್ನಿಕ (ಧಾನ್ಯವ್ಯಾಪಾರಿ), ಮಾಲಕಾರ (ಹೂವಾಡಿಗ), ಕಮಾರ (ಕಮ್ಮಾರ), ತಮ್ಮಕಾರ (ಚರ್ಮದ ಕೆಲಸದವನು) ಗಾಂಧಿಕ (ಸುಗಂಧಕಾರ), ಸುವರ್ಣಕಾರ (ಅಕ್ಕಸಾಲೆ), ಮಣೀಕಾರ (ರತ್ನದ ಕೆಲಸ) ಮಿಥಿಕ (ಹರಳು ಹೊಳಪುಗಾರ), ಸೆಲವಧಕಿ (ಕಲ್ಲುಕುಟಿಗ), ವಧಕಿ (ಬಡಗಿ), ಒದಯಂತ್ರಿಕ (ನೀರಿನ ಯಂತ್ರಗಾರ) ದಾಶಕ (ಬೆಸ್ತ) ಇತ್ಯಾದಿ. ಈ ಜನರಲ್ಲಿ ಅನೇಕ ಬೌದ್ಧ ಗೃಹಸ್ಥವರ್ಗಕ್ಕೆ ಸೇರಿದವರು. ಭಿಕ್ಷು ಸಂಘಗಳಿಗೆ ಮತ್ತು ವಿಹಾರಗಳಿಗೆ ಅನೇಕ ದಾನ ದತ್ತಿಗಳನ್ನು ಕೊಟ್ಟಿದ್ದಾರೆ.

ಶಾತವಾಹನರ ಕಾಲದ ವೇಷ ಭೂಷಣ

ಸ್ತ್ರೀ ಪುರುಷರು ಅನೇಕ ಬಗೆಗಳಲ್ಲಿ ಶೃಂಗಾರ ಮಾಡಿಕೊಳ್ಳುತ್ತಿದ್ದರು. ಹೆಂಗಸರು ಚಿನ್ನದ ಕಿವಿಯುಂಗುರಗಳು, ಕಡಗ, ಬಳೆ, ಕಾಲೊಂದಿಗೆಗಳು, ಮುತ್ತು, ರತ್ನಗಳ ಕಂಠಹಾರಗಳನ್ನು, ಸುವರ್ಣ ಪುಷ್ಪ ಹವಳದ ಮಣೆಗಳನ್ನು ಧರಿಸುತ್ತಿದ್ದರು. ಗಂಡಸರು ಚಿನ್ನದ ಆಭರಣಗಳನ್ನು ಧರಿಸುತ್ತಿದ್ದರು. ಅಮರಾವತಿ ಮತ್ತು ಇತರ ಪ್ರದೇಶಗಳ ಶಿಲ್ಪಗಳು ಇವರ ವಸ್ತ್ರ, ವೇಷ ಭೂಷಣಗಳ ಬಗೆಗೆ ಹೆಚ್ಚು ಬೆಳಕನ್ನು ಚೆಲ್ಲುತ್ತವೆ. ಹೆಂಗಸರು ಅನೇಕ ಭಂಗಿಗಳಲ್ಲಿ ಸುಂದರವಾಗಿ ಕೇಶ ಶೃಂಗಾರ ಮಾಡಿಕೊಳ್ಳುತ್ತಿದ್ದರೆಂಬುದು ಕಂಡುಬರುತ್ತದೆ.[೬]

---

೫. ಬಿ.ಎಂ. ಚಂದ್ರಶೇಖರಯ್ಯ (ಲೇ), ಕರ್ನಾಟಕ ಸಂಸ್ಕೃತಿ ಇತಿಹಾಸ ಪರಂಪರೆ ಪುಟ-೧

೬. ಶ್ರೀ ಬಿ.ಎಲ್. ನರಸಿಂಹಾಚಾರ್ (ಲೇ), ಶ್ರೀ ಅ.ರಾ. ಮಿತ್ರ (ಅ), ಕರ್ನಾಟಕದ ಪರಂಪರೆ ಸಂ-೧, ಶಾತವಾಹನರ ಕಾಲದ ಕರ್ಣಾಟಕದ ಧರ್ಮ ಮತ್ತು ಸಮಾಜ, ಪುಟ-೧೨೮

ಬುದ್ಧನ ಸಾಂಕೇತಿಕರೂಪದ ಪೂಜಾಫಲಕಗಳು

ಬುದ್ಧನ ಸಾಂಕೇತಿಕ ಚಿಹ್ನೆಗಳಾದಂತಹ ಪಾದುಕೆ, ಬೋಧಿವೃಕ್ಷ, ಆಸನ (ಕುಳಿತುಕೊಳ್ಳುವ ಸಿಂಹಾಸ) ಚಕ್ರ ಇತ್ಯಾದಿಗಳನ್ನು ವಿವಿಧ ರೀತಿಯಲ್ಲಿ ಪೂಜೆ ಮಾಡುತ್ತಿರುವ ಭಕ್ತರ ಶಿಲ್ಪಗಳು ಕನಗನಹಳ್ಳಿಯ ಶಿಲ್ಪಾವಶೇಷಗಳ ಫಲಕ ಉಬ್ಬುಶಿಲ್ಪಗಳಲ್ಲಿ ಅನೇಕ ವಿವಿಧ ರೀತಿಗಳಲ್ಲಿ ಕಂಡುಬರುತ್ತವೆ.

ಒಂದು ಶಿಲ್ಪಫಲಕದಲ್ಲಿ ಎರಡು ಭಾಗಗಳಾಗಿ ವಿಭಾಗಿಸಿಕೊಂಡು ಮೇಲಿನ ಮತ್ತು ಕೆಳಗಿನ ಎರಡೂ ಭಾಗದಲ್ಲಿ ಈ ರೀತಿಯ ಬುದ್ಧನ ಸಾಂಕೇತಿಕ ರೂಪಗಳ ಪೂಜೆಯ ದೃಶ್ಯಗಳು ಶಿಲ್ಪಿಸಲಾಗಿದೆ. ಮೇಲಿನ ಭಾಗದ ಫಲಕ ದೃಶ್ಯದ ಮಧ್ಯದಲ್ಲಿ ಸಿಂಹಾಸನ ಅದರ ಮುಂದುಗಡೆ ಪಾದುಕೆಗಳು ಆಸನದ ಮೇಲೆ ಚಂದ್ರನನ್ನು ಹೋಲುವಂತಹ ಒಂದು ಚಕ್ರ ರಚಿತವಾಗಿದೆ. ಸಿಂಹಾಸನದ ಯಥಾದರ್ಶನದ ಪರಿಕಲ್ಪನೆಯನ್ನು ಶಿಲ್ಪಿಯಾದವನು ಬಹುಸುಂದರವಾಗಿ ರೂಪಿಸಿದ್ದಾನೆ. ಆಸನದ ಎಡಬಲಗಳಲ್ಲಿ ಇಬ್ಬರು, ಮುಂದೆ ಇಬ್ಬರು ಭಕ್ತರ ಉಬ್ಬುಶಿಲ್ಪಗಳು ವಸ್ತ್ರಾಭರಣ ಪೇಠಗಳಿಂದ ಅಲಂಕೃತರಾದ ಈ ನಾಲ್ವರಲ್ಲಿ ಒಬ್ಬ ಕೈಮುಗಿದು ವಂದಿಸುತ್ತಿದ್ದರೆ ಇನ್ನುಳಿದ ಮೂವರು ಯಾವುದೋ ಗಹನವಾದ ವಿವೇಚನೆಯಲ್ಲಿರುವಂತೆ ಕಂಡರಿಸಲಾಗಿದೆ. ಬಲಬದಿಯಲ್ಲಿರುವ ಕಂಬ ಪಟ್ಟಿಕೆಯಲ್ಲಿ ಅನೇಕ ದಳಗಳುಳ್ಳ ಕಮಲಪುಷ್ಪ ಮಧ್ಯದಲ್ಲಿ, ಆಚೀಚೆಗೆ ಅರ್ಧ ಕಮಲಗಳನ್ನು ರಚಿಸಿ ಕಂಬದ ಮೇಲೆ ವಿಮುಖವಾಗಿ ಕುಳಿತಿರುವ ಎರಡು ಸಿಂಹಗಳನ್ನು ಕೆತ್ತಲಾಗಿದೆ. ಈ ಸಿಂಹಗಳನ್ನು ವಿಮುಖವಾಗಿ ರಚಿಸಿರುವ ಶಿಲ್ಪಿಯು, ನೋಡುಗನ ದೃಷ್ಟಿಯು ಮುಂದಿನ ಫಲಕಕ್ಕೆ ಮುಂದುವರಿಯಲಿ ಎಂಬ ವಿವೇಚನಾಯುತವಾದ ಸಂಯೋಜನೆಯನ್ನು ಪ್ರಚುರಪಡಿಸಿದಂತೆ ತೋರುತ್ತದೆ. ಈ ಶಿಲ್ಪವು ಕೂಡ ಬಹಳಷ್ಟು ಭಗ್ನಗೊಂಡಿದ್ದು ಜೋಡಿಸಿ ಇಡಲಾಗಿದೆ.

ಇದೇ ಶಿಲ್ಪದ ಕೆಳಭಾಗದಲ್ಲಿ ಕಂಡರಿಸಲಾದ ಸಂಯೋಜನೆಯ ಮಧ್ಯದಲ್ಲಿ ಆಸನ ಮುಂದೆ ಪಾದುಕೆಗಳು ಆಸನದ ಹಿಂದುಗಡೆ ಬೋಧಿವೃಕ್ಷವನ್ನು ರಚಿಸಿ ಆಚಿಚೆಗೆ ಪೂಜಿಸುತ್ತಿರುವ ಭಕ್ತಾದಿಗಳನ್ನು ವಿವಿಧ ಭಂಗಿಗಳಲ್ಲಿ ಉಬ್ಬುಗೆತ್ತನೆಯಲ್ಲಿ ರಚಿಸಲಾಗಿದೆ. ಬಲಬದಿಯಲ್ಲಿ ನಿಂತಿರುವ ಭಕ್ತ ಎರಡೂ ಕೈಗಳನ್ನು ಜೋಡಿಸಿ ವಂದಿಸುತ್ತಿರುವಂತೆ (ನಮಸ್ಕರಿಸುತ್ತಿರುವಂತೆ) ತಲೆಯ ಮೇಲೆ ಪೇಠ, ಕಿವಿಯೋಲೆಗಳು, ಕೊರಳಹಾರ, ಕೈಬಳೆ, ಭುಜಬಂಧ, ತೆಳುವಾದ ಕೆಳಉಡುಗೆಯನ್ನುಟ್ಟು ಸೊಂಟಕ್ಕೆ ಕಟ್ಟಿರುವ ವಸ್ತ್ರ ಆತನ ಬಲಭಾಗದಲ್ಲಿ ಇಳಿಯಬಿದ್ದಿದೆ. ಎಡಬದಿಯಲ್ಲಿ ನಿಂತಿರುವಂತಹ ಭಕ್ತ ಕೈಯಲ್ಲಿ ಪುಷ್ಪವೊಂದನ್ನು ಹಿಡಿದು ಸಮರ್ಪಿಸುತ್ತಿರುವಂತೆ, ಆತನ ಹಿಂದೆ ಮಹಿಳೆಯೋರ್ವಳು ಅಗಲವಾದ ತಟ್ಟೆಯಾಕಾರದ ಪಾತ್ರೆಯೊಂದನ್ನು ಹಿಡಿದು ನೈವೇದ್ಯ ಸಮರ್ಪಿಸಲು ಅಣಿಯಾಗಿರುವಂತೆ ತೋರಿಸಲಾಗಿದೆ. ಬಲಬದಿಯಲ್ಲಿರುವ ಪುರುಷ ಆಕೃತಿಯ ಹಿಂದೆಯೂ ಒಬ್ಬ ಸ್ತ್ರೀಯು ಹೂವಿನ

ಗುಚ್ಛವನ್ನು ಹಿಡಿದುನಿಂತಿರುವಂತೆ ರಚಿಸಲಾಗಿದೆ. ಈ ಶಿಲ್ಪಗಳನ್ನು ರಚಿಸಿರುವ ಶಿಲ್ಪಿಯು ಅಂದಿನ ಸಾಮಾಜಿಕ ಜೀವನದ ಜನರ ಪೂಜಾ ವಿಧಾನದ ವಿವಿಧ ಬಗೆಗಳನ್ನು ತೋರಿಸುವಲ್ಲಿ ಬಾಹ್ಯ ಆಕೃತಿಗಳನ್ನಷ್ಟೇ ವೈಭವೀಕರಿಸದೆ ಅವರವರ ಆಂತರ್ಯದಲ್ಲಿದ್ದಂತಹ ಭಕ್ತಿಯ, ಆರಾಧನೆಯ, ಹೊಳಹುಗಳ ಭಾವನೆಗಳನ್ನು ತೋರಿಸುವಲ್ಲಿ ಪ್ರಯತ್ನ ಶೀಲನಾಗಿ ರಚಿಸಿದ್ದಾನೆಂದು ಹೇಳಬಹುದು.

ಇನ್ನೊಂದು ಸಾಂಕೇತಿಕ ರೂಪದ ಪೂಜೆಯ ಉಬ್ಬುಶಿಲ್ಪ ಫಲಕದಲ್ಲಿ ಪೀಠ (ಆಸನ)ದ ಮೇಲೆಯೇ ಬುದ್ಧನ ಪಾದುಕೆಗಳನ್ನಿಟ್ಟು ಹಿಂದೆ ವೃಕ್ಷದ ಬದಲಾಗಿ ಸ್ತಂಭ ಮತ್ತು ಅದರ ಮೇಲೆ ಧರ್ಮಚಕ್ರ, ಎಡ ಬಲಗಳಲ್ಲಿ ಮೂರು ಮೂರು ಪುರುಷ ಆಕೃತಿಗಳನ್ನು ರಚಿಸಲಾಗಿದೆ. ಎಲ್ಲರೂ ಒಂದೊಂದು ವಿಧದಲ್ಲಿ ಬುದ್ಧನ ಸಾಂಕೇತಿಕ ರೂಪಗಳನ್ನು ಪೂಜಿಸುತ್ತಿರುವಂತೆ ರಚಿಸಲಾಗಿದ್ದು, ಚಕ್ರದ ಅರ್ಧಭಾಗ ಮಾತ್ರ ಉಳಿದು ಮೇಲ್ಭಾಗ ಛಿದ್ರಗೊಂಡಿದೆ.

ಮತ್ತೊಂದು ಶಿಲ್ಪಫಲಕದಲ್ಲಿ ಬುದ್ಧನ ಆಸನ ಅದರ ಮುಂದೆ ಪಾದುಕೆಗಳು ಎಡಬಲಗಳಲ್ಲಿ ಇಬ್ಬರು ಎರಡೂ ಕೈ ಜೋಡಿಸಿ ಕುಳಿತಿರುವಂತೆ ಆಸನದ ಹಿಂದುಗಡೆ ಎಡಬಲಗಳಲ್ಲಿ ಇಬ್ಬರು ಚೌರಿಯನ್ನು ಹಿಡಿದು ಗಾಳಿಬೀಸುತ್ತಿರುವಂತೆ ರಚಿಸಲಾಗಿದೆ.

ಈ ರೀತಿಯಾಗಿ ಬುದ್ಧನ ಸಾಂಕೇತಿಕ ರೂಪಗಳ ಪೂಜಾ ವಿಧಾನಗಳ ವಿವೈದ್ಯತೆ ಅವರ ವೇಷಭೂಷಣದೊಂದಿಗೆ ಸಮೂಹ ಆಕೃತಿಗಳನ್ನು ಒಂದು ಚೌಕಟ್ಟಿನೊಳಗೆ ಉಬ್ಬುಗೆತ್ತನೆಯಲ್ಲಿ ಸಂಯೋಜಿಸಿರುವ ಜಾಣ್ಮೆ ಹಿಂದಿನ ಆಕೃತಿ, ಮುಂದಿನ ಆಕೃತಿ, ಒಂದು ವಸ್ತುವಿನ ಯಥಾದರ್ಶನದ ಸ್ವರೂಪ, ನೋಡುಗನಿಗೆ ಸಂಪೂರ್ಣ ಮಾಹಿತಿಯನ್ನು ಹಾಗೂ ಸ್ಥಳನಿರ್ದಿಷ್ಟತೆಯನ್ನು ರೂಪಿಸುವಲ್ಲಿ ಯಶಸ್ವಿ ಪ್ರಯತ್ನವನ್ನು ಮಾಡಿದ್ದಾನೆಂದು ಹೇಳಬಹುದು. ಈ ಎಲ್ಲಾ ಶಿಲ್ಪಗಳ ಮೇಲೆ ಮತ್ತು ಕೆಳಗಿನ ಪಟ್ಟಿಕೆಗಳಲ್ಲಿ ಸೂಚಿಶಾಸನಗಳನ್ನು ಬರೆಯಲಾಗಿದೆ.

ಪರಿಸರ ಸಂಬಂಧಿ ಉಬ್ಬುಶಿಲ್ಪಗಳು (ವಾಸ್ತುಮಾದರಿ ಉಬ್ಬುಶಿಲ್ಪಗಳು)

ಕನಗನಹಳ್ಳಿಯ ಸ್ತೂಪಶಿಲ್ಪಗಳಲ್ಲಿಯ ಫಲಕಗಳ ಉಬ್ಬುಗೆತ್ತನೆಯ ಲೌಕಿಕ ಶಿಲ್ಪಗಳು ಅಂದಿನ ಸಾಮಾಜಿಕ ಜೀವನದ ಚಿತ್ರಣವಾಗಿದೆ. ಮಾನವನ ಐಹಿಕ ಜೀವನದ ಹಲವಾರು ರೂಪಗಳು ಲೌಕಿಕ ಶಿಲ್ಪಗಳ ಕಲಾ ವಸ್ತು ಆಗಿವೆ. ವಿವಿಧ ಪ್ರಕಾರದ ಗಿಡಬಳ್ಳಿಗಳು ಪುಷ್ಪವಿನ್ಯಾಸಗಳು, ಬೋಧಿವೃಕ್ಷಗಳು, ಚೈತ್ಯಾಲಯಗಳ ಮಾದರಿಗಳು, ಅಂದಿನ ಜನರು ವಾಸಿಸುವಂತಹ ಕಟ್ಟಡಗಳು, ಗ್ರಾಮೀಣ ಪರಿಸರ ಎತ್ತು, ಎತ್ತಿನ ಬಂಡಿ, ಸೇವಕರು, ತಾಯಿ ಮತ್ತು ಮಗು, ಕೆಲಸದಲ್ಲಿ ನಿರತರಾದ ರೈತರು, ಮಾದರಿ ಸ್ತೂಪಗಳು ಹೀಗೆ ಅನೇಕ ಆಕೃತಿಗಳು ಮೂಡಿಬಂದು ಅಲ್ಲಲ್ಲಿ ಸೂಚಿ ಶಾಸನಗಳು ಕಂಡುಬರುತ್ತವೆ.

ಶಿಲಾಫಲಕವೊಂದರಲ್ಲಿ ಮೂಡಿಬಂದಿರುವ ಒಂದು ಉಬ್ಬುಗೆತ್ತನೆಯಲ್ಲಿ ಅನೇಕ ಕಿಟಕಿಯುಳ್ಳ ಒಂದು ಚೈತ್ಯ ಕಟ್ಟಡ, ಮಧ್ಯದಲ್ಲಿ ತೋರಿಸಲಾಗಿದ್ದು ಸುತ್ತಲೂ ಬೋಧಿವೃಕ್ಷವನ್ನು ಮತ್ತು ಕೆಲವೊಂದು ವೃಕ್ಷಗಳಿಗೆ ಸುತ್ತಲೂ ಕಟ್ಟೆಯನ್ನು ಕಟ್ಟಿರುವಂತೆ ತೋರಿಸಲಾಗಿದೆ. ಚೈತ್ಯಾಲಯದ ಮುಂದೆ ಒಂದು ಗಿಡದಬುಡದಲ್ಲಿ ಎತ್ತುಗಳನ್ನು ಬಿಟ್ಟು ನೊಗವನ್ನು ಮೇಲಕ್ಕೆ ತಳ್ಳಿರುವ ಎತ್ತಿನ ಗಾಡಿಯ ಚಿತ್ರವಿದೆ. ನೊಗದ ಕೆಳಬದಿಯಲ್ಲಿ ಒಂದು ಕುಳಿತಿರುವ ಇನ್ನೊಂದು ಎತ್ತು ನಿಂತಿರುವಂತೆಯೂ ತೋರಿಸಲಾಗಿದ್ದು, ನೊಗವನ್ನು ಮೇಲಕ್ಕೆತ್ತಿರುವ ಗಾಡಿಯಿಂದ ರೈತನೊಬ್ಬ ಅದರಲ್ಲಿರುವ ಯಾವುದೋ ಒಂದು ಪದಾರ್ಥ ಅಥವಾ ಧನ ಧಾನ್ಯವಾಗಿರಬಹುದು ಬುಟ್ಟಿಯಲ್ಲಿ ತುಂಬಿ ಎತ್ತುವ ಪ್ರಯತ್ನ ಮಾಡುತ್ತಿದ್ದಾನೆ. ಇನ್ನೊಬ್ಬ ರೈತನು ಒಂದು ಬುಟ್ಟಿಯಲ್ಲಿಯ ಪದಾರ್ಥವನ್ನು ಕುಳಿತಿರುವ ಎತ್ತಿಗೆ ತಿನ್ನಿಸುತ್ತಿದ್ದಾನೆ. ಈ ದೃಶ್ಯದ ಪಕ್ಕದಲ್ಲಿ ಸಾಂಸಾರಿಕ ಜನರು ವಾಸಿಸುವಂತಹ ಒಂದು ಕಟ್ಟಡ ಚೈತ್ಯಮಾದರಿಗಿಂತ ತುಸು ಭಿನ್ನವಾಗಿದೆ. ಎರಡಂತಸ್ತಿನ ಕಟ್ಟಡದ ಮೇಲಂತಸ್ಥಿನಲ್ಲಿ ಒಬ್ಬ ಸ್ತ್ರೀಯು ಮಗುವನ್ನು ಎತ್ತಿಕೊಂಡು ಬಲಗೈಯಲ್ಲಿ ಕಮಲದ ಹೂವನ್ನು ಹಿಡಿದು ಕುಳಿತಿದ್ದಾಳೆ. ಅವಳ ಬಲಗಡೆಯಲ್ಲಿ ಒಂದು ಪುರುಷ ಆಕೃತಿ ಎರಡೂ ಕೈ ಮುಗಿದು ವಂದಿಸುತ್ತಿರುವಂತೆ ತೋರಿಸಲಾಗಿದೆ.

ಇದೇ ದೃಶ್ಯದ ಉಬ್ಬುಶಿಲ್ಪದಲ್ಲಿ ಇನ್ನೊಂದು ಕಟ್ಟಡದ ಮೇಲಂತಸ್ತಿನಲ್ಲಿ ಇನ್ನು ಎರಡು ಆಕೃತಿಗಳು ಎರಡೂ ಕೈ ಮುಗಿದು ವಂದಿಸುವಂತೆ ತೋರಿಸಲಾಗಿದ್ದು ಮುಖಭಾಗವು ಭಗ್ನವಾಗಿದೆ. ಈ ಶಿಲ್ಪವೂ ಛಿದ್ರಗೊಂಡಿದ್ದು ಅದನ್ನು ಜೋಡಿಸಿಡಲಾಗಿದೆ. ಶಿಲ್ಪಫಲಕದ ಮಧ್ಯದಲ್ಲಿ ತೋರಿಸಿರುವ ಅನೇಕ ಚೈತ್ಯ ಕಿಟಕಿಯುಳ್ಳ ಕಟ್ಟಡ ಹಿಂಭಾಗದ ಬೋಧಿವೃಕ್ಷಗಳ ಮಧ್ಯದಲ್ಲಿ ಚಿಕ್ಕ ಚಿಕ್ಕ ವಸತಿ ಕಟ್ಟಡಗಳನ್ನು ತೋರಿಸಿದ್ದು ಎಡಬದಿಯ ಒಂದು ಕೋನದಲ್ಲಿ ಬುದ್ಧನ ಸಾಂಕೇತಿಕ ಚಿಹ್ನೆಯಾದಂತಹ ಪಾದಗಳನ್ನು ಸಣ್ಣ ಪ್ರಮಾಣದಲ್ಲಿ ತೋರಿಸಲಾಗಿದೆ. ಎಲ್ಲಾ ಫಲಕ ಶಿಲ್ಪಗಳ ಒಂದು ಬದಿಯಲ್ಲಿ ಮಾತ್ರ ಬರುವ ಕಂಬದ ಪಟ್ಟಿಕೆಯು ಈ ಶಿಲ್ಪದಲ್ಲಿಯೂ ಇದ್ದು ಅದರಲ್ಲಿ ಕಂಭದ ರಚನೆಯು ಕಂಡುಬರುವುದಿಲ್ಲ. ಕಂಭದ ಬದಲಾಗಿ ಎತ್ತರ ನಿಲುವುಳ್ಳ ಒಬ್ಬ ಭಕ್ತನು ತನ್ನೆರಡೂ ಕೈ ಮುಗಿದು ವಂದಿಸುತ್ತಾ ಮೊಸಳೆಯ ಮೇಲೆ ನಿಂತಿರುವಂತೆ ತೋರಿಸಲಾಗಿದೆ. ಈತನ ಉಡುಗೆ ತೊಡುಗೆಗಳು ಧನಿಕವ್ಯಕ್ತಿಯಂತೆ ಬಿಂಬಿಸಲಾಗಿದ್ದು ಕೈಯಲ್ಲಿ ದೊಡ್ಡ ಬಳೆಗಳು ತಲೆಯ ಮೇಲೆ ಪೇಠ ಕಿವಿಯೋಲೆ ಕೆಳಉಡುಗೆಯನ್ನು ಉಟ್ಟಿದ್ದಾನೆ. ಸ್ತೂಪದ ಶಿಲ್ಪಗಳಲ್ಲಿ ಅಲ್ಲಲ್ಲಿ ಕಂಡುಬರುವ ಮೊಸಳೆಯ ಮುಖ ಹಿಂದೆ ಮೀನಿನ ದೇಹ ಮತ್ತು ಬಾಲದ ಆಕೃತಿ ಹೊಂದಿರುವ ಶಿಲ್ಪದ ಮೇಲೆ ಈತನು ನಿಂತಿರುವಂತೆ ತೋರಿಸಲಾಗಿದೆ. ಬಹುಶಃ ಈ ವ್ಯಕ್ತಿಯು ಸ್ವರ್ಗಸ್ಥವಾಗಿದ್ದಾನೆಂದು,

ಪ್ರಸ್ತುತದಲ್ಲಿ ಇಲ್ಲವೆನ್ನುವ ಸಾಂಕೇತಿಕತೆಯನ್ನು ಸ್ಪಷ್ಟಪಡಿಸಲು ಇಂತಹ ಪ್ರಾಣಿಯ ಮೇಲೆ ನಿಲ್ಲಿಸಿರಬಹುದು. ಫಲಕದಲ್ಲಿ ತೋರಿಸಿರುವ ದೃಶ್ಯಕಲ್ಪನೆಯು ಈತನು ತನ್ನ ಜೀವಿತಾವಧಿಯಲ್ಲಿ ಮಾಡಿರುವಂತಹ ಕಾರ್ಯಗಳಾಗಿರಬಹುದು. ತನ್ನ ಸಾಂಸಾರಿಕ ಜೀವನದ ಜಂಜಾಟದಲ್ಲೂ ಸ್ತೂಪ ಅಥವಾ ಚೈತ್ಯಾಲಯ ಕಟ್ಟಡಗಳಿಗೆ ದಾನ ನೀಡಿದ ವ್ಯಕ್ತಿಯಾಗಿರಬಹುದು. ಅಥವಾ ಸ್ತೂಪ ಹಾಗೂ ಚೈತ್ಯಾಲಯಗಳನ್ನು ಕಟ್ಟಿದ ಶಿಲ್ಪಿಯೂ ಕೂಡ ಆಗಿರಬಹುದೆಂದು ಕಾಣುತ್ತದೆ. ಈತನ ತಲೆಯ ಹಿಂಭಾಗದಲ್ಲಿ ಒಂದು ಮಾದರಿ ಸ್ತೂಪದ ಉಬ್ಬುಗೆತ್ತನೆಯಿದೆ.

ಸ್ತೂಪದ ಅಲಂಕರಣದಲ್ಲಿ ಬರುವ ಇನ್ನೊಂದು ಉಬ್ಬುಶಿಲ್ಪ ಚೈತ್ಯಾಲಯದ ಮಾದರಿ ಉಬ್ಬುಶಿಲ್ಪ ಈ ಶಿಲ್ಪದ ಎರಡೂ ಬದಿಯಲ್ಲಿ ಕಂಭಗಳನ್ನು ತೋರಿಸಿ ಮಧ್ಯದಲ್ಲಿ ಚೈತ್ಯ ಕಿಟಕಿಯುಳ್ಳ ಮಾದರಿ ಚೈತ್ಯಾಲಯವನ್ನು ಉಬ್ಬುಗೆತ್ತನೆಯಲ್ಲಿ ಕಂಡರಿಸಲಾಗಿದ್ದು ಅದರ ಮಧ್ಯ ಭಾಗದಲ್ಲಿ ಸ್ತೂಪದ ಚಿಕ್ಕ ಮಾದರಿ ಎಡಬಲಗಳಲ್ಲಿ ಗಂಧರ್ವ ಕನ್ನೆಯರು ಹಿಡಿಕೆಯುಳ್ಳ ಚೌರಿಯನ್ನು ಬೀಸುತ್ತ ಪದ್ಮಾಸನದಲ್ಲಿ ಕುಳಿತಿರುವಂತೆ ವಿಶಿಷ್ಟವಾದ ಎಲೆಗಳಿಂದ ಜೋಡಿಸಿರುವಂತಹ ಕಿರೀಟವನ್ನು ತಲೆಯ ಮೇಲೆ ಧರಿಸಿ ಕಾಲ್ಗಡಗ ಕೈಬಳೆ ಕಿವಿಯೋಲೆ ಹಾಗೂ ಕೆಳ ಉಡುಗೆಯನ್ನು ಮಾತ್ರ ಧರಿಸಿದ್ದು ಒಂದು ಬದಿಯ ಶಿಲ್ಪ ಮಾತ್ರ ಪೂರ್ಣ ಪ್ರಮಾಣದಲ್ಲಿ ಉಳಿದಿದೆ. ಇನ್ನೊಂದು ಬದಿಯ ಶಿಲ್ಪ ಭಗ್ನವಾಗಿದೆ. ಫಲಕ ಉಬ್ಬುಶಿಲ್ಪಗಳಲ್ಲಿ ಹೆಚ್ಚಾಗಿ ಕಂಡುಬರುವ ಒಂದೇ ಬದಿಯ ಕಂಬ ಈ ಶಿಲ್ಪದಲ್ಲಿ ಎರಡೂ ಬದಿಗೆ ಕಂಡುಬರುವುದು ವಿಶೇಷವಾಗಿದೆ. ಬಹುಶಃ ಒಂದು ಕಡೆಯಿಂದ ಫಲಕ ಶಿಲ್ಪಗಳನ್ನು ಜೋಡಿಸುತ್ತಾ ಬಂದಾಗ ಎರಡೂ ಕೋನೆ ಸೇರುವ ಮಧ್ಯದಲ್ಲಿ ಈ ಶಿಲ್ಪವು ಜೋಡಿಸಲಾಗಿರಬಹುದು. ಶಿಲ್ಪದ ಬಲಬದಿಯ ಕಂಬದ ಮೇಲಿರುವ ಉಬ್ಬುಶಿಲ್ಪ ಬೋಧಿವೃಕ್ಷವಾಗಿದ್ದು, ವೃಕ್ಷದ ಸುತ್ತಲೂ ಕಟ್ಟೆಯನ್ನು ರಚಿಸಿ ವೃಕ್ಷದ ಎಡಬಲಗಳಲ್ಲಿ ಕಮಲಪುಷ್ಪವನ್ನು ಹೊಂದಿರುವ ಬಳ್ಳಿ ಕೆತ್ತಲಾಗಿದೆ.

ಈ ವೃಕ್ಷ ಮತ್ತು ಕಟ್ಟೆಯ ಮುಂಭಾಗದಲ್ಲಿ ಬುದ್ಧನ ಸಾಂಕೇತಿಕ ರೂಪಗಳಾದ ಸಿಂಹಾಸನ ಮತ್ತು ಅದರ ಮುಂದೆ ಪಾದುಕೆಗಳು ರಚಿಸಲಾಗಿದೆ. ಈ ಕಂಬದ ಮೇಲ್ಭಾಗದಲ್ಲಿ, ಮನುಷ್ಯಾಕೃತಿಯನ್ನು ಹೊಂದಿ ಹಿಂದುಗಡೆ ನವಿಲಿನ ಹಾಗೆ ಗರಿಗಳುಳ್ಳ ಗಂಧರ್ವ ಪುರುಷ, ಮಧ್ಯದಲ್ಲಿರುವ ಚೈತ್ಯಾಲಯದ ಉಬ್ಬುಶಿಲ್ಪಕ್ಕೆ ಪುಷ್ಪವೃಷ್ಟಿ ಗೈಯುತ್ತಿರುವ ಹಾಗೆ ಕೆತ್ತನೆ ಮಾಡಲಾಗಿದೆ.

ಇದೆ ಉಬ್ಬು ಶಿಲ್ಪದ ಇನ್ನೊಂದು ಬದಿಯ ಕಂಬದ ಮೇಲೆ ಒಬ್ಬ ಸ್ತ್ರೀಯು ಎರಡೂ ಕೈಗಳನ್ನು ಜೋಡಿಸಿ ವಂದಿಸುತ್ತಿರುವಂತೆ ತೋರಿಸಲಾಗಿದ್ದರೂ ಮಧ್ಯದಲ್ಲಿರುವ ಚೈತ್ಯಗೃಹದ ಕಡೆಗೆ ಬೆನ್ನುಮಾಡಿ ಮುಂದಿನ ಶಿಲ್ಪ ಫಲಕದ ಕಡೆಗೆ ನೋಡುಗನ ದೃಷ್ಟಿ ಸೆಳೆಯುವ

ಶಿಲ್ಪಕಲಾವಿದನ ಸಂಯೋಜನಾ ಚಾತುರ್ಯವನ್ನು ಇಲ್ಲಿ ಗ್ರಹಿಸಿಕೊಳ್ಳಬಹುದು. ಸುರುಳಿಯಾಕಾರದ ಕಾಲ್ಗಡಗಗಳು ಕೈಬಳೆ ತೆಳುವಾದ ಕೆಳಉಡುಗೆ ಸೊಂಟಕ್ಕೆ ಕಟ್ಟಿರುವ ಬಟ್ಟೆ ಎಡ ಬಲಗಳಲ್ಲಿ ವಿಶೇಷ ರೀತಿಯಲ್ಲಿ ಇಳಿಯಬಿದ್ದಿದೆ. ಮೇಲುಡುಗೆ ಇಲ್ಲದಿದ್ದರೂ ತಲೆಯ ಮೇಲೆ ತೆಳುವಾದ ಬಟ್ಟೆಯಿಂದ ಅಲಂಕರಿಸಿಕೊಂಡು ಬೆನ್ನ ಹಿಂದುಗಡೆ ಓಡಲಾಡುತ್ತಿರುವಂತೆ ತೋರಿಸಲಾಗಿದೆ. ಈ ಕಂಬದ ಮೇಲಿನ ಮನುಷ್ಯಾಕೃತಿ ಹಾಗೂ ನವಿಲಿನ ಗರಿಯಂತಹ ಬಾಲವುಳ್ಳ ಗಂಧರ್ವ ಶಿಲ್ಪವು ಎದುರಿನ ಕಂಬದ ಗಂಧರ್ವ ಶಿಲ್ಪದ ಅಭಿಮುಖವಾಗಿ ಪುಷ್ಪವೃಷ್ಟಿ ಗೈಯುತ್ತಿರುವಂತೆ ಬಹುಸುಂದರವಾಗಿ ರಚಿಸಲಾಗಿದೆ.

ಬುದ್ಧನ ಪ್ರಥಮ ಬೋಧನೆಯ ಸಾಂಕೇತಿಕ ಶಿಲ್ಪ

ಬುದ್ಧನು ಜ್ಞಾನೋದಯವಾದ ನಂತರ ಪ್ರಥಮ ಬೋಧನೆಯನ್ನು ಮಾಡಿದುದರ ಸಂಕೇತವಾಗಿ ರಚಿಸಿದ ಶಿಲ್ಪ ಕನಗನಹಳ್ಳಿಯ ಸ್ತೂಪಾವಶೇಷಗಳಲ್ಲಿ ಕಂಡುಬರುವ ಸಾಂಕೇತಿಕ ಶಿಲ್ಪಗಳಲ್ಲಿ ಮುಖ್ಯವಾದುದಾಗಿದೆ.

ಉಬ್ಬುಗೆತ್ತನೆಯಲ್ಲಿ ಮೂಡಿಬಂದಿರುವ ಫಲಕ ಶಿಲ್ಪ ಇದಾಗಿದ್ದು ಮಧ್ಯದಲ್ಲಿ ಸ್ತಂಭ ಮೇಲೆ ಚಕ್ರ ಎಡಬಲಗಳಲ್ಲಿ ಸ್ತ್ರೀ ಶಿಲ್ಪ ಹಾಗೂ ಮಾದರಿ ಸ್ತೂಪದ ಕೆತ್ತನೆಯನ್ನೊಳಗೊಂಡಿದೆ. ವಿಶೇಷ ರೀತಿಯ ಅಲಂಕೃತ ಸ್ತಂಭದ ಕೆಳಭಾಗದ ಎಡಬಲಗಳಲ್ಲಿ ಎರಡೆರಡು ಜಿಂಕೆಗಳನ್ನು ಕುಳಿತಿರುವ ರೀತಿಯಲ್ಲಿ ಕೆತ್ತಲಾಗಿದ್ದು ಅವುಗಳ ಹಿಂದೆ ಬರುವ ಎಡಬಲಗಳ ಪಟ್ಟಿಕೆಯಲ್ಲಿ ಕಮಲ ಪುಷ್ಪದ ಮೇಲೆ ನಿಂತು ಚೌರಿಯಿಂದ ಗಾಳಿಬೀಸುತ್ತ ಒಂದೊಂದು ಕೈ ಸೊಂಟದ ಮೇಲೆ ಇಟ್ಟುಕೊಂಡಿರುವಂತೆ ಎರಡು ಸ್ತ್ರೀ ಆಕೃತಿಗಳು ರಚಿಸಲಾಗಿದೆ. ವಿಶೇಷ ಕೇಶಾಲಂಕಾರ, ಕಿವಿಯೋಲೆ ಮಣಿಗಳಹಾರ ಕಾಲ್ಗಡಗ ಕೈಬಳೆ ಸೊಂಟದ ಪಟ್ಟ ಹಾಗೂ ಭುಜಭಂದದಿಂದ ಅಲಂಕೃತಗೊಂಡ ಈರ್ವರಲ್ಲಿ ಕೆಳ ಉಡುಗೆಯನ್ನು ಒಬ್ಬಳು ಮಾತ್ರ ಧರಿಸಿದ್ದಾಳೆ. ಇನ್ನೊಬ್ಬಳು ವಿಶೇಷ ರೀತಿಯ ಮಣಿಗಳಿಂದ ಅಲಂಕೃತವಾದ ಸೊಂಟಪಟ್ಟಿಯನ್ನು ಧರಿಸಿದ್ದಾಳೆ. ಅರ್ಧಕ್ಕಿಂತ ಕಡಿಮೆ ಭಾಗ ಉಳಿದಿರುವ ಇವರ ಮೇಲ್ಭಾಗದ ಪಟ್ಟಿಕೆಯಲ್ಲಿ ಎರಡು ಮಾದರಿ ಸ್ತೂಪಗಳನ್ನು ಕೆತ್ತಲಾಗಿದೆ.

ಕಾಲದ ಓಟ ರೇಖಾತ್ಮಕವಲ್ಲ, ಚಕ್ರಾತ್ಮಕ. ಆದುದರಿಂದಲೇ ಹಗಲು–ರಾತ್ರಿ, ಹುಟ್ಟು–ಸಾವು, ಸುಖ–ದುಖಃ, ನೋವು–ನಲಿವು, ಬೆಳಕು–ಕತ್ತಲು, ಸಿಹಿ–ಕಹಿ, ನಿರಂತರವಾಗಿ ಸುತ್ತುತ್ತಲೇ ಇರುತ್ತವೆ. ಇದೇ ಪ್ರಕೃತಿಯ ಧರ್ಮ. ಪ್ರಕೃತಿ ಪ್ರಿಯನಾದ ಬುದ್ಧನು ಇವೆಲ್ಲವುಗಳು ಸಂಕರಣಗೊಳ್ಳುವ ಚಕ್ರವನ್ನು ತನ್ನ ಸಾಂಕೇತಿಕ ಚಿಹ್ನೆಗಳಲ್ಲೊಂದಾಗಿ ಸ್ವೀಕರಿಸಿದ್ದಾನೆ.

ಚಕ್ರ

ಸಿಂಧೂ ನದಿ ನಾಗರಿಕತೆ ಹಾಗೂ ಮೆಸಪೊಟೋಮಿಯಾ ನಾಗರಿಕತೆಯಲ್ಲಿ ಮೊಟ್ಟ ಮೊದಲ ಬಾರಿಗೆ ಮಡಕೆ, ಕುಡಿಕೆಗಳನ್ನು ತಯಾರಿಸಲು ಗಾಲಿಗಳನ್ನು ಬಳಸುವ ಬಗೆಗೆ ಇತಿಹಾಸಕಾರರು ಬೆಳಕು ಚೆಲ್ಲಿದ್ದಾರೆ. ಅಂದರೆ ಕ್ರಿಸ್ತಪೂರ್ವ ೩೫೦೦ ವರ್ಷಗಳ ಹಿಂದೆಯೇ ಮಾನವ ಗಾಲಿಗಳನ್ನು ಅಡ್ಡಲಾಗಿ ಬಳಸುತ್ತಿದ್ದ. ಆದರೆ ಮೆಸಪೊಟೋಮಿಯಾದ ಚಿತ್ರಕಾರನೊಬ್ಬ ಅದನ್ನು ನಿಂತಿರುವಂತೆ ಅಂದರೆ ಉದ್ದುದ್ದವಾಗಿ ಚಿತ್ರಿಸಿರುವುದನ್ನು ನೋಡಿದಾಗ ಜನರಿಗೆ ಅದರ ಇನ್ನಿತರ ಉಪಯೋಗಗಳು ಆಲೋಚನೆಗೆ ಬಂದಿರಬಹುದು ಎಂಬುದು ಪುರಾತನ ತರ್ಕಶಾಸ್ತ್ರಜ್ಞರ ಅಭಿಮತ. ಮೊಟ್ಟಮೊದಲು ಸಿಕ್ಕಿದ ಗಾಲಿಯು ಮರದಿಂದ ನಿರ್ಮಿತವಾಗಿತ್ತು. ಅರೆ ವೃತ್ತಾಕಾರದ ಮೂರು ಹಲಗೆಗಳ ಜೋಡಣೆ, ಅದಕ್ಕೆ ಅಡ್ಡಡ್ಡವಾಗಿ ರೀಪುಗಳನ್ನು ಸಹ ಜೋಡಿಸಲಾಗಿತ್ತು. ಕ್ರಿಸ್ತಪೂರ್ವ ೩೨೦೦ ರಲ್ಲಿ ಅಂದರೆ ಚಕ್ರ ಕಂಡುಹಿಡಿದ ೩೦೦ ವರ್ಷಗಳ ನಂತರ ಅದನ್ನು ಗಾಡಿಗೆ ಅಥವಾ ಸಾರೋಟಿಗೆ ಬಳಸಲಾಯಿತು. ಕ್ರಿಸ್ತಪೂರ್ವ ೨೦೦೦ದ ಹೊತ್ತಿಗೆ ಈಜಿಪ್ಟ್‌ನಲ್ಲಿ ವ್ಯಾಪಕ ಬಳಕೆಗೆ ಬಂತು. ಕ್ರಿ.ಪೂ. ೧೪೦೦ರಲ್ಲಿ ಯುರೋಪ್‌ನಲ್ಲಿ ಇನ್ನಷ್ಟು ಅಭಿವೃದ್ಧಿಯಾಯಿತು. ಆದರೆ ಮೆಸಪೊಟೋಮಿಯಾ ಅಥವಾ ಈಜಿಪ್ಟಿನಲ್ಲಿ ಪ್ರಭಾವವಿರಲಿಲ್ಲ. ವಾಸ್ತವವಾಗಿ ಚಕ್ರದ ಪರಿಕಲ್ಪನೆ ಅತ್ಯಂತ ಪುರಾತನ ನಾಗರೀಕತೆಗಳೆಂದು ತಿಳಿಯಲಾಗುವ ಇಂಕಾ, ಅಜೆಟೆಕ್ ಅಥವಾ ಮಾಯನ್ನರಲ್ಲಿ ಇರಲೇ ಇಲ್ಲ.[೭]

ಗೌತಮ ಬುದ್ಧನಿಗೆ ಜ್ಞಾನೋದಯವಾದ ಐದು ವಾರಗಳ ಬಳಿಕ ಅವನು ಸಾರನಾಥಕ್ಕೆ ಬಂದನು. ಅವನು ತನ್ನ ಪ್ರಥಮ ಬೋಧನೆಗೆ ಆರಿಸಿಕೊಂಡ ಸ್ಥಳವಾಗಿದೆ. ಇದು ಅಂದಿನ ಕಾಲದಲ್ಲಿ ಜಿಂಕೆಗಳ ವಿಹಾರ ತಾಣವಾಗಿತ್ತು.ಇದು ವಾರಣಾಸಿಯಿಂದ ಸುಮಾರು ೧೩ ಕಿ.ಮೀ. ಗಳಷ್ಟು ದೂರದಲ್ಲಿದೆ. ೧೧ನೆಯ ಜೈನ ತೀರ್ಥಂಕರನಾದ ಶ್ರೇಯಾಂಸನಾಥನು ಕೂಡ ಇಲ್ಲೇ ಜನಿಸಿದ ಕಾರಣ ಈ ಸ್ಥಳವು ಜೈನರಿಗೂ ಪೂಜ್ಯ ಸ್ಥಳವಾಗಿದೆ. ಬುದ್ಧಗಯಾದಲ್ಲಿ ಬೋದಿ ವೃಕ್ಷದಡಿಯಲ್ಲಿ ಕುಳಿತುಕೊಳ್ಳುವ ಮೊದಲು ಬುದ್ಧನು ತನ್ನ ಐದು ಜನ ಮಿತ್ರರನ್ನು ತ್ಯಜಿಸಿದ್ದನು. ಅವರು ಸಾರನಾಥಕ್ಕೆ ಬಂದಿದ್ದರು. ಹೀಗಾಗಿ ಬುದ್ಧನು ಜ್ಞಾನೋದಯದ ಬಳಿಕ ಆ ಐದು ಜನ ಮಿತ್ರರಿಗೆ, ತನಗೆ ಧರ್ಮದ ಬಗೆಗೆ ಉಂಟಾದ ಜ್ಞಾನೋದಯದ ಅನಿಸಿಕೆಗಳನ್ನು ಹೇಳಿದರೆ ಇತರರಿಗಿಂತ ಬೇಗ ಅವರು ಅರ್ಥ ಮಾಡಿಕೊಳ್ಳಬಹುದೆಂದು ಅವರನ್ನೇ ಆರಿಸಿಕೊಂಡನು. ಆದರೆ, ಬುದ್ಧನ ನುಡಿಗಳನ್ನು ಕೇಳಿದ ಆ ಐದೂ ಜನ ಮಿತ್ರರು ಇವನ ಪ್ರಥಮ ಶಿಷ್ಯರಾದರು.

೭. ಪೂರ್ಣಪ್ರಜ್ಞ ಬೇಳೂರು (ಲೇ), ವಿಜಯವಾಣಿ, ಕನ್ನಡ ದಿನಪತ್ರಿಕೆ, ವಿಜಯ ವಿಹಾರ, ೧೨.೦೫.೨೦೧೩

ಬುದ್ಧನು ಇಲ್ಲಿ ಒಂದು ಮಳೆಗಾಲ ಕಳೆಯುವ ತನಕ ಇದ್ದನು. ಅಷ್ಟುಹೊತ್ತಿಗೆ ಅವನ ಶಿಷ್ಯಪರಿವಾರ ೬೦ಕ್ಕೆ ಮುಟ್ಟಿತು. ಬಳಿಕ ಅವರನ್ನೆಲ್ಲ ದೇಶದ ಎಲ್ಲ ಕಡೆ ಧರ್ಮಪ್ರಚಾರಕ್ಕಾಗಿ ಕಳುಹಿಸಿದನು. ಈ ೬೦ ಜನ ಅರಹಂತರೆಂದು ಕರೆಯಲ್ಪಟ್ಟರು.[೮]

ಭಾರತೀಯ ಶಿಲ್ಪಿಗೆ ಮಾನವೀಯ ಲಕ್ಷಣಗಳನ್ನು ನಿರೂಪಿಸುವುದು ಹೇಗೆಂದು ತಿಳಿದಿತ್ತು. ಆದರೆ ಅವನು ಯಾವ ರೀತಿಯ ಮಾನವೀಯ ಲಕ್ಷಣಗಳನ್ನು ನಿರೂಪಿಸಲು ಇಷ್ಟಪಟ್ಟನೆಂಬುದನ್ನು ನಾವು ಅರ್ಥಮಾಡಿಕೊಂಡಿಲ್ಲ. ಭಾರತೀಯ ಕಲೆಯ ಈ ವಿಶಿಷ್ಟ ಸಾಧನೆಯನ್ನು ಪ್ರಖ್ಯಾತ ಕಲಾವಿದ ಲಿಯೋನಾರ್ಡೋ ಡ ವಿಂಚಿಯ ಒಂದು ವಿಚಾರದೊಂದಿಗೆ ಕುಮಾರಸ್ವಾಮಿಯವರು ಹೀಗೆ ವಿವರಿಸುತ್ತಾರೆ. ಲಿಯೋನಾರ್ಡೋ ಡ ವಿಂಚಿಯ ಪ್ರಕಾರ ಒಬ್ಬ ಒಳ್ಳೆಯ ಶಿಲ್ಪಕಾರನಿಗೆ ಅಥವಾ (ಚಿತ್ರಕಾರನಿಗೆ) ಎರಡು ಗುರಿಗಳು ಪ್ರಧಾನವಾಗುತ್ತವೆ ಒಂದು ಮನುಷ್ಯ ಬಾಹ್ಯ ಸ್ವರೂಪಕ್ಕೆ ಸಂಬಂಧಿಸಿದ್ದಾದರೆ, ಎರಡನೆಯದು ಮನುಷ್ಯನ ಅಂತರಂಗದ ಉದ್ದೇಶಕ್ಕೆ ಸಂಬಂದಿಸಿದ್ದು. ಇವುಗಳಲ್ಲಿ ಮೊದಲನೆಯದು ಸುಲಭ. ಎರಡನೆಯದು ಕಷ್ಟ. ಏಕೆಂದರೆ ಎರಡನೆಯದನ್ನು ಆಯಾ ಆಕೃತಿಯ ಅಂಗಾಂಗಗಳ ಭಂಗಿ ಚಲನೆಗಳಿಂದಲೇ ಸಾಧಿಸಬೇಕು. ಕುಮಾರ ಸ್ವಾಮಿಯವರ ಪ್ರಕಾರ, ಭಾರತೀಯ ಶಿಲ್ಪಿಯು ಈ ಎರಡನೆಯ ಕಷ್ಟಕರವಾದ ಗುರಿಯನ್ನು ಸಾಧಿಸಿ ಜಗತ್ತಿನ ಇತರ ಶಿಲ್ಪಿಗಳನ್ನು ಮಿರಿಸಿದ್ದಾನೆ.[೯]

---

೮. ಮನೋರಮಾ ಹೆಜಮಾಡಿ, ಬುದ್ಧ ಜಗದನೋವ ನೀಗ ಬಂದವ)

೯. ಕೆ.ಎಸ್. ಶ್ರೀನಿವಾಸಮೂರ್ತಿ (ಲೇ), ಆನಂದ ಕುಮಾರಸ್ವಾಮಿ, ಪುಟ ೧೯



● ಶಾಸನ ಶಿಲ್ಪದ ಮುಂಭಾಗ



● ಶಾಸನ ಶಿಲ್ಪದ ಹಿಂಭಾಗ




● ಅಶೋಕನ ಭಾವ ಶಿಲ್ಪ



● ಶಾತವಾಹನ ರಾಜ ಶಾತಕರ್ಣಿ ಶಿಲ್ಪ





● ಸಾಮಾಜಿಕ ಜನಜೀವನ ಬಿಂಬಿಸುವ ಉಬ್ಬುಶಿಲ್ಪಗಳು ●



● ಚೈತ್ಯ ಮಾದರಿಯ ಉಬ್ಬುಶಿಲ್ಪ



ಜನಜೀವನ ಸಂಬಂಧಿ ಉಬ್ಬುಶಿಲ್ಪ



ಜನವಸತಿ ಕಟ್ಟಡಗಳ ಉಬ್ಬುಶಿಲ್ಪ




ಚೈತ್ಯ ಗೃಹದ ಮಾದರಿ ಉಬ್ಬುಶಿಲ್ಪ



● ಬುದ್ಧನ ಸಾಂಕೇತಿಕ ರೂಪಗಳನ್ನು ಪೂಜಿಸುತ್ತಿರುವ ಶಿಲ್ಪ



● ಬುದ್ಧನ ಸಾಂಕೇತಿಕ ರೂಪಗಳನ್ನು ಪೂಜಿಸುತ್ತಿರುವ ಶಿಲ್ಪ



ಗ್ರಾಮೀಣ ಕ್ರೀಡೆಯನ್ನು ಬಿಂಬಿಸುವ ಉಬ್ಬುಶಿಲ್ಪ



ಸ್ತೂಪ ಮಾದರಿ ಉಬ್ಬುಶಿಲ್ಪ



ಚೈತ್ಯ ಮಾದರಿಯ ಉಬ್ಬುಶಿಲ್ಪ



● ಅಲೌಕಿಕ ಶಿಲ್ಪ



● ಸಂರಕ್ಷಿತ ಫಲಕ ಶಿಲ್ಪಗಳು

ಅಧ್ಯಯ – ಏಳು

ಸಮಾರೋಪ

ಅಧ್ಯಯ – ಏಳು

ಸಮಾರೋಪ

ಕನಗನಹಳ್ಳಿ ಸ್ತೂಪಾವಶೇಷಗಳ ಶಿಲ್ಪಗಳು ಛಿದ್ರವಾಗಿರುವುದನ್ನು ನೋಡಿದರೆ ಅಲ್ಲಿ ಉಪಯೋಗಿಸಿರುವ ಕಲ್ಲಿನ ಗುಣಧರ್ಮದಿಂದಲೇ ಇಷ್ಟೊಂದು ಛಿದ್ರಗೊಂಡಿವೆ ಎಂದು ನಿಖರವಾಗಿ ಹೇಳಬಹುದು. ಚಿತ್ತಾಪೂರ ತಾಲೂಕಿನ ಚಿತ್ತಾಪೂರ, ರಾವೂರು, ಶಹಬಾದ, ಬಳವಡಗಿ ಭಾಗದಲ್ಲಿ ದೊರೆಯುವ ಕಲ್ಲು, ಸುಣ್ಣದ ಕಲ್ಲು, ಬಿಳಿಕಲ್ಲು, ಹಾಸುಗಲ್ಲು, ಲೈಮ್‌ಸ್ಟೋನ್ ಹೀಗೆ ನಾನಾ ಹೆಸರುಗಳಿಂದ ಗುರುತಿಸಲ್ಪಟ್ಟು, ತನ್ನದೇ ಆದ ಗುಣಧರ್ಮದಿಂದ ಕೂಡಿದ್ದಾಗಿರುತ್ತದೆ. ಈ ಕಲ್ಲು ಅತಿ ಪದರುಗಳುಳ್ಳದ್ದಾಗಿದ್ದು ಮೂರ್ತಿ ಹಾಗೂ ಕುಸುರಿ ಕೆತ್ತನೆಗೆ ಅಷ್ಟೊಂದು ಯೋಗ್ಯವಲ್ಲದ ಕಲ್ಲು. ಯಾವುದೇ ಶಿಲೆ ಭೂಮಿಯ ಆಳದಲ್ಲಿದ್ದಾಗ ತನ್ನ ಗುಣಧರ್ಮಕ್ಕೆ ತಕ್ಕಂತೆ ಮೃದುವಾಗಿಯೇ ಇರುತ್ತದೆ. ಭೂಮಿಯಿಂದ ಹೊರಗಡೆ ತೆಗೆದು ಗಾಳಿ, ಬಿಸಿಲು, ಮಳೆ ತಾಗಿದಾಗ ಸಮಯ ಕಳೆದಂತೆ ಕಠಿಣತ್ವವನ್ನು ಪಡೆಯುತ್ತಾ ಹೋಗುತ್ತದೆ. ಈ ಸುಣ್ಣದ ಕಲ್ಲು ಕೂಡ ಭೂಮಿಯ ಆಳದಲ್ಲಿದ್ದಾಗ ಮೃದುತ್ವದ ಗುಣ ಹೊಂದಿದ್ದು ಗಾಳಿ, ಬಿಸಿಲು, ಮಳೆಗೆ ಕಾಲಕ್ರಮೇಣ ಕಠಿಣತ್ವವನ್ನು ಪಡೆದರೂ 'ಗಾಜಿ'ನ ಗುಣಧರ್ಮವನ್ನು ಹೊಂದುತ್ತಾ ಬರುತ್ತದೆಂದು ಹೇಳಬಹುದು. ದಪ್ಪಗಿರುವ ಗಾಜು ಗಟ್ಟಿಯಾದರೂ ಒಂದು ಪೆಟ್ಟು ಬಿದ್ದಾಗ ಎರಡು ತುಂಡಾಗದೆ ಅನೇಕ ತುಂಡುಗಳಾಗುತ್ತವೆ. ಕನಗನಹಳ್ಳಿಯ ಸ್ತೂಪಕ್ಕೆ ಬಳಸಿರುವ ಕಲ್ಲೂ ಕೂಡ ಬಿಸಿಲು, ಗಾಳಿ, ಮಳೆಗೆ ಗಾಜಿನ ಗುಣಧರ್ಮ ಹೊಂದಿದ್ದರಿಂದಲೇ ಸ್ತೂಪದ ಶಿಲ್ಪಗಳು ಈ ರೀತಿಯ ಪ್ರಕೃತಿಯ ವೈಪರಿತ್ಯದಿಂದಾಗಿ ಇಷ್ಟೊಂದು ಛಿದ್ರಗೊಂಡಿವೆ ಎಂದು ಹೇಳಬಹುದು. ಯಾವುದೇ ಮತೀಯ ವಿಕೃತ ಮನಸ್ಸುಗಳಿಂದ ಛಿದ್ರಗೊಂಡಿಲ್ಲವೆಂದೇ ಹೇಳಬಹುದು.

ಕಲಬುರ್ಗಿ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ದೊರೆಯುವ ಕಪ್ಪುಕಲ್ಲು ತುಂಬಾ ಗಟ್ಟಿಯಾದದ್ದಾಗಿದ್ದು ಈ ಭಾಗದ ಅನೇಕ ದೇವಾಲಯಗಳ ಕಟ್ಟಡ, ಕೋಟೆ, ಬುರುಜು, ಮೂರ್ತಿಶಿಲ್ಪಗಳಿಗೂ ಹಾಗೂ ಕೆಲವೊಂದು ಹಳೆಯ ಮನೆಗಳ ಕಟ್ಟಡಗಳಿಗೂ ಬಳಸುತ್ತಾ ಬಂದಿದ್ದಾರೆ. ಯಾದಗಿರಿ ಜಿಲ್ಲೆಯ ಸುತ್ತಮುತ್ತಲ ಪ್ರದೇಶಗಳಾದ ಬಳಿಚಕ್ರ ಪ್ರದೇಶದ ಕಲ್ಲು ಉಪ್ಪಿನ ಹರಳುಗಳಂತಹ ಕಣಗಳುಳ್ಳ ಬಿಳಿ ಮಿಶ್ರಿತ ಬೂದು ಬಣ್ಣದ ಕಲ್ಲುಗಳು ಕಲಬುರ್ಗಿ ಕಲ್ಲಿಗಿಂತಲೂ ಸ್ವಲ್ಪ ಮೃದುವೆಂದು ಹೇಳಬಹುದು. ಈ ಭಾಗದಲ್ಲಿ ಇದೇ ಕಲ್ಲನ್ನೆ ಬಳಸಿದಂತಹ ಉದಾಹರಣೆಗಳಿವೆ. ಇದೇ ಯಾದಗಿರಿ ಜಿಲ್ಲೆಯಲ್ಲಿ ಬರುವ ಸುರಪುರ, ಶಾಹಪೂರಗಳಲ್ಲಿ ಕಂಡುಬರುವ ಕಲ್ಲು ಬಳಿಚಕ್ರದ ಕಲ್ಲಿಗೂ ತುಂಬಾ ವ್ಯತ್ಯಾಸಗಳನ್ನು ಕಾಣಬಹುದು.

ರಾಯಚೂರು ಜಿಲ್ಲೆಯ ಸುತ್ತಮುತ್ತಲ ಪ್ರದೇಶಗಳಲ್ಲಿ ದೊರೆಯುವಂತಹ ಕಲ್ಲು ಮತ್ತು ಯಾದಗಿರಿ ಜಿಲ್ಲೆಯ ಬಳಿಚಕ್ರದ ಕಲ್ಲು ಒಂದೇ ರೀತಿಯವುಗಳಾಗಿವೆ. ಈ ಭಾಗದಲ್ಲಿ ಸ್ಥಳೀಯ ಕಲ್ಲುಗಳನ್ನೆ ಬಳಸಿ ಕಟ್ಟಿರುವ ಕೋಟೆ, ದೇವಾಲಯಗಳು ಕಂಡುಬರುತ್ತವೆ.

ಬಳ್ಳಾರಿ ಪ್ರದೇಶದಲ್ಲಿ ಕಂಡುಬರುವ ಗ್ರಾನೆಟ್ ಕಲ್ಲುಕೂಡಾ ಕಣಗಳುಳ್ಳ ಶಿಲೆಯಾದರು ರಾಯಚೂರು ಕಲ್ಲಿಗಿಂತಲೂ ಗಟ್ಟಿಯಾಗಿ ಬಣ್ಣದಲ್ಲಿಯೂ ಕೂಡಾ ವ್ಯತ್ಯಾಸ ಕಂಡುಬರುತ್ತದೆ. ಮೇಲೆ ತಿಳಿಸಿದ ಕಲ್ಲುಗಳಾವೂ ಪದರುಗಲ್ಲುಗಳಲ್ಲ. ಬಾಗಲಕೋಟೆಯ ಶೆಲ್ಲಿಕೆರೆ ಹಾಗೂ ಕಗಲಗೊಂಬಗಳಲ್ಲಿ ದೊರೆಯುವಂತಹ ನೀಲಿ ಮಿಶ್ರಿತ ಕಲ್ಲು ಪದರುಗಲ್ಲುಗಳಾಗಿದ್ದರೂ ಮೂರ್ತಿ ಶಿಲ್ಪಕಲೆಗೆ ಉತ್ತಮವಾದ ಕಲ್ಲೆಂದೇ ಹೇಳಬಹುದು. ಶೆಲ್ಲಿಕೆರೆ ಹಾಗೂ ಕಗಲಗೊಂಬ ಗಣಿಗಳು ಕೆಲವೇ ಕಿಲೋಮೀಟರುಗಳ ಅಂತರದಲ್ಲಿದ್ದರೂ ಕಗಲಗೊಂಬದ ಮೃದು ಕಲ್ಲು ಮತ್ತು ಶೆಲ್ಲಿಕೆರೆಯ ಕಠಿಣ ಗುಣಧರ್ಮದ ಕಲ್ಲಾಗಿರುತ್ತದೆ.

ಉಡುಪಿ, ಕಾರ್ಕಳ ಭಾಗಗಳಲ್ಲಿ ದೊರೆಯುವಂತಹ ಕಡು ಹಸಿರು ಮಿಶ್ರಿತ ಕಲ್ಲೂ ಕೂಡ ಪದರುಗಳಿದ್ದರೂ ಮೂರ್ತಿ ಕೆತ್ತನೆಗೆ ಸೂಕ್ತವಾದ ಕಲ್ಲೆಂದು ಹೇಳಬಹುದು. ಮೈಸೂರು ಭಾಗದ ಹೆಗ್ಗಡದೇವನ ಕೋಟೆಯ ಪ್ರದೇಶದಲ್ಲಿ ದೊರೆಯುವ ಹಸಿರು ಮತ್ತು ನೀಲಿ ಮಿಶ್ರಿತ ಕಲ್ಲುಗಳು ಶಿಲ್ಪಕಲಾಕೃತಿ ರಚಿಸಲು ತುಂಬಾ ಸೂಕ್ತವಾದ ಕಲ್ಲು. ಒಂದು ಚಚೌಕ ಘನ ಆಕೃತಿಯ ಆರೂ ಪಾತಳಿಗಳಿಂದಲೂ (ಬದಿಗಳಿಂದಲೂ) ಕೆತ್ತನೆ ಮಾಡಬಹುದು. ಆದರೆ ಶೆಲ್ಲಿಕೆರೆ ಹಾಗೂ ಕಗಲಗೊಂಬದ ಕಲ್ಲುಗಳಲ್ಲಿ ಎರಡೆ ಪಾತಳಿಗಳಿಂದ ಮಾತ್ರ ಕೆತ್ತನೆ ಮಾಡುವಂತಹದ್ದಾಗಿದೆ. ಮಂಗಳೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ದೊರಕುವಂತಹ ಚೇರಿ ಕಲ್ಲುಗಳಂತೂ ಬರಿ ಕಟ್ಟಡಕ್ಕೆ ಉಪಯೋಗಿಸುವಂತಹ ಶಿಲೆಗಳಾಗಿವೆ. ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ದೊರೆಯುವಂತಹ

ಬೇರೆ ಬೇರೆ ಗುಣಧರ್ಮದ ಕಲ್ಲುಗಳನ್ನು ಬಳಸಿ ರಚಿಸಿದಂತಹ ಕಲಾಕೃತಿಗಳು ಕಟ್ಟಡಗಳು ಅನೇಕ ಕಡೆಗಳಲ್ಲಿ ಕಂಡುಬರುತ್ತವೆ.

ಕನಗನಹಳ್ಳಿಯ ಸ್ತೂಪದ ರಚನೆ ಕ್ರಿ.ಪೂ. ಮೂರನೇ ಶತಮಾನದಿಂದ ಮೊದಲ್ಗೊಂಡು ಪ್ರಾರಂಭವಾಗಿ ಆ ಕಾಲದಲ್ಲಿ ಕಲ್ಲುಗಳ ಸಾಗಾಣಿಕೆ ತುಂಬಾ ಪ್ರಯಾಸದಾಯಕವಾದುದರಿಂದ ಸ್ಥಳೀಯವಾಗಿ ಸಿಗುವ ಸಂಪನ್ಮೂಲಗಳನ್ನು (ಕಲ್ಲು) ಬಳಸಿಕೊಂಡು ಆ ಸಂಪನ್ಮೂಲದ ಗುಣಧರ್ಮಕ್ಕೆ ಹೊಂದಿಕೊಂಡು ತನ್ನ ಸೃಜನಶೀಲತೆಗೆ ಕಲ್ಲನ್ನು ಹೊಂದಿಸಿಕೊಂಡಂಥಹ ಆರಂಭಿಕ ಕಾಲದ ಶಿಲ್ಪಿಗಳ ಕಾರ್ಯ ತುಂಬಾ ಅಪೂರ್ವವಾದುದು.

ಕನಗನಹಳ್ಳಿಯ ಸ್ತೂಪದ ರಚನೆಯ ಶಿಲ್ಪಿಗಳು ಕಲ್ಲನ್ನು ಬಳಸಿಕೊಂಡಿರುವ ವಿಧಾನಗಳನ್ನು ನೋಡಿದರೆ ಬಹುಶಃ ಇವರು ಈ ಕಲ್ಲನ್ನು ಬಳಸುವುದಕ್ಕಿಂತ ಪೂರ್ವದಲ್ಲಿ ಕಟ್ಟಿಗೆ (ಮರ)ಯನ್ನು ಬಳಸಿಕೊಂಡು ಕೆಲಸ ಮಾಡುವಲ್ಲಿ ನಿಪುಣರಾಗಿದ್ದರೆಂದು ಕಾಣುತ್ತದೆ. ಕಟ್ಟಿಗೆಯ ಬಳಕೆಯಲ್ಲಿಯೂ ಕೂಡ ಎರಡು ಪಾತಳಿಗಳಿಂದ (ಬದಿಗಳಿಂದ) ಮಾತ್ರ ಕೆತ್ತನೆ ಮಾಡಬಹುದು.

ಕನಗನಹಳ್ಳಿಯ ಸ್ತೂಪದಲ್ಲಿ ರಚಿಸಿರುವ ಶಿಲ್ಪಗಳನ್ನು ಒಂದೊಕ್ಕೊಂದು ಜೋಡಿಸುವಾಗ ಶಿಲ್ಪಿಗಳು ಬಳಸಿರುವ ತಂತ್ರವಾದ "ಗುಸಿ ಜೋಡಣೆ"ಯು ಹೆಚ್ಚಾಗಿ ಕಟ್ಟಿಗೆಗಳನ್ನು ಜೋಡಿಸುವಾಗ ಬಳಸುವ ತಂತ್ರವಾಗಿದೆ. ಎರಡು ಕಲ್ಲುಗಳು, ಒಂದಕ್ಕೊಂದು ಪಕ್ಕದಲ್ಲಿ ಜೋಡಿಸಬೇಕಾದರೆ ಒಂದು ಕಲ್ಲಿಗೆ ಜೋಡಣೆಯಾಗುವ ಭಾಗದಲ್ಲಿ ತಗ್ಗನ್ನು ಕೊರೆದು ಅದೇ ತಗ್ಗಿನ ಅಳತೆಯಷ್ಟು ಉಬ್ಬನ್ನು ಜೋಡಣೆಯಾಗುವ ಇನ್ನೊಂದು ಕಲ್ಲಿನಲ್ಲಿ ಉಳಿಸಿಕೊಂಡು, ಒಂದಕ್ಕೊಂದು ಜೋಡಸುವುದು, ಇದೆ 'ಗುಸಿ' ಜೋಡಣೆ, ಈ ತಂತ್ರವು ಕಟ್ಟಿಗೆಯ ಕೆಲಸದಲ್ಲಿ ಹೆಚ್ಚಿಗೆ ಉಪಯೋಗಿಸುವ ತಂತ್ರವಾಗಿದೆ. ಈ ರೀತಿ ಜೊಡಣೆಯಿಂದ ಜೊಡಿಸಿದ ಕಲ್ಲು ಅಥವಾ ಕಟ್ಟಿಗೆಗಳ ಮಧ್ಯದಲ್ಲಿ ಬಿರುಕು ಕಾಣಿಸದೆ ಒಂದಕ್ಕೊಂದು ಹೆಚ್ಚುಕಾಲ ಜೊಡಣೆಯಾಗಿರುತ್ತವೆ.

ಮೌರ್ಯರ ಕಾಲದ ಕಟ್ಟಡಗಳಲ್ಲಿ ಮರದ ಕೆಲಸವೇ ಪ್ರಧಾನವಾಗಿತ್ತೆಂದು ಹಿಂದಿನ ಅಧ್ಯಾಯಗಳಲ್ಲಿ ವಿವರಿಸಿದ್ದನ್ನು ಸ್ಮರಿಸಿಕೊಳ್ಳಬಹುದು. ಆಯಾ ಪ್ರದೇಶ ಗುಣಧರ್ಮದ ಕಲ್ಲುಗಳನ್ನು ಕೆತ್ತಲು ಬೇರೆ ಬೇರೆ ರೀತಿಯ ತಾಂತ್ರಿಕತೆಯಿಂದ ರಚಿಸಿದ ಪರಿಕರಗಳು ಬೇಕಾಗುವುದು ಅವಶ್ಯಕ. ಕಲ್ಲಿನ ಗುಣಧರ್ಮಕ್ಕೆ ತಕ್ಕಂತೆ ಪರಿಕರಗಳು (ಕೆತ್ತನೆಗೆ ಬಳಸುವ ಸಾಧನಗಳು) ರಚಿಸಿಕೊಳ್ಳುವಲ್ಲಿಯೂ ಕನಗನಹಳ್ಳಿಯ ಸ್ತೂಪ ರಚಿಸಿದ ಶಿಲ್ಪಿಗಳು ಅತ್ಯಂತ ನಿಪುಣರಾಗಿದ್ದರೆಂದು ಶಿಲ್ಪಗಳ ಕುಶಲತೆಯನ್ನು ನೋಡಿದಾಗ ಅನ್ನಿಸದೆ ಇರದು.

ಕನಗನಹಳ್ಳಿಯ ಸ್ತೂಪ ಶಿಲ್ಪಿಗಳು

ಪ್ರಸ್ತುತ ಕನಗನಹಳ್ಳಿಯ ಸ್ತೂಪಾವಶೇಷಗಳನ್ನು ನೋಡಿದಾಗ ಒಬ್ಬ ಶಿಲ್ಪಿಗೆ ಪ್ರಪ್ರಥಮವಾಗಿ ಅಚ್ಚರಿಯಾಗಿಸುವ ಸಂಗತಿ ಎಂದರೆ ಇಂತಹ ಗುಣಧರ್ಮದ ಕಲ್ಲಿನಲ್ಲಿ ಇಷ್ಟೊಂದು ಕೆಲಸ ಮಾಡಲು ಸಾಧ್ಯವಾ ಎಂದು. ಕರ್ನಾಟಕದ ಶಾಸನಗಳ ಲಿಪಿಕಾರರ ಮತ್ತು ಶಿಲ್ಪಿಗಳ ಹೆಸರುಗಳು ಶಾಸನಗಳಲ್ಲಿ ಉಲ್ಲೇಖವಾಗಿರುವಂತೆ ಪ್ರೊ. ಷ. ಶೆಟ್ಟರ ಅವರು ಹೀಗೆ ವಿವರಿಸಿದ್ದಾರೆ.

ಸನ್ನತಿ ಸಮುಚ್ಚಯದ ಕನಗನಹಳ್ಳಿಯ ತುಂಡು ಶಾಸನಗಳು ಹಿಮಾಲಯ (ಶಾಖಾ) ಮೂಲದ "ಮಹಿತನ" ಮತ್ತು "ಮಲಗಿ" ನವಕರ್ಮಿಗಳನ್ನು 'ಅಯ' ಹಾಗೂ ದಾಯಕಮ್ಮ (ಶಿಲ್ಪಫಲಕ) ದಾನಮಾಡಿದವಳ ಮಗನಾದ 'ಆಯಮಲ' (ಆರ್ಯಮಲ್ಲ) ನವಕರ್ಮಿಯನ್ನು ಹೆಸರಿಸಿವೆ. ಸುತತಿಕ ಆಯಗೋಳ (ಸೂತ್ರಾಂತಿಕ ಆರ್ಯಗೋಲ) ಎಂಬವನ ಇನ್ನೊಂದು ಉಲ್ಲೇಖವೂ ಇದೆ.

ಶಾತನಾಹನರ ಕಾಲದ ದಖ್ಖಣದಲ್ಲಿ ಲೇಖಸುತ (ಸನ್ನತಿ), ಲೇಖಕ (ಗುಂಟುಪಲ್ಲಿ), 'ರಾಜ ಲೇಖಕ', ಪಸನಿಕ (ಧಾನ್ಯಕಟಕ), ವಿಧಿಕ (ನಾಗಾರ್ಜುನಕೊಂಡ), ಲೋಹಸಕ (ಕನಗನಹಳ್ಳಿ), ಆವೇಸನಿಕ (ನಾಗಾರ್ಜುನಕೊಂಡ), ಸೇಲಿವರ್ಢಕ ಮತ್ತು ಸುತಿತಿಕ (ಕನಗನಹಳ್ಳಿ), ನವಕಮ್ಮಿಕ (ಧಾನ್ಯಕಟಕ) ಮುಂತಾದ ಕುಶಲಕರ್ಮಿಗಳು ತಮ್ಮ ಅಂತಸ್ತನ್ನೂ, ಆವರಣವನ್ನೂ ಬೆಳೆಸಿಕೊಳ್ಳುತ್ತಾ ತಾವೂ ಬೆಳೆಯತೊಡಗಿದರು. ಅಂದರೆ ಲಿಪಿಕಾರ ತನ್ನ ಕ್ಷೇತ್ರವನ್ನು ವಿಸ್ತರಿಸಿಕೊಂಡು ಸುವರ್ಣಕಾರ, ಕಂಚುಗಾರ, ಬಡಿಗ, ವಾಸ್ತುಶಿಲ್ಪಿಯಾಗಿ ಈ ಸಂಕೀರ್ಣದಲ್ಲಿದ್ದರೆಂದರ್ಥ. 'ಲೇಖಸುತಸ ನಣ್ಣಕೊಟವಸ', 'ಮಾಧಸ ಪುತೀನ ಬೋಧಿಗುತ' (ಬೋಧಿಗುಪ್ತ) ಮತ್ತು 'ನಾಗಬಧಿ ಸೇಲಿವಧಕ' ಎಂಬುವವರು ಅವರಲ್ಲಿ ಕೆಲವರು ಕನಗನಹಳ್ಳಿಯಲ್ಲಿ ಬುದ್ಧನ ವಿಗ್ರಹಗಳನ್ನು ಕೆತ್ತಿದ ಲಿಪಿಶಿಲ್ಪಿಗಳು ಕರ್ನಾಟಕದ (ಪ್ರಾಕೃತ) ಶಾಸನಗಳಲ್ಲಿ ಬರುವ ಮೊದಲ ಶಿಲ್ಪಿಗಳಾಗಿರುವರು. ಇವರಲ್ಲಿ ವಾಕಾಟಿಕಚದ, ವಿಸಾಖ/ವಿಸಾಘ, ನಾಗಬುಧಿ, ಮತ್ತು ಅವನ ಪುತ್ರರಾದ ರಾಯಮಾಚ (ರಾಜಮಾತ್ಯ) ಬೋಧಿಗುತ, ಕನ್ಪಿಲ ಅಲ್ಲದೆ ಮತಿಕುಮಾರ, ದ್ವಾರಗಾತಿಕ, ವೇಣೊ ಉಪಝಾಯಪುತ್ರ ನಾಜಿಕ ಮುಂತಾದವರಿರುವರು.[೧]

ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ಕಾಲದಿಂದಲೇ ಕಲಾಚಟುವಟಿಕೆಗಳು ಪ್ರಾರಂಭಗೊಂಡಿವೆ ಎಂದು ಹಲವಾರು ವಿದ್ವಾಂಸರು ತಿಳಿದಿದ್ದರು. ಕನಗನಹಳ್ಳಿಯ, ಮಹಾಸ್ತೂಪ ಉತ್ಖನನಗೊಂಡ ನಂತರ ಎಲ್ಲಾ ವಿದ್ವಾಂಸರನ್ನು ನಾಲ್ಕೈದು ಶತಮಾನಗಳಷ್ಟು ಹಿಂದಕ್ಕೆ ಕರೆದುಕೊಂಡು ಹೋಗಿದುದಲ್ಲದೆ

---

೧. ಪ್ರೊ. ಷ. ಶೆಟ್ಟರ್ (ಲೇ), ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ, ಪುಟ–೧೧೦)

ಅಪೂರ್ವವಾದಂತಹ ಕರ್ನಾಟಕದ ಪ್ರಾರಂಭಿಕ ಶಿಲ್ಪಕಲಾ ಬೆಳವಣಿಗೆಗಳು ಈಡೀ ಭಾರತವೇ ಬೆರಗುಗಣ್ಣಿನಿಂದ ಕರ್ನಾಟಕದತ್ತ ನೋಡುವಂತೆ ಮಾಡಿದೆ. ಕನಗನಹಳ್ಳಿಯ ಸ್ತೂಪಾವಶೇಷಗಳ ಶಿಲ್ಪಗಳಲ್ಲಿ ಕಂಡುಬರುವ ಅನೇಕ ಸಾಂಕೇತಿಕ, ಅಲಂಕಾರಿಕ, ಸಂದರ್ಭಸೂಚಕ ಹಾಗೂ ಮಾನವಾಕೃತಿಗಳು, ನಂತರದ ಶತಮಾನಗಳಲ್ಲಿ ಬಂದಿರುವ ಚಾಲುಕ್ಯರ ಶಿಲ್ಪಕಲೆಗೆ ಭದ್ರಬುನಾದಿಯಂತಹ ಮೂಲ ಆಕರಗಳಾಗಿದ್ದವೆಂದು ಹೇಳಬಹುದು. ಕನಗನಹಳ್ಳಿಯ ಸ್ತೂಪಾವಶೇಷಗಳಲ್ಲಿ ಕಂಡುಬರುವ ಕಮಲದ ಹೂವು, ಬೋಧಿವೃಕ್ಷ, ಚೈತ್ಯ ಕಿಟಕಿಗಳು, ಕಾಲ್ಪನಿಕ ಹಾಗೂ ನೈಜ ಪ್ರಾಣಿಶಿಲ್ಪಗಳು, ಹಂಸ, ಮಕರ ಹೀಗೆ ಅನೇಕ ಆಕರಗಳು ಚಾಲುಕ್ಯರ ಶಿಲ್ಪಕಲೆಗಳಲ್ಲಿ ಹೆಚ್ಚಿನ ಅಲಂಕಾರಿಕ ಹಾಗೂ ವೈಭವೋಪೇತವಾಗಿ ರಚನೆಗೊಂಡಿರುವುದನ್ನು ನಾವು ಇಂದಿಗೂ ಕಾಣಬಹುದು. ಇಂತಹ ಕರ್ನಾಟಕದ ಹಲವಾರು ಶಿಲ್ಪಶೈಲಿಗಳಿಗೆ ಮೂಲ ಆಕರಗಳಾಗಿ ನಿಲ್ಲುವ ಶಿಲ್ಪಗಳು ಕನಗನಹಳ್ಳಿಯ ಪ್ರದೇಶದಲ್ಲಿ ಅದೂ ಕನ್ನಡದ ಶಿಲ್ಪಿಗಳಿಂದಲೇ ರಚನೆಗೊಂಡಿರುವುದು ಪ್ರಮುಖವಾಗಿ ನಿಲ್ಲುವ ಅಂಶವಾಗಿದೆ. ಮೇಲೆ ಹೇಳಿದಂತಹ ಕ್ಲಿಷ್ಟಕರವಾದ ಶಿಲೆಯಲ್ಲಿ ಅರಳಿದ ಕನಗನಹಳ್ಳಿಯ ಸ್ತೂಪ ರಚನೆಗೊಳ್ಳುವುದಕ್ಕೆ ಮುಂಚೆಯೇ ಆ ಪ್ರದೇಶದಲ್ಲಿ ಅನೇಕ ಪ್ರಾಥಮಿಕ ಕಲಾಚಟುವಟಿಕೆಗಳು ನಡೆದಿದ್ದವೆಂದು ಸಂಶೋಧನೆ ಇಂದ ತಿಳಿದುಬಂದಿರುತ್ತದೆ.

ಒಂದು ಪ್ರದೇಶದ ಕಲೆಯು ಅಲ್ಲಿ ವಾಸಿಸುವ ಜನರ ಮಾನಸಿಕ ಸ್ಥಿತಿಯ ಮೇಲೂ ಅವಲಂಬನೆಗೊಂಡಿರುವುದಲ್ಲದೇ ಜನರ ಉತ್ತಮ ಮನೋಭಿಲಾಷೆ ಸಂತೃಪ್ತ ಜೀವನ ವಿಧಾನ, ಪ್ರಕೃತಿಯ ಬಗೆಗಿನ ಪೂಜ್ಯಭಾವನೆಗಳು, ಸೌಹಾರ್ದತೆ, ನಿಸ್ವಾರ್ಥತೆ, ಸೌಂದರ್ಯ ಪ್ರಜ್ಞೆ ಹಾಗೂ ನಿರಪೇಕ್ಷ ಗುಣಳಿಂದ ಕಾರ್ಯವಿಸ್ತರಣೆ ಹೊಂದಿದಾಗ ಮಾತ್ರ ಆ ಪ್ರದೇಶದಲ್ಲಿ ವಿಶ್ವಮುಖಿಯಾದಂತಹ ಕಲೆಗಳು ಮೂಡಿಬರಲು ಸಾಧ್ಯವಾಗುತ್ತದೆ.

ಇಂತಹ ವಿಶ್ವಮುಖಿಯಾದಂತಹ ಕಲೆಗಳು ಮೂಲದಲ್ಲಿ ಜನಪದ ಕಲೆಗಳೆಂದು ಗುರುತಿಸಿಕೊಳ್ಳುತ್ತವೆ. ಶಾಸ್ತ್ರ ಶುದ್ಧವಾಗಿ ಪ್ರಾಚೀನರು ರೂಢಿಸಿಕೊಂಡು ಬಂದ ದೃಶ್ಯಕಲೆಗಳಾದ ಚಿತ್ರ–ಶಿಲ್ಪಕಲೆಯು ಗುರುತಿಸುವಾಗ ಇವುಗಳ ಮೂಲಕ್ಕೆ ಹೋದಂತೆ ಅದು ಜನಪದೀಯ ಮೂಲವೆಂಬ ಅಂಶ ಸ್ಪಷ್ಟವಾಗುತ್ತದೆ. ವಸ್ತುವೊಂದು ಸಿದ್ಧರೂಪಗೊಳ್ಳುವಾಗ ಕಚ್ಚಾ ಸಾಮಗ್ರಿಯಾಗಿರುವಂತೆ ಇಂದಿನ ಶಿಷ್ಟರೂಪಕ್ಕೆ ಮೊದಲು ಕಚ್ಚಾರೂಪವೊಂದು ಇದ್ದು, ಕಾಲಕ್ರಮೇಣ ಅದು ಶಿಷ್ಟದ ಶಿಸ್ತಿಗೆ, ಶಾಸ್ತ್ರದ ಚೌಕಟ್ಟಿಗೆ ಒಳಪಟ್ಟಿರುವುದು ತಿಳಿದುಬರುತ್ತದೆ. ಈ ಕಚ್ಚಾರೂಪವೆನ್ನುವುದು

ಜನಪದರಲ್ಲಿ ಹೊಳೆಯತೊಡಗಿದ್ದುದು, ಬದುಕಿನ ವಿವಿಧ ಚಟುವಟಿಕೆಗಳ ಅಂಗವಾಗಿಯೇ ಎಂಬುದು ಗಟ್ಟಿಯಾದ ಮಾತು. ಈ ಅರ್ಥದಲ್ಲಿ ಬದುಕಿನ ಎಲ್ಲಾ ರಂಗಗಳ ವಿವಿದಾಂಗಗಳೇ ಜನಪದ ಶಿಲ್ಪಕಲೆಯ ಮುಖ್ಯ ಲಕ್ಷಣಗಳು. ಸಂಪ್ರದಾಯ, ನಂಬಿಕೆ, ಧಾರ್ಮಿಕ ಆಚರಣೆಯ ಹಿನ್ನೆಲೆಯಲ್ಲಿ ಜನಪದರಲ್ಲಿ ಮೂರ್ತರೂಪಕ್ಕೆ ತಿರುಗಿದುದೇ ಜನಪದ ಶಿಲ್ಪಕಲೆಯಾಗಿ ರೂಪ ತಳೆದಿದೆ.[೨]

ಇಂತಹ ಜನಪದೀಯ ಆಚರಣೆಗಳೊಂದಿಗೆ ಜೀವಿಸುತ್ತಿರುವ ಜನರ ಸಮೃದ್ಧ ಪ್ರದೇಶವಾದುದರಿಂದಲೇ ಸನ್ನತಿಯ ಕನಗನಹಳ್ಳಿ ಪ್ರದೇಶವು ಕ್ರಿ.ಪೂ.ದಲ್ಲಿಯೇ ಸಾಮ್ರಾಟ ಅಶೋಕನು ವಿಶ್ವಮುಖಿಯಾದಂತಹ ಬುದ್ಧನ ವಿಚಾರಧಾರೆಗಳ ಹೆಮ್ಮರದ ಸಸಿಯೊಂದು ಬೆಳೆಸಲು ಫಲವತ್ತಾದ ಪ್ರದೇಶವಾಗಿತ್ತೆಂದು ಹೇಳಬಹುದು.

ಅಚ್ಚಿನಿಂದ ತಯಾರಿಸಿದ ಗುಣಲಕ್ಷಣಗಳನ್ನು ಹೊಂದಿದ ಸುಡಾವೆ ಮಣ್ಣಿನ ಗೊಂಬೆಗಳು ಈ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿರುವುದರಿಂದ ಈ ನೆಲದಲ್ಲಿ ಜನಪದೀಯ ಆಚರಣೆ ಎಷ್ಟು ಪ್ರಬಲವಾಗಿತ್ತೆಂದು ಊಹಿಸಿಕೊಳ್ಳಬಹುದು. ಇಂತಹ ಆಚರಣೆಗಳು ಇಂದಿಗೂ ಈ ನೆಲದಲ್ಲಿ ನಿರಂತರವಾಗಿ ನಡೆದುಕೊಂಡು ಬಂದಿರುವುದನ್ನು ನಾವು ಕಾಣಬಹುದು. ಮಣ್ಣೆತ್ತಿನ ಅಮವಾಸ್ಯೆಗೆ ಮಣ್ಣೆತ್ತಿನ ಪೂಜೆ, ಮಣ್ಣಿನ ಗಣೇಶನ ಪೂಜೆ, ಮಣ್ಣಿನಿಂದ ರಚಿತವಾದ ಜೊಕುಮಾರನ ಪೂಜೆ, ಸತ್ತವರ ಸಮಾಧಿಯ ಮೇಲೆ ಮಣ್ಣಿನಿಂದ ತಯಾರಿಸಿದಂತಹ ಎತ್ತುಗಳನ್ನಿಟ್ಟು ಪೂಜಿಸುವುದು, ದೀಪಾವಳಿಯ ಸಂದರ್ಭದಲ್ಲಿ ಮರಳಿನಿಂದ ಹಾಗೂ ಸೆಗಣಿಯಿಂದ ಪಾಂಡವರ ಶಿಲ್ಪಗಳು ಹಾಗೂ ಕೋಟೆ ರಚನೆ ಮಾಡಿ ಪೂಜಿಸುವುದು ತೀರಿಕೊಂಡಂಥ ಹಿರಿಯರ ಸ್ಮಾರಣಾರ್ಥವಾಗಿ ಗಂಡು ಹಾಗೂ ಹೆಣ್ಣು "ರತಿ"ಗಳನ್ನು ಮದುವೆಯ ಸಂದರ್ಭದಲ್ಲಿ ಮೆರವಣಿಗೆ ಮಾಡಿ ಮನೆಯಲ್ಲಿ ಪೂಜಿಸುವುದು, ಮಣ್ಣಿನಿಂದ ರಚಿಸಿದಂತಹ ಗೌರಿ ಮುಖಗಳನ್ನು ಪೂಜಿಸುವುದು ಇಂತಹ ಹಲವಾರು ಆಚರಣೆಗಳು ಕಾಣಬಹುದು.

ಜನಪದರದ್ದು ಅವರ ತೆರೆದ ಬದುಕಿನಂತೆಯೇ ಅವರ ಶಿಲ್ಪಕಲೆಯೂ ಕೂಡ. ಜೋಕುಮಾರ, ಲಜ್ಜಾಗೌರಿ ಇತ್ಯಾದಿ ಶಿಲ್ಪಗಳಲ್ಲಿ ಗುಪ್ತಾಂಗಗಳನ್ನು ಪ್ರಧಾನವಾಗಿ ಶಿಲ್ಪಿಸಿರುವುದನ್ನು ಗಮನಿಸಿದಾಗ ಬದುಕಿನ ವಾಸ್ತವವನ್ನು ತೆರೆದಿಟ್ಟ ಅನುಭವವಾಗುತ್ತದೆ.[೩] ಕನಗನಹಳ್ಳಿಯ ಸ್ತೂಪ ಶಿಲ್ಪಗಳಲ್ಲಿಯೂ ಕೂಡ ಸ್ತ್ರೀಯರ ಗುಪ್ತಾಂಗವನ್ನು ಕಂಡರಿಸಿರುವ ರೀತಿಯನ್ನು ನೋಡಿದರೆ ಜನಪದದಿಂದ

---

೨. ಡಾ. ಶಿವಾನಂದ ಎಚ್. ಬಂಟನೂರ, ಕರ್ನಾಟಕ ಜನಪದ ಶಿಲ್ಪಕಲೆ, ಪುಟ–೨೨

೩. ಅದೇ ಪುಸ್ತಕ, ಪುಟ–೩೪

ಶಿಷ್ಟಪದಕ್ಕೆ ವರ್ಗಾವಣೆಗೊಳ್ಳುತ್ತಿರುವಂತ ಶಿಲ್ಪಿಯು ಸ್ವಲ್ಪ ಮಡಿವಂತಿಕೆಯ ಪ್ರಜ್ಞೆಯನ್ನು ಗಮನಿಸಬಹುದು. ಶಿಷ್ಟಪದ ಶಿಲ್ಪಕಲೆಯಲ್ಲಿ ಲೈಂಗಿಕಾಂಶಗಳು ಮಡಿವಂತಿಕೆಯಿಂದ ಅಭಿವ್ಯಕ್ತಗೊಳ್ಳುತ್ತವೆ. ಜನಪದ ಶಿಲ್ಪಕಲೆಯಲ್ಲಿ ಭಾವನಾತ್ಮಕವಾದ ರೂಪ ಆಕಾರಗಳ ಅಲಂಕಾರದ್ದೇ ವಿಶೇಷವಾದ ಸೊಬಗು, ಶಿಷ್ಟಪದ ಶಿಲ್ಪಕಲೆಯಲ್ಲಿ ಪ್ರಮಾಣಬದ್ಧ ಅಳತೆ, ಆಕಾರ, ನಿರ್ದಿಷ್ಟ ಶೈಲಿ ಹಿತಮಿತ ಆಭರಣ, ಅಲಂಕಾರಗಳಿಗೆ ಮಹತ್ವವಿದೆ. ಜನಪದರಲ್ಲಿ ದೈನಂದಿನ ಬದುಕಿನ ವಿವರಗಳು ಶಿಲ್ಪರಚನೆಯ ಮೂಲ ವಿಷಯ ವಸ್ತುಗಳಾದರೆ ಶಿಷ್ಟಪದರ ಶಿಲ್ಪಕಲೆಯಲ್ಲಿ ಪ್ರಧಾನವಾಗಿ ಬದುಕಿನ ಕೆಲ ಆಯ್ದ ಮುಖಗಳ ಅಭಿವ್ಯಕ್ತಿ ಮಾತ್ರವಿರುತ್ತದೆ.[೪] ಜನಪದರ ಮಡಿಲಿನಿಂದ ಶಿಷ್ಟಪದ ಎನ್ನುವ ಶಾಲೆಗೆ ಸೇರಿದ ಶಿಲ್ಪಕಲೆಯು ಕನಗನಹಳ್ಳಿಯ ಮಣ್ಣಿನಲ್ಲಿ ಅರಳಿದ ಪ್ರಥಮ ಪ್ರಾರಂಭದ ಪಾಠ. ಈ ಪಾಠವಿರುವ ಮಹಾಗ್ರಂಥದ ಹಾಳೆಗಳು ಕಾಲದ ಗಾಳಿಗೆ ಹಾರಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವಂತೆ ಪ್ರಸ್ತುತ ಸ್ತೂಪಾವಶೇಷಗಳು ಗೋಚರಿಸುತ್ತವೆ.

ಹೀಗೆ ಅಂಕುರಿಸಿದ ಕಲಾ ಬೆಳವಣಿಗೆಯು ಕ್ರಿ.ಪೂ. ಶತಮಾನಗಳಿಂದ ಮೊದಲ್ಗೊಂಡು ಮೌರ್ಯ, ಶಾತವಾಹನ, ಶುಂಗ, ಚಾಲುಕ್ಯ, ಗಂಗ, ಕದಂಬ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ ಹೀಗೆ ಇನ್ನೂ ಅನೇಕ ರಾಜಾಶ್ರಯಗಳಲ್ಲಿ ವೈಭವೋಪೇತವಾಗಿ ಬೆಳೆದಂತಹ ಕಲೆಗಳು ಧರ್ಮದ ಪರೀಧೀಗಳನ್ನು ಹೊಂದಿದ್ದವಾದರೂ ಕಲೆಯ ದೃಷ್ಟಿಯಿಂದ ನೋಡುವುದಾದರೆ ಧರ್ಮದ ಪರೀಧಿಯನ್ನೂ ಮೀರಿ ಸರ್ವತೋಮುಖವಾದಂತಹ ವಿಶ್ವಪ್ರಜ್ಞೆಯಿಂದ ಬೆಳೆದಂತಹವುಗಳಾಗಿವೆ. ಇವುಗಳನ್ನು ಹೊಲಿಕೆಯಾಗಿಟ್ಟುಕೊಂಡು ನೋಡಿದರೆ, ಪ್ರಸ್ತುತ ಸಂದರ್ಭದಲ್ಲಿ ನಡೆದಿರುವುಂತಹ ಕಲಾ ಬೆಳವಣಿಗೆಯು ಮೇಲೆ ಹೇಳಿದಂತಹ ಗುಣಲಕ್ಷಣಗಳ ವೈರೋಧ್ಯಾಂಶಗಳೆ ಹೆಚ್ಚಾಗಿ ಹೊಂದಿರುವ ಬೆಳವಣಿಗೆಗಳಾಗಿವೆ. ವಿಶ್ವಮುಖಿಯಾದಂತಹ ಸಾಧನೆಯ ಮಾರ್ಗಗಳು ಇಂದಿನ ದಿನಮಾನಗಳಲ್ಲಿ ಅಂದಿಗಿಂತಲೂ ಅಧಿಕ ಇವೆಯಾದರೂ ಅವುಗಳತ್ತ ಹೊರಳುವಂತಹ ಮನಸ್ಸುಗಳು ಕಡಿಮೆಯಾಗಿವೆ. ಇಂದಿನ ಮಾನವನ ಯಾಂತ್ರಿಕ ಜೀವನ, ಸ್ವಾರ್ಥ ಸಾಧನೆಗೊಸ್ಕರ ತನ್ನ ಸುತ್ತಲಿನ ಪ್ರಕೃತಿಯನ್ನು ನಾಶಗೊಳಿಸುತ್ತ ವಿಶ್ವಮುಖಿಯಾದ ಕಾರ್ಯವನ್ನಂತೂ ದೂರದ ಮಾತು, ವಿಚಾರಗಳನ್ನೂ ಕೂಡ ಮಾಡದಷ್ಟು ದೂರಸಾಗಿದ್ದಾನೆ. ಪ್ರಸ್ತುತ ಸಂದರ್ಭದಲ್ಲಿ ಬದುಕುವುದೇ ಒಂದು ಸಾಧನೆ ಎಂಬಂತೆ ಬದುಕಲೂ ಕೂಡ ಹೆಣಗಾಡುತ್ತಿದ್ದಾನೆ. ಇಂತಹ

೪. ಡಾ. ಶಿವಾನಂದ ಎಚ್. ಬಂಟನೂರ, ಕರ್ನಾಟಕ ಜನಪದ ಶಿಲ್ಪಕಲೆ, ಪುಟ–೨೨

ಪರಿಸ್ಥಿತಿಯು ಪ್ರಸ್ತುತವಾಗಲು ಜೀವನ ವಿಧಾನವನ್ನು ಬದಲಿಸಿದ ಸ್ವಾರ್ಥ ಮಾನವನೊಬ್ಬನೇ ಕಾರಣನಾಗುತ್ತಾನೆ. ಭೂಮಿಯ ಮೇಲೆ ಮಾನವನೊಬ್ಬನನ್ನು ಬಿಟ್ಟು ಎಲ್ಲಾ ಜೀವರಾಶಿಗಳೂ ತಮ್ಮ ಜೀವನ ವಿಧಾನಗಳಲ್ಲಿ ಬದಲಾವಣೆ ತಂದುಕೊಂಡಿಲ್ಲ.

ಆ ಭಗವಾನ ಬುದ್ಧನ ಕಾಲದಲ್ಲಿ ಎಲ್ಲಾ ಪ್ರಾಣಿ, ಪಕ್ಷಿ, ಜಂತು, ಕೀಟಗಳ ಜೀವನ ವಿಧಾನ ಹೇಗಿತ್ತೋ ಇಂದಿಗೂ ಹಾಗೆಯೇ ಇದೆ. ಮಾನವನ ಹೊರತಾಗಿ, ಹಾಗೇನಾದರೂ ಬದಲಾವಣೆ ಇವುಗಳಲ್ಲಿ ಕಂಡುಬಂದರೆ ಅದು ಮಾನವನ ಕೃತ್ರಿಮ ಕಾರ್ಯಗಳಿಂದಲೇ ಎನ್ನುವುದು ಗ್ರಹಿಸಬೇಕಾದಂತಹ ಅಂಶ.

ವಿಶ್ವಮುಖಿ ವಿಚಾರಧಾರೆಯ ಬುದ್ಧ ಹಾಗೂ ಇಂತಹ ವಿಚಾರದೊಂದಿಗೆ ಸರ್ವತೋಮುಖವಾದಂತಹ ಬೆಳವಣಿಗೆಯನ್ನು ಕಂಡ ಸಾಮ್ರಾಟ ಅಶೋಕನ ಪ್ರಸ್ತುತತೆಯು ಇಂದು ನಮಗೆ ಅತ್ಯವಶ್ಯಕವೆನಿಸುತ್ತದೆ. ಅಲ್ಪಸ್ವಲ್ಪ ಉಳಿದಿರುವ ವಿಶ್ವತೋಮುಖ ವಿಚಾರಧಾರೆಯ ವೃಕ್ಷದ ಬೇರುಗಳು ವಿನಾಶದ ಮಣ್ಣಿನಲ್ಲಿ ಕರಗುವ ಮುನ್ನವೆ ಅವಕ್ಕೆ ಅಮೃತದ ನೀರೆರೆಯೋಣ.

ಪ್ರಸ್ತುತ ಪ್ರಬಂಧವನ್ನು ಏಳು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ

ಅಧ್ಯಾಯ ಒಂದರಲ್ಲಿ ಅಧ್ಯಾಯನದ ಉದ್ದೇಶ, ವ್ಯಾಪ್ತಿ, ವಿಧಾನ ಹಾಗೂ ಸ್ವರೂಪಗಳನ್ನು ವಿವರಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಚಿತ್ತಾಪುರ ತಾಲೂಕಿನ ಕೆಲವೊಂದು ಹಳ್ಳಿಗಳ ಹಾಗೂ ಸನ್ನತಿಯ ಸುತ್ತಮುತ್ತಲ ಹಳ್ಳಿಗಳ ಸಾಂಸ್ಕೃತಿಕ, ಚಾರಿತ್ರಿಕ ಮತ್ತು ಭೌಗೋಳಿಕ ಪರಿಸರ ಹಾಗೂ ಸಂಪನ್ಮೂಲಗಳ ಪರಿಚಯ ಮಾಡಲಾಗಿದೆ.

ಅಧ್ಯಾಯ ಮೂರರಲ್ಲಿ ಸ್ತೂಪ ಬೆಳೆದುಬಂದ ಬಗೆ ಹಾಗೂ ಬುದ್ಧನ ದುಂಡುಶಿಲ್ಪಗಳ ವಿವರಣೆಯನ್ನು ಕೊಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಜಾತಕ ಕಥೆಗಳ, ಅಂದಿನ ಪ್ರಸ್ತುತತೆ, ಕಥೆಗಳು ಹುಟ್ಟಿಕೊಂಡ ಹಿನ್ನೆಲೆಯೊಂದಿಗೆ, ಬುದ್ಧನ ಜನನ ಮತ್ತು ಜಾತಕ ಕಥೆ ಆಧಾರಿತ ಉಬ್ಬುಶಿಲ್ಪಗಳ ಸಂಯೋಜನೆಯ ವೈಶಿಷ್ಟ್ಯತೆಯನ್ನು ವಿವರಿಸಲಾಗಿದ್ದು, ಶಿಲ್ಪಗಳಲ್ಲಿ ಪ್ರಮುಖ ಆಕೃತಿಗಳಾಗಿ ಹೆಚ್ಚಿನ ರೀತಿಯಲ್ಲಿ ಕಂಡುಬರುವ ವೃಕ್ಷ, ಕಮಲ ಹಾಗೂ ಪ್ರಾಣಿಶಿಲ್ಪಗಳ ಬಗ್ಗೆ ಸ್ಥೂಲವಾಗಿ ಅವುಗಳ ಹಿನ್ನೆಲೆಯೊಂದಿಗೆ ವಿವರಿಸಲಾಗಿದೆ.

ಅಧ್ಯಾಯ ಐದರಲ್ಲಿ ನಾಗಮುಚ್ಚಲಿಂದ ಶಿಲ್ಪಗಳ ವಿವರಣೆ, ನಾಗಾ ಜನಗಳ ಹುಟ್ಟು-ಬೆಳವಣಿಗೆ, ಬೌದ್ಧಧರ್ಮದ ಸೇರ್ಪಡೆ ಹಾಗೂ ಸಾಂಕೇತಿಕ ಶಿಲ್ಪಗಳಾದಂತಹ ಪಾದುಕೆ ಶಿಲ್ಪಗಳ ರಚನಾ ವಿಧಾನ, ಕುಶಲತೆಯನ್ನು ವಿವರವಾಗಿ ತಿಳಿಸುತ್ತ ಯಕ್ಷದೇವತೆಗಳ ಹಿನ್ನೆಲೆಯೊಂದಿಗೆ ಭಾರತದ ವಿವಿಧ ಧರ್ಮಗಳಲ್ಲಿ ಯಕ್ಷಕಲ್ಪನೆಯೊಂದಿಗೆ ಶಿಲ್ಪಗಳನ್ನು ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ಸಾಮಾಜಿಕ ಜನಜೀವನವನ್ನು ಬಿಂಬಿಸುವ ಶಿಲ್ಪಗಳು ಮತ್ತು ಆಗಿನ ಪರಿಸರದ ಶಿಲ್ಪಗಳನ್ನು ವಿವರಿಸಿ ಅಶೋಕನ ಹಾಗೂ ಶಾತಕರಣಿಯ ಶಿಲ್ಪಗಳ ವಿವರಣೆಯನ್ನು ಹಾಗೂ ಬುದ್ಧನ ಪ್ರಥಮ ಬೋಧನೆಯ ಸಾಂಕೇತಿಕ ಶಿಲ್ಪ ಹಾಗೂ ಸಂಕೇತಗಳಲ್ಲಿ ಬರುವಂತಹ ಚಕ್ರದ ಸ್ಥೂಲ ಪರಿಚಯವನ್ನು ಕೊಡಲಾಗಿದೆ.

ಅಧ್ಯಾಯ ಏಳು ಸಮಾರೋಪವಾಗಿದ್ದು, ಶಿಲ್ಪಗಳಿಗೆ ಬಳಸಿರುವ ಕಲ್ಲಿನ ಗುಣಧರ್ಮ ಹಾಗೂ ಕರ್ನಾಟಕದ ವಿವಿಧ ಭಾಗಗಳಲ್ಲಿ ದೊರೆಯುವ, ವಿವಿಧ ಗುಣಧರ್ಮದ ಶಿಲೆಗಳ ಸಂಕ್ಷಿಪ್ತ ಪರಿಚಯದೊಂದಿಗೆ ಜನಪದ ಹಾಗೂ ಶಿಷ್ಟಪದ ಶಿಲ್ಪಗಳ ವ್ಯತ್ಯಾಸಗಳನ್ನು ತಿಳಿಸುತ್ತ ಗುಸಿ ಜೋಡಣೆಯ ತಂತ್ರಗಾರಿಕೆ ಹಾಗೂ ಕನಗನಹಳ್ಳಿಯಲ್ಲಿ ಶಿಲ್ಪ ರಚಿಸಿರುವಂತಹ ಶಿಲ್ಪಿಗಳ ಹೆಸರುಗಳ ಪರಿಚಯದೊಂದಿಗೆ ಆ ಭಾಗದಲ್ಲಿ ಕಲೆ ಬೆಳೆದುಬಂದ ಬಗೆಯನ್ನು ವಿವರಿಸುತ್ತ ಒಟ್ಟು ಅಧ್ಯಯನದ ಫಲಿತಗಳನ್ನು ತಿಳಿಸಲಾಗಿದೆ.

ನಾವು ತಿಳಿದಿರುವುದು ಬಿಂದುವಿನಷ್ಟು ಅರಿಯದೆ ಇರುವುದು ಸಾಗರದಷ್ಟು ಎಲ್ಲವನ್ನು ತಿಳಿದುಕೊಳ್ಳಲೇಬೇಕೆಂಬ ಹಸಿವು ಮಾತ್ರ ನಮ್ಮನ್ನು ಜ್ಞಾನ ಮತ್ತು ಅನುಭವದ ಸಾಗರದ ಕಡೆಗೆ ಕೊಂಡೊಯ್ಯಬಲ್ಲದು.

ಅನುಬಂಧಗಳು

೧. ಗ್ರಂಥಋಣ
೨. ವಕ್ತೃಗಳು
೩. ಛಾಯಾಚಿತ್ರ
೪. ನಕ್ಷೆ

ಪರಾಮರ್ಶನ ಗ್ರಂಥಗಳು :

೦೧. **Budhist, Sculptures and manuments,** Ministry of Infomation and Brodcosting, Gov of India, Patial house, NewDelhi-1956

೦೨. **ಬುದ್ಧ ಭಗವಾನ,** ಎಚ್. ಗಂಗಾಧರನ್, ಪ್ರಸಾರಾಂಗ ಮಾನಸ ಗಂಗೋತ್ರಿ, ಮೈಸೂರು-೧೯೬೫

೦೩. **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಡಾ. ಎಂ. ಚಿದಾನಂದಮೂರ್ತಿ (ಲೇ), ಪ್ರಕಾಶಕರು ಶ್ರೀಮತಿ ಭಾನುಮತಿ ಎಸ್. ಶಾಹಾ ಸ್ವಪ್ನಬುಕ್‌ಹೌಸ್, ಬೆಂಗಳೂರು-೧೯೬೬

೦೪. **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪ್ರಕಾಶಕರು ಡಿ.ವಿ.ಕೆ., ಮೂರ್ತಿ ಕೃಷ್ಣಮೂರ್ತಿಪುರಂ, ಮೈಸೂರು-೧೯೬೮

೦೫. **ಭಾರತೀಯ ಶಿಲ್ಪ, ಶಿವರಾಮ ಕಾರಂತ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧೯೭೫

೦೬. **Indian art,** K. Bharatha Iyer, A short Introduction-1982

೦೭. **ಕರ್ನಾಟಕ ಜನಜೀವನ,** ಜಿ. ಬ್ರಹ್ಮಪ್ಪ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು-೧೯೮೩

೦೮. **Indian Sculpture,** Mahinder singh, Randhawa and Doris, Schreier Randhawa, Published M.R.S. A.F. Shaikh, For Uakils Feffer and Simons ltd, Bomby-1985

೦೯. **ಜಾತ ಮತ್ತು ಜಾತಕ ಕಥೆಗಳು ಸಂಪುಟ-೩,** (ಅನು) ರುಕ್ಮಿಣಿ ಗಿರಿಮಾಜಿ, ಬುದ್ಧ ವಚನ ಟ್ರಸ್ಟ್, ಬೆಂಗಳೂರು-೧೯೯೧

೧೦. **ಆನಂದ ಕುಮಾರಸ್ವಾಮಿ,** ಕೆ.ಎಸ್. ಶ್ರೀನಿವಾಸಮೂರ್ತಿ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ-೧೯೯೫

೧೧. **ಸಮಗ್ರ ಕರ್ನಾಟಕ ಚರಿತ್ರೆ,** ಹೆಚ್.ವಿ. ಶ್ರೀನಿವಾಸಮೂರ್ತಿ, ಆರ್. ರಾಮಕೃಷ್ಣನ್, ಓರಿಯಂಟಲ್ ಲಾಂಗಮನ್ ಲಿಮಿಟೆಡ್, ಬೆಂಗಳೂರು-೧೯೯೫

೧೨. **ಬೌದ್ಧಮತದಲ್ಲಿ ಯಕ್ಷಕಲೆ,** ಕ.ವೆಂ. ರಾಜಗೋಪಾಲ (ಲೇ), ಕೊಂಡಜ್ಜಿ ಪ್ರಕಾಶನ, ಬೆಂಗಳೂರು-೧೯೯೭

೧೩. **ಕಲಬುರ್ಗಿ ಜಿಲ್ಲಾ ಗೆಝೆಟಿಯರ್,** ಮುಖ್ಯ ಸಂಪಾದಕರು, ಪಾಟೀಲ ಎಂ.ಬಿ., ೧೯೯೮

೧೪. **ಕರ್ನಾಟಕದಲ್ಲಿ ವಿದೇಶಿ ನಾಣ್ಯಗಳು,** ಡಾ. ಎ.ವಿ. ನರಸಿಂಹಮೂರ್ತಿ (ಲೇ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೦

೧೫. **ಕರ್ನಾಟಕದ ಪುರಾತತ್ವ ನೆಲೆಗಳು,** ಕೆ.ಬಿ. ಶಿವತಾರಕ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,

೧೬. **ಶಿಲ್ಪಾದರ್ಶ ಸಂಪುಟ-೨,** ಡಾ. ಜಿ. ಜ್ಞಾನಾನಂದ (ಲೇ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೨

೧೭. **ಪ್ರಾಚೀನ ಬೌದ್ಧ ವಿದ್ಯಾಕೇಂದ್ರ: ಸನ್ನತಿ,** ಜಯದೇವಿ ಎಂ. ಗಾಯಕವಾಡ್, (ಲೇ) ಅಮರ ಪ್ರಕಾಶನ ಕಲಬುರ್ಗಿ–೨೦೦೨

೧೮. **ಲಿಪಿಯ ಹುಟ್ಟು ಮತ್ತು ಬೆಳವಣಿಗೆ,** ಡಾ. ದೇವರಕೊಂಡಾರೆಡ್ಡಿ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು–೨೦೦೨

೧೯. **ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ,** ಡಾ. ಶಿವಾನಂದ ಎಚ್. ಬಂಟನೂರ, ಪಿಎಚ್.ಡಿ. ಮಹಾಪ್ರಬಂಧ–೨೦೧೫

೨೦. **ಜನ ಜಾನಪದ, ಡಾ. ಮಂಜುನಾಥ ಬೇವಿನಕಟ್ಟಿ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೦೩

೨೧. **ಬುದ್ಧನ ಜಾತಕ ಕಥೆಗಳು, ಸಂಪುಟ–೩** ಪ್ರೊ. ಬಿ.ನಂ. ಚಂದ್ರಯ್ಯ (ಲೇ), ಪ್ರಕಾಶಕರು ವಿಶ್ವಮೈತ್ರಿ ಸಂಶೋಧನಾ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ, (ರಿ) ಮೈಸೂರು–೨೦೦೪

೨೨. **ದ್ರಾವಿಡ ಅಧ್ಯಯನ,** ಸಂಪುಟ–೩, ಸಂಚಿಕೆ–೧ ಮಲ್ಲೇಪುರಂ ಜಿ. ವೆಂಕಟೇಶ (ಲೇ), ಸಿ. ವೆಂಕಟೇಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೦೪

೨೩. **ಪಾರಂಪರಿಕ ಶಿಲ್ಪ ನೆನ್ನೆ–ನಾಳೆ,** ಡಾ. ಜಿ. ಜ್ಞಾನಾನಂದ (ಲೇ), ಸಂಸ್ಕೃತಿ ಸಾಹಿತ್ಯ ಪ್ರತಿಷ್ಠಾನ ಬೆಂಗಳೂರು–೨೦೦೫

೨೪. **ಜಾನಪದ ಕರ್ನಾಟಕ** ಸಂಪುಟ–೪, ಸಂಚಿಕೆ–೨ ಡಾ. ಸ.ಚಿ. ರಮೇಶ (ಸಂ), **ಮೋಹನ್ ಎಸ್. (ಲೇ),** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೦೫

೨೫. **ಕರ್ನಾಟಕ ಸಾಂಸ್ಕೃತಿಕ ಇತಿಹಾಸ ಪರಂಪರೆ,** ಎಂ. ಚಂದ್ರಶೇಖರಯ್ಯ (ಲೇ), ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು–೨೦೦೫

೨೬. **ಕರ್ಮವೀರ** ವಾರಪತ್ರಿಕೆ, ಲೀಲಾವತಿ ಕುಲಕರ್ಣಿ, –೨೦೦೫

೨೭. **ಪ್ರಾಚೀನ ಭಾರತದ ಇತಿಹಾಸ,** ಪ್ರೊ. ಇಂದುಮತಿ ಪಿ. ಪಾಟೀಲ ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಕಲಬುರ್ಗಿ–೨೦೦೬

೨೮. **ಚರಿತ್ರೆ ಅಧ್ಯಯನ** ಸಂಪುಟ–೧, ಸಂಚಿಕೆ–೧ ಲಕ್ಷ್ಮಣ ತೆಲಗಾವಿ (ಸಂ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೯. **ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ,** ಡಾ. ಕೆ. ಮೋಹನಕೃಷ್ಣ ರೈ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೦೬

೩೦. **ಶಿಲ್ಪ ಸೌಂದರ್ಯ,** ಕರಗುಂದ ಟಿ. ಪಂಕಜಾಕ್ಷ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು–೨೦೦೬

೩೧. **ನೂರೆಂಟು ಮಾತು ವಿಶ್ವೇಶ್ವರ ಭಟ್ಟ,** (ವಿಜಯ ಕರ್ನಾಟಕ) ಕನ್ನಡ ದಿನಪತ್ರಿಕೆ–೧೨.೧೦.೨೦೦೬

೩೨. **ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಡಾ. ಆರ್. ಗೋಪಾಲ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು–೨೦೦೭

೩೩. **ಚಿತ್ತಾಪೂರ ತಾಲೂಕಿನ ಶಾಸನಗಳು : ಸಾಂಸ್ಕೃತಿಕ ಅಧ್ಯಯನ,** ನಿವೇದಿತಾ ಎಸ್. ಸ್ವಾಮಿ, ಎಂ.ಫಿಲ್. ಪ್ರಬಂಧ–೨೦೦೭

೩೪. **ಕರ್ನಾಟಕದ ಆರಂಭಿಕ ಶಿಲ್ಪಕಲೆ,** ಡಾ. ಎಚ್.ಎಸ್. ಗೋಪಾಲರಾವ್ (ಸಂ), ಡಾ. ಆರ್.ಎಚ್. ಕುಲಕರ್ಣಿ (ಲೇ), ಕರ್ನಾಕಟ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು–೨೦೦೮

೩೫. **(ವಿಜಯ ಕರ್ನಾಟಕ)** ಎಂ. ಚಿದಾನಂದಮೂರ್ತಿ ಕನ್ನಡ ದಿನಪತ್ರಿಕೆ–೨೦೦೮

೩೬. **(ವಿಜಯ ಕರ್ನಾಟಕ)** ಶಾಮಸುಂದರ ಕುಲಕರ್ಣಿ ಕನ್ನಡ ದಿನಪತ್ರಿಕೆ–೨೦೦೮

೩೭. **ಲೇಖಾವರಣ,** ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ, ಸರಚಂದ್ರ ಪ್ರಕಾಶನ, ಚಿತ್ತಾಪುರ–೨೦೦೯

೩೮. **(ವಿಜಯ ಕರ್ನಾಟಕ)** ಕಲಬುರ್ಗಿ ಶಿವಾನಂದ ಕುಲಕರ್ಣಿ ಕನ್ನಡ ದಿನಪತ್ರಿಕೆ–೨೦೧೦

೩೯. **(ವಿಜಯ ಕರ್ನಾಟಕ)** ಶಾಮಸುಂದರ ಕುಲಕರ್ಣಿ, ಕಲಬುರ್ಗಿ ಕನ್ನಡ ದಿನಪತ್ರಿಕೆ–೨೦೧೦

೪೦. **(ಪ್ರಜಾವಾಣಿ) ಕರ್ನಾಟಕ ದರ್ಶನ** ಉದಯ ಶಂಕರ ಭಟ್ಟ, ಕನ್ನಡ ದಿನಪತ್ರಿಕೆ–೨೦೧೦

೪೧. **ಸೇಡಮ್ ಶಿವಶಂಕರಸ್ವಾಮಿ ಮಠದಲ್ಲಿನ ಭಿತ್ತಿಚಿತ್ರಗಳು,** ಡಾ. ಮಲ್ಲಿಕಾರ್ಜುನ ಬಾಗೋಡಿ, ಸರಚಂದ್ರ ಪ್ರಕಾಶನ, ಚಿತ್ತಾಪೂರ–೨೦೧೧

೪೨. **(ವಿಜಯ ಕರ್ನಾಟಕ) ಗತಕಾಲದಿಂದ ಅಂಕಣ** ಡಾ. ಸೂರ್ಯನಾಥ ಕಾಮತ್ ಕನ್ನಡ ದಿನಪತ್ರಿಕೆ–೨೦೧೧

೪೩. **ಮಳಖೇಡ ಕನ್ನಡಿಗನು ಮರೆಯುವ ಊರಲ್ಲ,** ವಾದಿರಾಜ ವ್ಯಾಸಮುದ್ರ, (ವಿಜಯ ಕರ್ನಾಟಕ)ಕನ್ನಡ ದಿನಪತ್ರಿಕೆ–೨೦೧೧

೪೪. **(ವಿಜಯ ಕರ್ನಾಟಕ)** ರಮೇಶ ಭಟ್ಟ ಶಾಹಾಬಾದ, ಕಲಬುರ್ಗಿ ಕನ್ನಡ ದಿನಪತ್ರಿಕೆ–೦೧.೧೦.೨೦೧೧

೪೫. **(ಸಂಯುಕ್ತ ಕರ್ನಾಟಕ)** ಕೆ.ವಿ. ಸುಬ್ರಹ್ಮಣಂ, ಕನ್ನಡ ದಿನಪತ್ರಿಕೆ–೨೦೧೧

೪೬. **ವಿಜಯವಾಣಿ ಕನ್ನಡ ದಿನಪತ್ರಿಕೆ** ಆನೆಗಳೂ ಮಾತಾಡುತ್ತವೆ ಗೊತ್ತಾ, ೦೪.೧೦.೨೦೧೨

೪೭. **ಹೈದ್ರಾಬಾದ–ಕರ್ನಾಟಕ ದೃಶ್ಯಕಲಾ ಪರಂಪರೆ,** ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ (ಸಂ), ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ವಿಕಾಸ ಅಕಾಡೆಮಿ, ಗುಲಬರ್ಗಾ–೨೦೧೨

೪೮. **ಹೈದ್ರಾಬಾದ-ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ,** ಡಾ. ಪಿ.ಕೆ. ಖಂಡೋಬಾ, ಡಾ. ಎಸ್.ಸಿ. ಪಾಟೀಲ, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ-೨೦೧೨

೪೯. **ಬಾದಾಮಿ ಚಲುಕ್ಯರ ದೇವಾಲಯಗಳ ಅಲಂಕಾರ ಶಿಲ್ಪಗಳು,** ಡಾ. ಶೀಲಾಕಾಂತ ಪತ್ತಾರ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು-೨೦೧೩

೫೦. **ದೃಶ್ಯ ಪದದೃಶ್ಯ,** ಡಾ. ಶಿವಾನಂದ ಎಚ್. ಬಂಟನೂರ, ಅಲಕಾ ಪ್ರಕಾಶನ, ಖೈನೂರ-೨೦೧೩

೫೨. **(ವಿಜಯ ಕರ್ನಾಟಕ)** ಮುಡಬಿ ಗುಂಡುರಾವ್ ಕಲಬುರ್ಗಿ, ಕನ್ನಡ ದಿನಪತ್ರಿಕೆ-೨೦೧೩

೫೩. **(ವಿಜಯವಾಣಿ)** ಮಂಥನ, ಬೌದ್ಧರ ಪವಿತ್ರ ತಾಣ ಕನ್ನಡ ದಿನಪತ್ರಿಕೆ-೨೦೧೩

೫೪. **ಮಾಟದೊಳಗಣ ನೋಟ,** ಡಾ. ಶಿವಾನಂದ ಎಚ್. ಬಂಟನೂರ, ಯಾಜಿ ಪ್ರಕಾಶನ ಹೊಸಪೇಟೆ-೨೦೧೩

೫೫. **ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ,** ಷ. ಶೆಟ್ಟರ್, ಅಭಿನವ ಪ್ರಕಾಶನ, ಬೆಂಗಳೂರು-೨೦೧೪

೫೬. **ವೆಂಕಟಾಚಲಪತಿ ಕನ್ನಡ ಸಮಕಾಲಿನ ಶಿಲ್ಪಕಲೆಯ ಜಕಣಾಚಾರಿ,** ಕೆ.ವಿ. ಸುಬ್ರಮಣ್ಯಂ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು-೨೦೧೪

೫೭. **ಸೃಜನ ಶಿಲ್ಪಿ ಷಣ್ಮುಖಪ್ಪ ಯರಕದ,** ಬಸವರಾಜ ಕರಿಬಸಪ್ಪನವರ (ಸಂ), ಚಾಲುಕ್ಯ ಪ್ರಕಾಶನ ಇಲಕಲ್-೨೦೧೫

೫೮. **ವಿಕ್ರಮ,** ಕನ್ನಡ ವಾರ ಪತ್ರಿಕೆ ೨೪.೦೫.೨೦೧೫ ಇಲಕಲ್-೨೦೧೫

೫೯. **Indian Sculpture,** Vol,-1, 500 B.C-AD 700, by, Prataditya Pul, A Catalaguv Los Angeles county Museum of art colletion in association with University of California press berkeley, Los Angeles and London

೬೦. **Exploring Indias Sacred Art,** Sclected writings of stella Kramrisch cdted with a biographical essay, by Barbara stpler Miller, Indian Edition Delhi-1994

೬೧. **National Museum Bulletin** Editors Dr. P. Banerjee, Dr. C.B. Pandey, National Museum New Delhi-1983

ಫಲಿತಗಳು :

೧. ಕನಗನಹಳ್ಳಿ ಸ್ತೂಪದ ಶಿಲ್ಪಗಳು ಇಷ್ಟೊಂದು ಛಿದ್ರಗೊಂಡಿರುವುದು ಬಳಸಿರುವ ಕಲ್ಲಿನ ಗುಣಧರ್ಮದಿಂದ ಎಂದು ಗರುತಿಸಲಾಗಿದೆ

೨. ಸ್ತೂಪದ ನಿರ್ಮಾಣ ಕಾಲ ಯಾವುದೆಂದು ಸ್ಪಷ್ಟವಾಗಿ ಹೇಳಲು ಇನ್ನೂ ಹೆಚ್ಚಿನ ಸಂಶೋಧನೆಯ ಅವಶ್ಯಕತೆ ಇದೆ.

೩. ಕನಗನಹಳ್ಳಿ ಸ್ತೂಪ ಶಿಲ್ಪಗಳಲ್ಲಿ ಬಳಸಿರುವಂತಹ ಹಲವಾರು ಆಕೃತಿಗಳು ಚಾಲುಕ್ಯ ಶಿಲ್ಪಗಳಲ್ಲಿ ಮುಂದುವರೆದ ಭಾಗವಾಗಿ ಇನ್ನೂ ಹೆಚ್ಚು ವೈವಿಧ್ಯತೆಯಿಂದ ರೂಪುಗೊಂಡಿರುವುದನ್ನು ಕಾಣಬಹುದಾಗಿದೆ.

೪. ಕನಗನಹಳ್ಳಿಯ ಸ್ತೂಪ ಶಿಲ್ಪಗಳು, ಜನಪದರ ಆಚರಣೆಯ ಶಿಲ್ಪಗಳಿಂದ ಪ್ರೇರಣೆ ಪಡೆದಂತಹವುಗಳಾಗಿವೆ.

೫. ಅಂದಿನ ಜನಜೀವನದ ಉಡುಗೆ-ತೊಡುಗೆ ಹಾಗೂ ಆಭರಣಗಳ ವೈವಿಧ್ಯತೆಯನ್ನು ತಿಳಿದುಕೊಳ್ಳವ ದಿಶೆಯಲ್ಲಿ ಪ್ರಮುಖ ಶಿಲ್ಪಗಳಾಗಿವೆ.

೬. ಕರ್ನಾಟಕದ ಶಿಲ್ಪಕಲಾ ಬೆಳವಣಿಗೆಯ ಪ್ರಾರಂಭ ಹಂತವನ್ನು ಪ್ರಸ್ತುತ ಕನಗನಹಳ್ಳಿಯ ಶಿಲ್ಪಗಳಲ್ಲಿ ಕಾಣಬಹುದಾಗಿದೆ.

೭. ಅಂದಿನ ಶಿಲ್ಪಿಯ ಪ್ರಯೋಗಶೀಲತೆ ಮತ್ತು ಸಂಯೋಜನಾತ್ಮಕ ಅಂಶಗಳು ಶಿಲ್ಪಗಳಲ್ಲಿ ಕಾಣಬಹುದು.

೮. ಪಂಡಿತ ವರ್ಗ ಮತ್ತು ಶ್ರಮಿಕ ವರ್ಗಗಳ ನಡುವಿನ ಅನನ್ಯ ಕೊಂಡಿಯಾಗಿ ಶಿಲ್ಪಿ ಕಾರ್ಯನಿರ್ವಹಿಸುತ್ತಿದ್ದ ಅಂಶ ಸ್ಪಷ್ಟವಾಗುತ್ತದೆ.

೯. ಅಂದಿನ ಶಿಲ್ಪಿ ಹಾಗೂ ನಾಗರಿಕ ಸಮುದಾಯದ ಪ್ರಕೃತಿ ಬಗೆಗಿನ ಕಾಳಜಿ ಕನಗನಹಳ್ಳಿಯ ಸ್ತೂಪ ಶಿಲ್ಪಗಳಲ್ಲಿ ಮೂಡಿಬಂದಿವೆ ಎಂದು ಹೇಳಬಹುದು.

೧೦. ಬುದ್ಧನ ಸಾಂಕೇತಿಕ ಶಿಲ್ಪ (ಹೀನಯಾನ) ಮತ್ತು ಮನುಷ್ಯಾಕೃತಿ (ಮಹಾಯಾನ) ಶಿಲ್ಪಗಳು ರಚನೆಗೊಂಡಿರುವುದನ್ನು ಗುರುತಿಸಬಹುದಾಗಿದೆ.

೧೧. ಮರಗೆಲದ ಗುಸಿ ಜೋಡಣೆಯ ನಿಪುಣತೆಯು ಕಲ್ಲಿನಲ್ಲಿ ಪ್ರಯೋಗಿಸಲಾಗಿದೆ.

೧೨. ಇಲ್ಲಿ ದೊರೆತಿರುವ ಅತ್ಯಮೂಲ್ಯವಾದ ಕರಂಡ (ಧಾತುಪಾತ್ರೆ)ದ ಶಿಲ್ಪಕೌಶಲ್ಯದಿಂದ ಸ್ತೂಪ ನಿರ್ಮಾಣದ ಕಾಲವು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುತ್ತಿಲ್ಲ.

ವಕ್ತೃಗಳು :

೧. ಡಾ. ಶಿವಾನಂದ ಎಚ್. ಬಂಟನೂರ, ಸಹಾಯಕ ಪ್ರಾಧ್ಯಾಪಕರು, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಡಾ. ಸಿ. ಮಹಾದೇವ, ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಡಾ. ಸಿ.ಎಸ್. ವಾಸುದೇವನ್, ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಡಾ. ಆರ್.ಎಚ್. ಕುಲಕರ್ಣಿ, ಪ್ರಾಂಶುಪಾಲರು, ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು

೫. ಡಾ. ಕಲವೀರ ಮನ್ವಾಚಾರ್, ಮುಖ್ಯಸ್ಥರು ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ, ಸಹಾಯಕ ಪ್ರಾಧ್ಯಾಪಕರು, ದೃಶ್ಯಕಲಾ ವಿಭಾಗ, ಗುಲ್ಬರ್ಗಾ ವಿ.ವಿ. ಕಲಬುರ್ಗಿ

೭. ಬಸವರಾಜ ಎಲ್. ಜಾನೆ, ಪ್ರಾಂಶುಪಾಲರು, ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆ, ಕಲಬುರ್ಗಿ

೮. ಎಂ.ಎಸ್. ಪ್ರಭಾಕರ, ದೇವಾಲಯ ವಾಸ್ತು ವಿದ್ವಾಂಸರು, ಮೈಸೂರು

● ಚಿತ್ತಾಪುರ ತಾಲೂಕು ನಕ್ಷೆ



